ವಿಮರ್ಶೆ

೪

ಮಾಸ್ತಿ ವೆಂಕಟೇಶ ಅಯ್ಯಂಗಾರ್

ವಿಮರ್ಶೆ

೪

ಮಾಸ್ತಿ ವೆಂಕಟೇಶ ಅಯ್ಯಂಗಾರ್

೧೨ ಆಣೆ

ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ
೧೯೩೯

ಮುನ್ನುಡಿ

ಈ ಮೊದಲು ವಿಮರ್ಶೆಯೆಂಬ ಹೆಸರಿನಿಂದ ನಾನು ಪ್ರಕಟಿಸಿರುವ ಮೂರು ಪುಸ್ತಕಗಳ ಜೊತೆಗೆ ಈ ನಾಲ್ಕನೆಯ ಪುಸ್ತಕವನ್ನು ಇಂದು ಸೇರಿಸಿದೇನೆ. ಇಲ್ಲಿ ಕೂಡಿಸಿರುವ ನಾಲ್ಕು ಲೇಖನಗಳಲ್ಲಿ ಮೊದಲನೆಯದು ಎಂಟು ವರುಷದ ಹಿಂದೆ ದೇವನೂರಿನಲ್ಲಿ ನಡೆದ ಲಕ್ಷ್ಮೀಶ ಕವಿಯ ಮೊದಲ ಜಯಂತಿಯ ಸಂದರ್ಭದಲ್ಲಿ ಮಾಡಿದ ಭಾಷಣ. ಇನ್ನೆರಡು 'ಪ್ರಬುದ್ಧ ಕರ್ಣಾಟಕ' ದಲ್ಲಿಯೂ, ಒಂದು ಇತ್ತೀಚೆಗೆ 'ಜೀವನ' ದಲ್ಲಿಯೂ ಪ್ರಕಟವಾದ ಲೇಖನಗಳು. ನನಗೆ ಹೀಗೆ ಎಡೆಕೊಟ್ಟ ಮಿತ್ರರಿಗೆ ನಾನು ಬಹು ಕೃತಜ್ಞನಾಗಿದೇನೆ.

ಆಳ್ವಾರುಗಳನ್ನು ಕುರಿತ ಲೇಖನದಲ್ಲಿ ರೂಢಿಯಿಲ್ಲದ ಕೆಲವು ಪದಗಳನ್ನು ಅಥವಾ ಅರ್ಥಗಳನ್ನು ಬಳಸಿದೆ. ಕನ್ನಡದ ಜಾಯಮಾನವನ್ನು ಹಿಡಿದು ನೋಡಿದರೆ ಅವುಗಳ ಸಂಕೇತ ಸ್ಪಷ್ಟವಾಗುತ್ತದೆ. ಪ್ರಬಂಧಗಳ ಪಾಠದಿಂದ ಕಾಣುವ ವೈಷ್ಣವ ಧರ್ಮದ ರೂಪವನ್ನೂ ಸಾಮಾಜಿಕ ಪ್ರಭಾವವನ್ನೂ ಪಾಣಿ ಅಥವಾ ಗೋದಾದೇವಿ (ಆಂಡಾಳ್) ರಂಗನಲ್ಲಿ ಐಕ್ಯವಾದರು ಎನ್ನುವುದು ಮೊದಲಾದ ಮಾತಿನ ಭಾವವೇನಿರಬಹುದು ಎಂಬ ವಿಷಯವನ್ನೂ ಈ ಉಪನ್ಯಾಸದಲ್ಲಿ ಚರ್ಚಿಸಿಲ್ಲ. ಮತಗಳು ಜೀವನವನ್ನು ತಿದ್ದಿರುವ ರೀತಿಯನ್ನು ಕುರಿತ ಇತರ ಲೇಖನಗಳಲ್ಲಿ ಇದನ್ನು ಮಾಡಬೇಕೆಂದು ಉದ್ದೇಶ ಇದೆ.

ಈ ಲೇಖನಗಳಲ್ಲಿ ನಾನು ನನ್ನ ಪೂಜಾಮೂರ್ತಿಗಳನ್ನು ಕರಗದ ತಿಂಗಳ ಉತ್ಸವಕ್ಕೆ ಬಿಜಮಾಡಿಸುತ್ತಿದೇನೆ. ನನ್ನ ಜೊತೆಗಾರರ ಪೂಜಾಮೂರ್ತಿಗಳೂ ಹೀಗೆಯೇ ಬಿಜಮಾಡಬೇಕು: ಕೆಲವು ಮಾತ್ರ ಬಿಜಮಾಡಿವೆ. ಕನ್ನಡದ ಕರಗ ಹೊರಡಲು ತಿಂಗಳು ತುಂಬಿದೆ. ಸ್ವಲ್ಪ ಮುಂದಾಗಿ ಬೀದಿಗೆ ಬಂದ ನನ್ನಂಥವರು ನಮ್ಮ ದೈವಗಳೊಡನೆ ತಿಂಗಳಲ್ಲಿ ನಿಂತು ಉತ್ಸವ ಬೇಗನೆ ನೆರೆಯಲೆಂದು ಆಶಿಸುತ್ತಿದೇವೆ.

ಬೆಂಗಳೂರು
ಪ್ರಮಾಥಿ ಸಂ॥ ಮಾರ್ಗಶಿರ ಶು॥ ಸಪ್ತಮಿ

ಶ್ರೀನಿವಾಸ

ವಿಷಯ ಸೂಚಿಕೆ

ವಿಮರ್ಶೆ

ಲಕ್ಷ್ಮೀಶನ ಕಾವ್ಯ*

ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಭ
ಕ್ತಾವಳಿಯ ಹೃತ್ಕುಮುದಕೋರಕಂ ಬಿರಿಯೆ ಜಗ
ತೀವಲಯದಮಲ ಸೌಭಾಗ್ಯ ರತ್ನಾಕರಂ ಪೆರ್ಚಿನಿಂ ಮೇರೆವರಿಯೆ
ಆವಗಂ ಸರಸ ಕರುಣಾಮೃತದ ಕಲೆಗಳಿಂ
ತೀವಿದೆಳನಗೆಯ ಬೆಳ್ದಿಂಗಳಂ ಪಸರಿಸುವ
ದೇವಪುರದೊಡೆಯ ಲಕ್ಷ್ಮೀರಮಣನಾಸ್ಯಮಾನಂದಮಂ ನಮಗೀಯಲಿ

ಮಹನೀಯರೆ, ಕರ್ಣಾಟಕವಿ ಚೂತವನ ಚೈತ್ರನಾದ ಶ್ರೀ ಲಕ್ಷ್ಮೀಶ ಕವಿವರನ ಈ ಜಯಂತ್ಯುತ್ಸವಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಬರಮಾಡಿ ಕೊಂಡದ್ದಕ್ಕಾಗಿ ನಾನು ಉತ್ಸವದ ನಿರ್ವಾಹಕರಿಗೆ ವಂದನೆಗಳನ್ನು ಸಮರ್ಪಿಸುತ್ತೇನೆ. ಈ ಸಂದರ್ಭದಲ್ಲಿ ಹೇಗಾದರೂ ಭಾಗಿಯಾಗುವುದು ನನ್ನ ಕರ್ತವ್ಯವಾಗಿತ್ತು; ಆ ಕರ್ತವ್ಯವನ್ನು ಮಾಡುವುದರಲ್ಲಿ ನನಗೆ ಬಹಳ ಸುಖವೂ ಇರುತ್ತಿತ್ತು. ಇಂಥದರಲ್ಲಿ ತಾವು ಕವಿಸೇವೆಯ ಕೆಲಸದಲ್ಲಿ ನನ್ನನ್ನು ಮುಂದಕ್ಕಿಟ್ಟು ನನ್ನ ವಿಷಯದಲ್ಲಿ ತಮ್ಮ ವಿಶ್ವಾಸವನ್ನು ಸೂಚಿಸಿದ್ದೀರಿ. ಉತ್ಸವವನ್ನು ಏರ್ಪಡಿಸಿದ್ದಕ್ಕೆ ಎಲ್ಲರೂ ತೋರಿಸಬೇಕಾದ ಕೃತಜ್ಞತೆಗೆ ನಾನು ಈ ಕಾರಣದಿಂದ ನನ್ನ ಪರವಾಗಿ ಮತ್ತಷ್ಟು ಕೃತಜ್ಞತೆಯನ್ನು ಸೇರಿಸಬೇಕಾದ ಸಂದರ್ಭ ಒದಗಿದೆ.

ಲಕ್ಷ್ಮೀಶ ಕವಿಯು ಕರ್ಣಾಟಕವಿ ಚೂತವನ ಚೈತ್ರ ಎಂಬ ಮಾತನ್ನು ಒಂದು ಬಿರುದಿನಂತೆ ತನ್ನ ಕಾವ್ಯದ ಪೀಠಿಕಾ ಸಂಧಿಯಲ್ಲಿ ತಂದಿದ್ದಾನೆ. ಅದನ್ನು ಅವನಿಗೆ ಯಾರು ಕೊಟ್ಟರೋ ತಿಳಿಯದು. ಮಾತು ಪಂಡಿತರದಾಗಿದೆ. ಪ್ರಾಯಶಃ ಯಾವುದಾದರೊಂದು ರಾಜನ ಆಸ್ಥಾನದಿಂದಲೋ ಪಂಡಿತರ ಸಭೆಯಿಂದಲೋ ಈ ಬಿರುದು ಅವನಿಗೆ ಬಂದಿರಬಹುದು. ಇದರಲ್ಲಿ ಆಶ್ಚರ್ಯವಿಲ್ಲ. ಜಾಣರ ತಲೆಯನ್ನು ತೂಗಿಸದೆ ನುಡಿದರೆ ಕಾವ್ಯಕ್ಕೆ ನ್ಯೂನತೆ ಬರುವುದೆಂದು ಸಂಗೀತ ಸುಕಲಾ ನಿಪುಣನಾದ ವೈಣಿಕನು ವೀಣೆಯಿಂದ ಗಾನವನ್ನು ನುಡಿಸುವಂತೆ

---

* ಲಕ್ಷ್ಮೀಶ ಜಯಂತಿಯ ಮೊದಲ ಉತ್ಸವದಲ್ಲಿ ಮಾಡಿದ ಅಧ್ಯಕ್ಷಭಾಷಣ.

ಲಕ್ಷ್ಮೀವರನು ಈತನಿಂದ ಸರ್ವಲಕ್ಷಣಸಮನ್ವಿತವಾದ ಕವಿತೆಯನ್ನು ಹೇಳಿಸಿದನು. ಈ ಕಾರಣದಿಂದ ಇವನ ಕಾವ್ಯವು ಛಂದಸ್ಸು, ಅಲಂಕಾರ, ಭಾವರಸಗಳಿಂದ ತುಂಬಿ ಅರ್ಥ ಕೆಡದೆ ಯತಿಭಂಗವಾಗದೆ ಅನ್ವಯ ಕ್ಲಿಷ್ಟವಾಗದೆ ವ್ಯಾಕರಣ ಧರ್ಮವನ್ನು ಮೀರದೆ ಒಳ್ಳೆಯ ಮಾರ್ಗ ದಲ್ಲಿ ಬೆಳೆದಿದೆ. ಎಂಥ ಪಂಡಿತರಾದರೂ ಈ ಕಾವ್ಯವನ್ನು ಮೆಚ್ಚದೆ ಬಿಡುವುದಕ್ಕಿಲ್ಲ.

ಆದರೆ ಲಕ್ಷ್ಮೀಶ ಕವಿಯ ಪುಣ್ಯ ಇಷ್ಟಕ್ಕೆ ನಿಲ್ಲಲಿಲ್ಲ. ಪಂಡಿತರು ಮೆಚ್ಚುವ ಅನೇಕ ಕಾವ್ಯಗಳು ಪಂಡಿತರಿಗೆ ಮಾತ್ರ ಮೆಚ್ಚಾಗಿರುತ್ತವೆ; ಸಾಮಾನ್ಯ ಜನರಿಗೆ ಅವು ಸುಖವನ್ನು ತರಲಾರವು. ಕೆಲವು ಕಾವ್ಯ ಗಳು ಮಾತ್ರ ಪಂಡಿತರಿಗೆ ಮೆಚ್ಚಾಗುವಂತೆ ಸಾಮಾನ್ಯ ಜನರಿಗೂ ಮೆಚ್ಚಾಗುತ್ತವೆ. ಲಕ್ಷ್ಮೀಶನ ಕಾವ್ಯವು ಇಂಥ ಅಪೂರ್ವ ಕಾವ್ಯ ಗಳಲ್ಲಿ ಸೇರಿದೆ. ನಮಗೆಲ್ಲ ತಿಳಿದ ಹಾಗೆ ನಮ್ಮ ಊರುಗಳಲ್ಲಿ ಹಳೆಯ ರೀತಿಯ ಪಾಠಶಾಲೆಗಳಲ್ಲಿ ಜೈಮಿನಿ ಭಾರತವು ತಪ್ಪದೆ ಪಾಠಪುಸ್ತಕ ವಾಗಿತ್ತು. ಈಗಲೂ ಹಳೆಯ ರೀತಿಯ ಶಾಲೆಗಳಲ್ಲಿ ಪಾಠ ಹೇಳುವುದು ಮುಖ್ಯವಾಗಿ ಈ ಗ್ರಂಥವನ್ನೇ. ಈಗ ಇಪ್ಪತ್ತು ವರ್ಷಗಳ ಹಿಂದೆ ಓದು ಬರಹ ಬಲ್ಲ ಯಾರಿಗಾದರೂ ಈ ಗ್ರಂಥದ ಕೆಲವು ಭಾಗಗಳು ಬಾಯಿಗೆ ಬರುತ್ತಿದ್ದುವು. ನಾನು ಒಂದುಸಲ ಒಂದೂರಿನಲ್ಲಿ ಅಲ್ಲಿಯ ಉಪಾಧ್ಯಾಯರ ಕೈಯಲ್ಲಿ ಜೈಮಿನಿ ಭಾರತವನ್ನು ಓದಿಸುವುದಕ್ಕೆ ಏರ್ಪಾಡುಮಾಡಿದೆನು. ಉಪಾಧ್ಯಾಯರು ಚಂದ್ರಹಾಸನ ಕತೆಯನ್ನು ಓದುತ್ತ ಆ ಪ್ರತಿಯಲ್ಲಿ ಗೆದ್ದಲು ತಿಂದು ಕೆಲವು ಮಾತು ನಷ್ಟವಾಗಿದ್ದ ಸ್ಥಳಕ್ಕೆ ಬಂದು ಮುಂದೆ ಓದಲಾರದೆ ನಿಂತರು. ಆಗ ಸಭೆಯಲ್ಲಿ ಕುಳಿತಿದ್ದ ಊರ ಯಜಮಾನ ಗೌಡರು ಆ ಮಾತುಗಳನ್ನು ಪೂರ್ತಿಮಾಡಿ ಹೇಳಿದರು. ಇವರ ಹಾಗೆಯೇ ಇನ್ನೊಂದು ಊರಿನಲ್ಲಿ ಒಬ್ಬ ಶಾಸ್ತ್ರಿ ಗಳು ಮಾಡಿದರು. ಇದು ಆ ತಲೆಮಾರುಗಳ ಜನದಲ್ಲಿ ಸಾಮಾನ್ಯ ವಾಗಿತ್ತು. ಈ ಕಾವ್ಯದ ಅನೇಕ ಸನ್ನಿವೇಶಗಳನ್ನು ಮರಳಿ ಮರಳಿ ಓದಿ ಮರಳಿ ಮರಳಿ ಕೇಳಿ ನಮ್ಮ ಜನರು ಈ ಕವಿತೆಯನ್ನು ಎದೆಗೆ ಅಪ್ಪಿ ಕೊಂಡಿದ್ದರು. ಈಚೆಗೆ ಇದನ್ನು ಓದುವುದು ಸ್ವಲ್ಪ ಕಡಮೆಯಾಗಿದೆ.

ಆದರೂ ನಮಗೆ ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಎಂದು ಮೊದಲಾಗುವ ಪದ್ಯವು ಕಿವಿಗೆ ಬಿದ್ದೇ ಇರುತ್ತದೆ. ಈ ಕಾವ್ಯವನ್ನು ಓದಿದ್ದರೂ ಓದದೇ ಇದ್ದರೂ ಈ ಮಾತುಗಳು ನಮ್ಮ ನಾಡ ಜನರ ಮೆಚ್ಚಿಗೆಯ ಕಾವ್ಯದ ಮೊದಲ ಮಾತುಗಳೆಂದಾದರೂ ನಾವೆಲ್ಲ ಬಲ್ಲೆವು.

ಲಕ್ಷ್ಮೀಶನ ಕಾವ್ಯವು ಜನರ ಮನಸ್ಸನ್ನು ಹೀಗೆ ಒಲಿಸುವುದಕ್ಕೆ ಹಲವು ಕಾರಣಗಳಿವೆ. ಅವುಗಳಲ್ಲಿ ಮೊದಲನೆಯದು ಅವನು ಒಳ್ಳೆಯ ಕತೆಗಾರನೆಂಬುದು. ಈ ಕಾವ್ಯವು ಕತೆಗಳ ಒಂದು ಗುಚ್ಛ: ಧರ್ಮ ರಾಯನ ವ್ಯಥೆಯ ಕತೆ; ಅದರ ನಿವಾರಣೆಗೆ ಆದ ಏರ್ಪಾಡುಗಳು. ಯೌವನಾಶ್ವ, ಹಂಸಧ್ವಜರ ಕತೆಗಳು; ಪ್ರಮೀಳೆಯ ಕತೆ; ಮುಂದಕ್ಕೆ ಬಭ್ರುವಾಹನನ ಕತೆ. ಅದರಲ್ಲಿ ಒಳಸೇರಿ ಸೀತಾ ವನವಾಸದ ಕತೆ. ಅನಂತರ ಚಂದ್ರಹಾಸನ ಕತೆ, ಮಧ್ಯೆ ಚಂಡಿಯ ಕತೆ, ಉಮಾ ದೇವಿಯ ತಪಸ್ಸಿನ ಕತೆ, ಜ್ವಾಲೆಯ ಕತೆ, ಹೀಗೆ ಎಷ್ಟೋ ಸಣ್ಣ ಸಣ್ಣ ಕತೆಗಳು. ಹೀಗೆ ಈ ಗ್ರಂಥವು ಹಲವು ಕತೆಗಳ ಗೊಂಚಲು ಅಥವಾ ಮಾಲಿಕೆ. ಮನುಷ್ಯನಿಗೆ ಎಳೆತನದಲ್ಲಿ ಮಾತಿನ ಅರ್ಥ ತಿಳಿಯುವ ದಿನ ಬಂದೊಡನೆ ಕತೆಯಲ್ಲಿ ರುಚಿ ಹುಟ್ಟುತ್ತದೆ; ಆ ರುಚಿ ಹೋಗುವುದು ಮಾತು ಕಿವಿಗೆ ಇಳಿಯುವ ದಿನ ಮುಗಿದಾಗಲೆ. ಇದರಿಂದಲೇ ನಮ್ಮ ಹಿರಿಯರು ವಿಶಿಷ್ಟ ನಡತೆ ನೀತಿಯನ್ನೂ ಕತೆಗಳಲ್ಲಿ ಬರೆದಿಟ್ಟರು; ಈ ಕಾರಣದಿಂದಲೇ ತತ್ತ್ವವಿಚಾರಗಳಿಗೆ ವಾಮನಾವತಾರ, ನರಸಿಂಹಾವ ತಾರ ಮುಂತಾದ ಪುರಾಣ ಕತೆಗಳ ರೂಪವನ್ನು ಕೊಟ್ಟರು. ಲಕ್ಷ್ಮೀಶ ಕವಿಯು ಸುಂದರವಾದ ಹಲವು ಕತೆಗಳನ್ನು ಸೇರಿಸಿ ಹೇಳಿರುವುದರಿಂದ ಜೈಮಿನಿ ಭಾರತವು ಎಲ್ಲ ವಯಸ್ಸಿನ, ಎಲ್ಲ ತಿಳಿವಿನ, ಜನಕ್ಕೂ ಬೇಕಾದ ಗ್ರಂಥವಾಯಿತು.

ಈ ಕವಿಗೆ ಕತೆ ಹೇಳುವುದರಲ್ಲಿ ಎಂಥ ನೈಪುಣ್ಯವಿದೆ ಎಂಬುದನ್ನು ಇವನು ಕತೆಗಳನ್ನು ಆರಂಭಿಸುವ ರೀತಿಯಲ್ಲಿಯೇ ಕಾಣಬಹುದು. ಧರ್ಮರಾಯನ ಕತೆಯನ್ನು ಹೇಳುವುದಕ್ಕೆ ಹೊರಟು ಕವಿಯು "ವನರುಹ ಭವಾಂಡದೊಳಗೈವತ್ತುಕೋಟಿ ಯೋಜನದ ವಿಸ್ತೀರ್ಣ ದಿಳೆಯಂ ಸಪ್ತಶರನಿಧಿಗಳನುವೇಷ್ಟಿಸಿರಲದರ ಮಧ್ಯದೊಳಗಿಹುದು

ಜಂಬೂದ್ವೀಪಂ" ಎಂದು ಆರಂಭಿಸುತ್ತಾನೆ. ಈ ಆರಂಭವು ಸುಲಭವಾಗಿ ಸೃಷ್ಟಿಯ ವೈಶಾಲ್ಯವನ್ನೇ ಒಳಗೊಂಡು ಶೀಘ್ರದಲ್ಲಿ ಪ್ರಸಕ್ತ ವಿಷಯಕ್ಕೆ ಬಂದು ಸೇರುತ್ತದೆ. ಚಂದ್ರಹಾಸನ ಕತೆಯನ್ನು ಹೇಳುವುದಕ್ಕೆ ಮೊದಲುಮಾಡಿ ಕವಿಯು "ಇನ್ನೊರೆವೆನಾಲಿಸಾದೊಡೆ ಪಾರ್ಥ ಧಾರ್ಮಿಕಂ ಮುನ್ನೊರ್ವನುಂಟು ಕೇರಳದೇಶದವನಿಪಂ ಸನ್ನುತ ಗುಣೋದಯಂ ಮೇಧಾವಿಯೆಂಬವಂ" ಎಂದು ಹೊರಡುತ್ತಾನೆ; ಕತೆಯ ಮುಖ್ಯ ವಿಷಯವನ್ನು ಬೇಗ ಮುಟ್ಟುತ್ತಾನೆ. ಸೀತಾವನವಾಸದ ಕತೆಯನ್ನು ಹೇಳಬೇಕಾದರೆ "ವ್ಯಾಪಿಸಿದ ಸಂಪದಕೆ ನೆಲೆವನೆಯೆನಿಪ್ಪ ಯೋಧ್ಯಾಪುರದೊಳವತರಿಸಿದಂ ಮಹಾವಿಷ್ಣು ಸುತರೂಪದಿಂ ರಾಮಾಭಿಧಾನದೊಳ್ ಪುತ್ರಕಾಮೇಷ್ಟಿಯಿಂ ದಶರಥಂಗೆ" ಎಂದು ಹೇಳಿ ಅಲ್ಲಿಂದ ಹತ್ತು ಪದ್ಯದಲ್ಲಿ ರಾಮಾಯಣದ ಆರು ಕಾಂಡದ ಕತೆಯನ್ನು ಸೂಚಿಸಿ ರಾಮ ಪಟ್ಟಾಭಿಷೇಕದ ಕತೆಗೆ ಮೊದಲುಮಾಡುತ್ತಾನೆ. ಇದೆಲ್ಲ ಕವಿಯ ಕಥನ ಕೌಶಲವನ್ನು ತೋರಿಸುತ್ತದೆ. ಹೇಳೋಣವೆಂದಾಗ ಒಂದೊಂದು ಯುದ್ಧವನ್ನೂ ನೂರು ಪದ್ಯಗಳಷ್ಟು ಉದ್ದ ಬೆಳೆಸಬಲ್ಲ ಈತನು ಬೇಡವೆಂದಾಗ ರಾಮಾಯಣದ ಕತೆಯನ್ನೆಲ್ಲ ಹತ್ತು ಪದ್ಯದಲ್ಲಿ ಮುಗಿಸಬಲ್ಲನು.

ಕತೆಗಳನ್ನು ಆರಂಭಿಸುವ ರೀತಿಯಲ್ಲಿ ಕಾಣುವ ಕೌಶಲವು ಕತೆಗಳನ್ನು ವಿಸ್ತರಿಸುವ ಸಂವಿಧಾನದಲ್ಲಿಯೂ ಕಾಣುತ್ತದೆ. ಬಭ್ರುವಾಹನನ ಕತೆ, ಸೀತಾವನವಾಸದ ಕತೆ, ಚಂದ್ರಹಾಸನ ಕತೆಗಳು ಕತೆ ಹೇಳುವವರಿಗೆ ಆದರ್ಶವಾಗುವಂಥ ಉತ್ಕೃಷ್ಟವಾದ ರೀತಿಯಲ್ಲಿವೆ. ಬಭ್ರುವಾಹನನ ವಿಜೃಂಭಣೆ, ಅವನ ತಾಯ ಖೇದ ಮತ್ತು ಧರ್ಮಬೋಧೆ, ವೀರನಾದ ಆ ಕುಮಾರನ ವಿನಯ, ಅರ್ಜುನನ ಅಹಂಕಾರ, ಅವನ ಪರಾಭವ, ಇವೂ; ರಾಮನ ಆಳ್ವಿಕೆಯ ವಿತರಣೆ, ಸೀತಾದೇವಿಯ ಸಂಸಾರದ ಸುಖ, ಗೂಢಚಾರರು ಕೇಳಿದ ವೃತ್ತಾಂತ, ರಾಮನ ನಿಷ್ಠುರವಾದ ಧರ್ಮಭೀತಿ, ಅಣ್ಣ ತಮ್ಮಂದಿರ ಸಂವಾದ, ಲಕ್ಷ್ಮಣನಿಗೆ ಆಜ್ಞೆಯಾದದ್ದು, ಅವನು ಆ ಆಜ್ಞೆಯನ್ನು ನಡೆಸಿದ್ದು, ಸೀತಾದೇವಿಯ ಪ್ರಲಾಪ, ಆಕೆ ಕಾಡಿನಲ್ಲಿ ಒಂಟಿಯಾಗಿದ್ದ ಸ್ಥಿತಿ

ಮೊದಲಾಗಿ ಆ ಕತೆಯ ಎಲ್ಲ ವಿವರವೂ; ಚಂದ್ರಹಾಸನ ಬಾಲ್ಯ, ಬೆಳವಣಿಗೆ, ಅವನು ದುಷ್ಟಬುದ್ಧಿಯ ಮಾತಿನಂತೆ ಕುಂತಳನಗರಕ್ಕೆ ಬಂದದ್ದು, ಅಲ್ಲಿ ಉಪವನದಲ್ಲಿ ವಿಶ್ರಾಂತಿಗಾಗಿ ಮಲಗಿದ್ದು, ಅಲ್ಲಿಗೆ ಬಂದ ರಾಜಕುಮಾರಿಯ ಮತ್ತು ಗೆಳತಿಯರ ವನವಿಹಾರ, ವಿಷಯೆಯ ಪ್ರಣಯದ ಪ್ರಸಂಗ, ಅವಳ ವಿವಾಹ, ಮದನ ದುಷ್ಟಬುದ್ಧಿಯರ ಅಳಿವು, ಪುನರುಜ್ಜೀವನ ಈ ವಿಷಯಗಳೂ; ಸುಂದರವಾಗಿ ಮಿತವಾಗಿ ಉಚಿತವಾದ ಪದಗಳಿಂದ ವರ್ಣಿಸಲ್ಪಟ್ಟಿವೆ. ಲಕ್ಷ್ಮೀಶ ಕವಿಯು ಎಲ್ಲಕ್ಕಿಂತ ಮೊದಲು ಕಥನ ಕುಶಲನು.

ಅಲ್ಲದೆ ಈ ಕಾವ್ಯವು ಭಕ್ತಿರಸ ಪ್ರಧಾನವಾಗಿರುವುದರಿಂದ ಜನರನ್ನು ಮೆಚ್ಚಿಸಿದೆ. ನಮ್ಮ ಸೀಮೆಯಲ್ಲಿ ಯಾವ ಕಾಲದಲ್ಲಿಯೋ ಯಾವ ಮಹನೀಯರ ಯತ್ನದಿಂದಲೋ ಈ ಪದ್ಧತಿ ಆರಂಭವಾಯಿತು. ಈಗ ನಮ್ಮ ಜನರಲ್ಲಿ ಭಕ್ತಿಯೆಂದರೆ ಸೋಲದವರಿಲ್ಲ. ಯಾರೇ ಆಗಲಿ ದೇವರ ಹೆಸರನ್ನು ಹೇಳಿದರೆ ಸಾಕು; ಅವನಿಗೆ ಎಲ್ಲರೂ ಮನ್ನಣೆ ತೋರುವರು. ಇದರಿಂದ ಕೆಲವರು ಆಷಾಢಭೂತಿಗಳಾಗುವುದು ನಿಜ. ಆದರೆ ಅವರಿಗೆ ಸಿಕ್ಕುವ ಮನ್ನಣೆಯೂ ದೈವಭಕ್ತನಿಗೆ ಉದ್ದಿಷ್ಟವಾದದ್ದೇ. ಗೌತಮನ ವೇಷದಲ್ಲಿ ಅಹಲ್ಯೆಯನ್ನು ಅನುಭವಿಸಿದ ಇಂದ್ರನು ಅಹಲ್ಯೆಯ ವಿಷಯದಲ್ಲಿ ಗೌತಮನ ಅಧಿಕಾರವನ್ನು ಒಪ್ಪಿದಂತೆ ಆಷಾಢಭೂತಿಯಾದವನು ದೈವಭಕ್ತನ ಮಹಿಮೆಯನ್ನೇ ಸಾರುತ್ತಾನೆ. ಜೈಮಿನಿ ಭಾರತದ ಒಂದೊಂದು ಸನ್ನಿವೇಶದಲ್ಲಿಯೂ ಕೃಷ್ಣನ ಹಿರಿಮೆ, ಕೃಷ್ಣನ ಮಹಿಮೆ, ಕೃಷ್ಣನ ಭಕ್ತವಾತ್ಸಲ್ಯ, ಕೃಷ್ಣನ ಕಲ್ಯಾಣಗುಣ, ಇದೇ ಮಧ್ಯ ಭಾಗ. ಕತೆ ಎಲ್ಲವೂ ಇದನ್ನು ತೋರಿಸುವುದಕ್ಕೆ ಸೃಷ್ಟವಾಗಿದೆ. ಎಲ್ಲೆಲ್ಲೂ ಕೃಷ್ಣನ ಸ್ತೋತ್ರ. ಅದು ಬಂದಲ್ಲೆಲ್ಲಾ ಸುಂದರವಾಗಿದೆ. ಒಂದು ಕಡೆಯಂತೂ ಸುಧನ್ವನು ಮಾಡುವ ಸ್ತೋತ್ರವು ಕವಿಯು ತನ್ನ ಪರವಾಗಿ ಹೇಳುವ ಸ್ತೋತ್ರವೋ ಎಂಬಂತೆ ತೋರುವುದು. ಇವುಗಳಲ್ಲಿ ಎಂತಹ ರಸ ಒಸರುವುದೆಂದು ತೋರಿಸುವುದಕ್ಕೆ ಕೆಲವು ಪದ್ಯಗಳನ್ನು ಓದಬಹುದು.

ನಿರುಪಮ ಮಣಿಮಕುಟದೋರಣಿಸಿದಳಕಾವಳಿಯ
ಪೆರೆನೊಸಲ ಕತ್ತುರಿಯ ಸುಲಲಿತ ಭ್ರೂಲತೆಯ
ತುರುಗೆವೆಯ ನಿಟ್ಟಿಸಳುಗಂಗಳ ಸುನಾಸಿಕದ ಪೊಳೆವಲ್ಲ ನಸುದೋರುವ
ಕಿರುನಗೆಯ ಕದಪುಗಳ ಕುಂಡಲದ ಚೆಲ್ವಿನಿಂ
ಮೆರೆವ ಸದ್ವದನನಂ ಮೋಹನದ ಸದನನಂ
ನೆರೆ ಸೊಬಗ ಮದನನಂ ಪಡೆದ ನಿಜರೂಪನಂ ಕಂಡನವನೀಪಾಲನು

ಬಳಿಕವಂ ಕಂಡನುತ್ಪಲದಳಶ್ಯಾಮ ಕೋ
ಮಲತರ ಶರೀರನಂ ನವರತ್ನ ಮಕುಟ ಕುಂ
ಡಲ ಕಟಕ ಕೇಯೂರಹಾರನಂ ಪ್ರಕಟ ಕಟಿಸೂತ್ರ ಮಣಿಮಂಜೀರನಂ
ವಿಲಸಿತ ಶ್ರೀವತ್ಸಕೌಸ್ತುಭ ಶುಭೋರನಂ
ಲಲಿತ ಪೀತಾಂಬರೋಜ್ವಲದಲಂಕಾರನಂ
ಜಲಜ ಸಮ ಚರಣಯುಗ ಮೋಹನಾಕಾರನಂ ಲಕ್ಷ್ಮೀಮನೋಹಾರನಂ

ಜಯ ಜಯ ಜನಾರ್ದನ ಮುಕುಂದ ಮುರಮರ್ದನ ವಿ
ಜಯಮಿತ್ರ ಗೋವಿಂದ ಪಕ್ಷಿವಾಹನ ಕಮಲ
ನಯನ ಪೀತಾಂಬರ ಘನಶ್ಯಾಮ ಹರಿ ಕೃಷ್ಣ ವೈಕುಂಠ ನಾರಾಯಣ
ಕ್ಷಯರಹಿತ ರಾಮ ಲಕ್ಷ್ಮೀರಮಣ ನತಸುರಾ
ಲಯಧೇನು ಭಕ್ತವತ್ಸಲ ಕೃಪಾಕರ ಮಹಾ
ಭಯನಿವಾರಣ ನೃಸಿಂಹ ತ್ರಾಹಿಯೆನುತಿರ್ದನಾ ಸುಧನ್ವಂ ಮರೆಯದೆ

ಅತಸೀ ಕುಸುಮಗಾತ್ರನಂ ಕಮಲನೇತ್ರನಂ
ಸ್ಮಿತರುಚಿರ ಶುಭರದನನಂ ಚಾರುವದನನಂ
ಕೃತಮೃಗಮದೋಲ್ಲಸತ್ಸುಲಲಾಟನಂ ಮಣಿಕಿರೀಟನಂ ಕಂಬುಗಳನಾ
ಅತುಲ ತುಲಸೀ ಮಾಲನಂ ರಮಾಲೋಲನಂ
ಧೃತ ಕೌಸ್ತುಭೋದ್ಭಾಸನಂ ಪೀತವಾಸನಂ
ನುತ ಸಮಸ್ತಾಭರಣನಂ ಪುಣ್ಯಚರಣನಂ ಕಲಿ ಸುಧನ್ವಂ ಕಂಡನು

ಜಯ ಚತುರ್ಮುಖ ಜನಕ ಜಯ ಚಾರುಚಾರಿತ್ರ
ಜಯ ಚಿದಾನಂದ ಜಯ ಚೀರಾಂಬರಜ್ಞೇಯ
ಜಯ ಜಯ ಚ್ಯುತಿದೂರ ಜಯ ಚೂಡ ಬರ್ಹಶೋಭಿತ ಚೇತನ ಸ್ವರೂಪ
ಜಯ ಚೈದ್ಯಮಥನ ಜಯ ಚೋದಿತಾಖಿಳಲೋಕ
ಜಯ ಚೌರ್ಯಕೃತಲೀಲ ಜಯ ಚಂಡಶತಕಿರಣ
ಜಯ ಚಕ್ರಧರಯೆಂದು ಕೃಷ್ಣನಂ ಕಲಿ ಸುಧನ್ವಂ ಪೊಗಳ್ದಂ ಮನದೊಳು

ಜೀಯ ಜಗದಂತರಾತ್ಮಕ ಸರ್ವ ಚೈತನ್ಯ
ಜೀಯ ಶುದ್ಧಾದ್ವಯ ನಿರಂಜನ ನಿರಾವರಣ
ಜೀಯ ನಿನ್ನೊಳಗೀ ಸಮಸ್ತ ಮಧ್ಯಸ್ಥವಾಗಿದೆ ನೀನೆ ಸತ್ಯರೂಪ
ಜೀಯ ನಾರಾಯಣ ಮುಕುಂದ ಮಾಧವ ಕೃಷ್ಣ
ಜೀಯ ಚಕ್ರಿಯೆ ಪೀತವಾಸ ಲಕ್ಷ್ಮೀಲೋಲ
ಜೀಯ ಸರ್ವಸ್ವತಂತ್ರನೆ ಬಿಡಿಸು ಸಂಸಾರ ಪಾಶದಿಂದೆನ್ನನೆಂದು

ಜಯ ಜಯ ಜಗನ್ನಾಥ ವರಸುಪರ್ಣವರೂಥ
ಜಯ ಜಯ ರಮಾಕಾಂತ ಶಮಿತ ದುರಿತಧ್ವಾಂತ
ಜಯ ಜಯ ಸುರಾಧೀಶ ನಿಗಮ ನಿರ್ಮಲಕೋಶ ಕೋಟಿ ಸೂರ್ಯ
ಪ್ರಕಾಶ
ಜಯ ಜಯ ಕ್ರತುಪಾಲ ತರುಣ ತುಲಸೀಮಾಲ
ಜಯ ಜಯಕ್ಷ್ಮಾಪೇಂದ್ರ ಸಕಲ ಸದ್ಗುಣಸಾಂದ್ರ
ಜಯತು ಜಯ ಯದುರಾಜ ಭಕ್ತಸುಮನೋಭೂಜ ಜಯತು
ಜಯಯೆನುತಿರ್ದನು

ಬಕದಾಲ್ಭ್ಯಮುನಿಯು ಹೇಳುವ ಕತೆಯಂತೂ ಕಾವ್ಯದ ಕೊನೆಯಲ್ಲಿ ಪರಮಾತ್ಮನ ವಿಷಯವನ್ನು ತತ್ತ್ವದ ಮಾತಿನಲ್ಲಿಯೇ ವಿವರಿಸುತ್ತದೆ. ನಾಲ್ಕು ಮುಖದ ಬ್ರಹ್ಮ, ಎಂಟು ಮುಖದ ಬ್ರಹ್ಮ, ಹದಿನಾರು ಮುಖ ಮೂವತ್ತೆರಡು ಮುಖಗಳವರು, ಇವರೆಲ್ಲ ದೊಡ್ಡವರಲ್ಲ. ತಾನು ಹಿರಿಯನೆಂದು ಭಾವಿಸಿದ ಎಲ್ಲರಿಗಿಂತಲೂ ಹಿರಿಯನು ಬೇರೆ ಒಬ್ಬನಿದ್ದಾನೆ. ಆತನೇ ಶ್ರೀ ಕೃಷ್ಣನಾಗಿ ಅವತರಿಸಿರುವನು. ಅವನಿರುವಲ್ಲಿ ಬೇರೆ ಧರ್ಮ ಕರ್ಮಗಳ ಚಿಂತೆ ಬೇಕಿಲ್ಲ. ಅವನ ಸಾನ್ನಿಧ್ಯ ಪಾವನಕರ ವಾದದ್ದು. ಅವನ ಕರುಣೆ ಲೋಕವನ್ನು ರಕ್ಷಿಸತಕ್ಕದ್ದು. ಅವನ ಇಚ್ಛೆಯಿಂದ ಸೃಷ್ಟಿ ಆಗುವುದು, ಹೋಗುವುದು. ಹೀಗೆ ಈ ಕಾವ್ಯವು ಕೃಷ್ಣ ಚರಿತೆಯ ಅಮೃತವಾಗಿ ನಮ್ಮ ಜನರನ್ನು ತಣಿಸಿತು.

ನಮ್ಮ ಜನರು ಈ ಕಾವ್ಯವನ್ನು ಪ್ರೀತಿಸುವುದಕ್ಕೆ ಇನ್ನೊಂದು ಕಾರಣ ಇದರಲ್ಲಿರುವ ವಿಸ್ತಾರವಾದ ಯುದ್ಧಗಳ ವರ್ಣನೆ. ಸರಿಯಾಗಿ ನೋಡಿದರೆ ಜೈಮಿನಿ ಭಾರತದ ಅರ್ಧ ಕಾವ್ಯವೇ ಕದನಗಳ ಉತ್ಸಾಹ ದ್ದೆಂದು ಕಾಣುತ್ತದೆ. ಈಗ ನಮ್ಮಲ್ಲಿ ಅನೇಕರಿಗೆ ಈ ಯುದ್ಧಗಳನ್ನು ಕುರಿತ ಪದ್ಯಗಳನ್ನು ಓದುವುದಕ್ಕೆ ಬೇಸರ. ನಮ್ಮ ಪೂರ್ವಿಕರಿಗೆ

ಈ ಬೇಸರವಿರಲಿಲ್ಲ. ಅದೇನು ಅವರ ಆ ಆಗ್ನೇಯಾಸ್ತ್ರಗಳು, ವಾಯುವ್ಯಾಸ್ತ್ರಗಳು, ಅದೇನು ಅವರ ಆ ಕೂರ್ಗಣೆಗಳೆಚ್ಚಾಟ, ತೇರು ಹಿಂದಕ್ಕೆ ಹೋಗೋಣವೆಷ್ಟು, ತಿರ್ರನೆ ತಿರುಗೋಣವೆಷ್ಟು, ಅತಿರಥ ಮಹಾರಥರ ಮೂದಲೆಗಳೆಷ್ಟು. ರಾಮಾಯಣದಲ್ಲಿ ಮೊದಲಾದ ಈ ರೀತಿಯ ವರ್ಣನಾವಿಸ್ತಾರವು ಹತ್ತಿರ ಹತ್ತಿರ ಈಗ ಮುನ್ನೂರು ವರ್ಷಗಳವರೆಗೆ ಕಾವ್ಯದಲ್ಲಿ ಅನಿವಾರ್ಯವಸ್ತುವಾಗಿತ್ತು. ಇದಕ್ಕೆ ಒಂದು ಕಾರಣವೇನೆಂದರೆ ನಮ್ಮ ಜನರ ಪಾಡಿಗೆ ಊರುಗಳೆಲ್ಲ ಪಾಳೆಯಗಳಾಗಿದ್ದವು. ಅವರು ಸದಾ ಕದನಕಾತರರಾಗಿದ್ದರು, ಕದನಕುತೂಹಲರಾಗಿದ್ದರು. ಅವರ ವೀರಗಲ್ಲುಗಳನ್ನು ನೋಡಿ, ಶಾಸನಗಳಲ್ಲಿ ಕೆತ್ತಿರುವ ಅವರ ಶೌರ್ಯದ ಕತೆಗಳನ್ನು ಓದಿ, ಎಲ್ಲ ಕಡೆಯೂ ಕಾಣುವ ಅವರ ಕಾಲದ ಕೋಟೆ ಕೊತ್ತಲ ದಿಡ್ಡಿ ಕಂದಕಗಳು ಹೇಳುವ ಕತೆಯನ್ನು ಕೇಳಿ: ಅವರ ಜೀವನದ ಬಹು ಭಾಗ ಯುದ್ಧದಲ್ಲಿ ಕಳೆಯುತ್ತಿತ್ತೆಂದೂ ಅವರು ಉದ್ಯಮಿಗಳೆಂದೂ ಶೂರರೆಂದೂ ವೀರಭಟರೆಂದೂ ತಿಳಿಯುವುದು. ಇಂಥವರು ಶೌರ್ಯದ ಕತೆಗಳನ್ನು ಆಶಿಸಿದ್ದು ನ್ಯಾಯವೇ. ಆಮೇಲೆ ಕೊಂಚಕಾಲ ಈ ಶೌರ್ಯ ಯುಗದ ಸಂಜೆಯ ನಸುಬೆಳಕು; ಸೋತು ಕುಳಿತವರ ಸೋಲನ್ನೊಪ್ಪದ ಹುಂಕಾರ; ಸತ್ತನಾಲಗೆಯ ಕಾರದಾಸೆ; ಅಂತೂ ಈಗ ಎರಡು ತಲೆಮಾರಿನವರೆಗೆ ಯುದ್ಧದ ವರ್ಣನೆಗಳಲ್ಲಿ ನಮ್ಮವರಿಗೆ ಬಹಳ ಪ್ರೀತಿಯಿರುತ್ತಿತ್ತು. ಹೀಗೆ ನಮ್ಮ ಪೂರ್ವಿಕರು ಯುದ್ಧದ ವರ್ಣನೆಗಳನ್ನು ಕಾವ್ಯದಲ್ಲಿ ಕೇಳಿ ಕೇಳಿ ಸಂತೋಷಪಡುತ್ತಿದ್ದರು; ಇಂಥ ವರ್ಣನೆಯನ್ನು ಕೊಟ್ಟ ಕಾವ್ಯವನ್ನು ಬಹಳವಾಗಿ ಆದರಿಸುತ್ತಿದ್ದರು. ಯೌವನಾಶ್ವ ಸುಧನ್ವ ಬಭ್ರುವಾಹನ ಲವಕುಶರ ಯುದ್ಧಗಳನ್ನು ಉತ್ಸಾಹದಿಂದ ವರ್ಣಿಸುವ ಈ ಕಾವ್ಯವು ಅವರಿಗೆ ಯುದ್ಧಗಳ ಒಳ್ಳೆಯ ಕೋಶವಾಗಿ ಕಂಡಿರಬೇಕು. ಇಂಥ ಅಭಿರುಚಿಗಾಗಿಯೇ ಕವಿಯು ಕಾವ್ಯದಲ್ಲಿ ಯುದ್ಧಗಳನ್ನು ಅಷ್ಟು ವಿಸ್ತಾರವಾಗಿ ವರ್ಣಿಸಿದ್ದೂ ಕೂಡ. ಇದರಿಂದಲೂ ಲಕ್ಷ್ಮೀಶನ ಕಾವ್ಯವು ಜನರ ಆದರವನ್ನು ಸಂಪಾದಿಸಿತು.

ಇಷ್ಟಾದಮೇಲೆ ಈ ಕಾವ್ಯದ ಮೇಲ್ಮೆಗೆ ಇನ್ನೊಂದು ಕಾರಣವಿದೆ.

ಕಡೆಗೆ ಹೇಳಿದೆಯಾದರೂ ಇದೇ ಪ್ರಧಾನವಾದ ಕಾರಣವೆನ್ನಬೇಕು. ಈ ಕಾವ್ಯವು ರೂಪದಿಂದ ಮಾತ್ರವಲ್ಲದೆ ನಿಜವಾಗಿಯೂ ಕಾವ್ಯ. ಭಕ್ತಿರಸ ವೀರರಸ ಪ್ರಧಾನವಾದ ಈ ಕಥೆಗಳನ್ನು ಹೇಳಿದಾತನು ಉತ್ತಮ ವರ್ಗದ ಕವಿ. ಮೊದಲಾಗಿ ಇವನ ವಸ್ತುಸೌಂದರ್ಯಜ್ಞಾನ ಹಿರಿದು; ಇವನ ವರ್ಣನೆಗಳ ಸೊಗಸು ಬಹು ಸೊಗಸು. ಉದಯವಾಗಲು "ಮೂಡು ದೆಸೆಯೊಳ್ ಕೆಂಪುದೊರೆಯೆ ತಾರಗೆ ಪರಿಯೆ ಕೂಡೆ ತಂಗಾಳಿ ಮುಂಬರಿಯೆ ಕಮಲಂ ಬಿರಿಯೆ ಪಾಡುವೆಳದುಂಬಿಗಳ್ ಮೊರೆಯೆ ಚಕ್ರಂ ನೆರೆಯೆ ನೈದಿಲೆಯ ಸೊಂಪು ಮುರಿಯೆ" ಕತ್ತಲೆ ಎತ್ತ ಹೋಯಿತೋ ಎಂದು ನೋಡುವುದಕ್ಕೆ ಸೂರ್ಯನು ಎದ್ದುಬಂದಂತೆ ಇತ್ತಂತೆ. ಸಂಜೆ ಕವಿಯಲು "ಓಡಿದುವು ಪಕ್ಷಿಗಳ್ ಗೂಡಿಂಗೆ. ದೆಸೆಗಳಂ ನೋಡಿದವು ಘೂಕಂಗಳ್. ಅಳಿಗಳಂ ಸೆರೆಗೈದು ಹೂಡಿದವು ಬಾಗಿಲಂ ಕಮಲಂಗಳ್. ಅರಲ್ದುವಿಂದೀವರಂಗಳ್. ನಭದೊಳು ಮೂಡಿದುವು ತಾರೆಗಳ್. ಚಕ್ರವಾಕಂಗಳಂ ಕಾಡಿದುವು ವಿರಹ ತಾಪಂಗಳ್. ಇಳೆಯೆಲ್ಲಮಂ ತೀಡಿದವು ಕತ್ತಲೆಗಳ್ ಅಲ್ಲಲ್ಲಿ ಮನೆ ಮನೆಯ ಸೊಡರುಗಳ್ ಕಣ್ಗೆಸೆದುವು." ಪಕ್ಷಿಗಳು ಗೂಡಿಗೆ ಓಡುವುದ ರಿಂದ ಮೊದಲು ಸಂಜೆ ಮುಗಿದು ರಾತ್ರಿ ಹಬ್ಬುವವರೆಗೆ ಸೃಷ್ಟಿಯ ಮುಖದಲ್ಲಿ ಕಾಣುವ ಭಾವಗಳನ್ನು ಸಮುಚ್ಚಯಮಾಡಿ ಕವಿ ಈ ಸುಂದರ ವಾದ ಚಿತ್ರವನ್ನು ರಚಿಸಿದ್ದಾನೆ. ಕವಿಸಮಯದ ಕಾರ್ಯಗಳಾದರೂ ಕಮಲಗಳು ಬಾಗಿಲನ್ನು ಮುಚ್ಚಿದ್ದೂ ಇಂದೀವರಗಳು ಅರಳಿದ್ದೂ ಈ ಕಲೆಯಲ್ಲಿ ವಾಸ್ತವ ವಿಷಯಗಳಾಗುತ್ತವೆ. ಪಕ್ಷಿಗಳೊಡನೆ ನಕ್ಷತ್ರ ಗಳೊಡನೆ ಈ ಚಿತ್ರದಲ್ಲಿ ವಿರಹತಾಪಗಳಿಗೆ ಕೂಡ ದೇಹಗಳು ಒದಗಿವೆ. ಕತ್ತಲೆ ಇಲ್ಲಿ ಒಂದಲ್ಲ; ಅನೇಕ ಆಗಿದೆ. ಕೊನೆಗೆ "ಮನೆ ಮನೆಯ ಸೊಡರುಗಳ್ ಕಣ್ಗೆಸೆದುವು." ಸೋತಿದ್ದ ಜೀವ ಕೊಂಚ ಕೊಂಚವಾಗಿ ಮರಳಿ ಬಂದಂತೆ ಕತ್ತಲು ಕವಿದ ಊರು ಒಂದೊಂದಾಗಿ ಹಚ್ಚುವ ಬೆಳಕುಗಳಿಂದ ಸನ್ನಿಯಿಂದ ಎಚ್ಚರಗೊಳ್ಳುವುದನ್ನು ನೋಡುವವರಿಗೆ ಸಂಜೆಯ ವರ್ಣನೆಯಲ್ಲಿ ಇದು ಎಷ್ಟು ಮುಖ್ಯ ವ್ಯಾಪಾರವೆಂದು ತಿಳಿದಿರು ತ್ತದೆ. ಉದಯದ ಸೊಗಸನ್ನೂ ಸಂಜೆಯ ಚಂದವನ್ನೂ ನೋಡಿ

ಈ ಕವಿಯ ಕಣ್ಣೂ ಮನಸ್ಸೂ ಅರಳಿದ್ದುವು. ಹೀಗೆಯೇ ಈತನ ಋತು ವರ್ಣನೆಗಳಲ್ಲಿ ಚಂದ್ರೋದಯದ ವರ್ಣನೆಗಳಲ್ಲಿ ಪ್ರಕೃತಿಯ ಮುಖವನ್ನು ನೋಡಿ ಅದರ ಸೌಂದರ್ಯಕ್ಕೆ ನಲಿದ ಕವಿ ಮನೋಧರ್ಮವು ಸ್ಪಷ್ಟವಾಗುತ್ತದೆ.

ಸೌಂದರ್ಯದ ಸ್ಥಾನಗಳನ್ನು ನೋಡಿ ತಿಳಿಯುವ ದೃಷ್ಟಿಯಂತೆಯೇ ಇವನ ವರ್ಣನಾ ಶಕ್ತಿಯೂ ವಿಚಿತ್ರವಾದದ್ದು:

ಅಂಚೆವಿಂಡಾಡದ ಕೊಳಂ ಕೊಳಗಳೊಳು ಸಲೆ ಪ
ಳಂಚಿ ಸುಳಿಯದ ಗಾಳಿ, ಗಾಳಿಗಳ ಬಳಿವಿಡಿದು
ಸಂಚರಿಸದೆಳದುಂಬಿ, ತುಂಬಿಗಳ ಬಿಡಯುಕಿಂಪೆನಿಸದಚ್ಚಲರ್ ಅಲರ್‌ಗಳ
ಗೊಂಚಲ್ ಎರಗಿಸದ ಲತೆ, ಲತೆಗಳಡರದತಳ್ಕಿ
ನಿಂ ಚಿಗುರದಿಮ್ಮಾವು, ಮಾವುಗಳ ಚೆಂದಳಿರ್
ಮಿಂಚದ ಬನಂ, ಬನಗಳಿಂ ಬಳಸದೂರ್ ಊರ್ಗಳಿಲ್ಲದೆಡೆ ಇಲ್ಲಿಳೆಯೊಳು

ಹಾಗೆಯೇ :

ತರುಣಪಲ್ಲವದ ವಿಸ್ತಾರದಿಂ ನೇರದಿಂ
ಸರಗೈವ ಕಲಪಿಕೋಚ್ಚಾರದಿಂ ಸಾರದಿಂ
ಸುರಿವ ಪೂದೊಂಗಲ ತುಷಾರದಿಂ ಸ್ವೈರದಿಂ ಸಲ್ಲಾಪಕೆಳಸಿ ಬಳಸಿ
ನೊರೆವ ತುಂಬಿಗಳ ಝುಂಕಾರದಿಂ ತೋರದಿಂ
ಪರಿಪಕ್ವಮಾದ ಫಲಭಾರದಿಂ ಕೀರದಿಂ
ಕರಮೆಸೆಯುತಿರ್ಪ ಸಹಕಾರದಿಂ ತೀರದಿಂಪೆಲ್ಲಿಯುಂ ನಂದನದೊಳು

ಬಕುಳ, ಮಂದಾರ, ಪಾದರಿ, ಕರ್ಣಿಕಾರ, ಚಂಪಕ, ಕೋವಿದಾರ, ಪ್ರಿಯಂಗು, ಕರವೀರ, ಕುರವಕ, ತಿಲಕ, ಸುರಗಿ, ನಂದ್ಯಾವರ್ತ, ಮೇರು, ಸೇವಂತಿಗೆ, ಶಿರೀಷವೆಂಬ ಉದ್ಯಾನವ ಮರಗಳ ಪಟ್ಟಿಯ ಸೊಗಸು ಎಂಥದೆಂದು ಮಾತನ್ನು ಗಟ್ಟಿಯಾಗಿ ಓದಿದರೆ ತಿಳಿಯುತ್ತದೆ. ವನದಲ್ಲಿ ಕಾಣುವ ವರ್ಣಗಳನ್ನು ಈತನ ಕಣ್ಣು ಚೆನ್ನಾಗಿ ನೋಡಿ ಬಲ್ಲದು; ಮಾತು ಬೇರೆ ಬೇರೆಯಾಗಿ ತೋರಿಸ ಬಲ್ಲುದು :

ಪೊಸಮಾವಶೋಕೆಯೊಳ್ಮರಿದುಂಬಿ ಕೋಗಿಲೆಯೊ
ಳೆಸೆವ ಸಂಪಗೆ ಪೊಚ್ಚ ಪೊಂದಾವರೆಯೊಳೊಪ್ಪ
ಡಸಿದ ಮಲ್ಲಿಗೆಯಲರ್ಗಳತ ಬೆಳ್ದಿಂಗಳೊಳ್ಗಿಳಿವಿಂಡು ಬನಸಿರಿಯೊಳು

ಮುಸೆದುವೊಂದೊಂದರೊಳ್ಮಧುಮಾಸಕಂಗಜನ
ದಸೆಯಂತೆ ಖತಿಯಂತೆ ಧನದಂತೆ ಜಸದಂತೆ
ಪಸುರ್ವೆಳಸಿನಂತೆ ಕೆಂಪಸಿತಂ ಪಳದಿ ಪಳಕು ಪಚ್ಚೆಗಳ ಬಣ್ಣದಿಂದೆ

ಹಾಗೆಯೇ ಸಂಜೆಯಲ್ಲಿ ಕೆಂಪು ಹೇಗೆ ಕಂಡಿತೆಂದು ವರ್ಣಿಸುವ ಈ ಪದ್ಯದಲ್ಲಿಯೂ ಈತನ ವರ್ಣವಿಜ್ಞಾನವು ಚೆನ್ನಾಗಿ ಕಾಣುತ್ತದೆ. ಸಂಜೆಯಾಗಸದ ಹತ್ತಾರು ತೆರನ ಕೆಂಪು ಇಲ್ಲಿ ಹತ್ತಾರು ವಸ್ತುವಿನ ಸಾಮ್ಯದಿಂದ ವರ್ಣಿಸಲ್ಪಟ್ಟಿದೆ.

ರಂಜಿಸುವ ಪಶ್ಚಿಮಾಚಲ ಕಿರಾತಂ ತೊಟ್ಟ
ಗುಂಜಾಭರಣಮೊ ಮೇಣ್ಗಗನಾಂಬುಧಿಯ ತಡಿಯ
ಮಂಜುವಿದ್ರುಮಲತೆಯೊ ಮೇಣಪರ ದಿಗ್ವಧುವಿನಂಗ ಕುಂಕುಮ ಲೇಪವೊ
ಅಂಜನೇಭದ ಸಿಂದುರವೊ ಶಿವನ ಕೇಶಗಳ
ಕೆಂಜೆಡೆಯೊ ವಿಷ್ಣು ಪದಪಂಕರುಹದರುಣತೆಯೊ
ಸಂಜೆವೆಣ್ಣುಟ್ಟ ರಕ್ತಾಂಬರವೊ ಪೇಳೆನಲ್ಕಾಬೈಗುಗೆಂಪೆಸೆದುದು

ಕುಂತಳಪುರದ ರಾಜೋಪವನವು ಹೀಗೆ ಎಸೆಯಿತಂತೆ:

ಸರಸಿಯೊಳ್ನಲಿದಾಡುವಂಚೆಗಳ ಕೊಂಚೆಗಳ
ಬೆರಸಿ ರಮಿಸುವ ಕುಣಿವ ಕೋಕಿಗಳ ಕೇಕಿಗಳ
ನೆರೆನೆರೆದು ಮೊರೆವ ಮರಿದುಂಬಿಗಳ ದೊಂಬಿಗಳ ಚೀರ್ವ ಗಿಳಿ ಕೋಗಿಲೆಗಳ
ತರುಲತೆಯ ತುರುಗಲ ರಸಾಲ ಪ್ರವಾಳಪ್ರ
ಕರದ ಶೋಭೆಗಳ ಕುಸುಮಾಳಿಗಳ ಗಾಳಿಗಳ
ಪರಿಮಳದ ಮನಕಿಂಪನೊಗೆಯಿಸುವ ಬಗೆಯಿಸುವ ರಾಜೋಪವನ ವೆಸೆದುದು

ಪ್ರಕೃತಿಯ ಸಮಸ್ತ ಸೌಂದರ್ಯಕ್ಕೆ ಮನುಷ್ಯನ ಮೈಕಟ್ಟಿನ ಸೌಂದರ್ಯ ಕಳಶ. ಈ ಕವಿಯು ಈ ಸೊಗಸನ್ನು ಮರಳಿ ಮರಳಿ ವರ್ಣಿಸುತ್ತಾನೆ. ಎಲ್ಲ ಸೌಂದರ್ಯದ ಮೂಲನಾದ ದೇವರ ಆಕಾರ ವನ್ನು ವರ್ಣಿಸುವ "ಅತಸೀ ಕುಸುಮಗಾತ್ರನಂ" ಎಂಬ ಪದ್ಯ ಈ ಮೊದಲೇ ಬಂದಿದೆ. ಇನ್ನೊಂದು ಸಂದರ್ಭದಲ್ಲಿ ಕವಿಯು ಪುರುಷೋತ್ತಮನಾದ ಶ್ರೀ ರಾಮನ ಆಕೃತಿಯನ್ನು ಸೀತೆಯ ಮೂಲಕ ಹೀಗೆ ವರ್ಣಿಸಿರುವನು:

ತೊಳಪ ನಾಸಿಕದ ನುಣ್ಗದಪುಗಳ ಪೊಳೆವ ಕಂ
ಗಳ ತುರುಗಿದೆವೆಯ ನಿಡವುಬ್ರುಗಳ ಪೆರೆ ನೊಸಲ
ಥಳಥಳಿಪ ಮುಕುಟದ ಕಿವಿಯ ಮಕರಕುಂಡಲದ ಕೋಮಲಿತ ಚುಬುಕಾಗ್ರದ
ಲಲಿತಾರುಣಾಧರದ ಮಿರುಗುವ ರದನ ಪಙ್ಕ್ತಿ
ಗಳ ಸೂಸುವೆಳನಗೆಯ ಮೋಹನದ ಚೆಲ್ವಿನೊ
ಬ್ಬುಳಿಯೆನಿಪ ರಾಘವನ ಸಿರಿಮೊಗವನೆಂತು ನೋಡಿದದೆ ಮಾಣ್ಬೆನಕಟೆಂದಳು

ಸ್ತ್ರೀಯ ಆಕಾರದ ಸೌಂದರ್ಯವನ್ನು ವರ್ಣಿಸಿರುವ ಸನ್ನಿವೇಶಗಳು ಈ ಕಾವ್ಯದಲ್ಲಿ ಯಥೇಚ್ಛವಾಗಿವೆ. ದ್ವಾರಕಾಪುರಿಯ ಹೂವಡಿಗ ಹೆಣ್ಣುಗಳನ್ನು ಕವಿ ಹಲವು ಪದ್ಯಗಳಲ್ಲಿ ವರ್ಣಿಸಿದ್ದಾನೆ. ಅವುಗಳಲ್ಲಿ ಇದೊಂದು :

ನಸುನಗೆಯೊಳರೆವಿರಿದ ಮಲ್ಲಿಗೆಯ ಸುರೆ ಪೊಳೆವ
ದಶನದೊಳ್ಕುಂದಮಂ ಮೊಗದೊಳರವಿಂದಮಂ
ಮಿಸುಪ ನಳಿತೋಳೊಳ್ಶಿರೀಷಮಾಲೆಯನೆಸೆವ ನಾಸದೊಳ್ಸಂಪಗೆಯನು
ಎಸಳ್ಗಣ್ಣೊಳುತ್ಪಲವನುಗುರ್ಗಳೊಳ್ಕೇತಕಿಯ
ನೊಸೆದಿರಿಸಿಕೊಂಡುಳಿದಲರ್ಗಳಂ ಮಾರ್ವನೊ
ಲ್ಕುಸುಮದ ಪಸರದೊಳೊಪ್ಪಿದರಲ್ಲಿ ಪೂವಡಿಗವೆಣ್ಗಳದನೇವೇಳ್ವೆನು

ಹೂವನ್ನು ಬಿಡಿಸುತ್ತಲಿರುವ ಹೆಣ್ಣುಮಕ್ಕಳ ವರ್ಣನೆಯಲ್ಲಿ ಕವಿಯು ಹೀಗೆಂದು ಹೇಳುತ್ತಾನೆ :

ಮೊಳೆವಲ್ಲ ಮೊಲ್ಲೆಯಂ ಚೆಂದುಟಿಯ ಬಂದುಗೆಯ
ನೆಳನಗೆಯ ಮಲ್ಲಿಗೆಯನೆಸಳ್ಗಣ್ಣ ನೈದಿಲಂ
ನಳಿತೋಳ ಸಿರಿಸಮಂ ಸೆಳ್ಳುಗುರ ಕೇತಕಿಯನಾನನದ ತಾವರೆಯನು
ತೊಳಗುವ ಸುನಾಸಿಕದ ಸಂಪಗೆಯನವಯವದೊ
ಳಳವಡಿಸಿ ಕುಸುಮಗಂಧಿಯರೇತಕಿನ್ನು ಪೂ
ಗಳನರಸಿಕೊಯ್ವರೆಂದವರ ನಡು ಚಿಂತಿಸಿಯೆ ಬಡವಾದುದೆನಲೆಸೆದುದು

ಸುಧನ್ವನ ರಾಣಿ ಸುಶ್ರೋಣಿ ಸರ್ಪವೇಣಿಯಾದ ಪ್ರಭಾವತಿ ಚಂದ್ರಕಾಂತದಿಂದ ನಿರ್ಮಿಸಿದ ಪುತ್ಥಳಿಯಂತೆ ಎಸೆದಳಂತೆ. ಅದರ ವರ್ಣನೆಯಿದು :

ಮುಡಿಯ ಪೊಸಮಲ್ಲಿಗೆಯ ಸೂಸುವೆಳನಗೆಯ ಸವಿ
ನುಡಿಯ ಬಾಯ್ದೆರೆಯ ಹೊಳೆ ಹೊಳೆವದಶನದ ಮಿಸುಪ
ಕಡೆಗಣ್ಣ ತೊಳಗುವ ನಖಾವಳಿಯ ಥಳಥಳಿಪ ಕಂಠಮಾಲೆಯ ಮುತ್ತಿನ

ತೊಡವುಗಳ ಘನಸಾರದನುಲೇಪನದ ಸಣ್ಣ
ಮಡಿ ದುಕೂಲದ ಬೆಳ್ವೊಗರ್ಕೋಮಲಾಂಗದೊ
ಳ್ಬಿಡದೆ ಪಸರಿಸೆ ಚಂದ್ರಕಾಂತದಿಂ ನಿರ್ಮಿಸಿದ ಪುತ್ತಳಿವೊಲವಳೆಸೆದಳು

ಪ್ರಮೀಳೆಯ ರಾಜ್ಯದ ಸೈನಿಕ ಸ್ತ್ರೀಯರು ಯುದ್ಧಕ್ಕೆ ಮುಂಕೊಳುತ್ತಿರುವಾಗ ಹೀಗಿದ್ದರೆಂದು ಕವಿ ವರ್ಣಿಸುತ್ತಾನೆ:

ತೆಗೆದುಟ್ಟ ಚಲ್ಲಣದ ಬಿಗಿದ ವೊಲೆಗಟ್ಟುಗಳ
ಪೊಗರುಗುವ ವೇಣಿಗಳ ಮೃಗಮದದ ಬೊಟ್ಟುಗಳ
ತಿಗುರಿದನುಲೇಪನದ ಮಗಮಗಿಪ ಕಂಪುಗಳ ಝಗಝಗಿಸುವಾಭರಣದ
ನಗೆಮೊಗದ ಮಿಂಚುಗಳ ದೃಗುಯುಗದ ಕಾಂತಿಗಳ
ಮಿಗೆ ತೊಳಗುವಂಘ್ರಿಗಳ ಸೊಗಯಿಸುವ ಬಾಹುಗಳ
ಬಗೆಬಗೆಯ ಕೈದುಗಳ ವಿಗಡೆಯರ್ನೆರೆದು ಕಾಳೆಗಕೆ ಮುಂಕೊಳುತಿರ್ದರು

ಸೀತಾದೇವಿ ವಸಂತಲಕ್ಷ್ಮಿಯಂತೆ ಕಂಡಳಂತೆ:

ಮಲ್ಲಿಕಾಸ್ಮಿತರುಚಿರೆ ಕುಂದ ಕುಟ್ಮಲರದನೆ
ಪಲ್ಲವಾಧರೆ ಭೃಂಗ ಕುಂತಳೆ ಕುಸುಮಗಂಧಿ
ಸಲ್ಲಲಿತ ಕೋಕಿಲಾಲಾಪೆ ಚಂಪಕವರ್ಣೆ ಮೃದು ಮಧುರ ಕೀರವಾಣಿ
ಫುಲ್ಲಲೋಚನೆ ಚಾರುಚಂದ್ರಬಿಂಬಾನನೆ ಲ
ಸಲ್ಲತಾಗಾತ್ರಿ ಜಾನಕಿ ವಿರಾಜಿಸಿದಳ್ಸ
ಮುಲ್ಲಾಸದಿಂ ಪುಷ್ಪವತಿಯಾಗಿ ವಿಕಸಿತ ವಸಂತಲಕ್ಷ್ಮಿಯ ತೆರದೊಳು

ಚಂಪಕಮಾಲಿನಿಯ ಸಖಿಯರು ಸರೋವರದಲ್ಲಿದ್ದಾಗ:

ನಿರಿಗುರುಳ್ಗಳ ತುಂಬಿಗಳ ಪೊಳೆವ ಲೋಚನದ
ಮರಿಮೀನ ಮೊಗದಲರ್ದಾವರೆಯ ತಿವಳಿಗಳ
ಕಿರುದೆರೆಯ ಕಂಧರದ ಕಂಬುವಿನ ಘನಕುಚಂಗಳ ಕಂಜಮುಕುಳಂಗಳ
ಪೊರೆವಾರ ಪುಳಿನದ ತನುಚ್ಛವಿಯ ತಿಳಿನೀರ
ಮೆರೆವ ಮಧ್ಯದ ಮೃಣಾಳದ ಬಗೆಯ ಭೇದಮಂ
ಕುರುಪಿಡುವೊಡರಿದೆನಲ್ಸರಸಿಯೊಳ್ತರಳೆಯರ ಜಲಕೇಳಿ ಕಣ್ಗೆಸೆದುದು

ಸ್ನಾನ ಮುಗಿದು ಮೆಟ್ಟಲಮೇಲೆ ಅವರು ನಿಂತಿದ್ದಾಗ ಹೇಗೆ ಕಂಡರೆಂದು ಕವಿಯು ಈ ಪದ್ಯದಲ್ಲಿ ವರ್ಣಿಸುತ್ತಾನೆ:

ಕೂಲವನಡರ್ದು ನನೆದಂಗದೊಳ್ಪತ್ತಿದ ದು
ಕೂಲದೊಳಿರಲ್ಕೆ ತಾಪಸರ ದೃಢಮತಿಗೆ ಪ್ರತಿ
ಕೂಲ ಕೃತಿಗಳೊ ಮೋಹನದ ರಸದೊಳಾರ್ದ್ರತೆಯನಾಂತ ಚೆಲ್ವಿನ
ಕಣೆಗಳೋ

ಸಾಲ ಮಣಿಮಯದ ಸೋಪಾನದೊಳ್ನಿಲಿಸಿರ್ದ
ಸಾಲಭಂಜಿಕೆಗಳೊ ವಿಚಿತ್ರಮೆನೆ ರಂಜಿಪರ
ಸಾಲಪಲ್ಲವಪಾಣಿ ಪಾದತಳದಬಲೆಯರ ರೂಪುಗಳ್ಕಣ್ಗೆಸೆದುವು

ಹೀಗೆಯೇ ಕುಶಲವರ ಚೆಲುವನ್ನು ವರ್ಣಿಸುವುದರಲ್ಲಿಯೂ ಈ ಕವಿಯ ಸೌಂದರ್ಯ ಗ್ರಹಣಶಕ್ತಿಯು ಚೆನ್ನಾಗಿ ಕಾಣುತ್ತದೆ. ಕುಶಲವರು ಆಶ್ರಮದಲ್ಲಿ ಹೀಗೆ ಕಣ್ಗೆಸೆದರಂತೆ:

ಚೆಲ್ವೆರಡು ರೂಪಾಯ್ತೊ ವಿಮಲತೆ ಕವಲ್ತುದೋ
ಗೆಲ್ವ ದಸೆಗೆಳೆಗೊಂಡಡರ್ದಪುದೊ ಕೀರ್ತಿಯ ಮ
ಡಲ್ವಸುಧೆಯೊಳ್ದ್ವಿಧಾಕೃತಿಯಾಯ್ತೊ ಸಂತಸದ ಬೆಳಸಿನ ಬೆಳೆದ
ಪಸುಗೆಯೋ

ಸಲ್ವ ಕುಲದೇಳ್ಗೆಯ ಸಸಿಯಕೋಡೊ ಮೋಹನದ
ಬಲ್ಪೊನಲ ಸವಡಿಯೋ ಸೊಗಸಿನವಳಿಯ ಫಲವೊ
ಸೊಲ್ವಡಿದು ಪೊಸತೆನಲ್ಕುಶಲವರ್ಕುಶಲದಿಂ ಕಣ್ಗೆಸೆದರಾಶ್ರಮದೊಳು

ತೊಟ್ಟಲೊಳ್ನಲಿವ ನೆವವಿಲ್ಲದೆ ನಗುವ ಬಾಯ್ಗೆ
ಬೆಟ್ಟಕ್ಕಿ ಪೀರ್ವ ಪಸಿದೊಡೆ ಚೀರ್ವ ಮೊಲೆಯುಂಬ
ಪಟ್ಟರಿಸೆ ಪೊರಳ್ವಂಬೆಗಾಲಿಡುವ ಪೊಳೆವಲ್ಲ ಜೊಲ್ಲುಗೆ ತೊದಳಿಸಿ ನುಡಿವ
ದಟ್ಟಡಿಯಿಡುವ ನಿಲ್ವ ತೊಡರ್ವ ಬೇಡುವ ಪರಿವ
ಬಟ್ಟೆಯೊಳೆರಗುವ ಕಾಡುವ ಕುಣಿವ ಲೀಲೆಯಿಂ
ನೆಟ್ಟನೆ ಕುಮಾರಕತೆರ್ೀರಿದಜರ್ಾನಕಿಗೆ ವಾಲ್ಮೀಕಿಮುನಿಪರಂಗೆ

ಚಂದ್ರಹಾಸನು ಮಗುವಾಗಿದ್ದಾಗ ಹೀಗಿದ್ದನಂತೆ:

ಮೊಳೆವಲ್ಲುಗುವ ಜೊಲ್ಲು ದಟ್ಟತಡಿ ತೊದಲ ನುಡಿ
ತೊಳತೊಳಗುತಿಹ ಸೊಬಗು ಮೆರೆವ ನಗೆಮೊಗದ ಬಗೆ
ಪೊಳೆವ ಕಣ್ಮಸುಪ ನುಣ್ಗದಪಿನೆಣೆ ಚೆಲ್ವ ಪಣೆ ಕುರುಳ ಜೋಲಂಬೆಗಾಲು
ಸುಳಿನಾಭಿ ಮಿಗೆ ಶೋಭಿಪಧರದೆಡೆ ಬಟ್ಟದೊಡೆ
ನಳಿತೋಳಿಡಿದ ಧೂಳಿ ಸೊಗಯಿಸುವ ವರ ಶಿಶುವ
ನಲಿದಾಡಿಸುವ ರೂಢಿಯಿಲ್ಲೆಂದು ನೆರೆನೊಂದು ಮರುಗುವಳಜಸ್ರಮವಳು

ಇದರಂತೆಯೇ ಈ ಕವಿಯು ಇತರ ಜೀವಗಳ ಸೊಗಸನ್ನೂ ಬಲ್ಲನು. ಚಂದ್ರಹಾಸನ ಸಮೀಪಕ್ಕೆ ಬಂದ ಜೇಡ ಪಡೆ ನಾಯಿಗಳನ್ನು ತಂದಿತ್ತು. ಆ ಬೇಟೆನಾಯಿಗಳು ಹೀಗಿದ್ದುವು:

ಉಬ್ಬಿದುರದೇರದೆಗೆದೊಡಲ ಬಾಗಿದ ಬೆನ್ನ
ಹಬ್ಬುಗೆಯ ಪಚ್ಚಳದ ಸೆಳೆದ ಬಾಲದ ಕೊನೆಯ
ಕೊಬ್ಬಿದ ಕೊರಳ ಸಣ್ಣ ಜಂಘೆಗಳ ಕೊಂಕುಗುರ ಮಡಿಗಿವಿಯ
ಕಿಡಿಗಣ್ಗಳ
ಹೆಬ್ಬಲ್ಲ ಬಿಡುವಾಯ ಜೋಲ್ವ ಕೆನ್ನಾಲಗೆಯ
ಗಬ್ಬಿನಾಯ್ಗಳ ಹಾಸನುಗಿದು ಬಿಡೆ ಪಂದಿಗಳ
ನಬ್ಬರಿಸಿ ತುಡುಕಿದುವು ಕೇಸರಿಗಡರ್ದು ಮೇಲ್ವಾಯ್ದು ಪುಲಿಯಂ
ಕೊಂದುವು

ಲಕ್ಷ್ಮೀಶನು ಸ್ತ್ರೀಯ ಆಕಾರವನ್ನು ವರ್ಣಿಸುವುದರಲ್ಲಿ ಮಾತ್ರ ಆಸಕ್ತಿ ತೋರಲಿಲ್ಲ. ಎಲ್ಲ ಸೌಂದರ್ಯವನ್ನೂ ವರ್ಣಿಸಿದನು. ಆದರೆ ಕೆಲವರಿಗೆ ಈ ವರ್ಣನೆ ಮಾತ್ರ ಕಣ್ಣಿಗೆ ಕಾಣುತ್ತದೆ. ಇನ್ನು ಕೆಲವರು ಇದರ ವಿಷಯದಲ್ಲಿ ಬೇಸರಪಡುತ್ತಾರೆ. ಇಂಥ ವರ್ಣನೆಗಳ ಸೊಗಸು ಈ ಕಾವ್ಯದ ಮುಖ್ಯ ಗುಣವಾಗಿರುವುದರಿಂದ ಇವುಗಳ ಔಚಿತ್ಯವನ್ನು ಕುರಿತು ಇಲ್ಲಿ ಎರಡು ಮಾತನ್ನು ಹೇಳಬಹುದು. ಹೆಂಗಸರು ಹೂವು ಕೊಯ್ಯುವಾಗ ಹೇಗೆ ಕಂಡರು, ನೀರಿನಲ್ಲಿದ್ದಾಗ ಹೇಗೆ ಕಂಡರು, ಸ್ನಾನ ಮುಗಿದಮೇಲೆ ಹೇಗೆ ಕಂಡರು ಎಂದು ಮೊದಲಾಗಿ ಹತ್ತಾರು ಸಂದರ್ಭದಲ್ಲಿ ಹೆಣ್ಣಿನ ರೂಪನ್ನು ವರ್ಣಿಸುವುದು ಮರ್ಯಾದೆಯೇ? ಎಂದು ನಮ್ಮ ಆಕ್ಷೇಪ. ನಮ್ಮ ಹಿಂದಣ ಕಾವ್ಯಗಳಲ್ಲಿ ಈ ವಿಚಾರದಲ್ಲಿ ಯಾವ ಸಂದೇಹವೂ ಕಂಡುಬರುವುದಿಲ್ಲ. ಇದು ಎಲ್ಲ ಭಾಷೆಗಳ ಪ್ರಾಚೀನ ಸಾಹಿತ್ಯದಲ್ಲಿಯೂ ಕಾಣುತ್ತದೆ. ನಮ್ಮ ಲಾಕ್ಷಣಿಕರ ಮತದ ಪ್ರಕಾರ ಉತ್ತಮವಾದ ಕಾವ್ಯದಲ್ಲಿ ಪ್ರಣಯದ ವರ್ಣನೆ ಕೊನೆ ಮುಟ್ಟಬೇಕು. ಲಕ್ಷ್ಮೀಶನು ತನ್ನ ಕಾವ್ಯದಲ್ಲಿ ಸುಧನ್ವ ಪ್ರಭಾವತಿಯರ ಪ್ರಣಯ ಕೇಳಿಯನ್ನು ವಿಸ್ತಾರವಾಗಿ ವರ್ಣಿಸಿಬಿಟ್ಟಿದ್ದಾನೆ; ಸೀತಾ ರಾಮರ ಪ್ರಣಯ ಫಲವನ್ನೂ ಸೂಚಿಸಿದ್ದಾನೆ. ಇಂಗ್ಲೀಷಿನ ಸಾಹಿತ್ಯದ ಕೆಲವು ಭಾಗವನ್ನು ನೋಡಿದವರು ಇಂಥ ವರ್ಣನೆಗಳು ಅತಿಯೆಂದು ಭಾವಿಸುವುದನ್ನು ಕಲಿತಿದ್ದೇವೆ. ಕೆಲವು ಸಂದರ್ಭಗಳಲ್ಲಿ ವರ್ಣನೆಯು ಅತಿಯಾಗುವುದೂ ನಿಜವೆ; ಅದರಿಂದ ಶೃಂಗಾರ ಬಗ್ಗಡವಾಗಿ ಮರ್ಯಾದೆ ವಂತರು ತಲೆತಗ್ಗಿಸಬೇಕಾಗುವುದೂ ನಿಜವೆ. ಆದರೆ ವರ್ಣನೆಯು

ಅತಿಯಾಗುವುದೆಂದು ಅಂಜಿ ವರ್ಣನೆಗೇ ಹೋಗದಿದ್ದರೆ ಕಾವ್ಯವು ನೀರಸ ವಾಗುವುದು. ಈ ಒಂದಂಶದಲ್ಲಿ ನೀರಸವಾದರೆ ಆಗಲಿ ಎನ್ನುವಂತಿಲ್ಲ; ಕಾವ್ಯವು ತನ್ನ ಒಂದು ಮುಖ್ಯ ಉದ್ದೇಶವನ್ನು ಬಿಟ್ಟಂತೆ ಆಗುವುದು. ಸೌಂದರ್ಯವು ಸೃಷ್ಟಿಯ ಹಿರಿಯ ಲಕ್ಷಣಗಳಲ್ಲೊಂದು. ಅದನ್ನು ಅರಿಯುವ ಶಕ್ತಿ ಮಾನವನಲ್ಲಿ ಬೆಳೆಯಬೇಕು. ಮರ, ಹೂವು, ಸಂಜೆ ಹಗಲುಗಳು ಚೆಂದ: ಅವನ್ನು ವರ್ಣಿಸಬಹುದು. ಹೆಣ್ಣಿನ ರೂಪು ಚೆಂದ: ಆ ಚೆಂದವನ್ನು ವರ್ಣಿಸಬಾರದೆ? ದಾಂಪತ್ಯದ ಪ್ರೇಮದಲ್ಲಿ ಒಂದು ಭಾಗವು ದೇಹ ಸಂಬಂಧವಾದದ್ದು; ಒಂದು ಭಾಗವು ಹೃದಯ ಸಂಬಂಧವಾದದ್ದು. ಎರಡರ ಸ್ವರೂಪವನ್ನೂ ಅರಿತರೆ ದೇಹ ಸಂಬಂಧ ವಾದ ಭಾಗವನ್ನು ಹೃದಯ ಸಂಬಂಧಿಯಾದ ಭಾಗದಿಂದ ನಾವು ಉದ್ಧರಿಸ ಬಹುದು, ಶುದ್ಧಿಗೊಳಿಸಬಹುದು. ವಿಷಯವು ಉಕ್ತಿಗೆ ಅರ್ಹವಲ್ಲ ವೆಂಪೂ ಯೋಚನೆಗೆ ಅರ್ಹವಲ್ಲವೆಂದೂ ಇದ್ದುಬಿಟ್ಟರೆ ಹೃದಯ ಸಂಬಂಧಿ ಯಾದ ಭಾಗವು ತೀರ ಮರೆತು ದಾಂಪತ್ಯ ಸಂಬಂಧವು ವಿಚಾರ ವಿಹೀನ ವಾಗುವ ಸಂಭವವುಂಟು. ರತಿಯಂತೆ ಸುಂದರಿಯಾದ ಹೆಣ್ಣು ಎಲ್ಲರಿಗೂ ಸಿಕ್ಕುವಳೆಂಬ ಭರವಸೆ ಇಲ್ಲ. ಒಬ್ಬೊಬ್ಬನೂ ತನ್ನ ಪಾಲಿಗೆ ಬಂದ ಹೆಣ್ಣಿನಲ್ಲಿ ರತಿಯನ್ನು ಕಾಣಬಹುದು. ಇದಕ್ಕೆ ಕಣ್ಣಿಗೆ ಬುದ್ಧಿಗೆ ಸಂಸ್ಕಾರ ಆಗಬೇಕು. ನಾವು ಸೌಂದರ್ಯವನ್ನು ಕಾಣದೆ ಇರುವುದಕ್ಕೆ ಕಾರಣ ವಸ್ತುವಿನಲ್ಲಿ ಸೌಂದರ್ಯವಿಲ್ಲವೆನ್ನುವುದಲ್ಲ; ನಮಗೆ ಕಾಣಲು ಕಣ್ಣಿಲ್ಲದೆ ಇರುವುದು. ಈ ಕಣ್ಣು ಬರುವುದಕ್ಕೆ ಇಂಥ ವರ್ಣನೆಗಳೆಲ್ಲ ಸಹಾಯಮಾಡುತ್ತವೆ. ಈ ದಿವ್ಯದೃಷ್ಟಿಯನ್ನು ಕೊಡುವುದೇ ಕಾವ್ಯದ ಕರ್ತವ್ಯ. ವರ್ಣನೆಯು ಭಂಡವಾದೀತೆಂದು ಅದನ್ನು ತೀರ ತೊರೆಯು ವುದಾದರೆ ಕಾವ್ಯವು ತನ್ನ ಕರ್ತವ್ಯದಿಂದ ವಿಮುಖವಾದಂತಾಯಿತು. ಕಾವ್ಯವು ಗಮನಿಸಬೇಕಾದ ವಿಧಿನಿಷೇಧಗಳು ವ್ಯಕ್ತಿಯ ಆಚರಣೆಯ ವಿಧಿನಿಷೇಧಗಳಾಗಲಾರವು. ಕಾವ್ಯಕ್ಕೂ ವಿಧಿನಿಷೇಧಗಳಿವೆ; ಆದರೆ ಅವು ವ್ಯಕ್ತಿಗೆ ಅನ್ವಯಿಸುವ ವಿಧಿನಿಷೇಧಗಳಿಂದ ಬೇರೆಯ ತೆರದವು. ಲಕ್ಷ್ಮೀಶನ ವರ್ಣನೆ ಬಹುಮಟ್ಟಿಗೆ ಕಾವ್ಯದ್ದೆಂಬ ಈ ಮಿತಿಯನ್ನು ಮೀರದೆ ಇದೆ; ರಸ ಒಸರುವಂತೆ ಸುಂದರವಾಗಿದೆ; ಬೇಸರಬಾರದಂತೆ ಹಿತವಾಗಿದೆ.

ಆಕಾರದಲ್ಲಿ ಸೊಗಸಿರುವಂತೆ, ಶೀಲದಲ್ಲಿ ಒಂದು ಸೊಗಸುಂಟು. ಅದನ್ನು ನಮ್ಮ ಕವಿಯು ಚೆನ್ನಾಗಿ ಚಿತ್ರಿಸಿದ್ದಾನೆ; ಅದು ವ್ಯಕ್ತವಾಗುವಂತೆ ಅನೇಕ ಸನ್ನಿವೇಶಗಳನ್ನು ಬೆಳೆಸಿದ್ದಾನೆ. ಈ ಕಾವ್ಯದಲ್ಲಿ ಕೃಷ್ಣನ ಸ್ವಭಾವ ನಿರೂಪಣೆ ಆನಂದಕರವಾಗಿದೆ. ಮಾನವರೂಪವನ್ನು ಧರಿಸಿದ ಈ ದೇವರಿಗೆ ಸ್ವಲ್ಪ ಹಿರಿಯನಾದ ಧರ್ಮರಾಯನಲ್ಲಿದ್ದ ಮರ್ಯಾದೆಯನ್ನೂ, ಭೀಮನಲ್ಲಿದ್ದ ಸಲಿಗೆಯನ್ನೂ, ಅರ್ಜುನನನ್ನು ಕುರಿತು ಇದ್ದ ಸ್ನೇಹವನ್ನೂ, ದ್ರೌಪದಿಯ ವಿಷಯದಲ್ಲಿದ್ದ ಮರುಕವನ್ನೂ, ಎಲ್ಲ ಭಕ್ತರಲ್ಲಿದ್ದ ಅಪಾರ ಪ್ರೇಮವನ್ನೂ ಈ ಕವಿ ಚಿತ್ರಿಸಿರುವ ರೀತಿ ಮನವನ್ನು ಮುಟ್ಟುತ್ತದೆ. ಹಾಗೆಯೇ ಧರ್ಮರಾಯನಿಗೆ ಕೃಷ್ಣನ ವಿಷಯದಲ್ಲಿ ಇರುವ ಗೌರವ ಪ್ರೇಮಗಳ ಸಂಭ್ರಮ, ಭೀಮನ ಸಲಿಗೆ ಬೆರೆತ ಒರಟುತನದ ಪ್ರೀತಿ, ಅರ್ಜುನನ ಅಹಂಕಾರ ಕಲೆತ ಶರಣಭಾವ, ದ್ರೌಪದಿಯ ಅನನ್ಯ ಶರಣತೆ, ಇವು ಕಾವ್ಯದಲ್ಲಿ ಚೆನ್ನಾಗಿ ಚಿತ್ರಿತವಾಗಿವೆ. ಸ್ವಲ್ಪ ಅತಿಯಾದ ಧರ್ಮಬುದ್ಧಿಯಿಂದು ತೋರುವ ಸುಧನ್ವನ ಕೊಪ್ಪರಿಗೆಯ ಕತೆ, ಸ್ವಲ್ಪ ಅನವಶ್ಯಕವಾದ ವಕ್ರವೃತ್ತಿಯಿಂದು ತೋರುವ ತಾಮ್ರಧ್ವಜನ ಕತೆಯ ವಿಪ್ರವಿಶೇಷ, ಇಂಥ ಒಂದೆರಡು ಕಡೆಯಲ್ಲಿ ಬಿಟ್ಟು ಉಳಿದ ಎಲ್ಲ ಕಡೆಗಳಲ್ಲೂ ಈ ಕತೆಯಲ್ಲಿ ಬರುವ ವ್ಯಕ್ತಿಗಳಲ್ಲಿ ಸಹಜವಾದ ನಡೆನುಡಿಗಳು ಕಾಣುತ್ತವೆ; ಅವು ಸುಂದರವಾಗಿವೆ. ತಂದೆ ತಾಯಂದಿರು ಮಕ್ಕಳ ವಿಷಯದಲ್ಲಿ, ಸೇವಕರು ಯಜಮಾನರ ವಿಷಯದಲ್ಲಿ, ಗಂಡಹೆಂಡಿರು ಒಬ್ಬರೊಬ್ಬರ ವಿಷಯದಲ್ಲಿ, ಕಿರಿಯರು ಹಿರಿಯರ ವಿಷಯದಲ್ಲಿ ನಡೆದುಕೊಳ್ಳುವ ರೀತಿ ಉಚ್ಚವಾದ ಶಿಕ್ಷಣವನ್ನು ಪಡೆದ ಸಮಾಜದ ವಿನಯವನ್ನು ಸೂಚಿಸುತ್ತದೆ; ಹಾಗೆಯೇ ನಾವು ದಿನವೂ ಕಾಣುವ ಪ್ರಪಂಚದ ನಡೆವಳಿಕೆಗೆ ಅನುಗುಣವಾಗಿಯೇ ತೋರುತ್ತದೆ.

ಸೌಂದರ್ಯವನ್ನು ಗ್ರಹಿಸುವುದರಲ್ಲಿ ವರ್ಣಿಸುವುದರಲ್ಲಿ ಇಂಥ ಅಸಾಧಾರಣವಾದ ಶಕ್ತಿ ಲಕ್ಷ್ಮೀಶನ ಉತ್ಕೃಷ್ಟವಾದ ಭಾವನೆಯಿಂದ ಊಹೆಯಿಂದ ಉಂಟಾಯಿತು. ಇವನ ಸುತ್ತಣ ಪ್ರಪಂಚವನ್ನು ಇವನ ಮನಸ್ಸು ಮೆಚ್ಚಿತ್ತು. ಪ್ರಕೃತಿಯ ಎಲ್ಲ ವ್ಯಾಪಾರವೂ ಜನದ ನಡೆನುಡಿಯೂ ಇವನಿಗೆ ಪ್ರೇಕ್ಷಣೀಯವಾಗಿ ಅನುಭವ ಯೋಗ್ಯವಾಗಿ

ಕಂಡವು. ಇಂಥ ಕವಿ ನೆಲವನ್ನು ಕಣ್ಣಿಗೆ ಒತ್ತಿಕೊಂಡು ಸ್ವರ್ಗವನ್ನು ಕಾಣು ತ್ತಾನೆ; ಜನವನ್ನು ಮನಸ್ಸಿಗೆ ಒತ್ತಿಕೊಂಡು ದೇವರನ್ನು ನೋಡುತ್ತಾನೆ. ತೀರಿಹೋದ ಅಣ್ಣ ಕರ್ಣನ ಮಗನನ್ನು ನೋಡಿ ಕನಿಕರಿಸುವ ಧರ್ಮ ರಾಯನಲ್ಲಿಯೂ ಈ ಕನಿಕರಿಸುವ ಚಿಕ್ಕಪ್ಪನಲ್ಲಿ ತಂದೆಯನ್ನು ಪಡೆದೆ ನೆಂದು ಬಲ್ಲ ವೃಷಕೇತುವಿನಲ್ಲಿಯೂ ಲಕ್ಷ್ಮೀಶನು ಮಹಾಭಾರತದ ಅಥವಾ ಸಂಸ್ಕೃತದ ಜೈಮಿನಿ ಭಾರತದ ಇಬ್ಬರು ವ್ಯಕ್ತಿಗಳನ್ನು ಪ್ರತಿ ಮಾಡಲಿಲ್ಲ; ತಾನು ನೋಡಿದ ಯಾರೋ ಇಬ್ಬರ ಚಿತ್ರವನ್ನು ರಚಿಸಿದನು. ಇವನ ಕೃಷ್ಣನೂ ಹೀಗೆಯೇ; ಜೈಮಿನಿ ಭಾರತದ ಕೃಷ್ಣನ ಪಾತ್ರವು ಊರ ಯಜಮಾನರಲ್ಲಿ ಇತರರಿಗಿಂತ ಹೆಚ್ಚಿನ ತಿಳಿವಿನಿಂದ ತಾಳ್ಮೆಯಿಂದ ಹಿರಿತನದಿಂದ ನಡೆದುಕೊಳ್ಳುತ್ತಿದ್ದ ಮುಖಂಡನೊಬ್ಬನ ಚಿತ್ರವೆಂಬಂತೆ ಕಾಣುತ್ತದೆ. ಕುಮಾರವ್ಯಾಸನ ಕೃಷ್ಣನೂ ಹೀಗೆಯೇ ಕಾಣುತ್ತಾ ನೆಂಬುದನ್ನು ಆ ಕಾವ್ಯವನ್ನು ಓದುವವರೆಲ್ಲ ಬಲ್ಲರು. ಹೀಗೆಯೇ ಲಕ್ಷ್ಮೀಶನ ಭೀಮ ಅರ್ಜುನರೂ ಕೂಡ ನಮ್ಮ ಕುಟುಂಬಗಳಲ್ಲಿ ಅಲ್ಲಲ್ಲಿ ಈಗಲೂ ಕಾಣಬಹುದಾದ ವ್ಯಕ್ತಿಗಳು. ಯಾರೇ ಆಗಲಿ ಭಾರತವನ್ನು ಓದುವಾಗ ತಮ್ಮ ಪರಿಚಯದ ವ್ಯಕ್ತಿ ಸ್ವರೂಪದಿಂದ ಪೂರ್ವದ ಕವಿತೆಯ ವ್ಯಕ್ತಿಗಳನ್ನು ಎರಕಹೊಯ್ದುಕೊಳ್ಳುತ್ತಾರೆ. ಈ ತಿಳಿವಳಿಕೆ ಹೆಚ್ಚಾಗಿದ್ದಷ್ಟೂ ಆ ಎರಕಕ್ಕೆ ಸಾಮಗ್ರಿ ಹೆಚ್ಚು. ಕವಿಯಾದವನಿಗೆ ಈ ಸಾಮಗ್ರಿ ಪುಷ್ಕಲ. ಅವನು ಕಾವ್ಯ ಸೃಷ್ಟಿಗಾಗಿ ಬ್ರಹ್ಮಸೃಷ್ಟಿಯನ್ನು ದೋಚುತ್ತಾನೆ; ತನ್ನ ಕಾವ್ಯದ ವ್ಯಕ್ತಿಗಳನ್ನು ಎರಕಹಾಕಿ ಆಮೇಲೆ ನಮಗೆ ವರ್ಣಿಸುತ್ತಾನೆ. ಭಾವನೆ ಊಹೆ ಚೆನ್ನಾದಷ್ಟೂ ಈ ವರ್ಣನೆ ಸಹಜವಾಗುತ್ತದೆ, ಸಂಪೂರ್ಣವಾಗುತ್ತದೆ. ಇದಿಷ್ಟರಿಂದಲೇ ಕವಿಯ ಭಾವನೆ ಎಷ್ಟರಮಟ್ಟಿನದು ಊಹೆ ಎಷ್ಟರಮಟ್ಟಿನದು ಎಂದು ಹೇಳುವುದು ಸಾಧ್ಯ. ಕವಿಯ ಭಾವನೆ ಊಹೆ ಕಡಿಮೆಯ ತರದ್ದಾದರೆ ಕಾವ್ಯದ ವ್ಯಕ್ತಿಗಳು ಕಾಗದದಲ್ಲಿ ಮಾಡಿದ ಹೂವಿನಂತಾಗುತ್ತಾರೆ: ಕೀಲಿಟ್ಟ ಮರದ ಗೊಂಬೆಗಳಂತೆ ಚಲಿಸುತ್ತಾರೆ. ಭಾವನೆ ಊಹೆ ಉತ್ತಮ ರೀತಿಯವಾದರೆ ಅವರೆಲ್ಲ ನಿಜವಾದ ಮನುಷ್ಯರಾಗುತ್ತಾರೆ, ಜೀವವುಳ್ಳವರಾಗಿ ಕಾಣುತ್ತಾರೆ. ಲಕ್ಷ್ಮೀಶ ಕವಿಗೆ ತಾನು ಓದಿದ

ಕತೆಯ ಪಾತ್ರಗಳೆಲ್ಲ ನಿಜವಾದ ವ್ಯಕ್ತಿಗಳಾಗಿದ್ದರು; ವಿಸ್ತಾರವಾದ ಅನುಭವದಿಂದ ಅವನು ಅವರಿಗೆ ಸಂಪೂರ್ಣವಾದ ಆಕಾರವನ್ನು ಒದಗಿಸಿದ್ದನು. ನಡೆದದ್ದನ್ನು ತನ್ನ ಕಾವ್ಯದಲ್ಲಿ ವರ್ಣಿಸಬೇಕಾದರೆ ಅವನು ಎದುರಿಗೆ ನಡೆಯುತ್ತಿರುವ ನುಡಿಯುತ್ತಿರುವ ವ್ಯಕ್ತಿಗಳನ್ನು ವರ್ಣಿಸುವಷ್ಟು ನಿಯತವಾಗಿ ಅವರನ್ನು ವರ್ಣಿಸಿದನು. ಕವಿಗೆ ಇವರೆಲ್ಲ ಇಷ್ಟು ಸಹಜವಾಗಿ ಕಂಡದ್ದರಿಂದಲೇ ಅವನ ಪಾತ್ರಗಳು ನಮಗೂ ಅಷ್ಟು ನಿಜವಾಗಿ ಕಾಣುವುದು; ಅವನ ಪ್ರಪಂಚವು ನಮ್ಮ ಬುದ್ಧಿಗೆ ನಿಜವಾದ ಪ್ರಪಂಚವೆಂಬಂತೆ ಅನುಭವಕ್ಕೆ ಬರುವುದು.

ಈ ಕವಿಯು ಪ್ರಕೃತಿಯನ್ನು ಸಚೇತನವೆಂಬಂತೆ ಚಿತ್ರಿಸಿರುವ ರೀತಿ ಒಂದು ವಿಶೇಷ ವಿಷಯ. ಸೀತಾದೇವಿಯನ್ನು ಲಕ್ಷ್ಮಣನು ಕಾಡಿನಲ್ಲಿ ಒಂಟಿಯಾಗಿ ಬಿಟ್ಟುಹೋಗಲು ಅಲ್ಲಿಯ ಚೇತನಗಳೂ ಅಚೇತನ ವಸ್ತುಗಳೂ ಅವಳಿಗೆ ಉಪಚಾರಮಾಡಿದುವೆಂದು ಕವಿಯು ಹೀಗೆ ವರ್ಣಿಸಿದ್ದಾನೆ:

ಅರಸ ಕೇಳಲ್ಲಿರ್ದ ಪಕ್ಷಿ ಮೃಗ ಜಂತುಗ
ಳ್ಧರಣಿಸುತೆಯಂ ಬಳಸಿ ನಿಂದು ಮೈಯುಡುಗಿ ಜೋ
ಲ್ದಿರದೆ ಕಂಬನಿಗರೆದು ನಿಜವೈರಮಂ ಮರೆದು ಪುಲ್ಮೇವುಗಳನೆ ತೊರೆದು
ಕೊರಗುತಿರ್ದುವು ಕೂಡೆ ವೃಕ್ಷಲತೆಗಳ್ಬಾಡಿ
ಸೊರಗುತಿರ್ದುವು ಶೋಕಭಾರದಿಂ ಕಲ್ಗಳುಂ
ಕರಗುತಿರ್ದುವು ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ

ಮೊರೆಯಲೊಲ್ಲವು ತುಂಬಿ ಕುಣಿಯಲೊಲ್ಲವು ನವಿ
ಲ್ಚರೆಯಲೊಲ್ಲವು ಕೋಕಿ ನಡೆಯಲೊಲ್ಲವು ಹಂಸೆ
ಕರೆಯಲೊಲ್ಲವು ಪಿಕಂ ನುಡಿಯಲೊಲ್ಲವು ಶುಕಂ ನಲಿಯಲೊಲ್ಲವು ಚಕೋರಿ
ನೆರೆಯಲೊಲ್ಲವು ಹರಿಣಿಯೊಲೆಯಲೊಲ್ಲವು ಕರಿಣಿ
ಪೊರೆಯಲೊಲ್ಲವು ಚಮರಿ ಮರೆಯಲೊಲ್ಲವು ಸಿಂಗ
ಮರರೆ ಜಾನಕಿಯ ಶೋಕಂ ತಮ್ಮದೆಂದಾಕೆಯಂಗಮಂ ನೋಡಿ ನೋಡಿ

ಬೀಸಿದುವು ಬಾಲದೊಳ್ಚಮರಿಗಳ್ಚಮರಮಂ
ಪಾಸಿದುವು ಕರಿಗಳೆಳದಳಿರ ಮೃದುತಲ್ಪಮಂ
ಸೂಸಿದುವು ಸಾರಸಂಗಳ್ತಮ್ಮಗರಿಗಳಂ ತೋದು ತಂದಂಬುಗಳನು

ಆ ಸಿರಿ ಮೊಗಕ್ಕೆ ಬಿಸಿಲಾಗದಂತಾಗಸದೊ
ಳೋಸರಿಸಿದಂಚೆಗಳೆರಂಕೆಯ ನಗಲ್ಚಿ ನೆಳ
ಲಾಸೆಗೈದುವು ರಾಘವನ ರಾಣಿ ದುಃಖ ಸಂತಪ್ತೆಯಾಗಿರುತಿರಲ್ಕೆ

ಕಾಡಿನಲ್ಲಿ ಒಂಟಿಯಾಗಿ ಬಿದ್ದಿದ್ದ ಹಸುಳೆಯಾದ ಚಂದ್ರಹಾಸನನ್ನು ವನಚೇತನಗಳು ಹೀಗೆಯೇ ಪರಿಚರಿಸಿದುವು. ಇದರ ವರ್ಣನೆಯೂ ಮನವೊಪ್ಪುವಂತೆ ಅಂದವಾಗಿದೆ:

ಗರಿಗೆದರಿ ಕೊಡೆವಿಡಿದು ನಿಂದುವು ಬಿಸಿಲ್ಗೆ ನವಿ
ಲೆರಕೆಯಂ ಬೀಸಿ ಬಿಜ್ಜಣವಿಕ್ಕಿತಂಚೆ ತುಂ
ತುರನುದುರ್ಚಿತು ಸಾರಸಂ ಸಲಿಲದೊಳ್ನೆನೆದ ಪಕ್ಕಂಗಳಂಬಿದಿರ್ಚಿ
ಮರುಗಿ ಮೆಲ್ನುಡಿಯೊಳುಪಚರಿಸಿದುವು ಗಿಳಿಗಳ
ಕ್ಕರೊಳಳಿಗಳರ್ಭಕನ ರೋದನದ ಕೂಡಳುವ
ತೆರದೊಳ್ಮೊರೆದುವಲ್ಲಿ ಕರುಬರಿದ್ದೂರಿಂದೆ ಕಾಡೊಳ್ಳಿತೆನಿಸುವಂತೆ

ಬಾಲಕನ ರೋದನವ ಕೂಡೆ ಬನದೇವಿಯು
ಗ್ರಾಳಿ ತೀಡಿದೊಡೆ ಘೋರೆಂಬ ತರುಲತೆಗಳಿಂ
ಗೋಳಿಟ್ಟರಗ್ನಿ ಜನ ಭೂ ಗಗನ ವಾಯುಂ ರವಿ ಶಶಿಗಳೆನ್ದೆಸೆವೆಣ್ಗಳೂ
ಹೇಳಲೇನಡವಿಯ ಚರಾಚರಂಗಳ ಜೀವ
ಜಾಲಂಗಳುರೆ ಮರುಗುತಿರ್ದುವನಿತರೊಳೊಂದು
ಕೋಲಾಹಲದ ಘೋಷಮೆಲ್ಲಿಯುಂ ಕಿವಿಗಿಡಿದುದಾ ಮಹಾಕಾನನದೊಳು

ಮಾನವನೂ ಅವನ ಜೀವನದ ಆವರಣವೂ ಒಂದೇ ತತ್ತ್ವ ಧರಿಸಿದ ಹಲವು ರೂಪಗಳು. ಅವು ಬೇರೆ ಇವನು ಬೇರೆ ಅಲ್ಲ. ಮಾನವನು ಮಾತ್ರ ಆತ್ಮವುಳ್ಳವನು, ಅವನೇ ಬೇರೆ ಸೃಷ್ಟಿಯಾದನು ಎಂಬುದು ಕೆಲವು ಮತಗಳ ಸಿದ್ಧಾಂತ. ಸನಾತನಧರ್ಮ ಇದನ್ನು ಒಪ್ಪುವುದಿಲ್ಲ. ನಾವು ಸಾಮಾನ್ಯವಾಗಿ ಜಡವೆಂದು ಭಾವಿಸುವ ಪ್ರಕೃತಿಯೂ ನಿಜವಾಗಿ ಚೇತನವುಳ್ಳದ್ದೆಂದೇ ಹೇಳಬೇಕು. ಇದನ್ನು ಜ್ಞಾನಿಯು ಯೋಗದಿಂದ ತಿಳಿಯುವನು; ವಿಜ್ಞಾನಿಯು ಪ್ರಯೋಗದಿಂದ ತೋರಿಸುತ್ತಾನೆ. ಇದು ಸಿದ್ಧಿಯಾದವನಿಗೆ ನಾನು ಎನ್ನುವುದು ಪ್ರಪಂಚದಷ್ಟು ಅಗಲವಾಗುತ್ತದೆ; ಆತನಿಗೆ ಪ್ರಪಂಚವೇ ನಾನು. ಈ ಸ್ಥಿತಿ ಎಲ್ಲರಿಗೂ ಸಾಧ್ಯವಲ್ಲ. ಸಂಸಾರಿಗಳಾದ ನಾವು ಇದನ್ನು ಬೇರೆ ಒಂದು ರೀತಿಯಲ್ಲಿ

ಅನುಭವಿಸುತ್ತೇವೆ. ನಾವು ಕೊರಗುವಾಗ ಸುತ್ತಣ ಪ್ರಪಂಚ ಕೊರಗಿದಂತೆ ಕಾಣುತ್ತದೆ. ನಾವು ನಲಿಯುವಾಗ ಪ್ರಪಂಚ ನಲಿದಂತೆ ಕಾಣುತ್ತದೆ. ನಮಗೆ ನಾನೇ ಪ್ರಪಂಚ. ನಾನೇ ಪ್ರಪಂಚ ಎನ್ನುವ ಸ್ಥಿತಿಯಿಂದ ಪ್ರಪಂಚವೇ ನಾನು ಎನ್ನುವ ಸ್ಥಿತಿಗೆ ನಾವು ಬೆಳೆಯಬೇಕಾಗಿದೆ. ಬೇರೆ ಜೀವನದ ಕೊರಗನ್ನು ನಲಿವನ್ನು ವರ್ಣಿಸುತ್ತ ಈ ಕೊರಗನ್ನೂ ಈ ನಲಿವನ್ನೂ ಸೃಷ್ಟಿಯಲ್ಲಿ ನಿಜವಾಗಿ ಇರುವಂತೆ ಚಿತ್ರಿಸುವುದರಿಂದ ಓದುವವರು ಸೃಷ್ಟಿಯಲ್ಲಿ ಒಂದು ಆತ್ಮದ ವಿಸ್ತರಣವನ್ನು ಕಾಣುವುದನ್ನು ಕಲಿಯುತ್ತಾರೆ. ಸೃಷ್ಟಿಯ ಯಾವ ಭಾಗನೊಂದರೂ ಸೃಷ್ಟಿಯೇ ನೋಯುತ್ತದೆ. ಇದನ್ನು ಕಲಿಸುವುದು ಕವಿಗುರುವಿನ ಕರ್ತವ್ಯ. ಇಂಥ ಬರಹದಿಂದ ಓದುವವನ ಹೃದಯದ ರಸವನ್ನು ಎಚ್ಚರಿಸುವುದು ಅತ್ಯುತ್ತಮವಾದ ಕಾವ್ಯ ಪಂಥ. ಲಕ್ಷ್ಮೀಶನು ತಕ್ಕ ಸಂದರ್ಭದಲ್ಲಿ ಈ ಕೆಲಸವನ್ನು ಅತ್ಯುತ್ತಮವಾದ ರೀತಿಯಲ್ಲಿ ಮಾಡಿದ್ದಾನೆ.

ಹೀಗೆ ಕತೆಯನ್ನು ಹೇಳುವುದರಲ್ಲಿ, ಭಕ್ತಿಯನ್ನು ವ್ಯಕ್ತಪಡಿಸುವುದರಲ್ಲಿ, ಸೌಂದರ್ಯವನ್ನು ವರ್ಣಿಸುವುದರಲ್ಲಿ, ಭಾವಗಳಿಗೆ ರೂಪನ್ನು ಕೊಡುವುದರಲ್ಲಿ ಲಕ್ಷ್ಮೀಶನು ಸುಂದರವಾದ ಮಾತುಗಳನ್ನು ಉಪಯೋಗಿಸಿದ್ದಾನೆ. ಈ ಎಲ್ಲ ವಿಧಧ ಸೌಂದರ್ಯಕ್ಕೆ ತಕ್ಕ ರೂಪನ್ನು ಕೊಟ್ಟಿರುವ ಈ ಶಬ್ದ ಸೌಂದರ್ಯವನ್ನು ಕುರಿತು ಎರಡು ಮಾತನ್ನು ಹೇಳುವುದು ಅವಶ್ಯಕ. ಈ ಸೌಂದರ್ಯ ಈ ಮೊದಲೇ ಉದ್ಧರಿಸಿರುವ ಹಲವು ಪದ್ಯಗಳಲ್ಲಿ ಕಂಡುಬಂದಿದೆ. ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಎಂದು ಆರಂಭಿಸುವ ಮೊದಲನೆಯ ಪದ್ಯದ ಮಾತುಗಳು ಮುದ್ದಾದ ಮಾತುಗಳಲ್ಲಿ ಮೊದಲ ಮಾತುಗಳು. ಬಲ್ಲವರು ಹಾಡುವಾಗ ಮೊದಲ ನಾಲ್ಕು ಸ್ವರಗಳಲ್ಲಿಯೇ ರಸ ಉಕ್ಕುವಂತೆ ಲಕ್ಷ್ಮೀಶನ ಮೊದಲನೆಯ ಪದ್ಯವೇ ಕಾವ್ಯದ ಮೇಲಣ ಮೆಟ್ಟಲನ್ನು ಮೆಟ್ಟಿಬಿಟ್ಟದೆ. ವನರುಹ ಭವಾಂಡದೊಳಗೈವತ್ತು ಕೋಟಿ ಯೋಜನದ ವಿಸ್ತೀರ್ಣ ಎಂದು ಆರಂಭವಾಗುವ ಪದ್ಯದಲ್ಲಿ ದೀರ್ಘವಾದ ಸ್ವರಗಳು ಒಂದರ ಮೇಲೊಂದು ಬಂದು ವಿಸ್ತಾರದ ಭಾವನೆಯನ್ನು ಸುಲಭವಾಗಿ ಉಂಟು

ಮಾಡುತ್ತವೆ. ಅತಸೀ ಕುಸುಮುಗಾತ್ರನಂ ಕಮಲನೇತ್ರನಂ ಎಂಬ ಪದ್ಯದಲ್ಲಿ ಮಾತೆಲ್ಲ ಮೆದು. ಮೆದುವಾದ ಬೆಳಕಿನಿಂದ ಸುತ್ತಣ ಪ್ರಪಂಚವನ್ನೇ ಸೊಗಸುಗೊಳಿಸಿದ ತಣಿಸಿದ ಕೃಷ್ಣನ ಮೆದುವಾದ ಮೆಯ್ಯ ಪ್ರತಿಮೆ ಮೂಡುವುದಕ್ಕೆ ಕವಿ ಹೂವಿನಂತ ಬೆಣ್ಣೆಯಂತ ಮಾತು ಗಳನ್ನು ಆರಿಸಿಕೊಂಡಿದ್ದಾನೆ. ಯೌವನಾಶ್ವನೊಡನೆ ಬಂದ ಜನರು ನೀಲಮೇಘಶ್ಯಾಮಲನ ಕೋಮಲಾಂಗದ ವಿಶಾಲತರ ಲಾವಣ್ಯ ಲಹರಿಯ ಸುಧಾಂಬುಧಿಯೊಳ್ ಓಲಾಡುತಿರ್ದರಂತೆ. ಈ ಮಾತುಗಳನ್ನು ಮರಳಿಮರಳಿ ಹೇಳೋಣವೆನ್ನಿಸುತ್ತದೆ. ಅವು ನಾಲಗೆಯಲ್ಲಿ ಅಷ್ಟು ಸುಖವಾಗಿ ನುಡಿಯುತ್ತವೆ. ಸೀತಾದೇವಿ ಋತುಸ್ನಾನಮಾಡಿದ ದಿವಸ ನಿಮಿಷದೊಳ್ ತ್ರಿಜಗಮಂ ಗೆಲ್ವೆನೆಂದಂಗಜಂ ಮಸೆದಡಾಯುಧಮೊ ಮೇಣು ಕ್ರಮದಿಂದೆ ಮನ್ಮಥಂ ಕಲುಷಮಂ ಶೋಧಿಸಿದ ರಮಣೀಯ ಸೌಂದರ್ಯಸಾರಮೋ ಸ್ಮರನ ನಿರುಪಮ ಯಶಶ್ರೀಯ ಸಾಕಾರಮೋ ಪೇಳೆನಲ್ ರಾಜಿಸಿದಳಂತೆ. ಮಾತಿನ ಸೌಂದರ್ಯವಲ್ಲದೆ ಈ ಕವಿಯ ಮಾತುಗಳಲ್ಲಿ ಔಚಿತ್ಯವೆನ್ನುವುದೂ ಒಂದಿದೆ. ಸೀತೆ ಇಷ್ಟು ಚೆಲುವಾಗಿ ಕಂಡದ್ದನ್ನು ವರ್ಣಿಸುವುದು ನಮಗೆ ತಕ್ಕುದೆ? ಎಂದು ನಮಗೆ ತೋರಬೇಕು. ಕವಿ ಹೇಳುತ್ತಾನೆ: ದೇವಿ ಹಾಗೆ ಕಂಡದ್ದು ರಾಘವನ ಕಣ್ಗೆ. ಇನ್ನು ಯಾವನ ಕಣ್ಣಿಗಾದರೂ ಆ ರೂಪು ಹಾಗೆ ಕಂಡರೆ ಅದು ಅವನ ದುರದೃಷ್ಟ. ಇನ್ನೊಂದು ಕಡೆ ಧರ್ಮರಾಜನು ತನ್ನ ಕುಲದ ನೃಪರ ಸಾಧು ಚಾರಿತ್ರ ತನ್ನಿಂದ ಸೊಗಡಾಗದೆಯಿರಲೆಂದು ಹೇಳುತ್ತಾನೆ. ಅಲ್ಲಿ ಸೊಗಡು ಎನ್ನುವ ಮಾತಿನಿಂದ ಬರುವ ಅರ್ಥ ಇನ್ನು ಯಾವ ಮಾತಿ ನಿಂದಲೂ ಬರಲಾರದು. ಜಿಡ್ಡಾಗಬಾರದು, ವಾಸನೆ ಬರಬಾರದು ಎಂಬ ಎರಡು ಭಾವ ಬರುವಂತೆ ಕವಿಯು ಈ ಮಾತನ್ನು ಉಪಯೋಗಿಸಿದ್ದಾನೆ. ಇನ್ನೊಂದು ಕಡೆ ಬಂಡೆಗಳನ್ನು ವರ್ಣಿಸುತ್ತಾ ಪೌರನಾರಿಯರ ವಿಶ್ರಾಂತಿಗಮರಿದರನ್ನ ವಾಸರಗಳು ಎಂದಿದಾನೆ. ಇಲ್ಲಿ ಅಮರಿದ ಎಂಬ ಮಾತು ಅನಿರೀಕ್ಷ್ಯವಾಗಿ ಬಂದು ರಸಲಾಲಸವಾದ ಮನಸ್ಸನ್ನು ಸೊಗಸಿ ಸಿಂದಲ್ಲದೆ ಕೌತುಕದಿಂದ ಸೆರೆಹಿಡಿಯುತ್ತದೆ. ಶಬ್ದ ಸೌಂದರ್ಯ ವೆಂದು ಹೇಳಿರುವ ಸಂದರ್ಭಗಳಲ್ಲಿ ಇನ್ನೊಂದು ವಿಷಯ ಗಮನಕ್ಕೆ

ಅರ್ಹವಾದದ್ದಿದೆ. ಮಾತಿನ ಸೊಗಸಿಗೆ ಔಚಿತ್ಯಕ್ಕೆ ಸಮಾನವಾದ ಒಂದು ಸ್ವರವಿನ್ಯಾಸವೂ ಈ ಸ್ಥಳಗಳಲ್ಲಿ ಕಾಣುತ್ತದೆ. ವನರುಹಭವಾಂಡ ದೊಳಗೈವತ್ತುಕೋಟಿ ಯೋಜನದ ವಿಸ್ತೀರ್ಣ ಎನ್ನುವಲ್ಲಿ ವಿಸ್ತಾರದ ಭಾವ ಉಂಟಾಗುವುದು ದೀರ್ಘವಾದ ಸ್ವರಗಳ ಜೋಡಣೆಯಿಂದ ಎಂದು ಈ ಮೊದಲೇ ಹೇಳಿದೆ. ಅತಸೀ ಕುಸುಮಗಾತ್ರನಂ ಕಮಲ ನೇತ್ರನಂ ಎಂಬಲ್ಲಿ ಮಾತು ಮೃದುವಾಗಿರುವುದಲ್ಲದೆ ಗಾತ್ರನಂ ನೇತ್ರನಂ ಎಂದು ಪ್ರಾಸದಿಂದ ಕಿವಿಗೆ ಸುಖ ಕೊಡುವುದರಲ್ಲಿ ಕವಿಯು ಗಾ ನೇ ಎಂಬ ಬೇರೆ ಬೇರೆಯ ಸ್ವರಗಳನ್ನು ತಂದಿರುವುದೂ ವದನ ರದನ ಎಂದು ಬೇರೆ ಅಕ್ಷರಗಳಿಂದ ಆರಂಭಿಸುವ ಪದಗಳನ್ನು ಹಾಕಿರುವುದೂ ಆತನ ಸ್ವರ ಸೌಂದರ್ಯ ಜ್ಞಾನವನ್ನು ತೋರಿಸುತ್ತದೆ. ತರುಣ ಪಲ್ಲವದ ವಿಸ್ತಾರದಿಂ ನೇರದಿಂ ಎಂಬ ಪದ್ಯದಲ್ಲಿ ಸ್ತಾರ–ನೇರ ಚ್ಚಾರ–ಸಾರಷಾರ–ಸ್ವ್ವರ ಕಾರ–ತೋರ, ಭಾರ–ಕೀರ ಕಾರ–ತೀರ ಎಂಬ ಸ್ವರಗಳ ಯೋಜನೆಯಲ್ಲಿ ಸುಂದರವಾದ ಗಾನದ ಸ್ವರ ವಿನ್ಯಾಸವನ್ನು ಉಪಯೋಗಿಸಿದ್ದಾನೆ. ಈ ರೀತಿಯ ಶಬ್ದ ಸೌಂದರ್ಯವೂ ಸ್ವರ ವಿನ್ಯಾಸದ ಕುಶಲತೆಯೂ ಈ ಕಾವ್ಯದಲ್ಲಿ ಮರಳಿ ಮರಳಿ ಕಾಣುತ್ತಲೇ ಇರುತ್ತವೆ.

ಈ ಕವಿಯ ಉಪಮೆಗಳನ್ನು ಕುರಿತು ಒಂದೆರಡು ಮಾತನ್ನು ಹೇಳಬೇಕು. ಇವೆಲ್ಲ ಪ್ರಾಯಶಃ ಭಾವನೆಯಿಂದ ಪರಿಪುಷ್ಟವಾಗಿವೆ. ಕವಿ ತನ್ನ ಕೆಲಸವನ್ನು ಕುರಿತು ತಾನು ವೀಣೆ, ಲಕ್ಷ್ಮೀವರನು ವೈಣಿಕನು, ತನ್ನ ಕಾವ್ಯವು ಆ ವೈಣಿಕನು ತನ್ನಿಂದ ನುಡಿಸಿದ ಗಾನದಂತೆ ಎನ್ನುತ್ತಾನೆ. ಹಿಂದಣ ರಾಜರನ್ನು ಗೆದ್ದ ಮಾತ್ರಕ್ಕೆ ಯೌವನಾಶ್ವಾದಿ ಗಳನ್ನು ಗೆಲ್ಲುವುದು ಸಾಧ್ಯವೆ ಎನ್ನುತ್ತ ಕೃಷ್ಣನು ಭೀಮನನ್ನು ಅರಳಾದ ಮಲ್ಲಿಗೆಯ ಪೊದರೊಳಗೆ ತಿರುಗಿದಡೆ ತೆರಳಬಲ್ಲುದೆ ಸಂಪಗೆಯ ಬನಕೆ ಮರಿದುಂಬಿ ಎನ್ನುತ್ತಾನೆ. ಕುದುರೆಯನ್ನು ಎತ್ತಿಕೊಂಡು ಹೋದ ಘಟೋತ್ಕಚನನ್ನು ಯೌವನಾಶ್ವನ ಸೈನಿಕರು ಹಿಂಬಾಲಿಸಲು ನೋಡುವರು. ಅವನು ಅವರನ್ನು ಜೀವಮುಂ ಕೊಂಡೊಯ್ದ ಕಾಲನಂ ಹೆಣ ನಟ್ಟುವಂತಾಯ್ತಲಾ ನಿಮ್ಮ ಸಾಹಸಂ ಎನ್ನುತ್ತಾನೆ. ಘಾತುಕರ ಕೈಗೆ

ಸಿಕ್ಕಿದ ಚಂದ್ರಹಾಸನು ಪಾತಕಿಗಳೊಡಲೊಳಿಹ ಪರಮಾತ್ಮನಂತೆ ಕೋಪಾತಿಶಯದೊಳಿಹ ಸುವಿವೇಕದಂತೆ ಇದ್ದನಂತೆ. ಪುತ್ರಸಂತಾನ ವಿಲ್ಲದೆ ಇದ್ದ ಕುಳಿಂದನ ಐಶ್ವರ್ಯಕ್ಕೆ ಚಂದ್ರಹಾಸನು ದೊರೆತದ್ದು ಚಿತ್ತರಪ ಕಾವ್ಯರಚನೆಗೆ ದೇವತಾಸ್ತುತಿ ನೆಗಳ್ದಂತೆ ಆಯಿತಂತೆ. ವಿಷಯೆ ತಂದೆಗೆ ತಾನು ಬೆಳೆಯಿಸಿದ ಲತೆಯ ವಿಷಯವನ್ನು ಹೇಳಬೇಕಾದರೆ ಸನ್ನುತ ವಸಂತದೊಳ್ ಬಾಯ್ದೆರೆವ ಕೋಗಿಲೆಯ ಮರಿವೊಲ್ ಮಾತನಾಡಿದ ಳಂತೆ. ಸ್ನಾನ ಮುಗಿದು ಎದ್ದುಬಂದ ಸುಂದರಿಯರು ಬಟ್ಟೆಗಳನ್ನುಟ್ಟು ಕೊಂಡದ್ದು ಹಿಮಕಾಲ ಹೋಗಿ •ವಸಂತಕಾಲ ಬಂದ ಸಮಯದಂತೆ ಇತ್ತಂತೆ. ವಿಷಯೆಗೆ ಚಂದ್ರಹಾಸನ ಬರವನ್ನು ತಿಳಿಸುವುದಕ್ಕೆ ಬಂದ ಸಖಿಯ ಮಾತು ಅಂಬುಜವನಕೆ ನೇಸರುದಯಿಸುವ ಕಾಲದ ಮುಂದೆ ತಂಪಿಡಿದು ಬೀಸುವೆಳಗಾಳಿಯಂತೆ ಇತ್ತಂತೆ. ಹೀಗೆಯೇ ಅನೇಕ ಇಂತ ಉಪಮೆಗಳು. ಇವುಗಳ ಅರ್ಥವನ್ನು ರಸಜ್ಞರಿಗೆ ವಿವರಿಸಿ ಹೇಳುವುದು ಅತಿಯಾದ ಕೆಲಸ. ಅವನ್ನು ಮನಸ್ಸಿನಲ್ಲಿಟ್ಟುಕೊಂಡು ಯೋಚಿಸಿದರೆ ಅವು ಎಷ್ಟು ಚೆನ್ನಾಗಿವೆ ಎನ್ನುವುದು ತಿಳಿಯುತ್ತದೆ. ಕಾವ್ಯದ ಹೊಣೆಗಾರಿಕೆ ತನ್ನದಲ್ಲ; ಬರೆದೆನೆಂಬ ಜಂಭವೂ ತನಗಿಲ್ಲ. ಹಿಂದಣ ರಾಜರು ಮಲ್ಲಿಗೆಯ ಪೊದರು, ಈಗ ಇರುವವರು ಸಂಪಗೆಯ ವನ, ಗೆಲ್ಲ ಹೋಗುವವನು ಮರಿದುಂಬಿ; ಕುದುರೆ ಜೀವ, ಅದನ್ನು ಕಾಯುವ ಸೈನ್ಯ ದೇಹ, ಅದನ್ನು ಕೊಂಡುಹೋದವನು ಯಮ; ಹಿಮ ಕಾಲ ವಸಂತ ಕಾಲ ತರುಣಿಯರು, ತರುಣಿಯರ ಆಕೃತಿ ಆ ಕಾಲಗಳಲ್ಲಿ ಕಾಣುವ ಪ್ರಕೃತಿ ಸ್ವರೂಪ; ಹೀಗೆ ಉಪಮೆಗಳು ವಿವರ ವಿವರದಲ್ಲಿ ಸುಂದರವಾಗಿವೆ. ಸೌಂದರ್ಯದಿಂದ ತಾವು ಪುಷ್ಟವಾಗಿ ಕಾವ್ಯದ ಸೌಂದರ್ಯವನ್ನು ಪೋಷಿಸುತ್ತವೆ.

ಈ ಕಾವ್ಯ ಭಾಷಾಂತರ, ಇಲ್ಲಿ ಹೇಳಿರುವ ಗುಣಗಳೆಲ್ಲ ಮೂಲ ದಿಂದ ಈ ಕಾವ್ಯಕ್ಕೆ ಬಂದಿರಬೇಕು ಎಂದು ಕೆಲವರು ಹೇಳಬಹುದು. ಕಾವ್ಯವು ಸಂಸ್ಕೃತ ಗ್ರಂಥವೊಂದನ್ನು ಅವಲಂಬಿಸಿ ಬರೆದದ್ದೇ ಆದರೂ ಮೂಲದ ವಾಕ್ಯಗಳನ್ನು ತಪ್ಪದೆ ಅನುಸರಿಸಿ ಮಾಡಿರುವ ಭಾಷಾಂತರ ವಲ್ಲ. ಕನ್ನಡದ ಕಾವ್ಯದ ಕಥೆಯು ಸಂಸ್ಕೃತದ ಕಾವ್ಯದ ಕಥೆಯು

ದಾರಿಯಲ್ಲಿ ಬಂದಿದೆ. ಅಷ್ಟೇ. ಇದರಲ್ಲಿ ಮೂಲದಿಂದ ಬಂದ ವಿಷಯು ವೆಷ್ಟು ಕನ್ನಡದ ಕವಿಯ ಕಲ್ಪನೆ ಎಷ್ಟು ಎಂದು ಪೂರ್ತಿಯಾಗಿ ನಿರ್ಧರಿಸಿ ಹೇಳಬೇಕಾದರೆ ಸಂಸ್ಕೃತದ ಗ್ರಂಥವನ್ನೂ ಈ ಕಾವ್ಯವನ್ನೂ ಜೊತೆ ಯಾಗಿಟ್ಟುಕೊಂಡು ಪಜ್ತಿ ಪಜ್ತಿಯಾಗಿ ನೋಡಬೇಕು. ನಾನು ಈ ಕೆಲಸವನ್ನು ಮಾಡಿಲ್ಲ. ಕೆಲವು ವರ್ಷಗಳ ಹಿಂದೆ ಶ್ರೀಮಾನ್ ಮಹಾದೇವ ಪ್ರಭಾಕರ ಪೂಜಾರರವರು ಈ ವಿಷಯವನ್ನು ಕುರಿತು ಒಂದು ಉಪನ್ಯಾಸವನ್ನು ಬರೆದಿದ್ದರು. ಕನ್ನಡದ ಕಾವ್ಯವು ವಿಶೇಷವಾಗಿ ಸ್ವತಂತ್ರ ರೀತಿಯದೆಂದು ಅವರು ಅಭಿಪ್ರಾಯಪಟ್ಟಂತೆ ನನ್ನ ನೆನಪು. ಈಚೆಗೆ ನಮ್ಮ ಸಾಹಿತ್ಯ ಪರಿಷತ್ಪತ್ರಿಕೆಯ ಕೆಲವು ಸಂಚಿಕೆಗಳಲ್ಲಿ ಸಂಸ್ಕೃತ ಗ್ರಂಥದ ಹಲವು ಅಧ್ಯಾಯಗಳ ಪದಶಃ ಅನುವಾದವು ಅಚ್ಚಾಗಿದೆ. ಅವನ್ನು ಓದಿ ಆ ಭಾಗದ ಕನ್ನಡದ ಪದ್ಯಗಳನ್ನು ಓದಿದರೂ ಇದೇ ಅಭಿಪ್ರಾಯವು ತೋರುತ್ತದೆ. ಕವಿಯು ಸನ್ನಿವೇಶವನ್ನು ಸಂಸ್ಕೃತ ಕಾವ್ಯದಿಂದ ತೆಗೆದುಕೊಂಡು ಕತೆಯನ್ನು ಬೇಕಾದಲ್ಲಿ ಬೆಳೆಸಿ ಬೇಡವಾದಲ್ಲಿ ಬಿಟ್ಟು ತನ್ನದಾಗಿ ಮಾಡಿಕೊಂಡಿದಾನೆ. ಉಕ್ತಿಯ ರೀತಿ, ಭಾವದ ಮೇಲ್ಮೆ, ಕಥಾ ಸರಣಿ ಇವು ಈತನವೇ. ಎಂದರೆ ಕಾವ್ಯ ಉತ್ತಮವಾಗುವುದಕ್ಕೆ ಯಾವ ಗುಣಗಳು ಮುಖ್ಯ ಕಾರಣಗಳೋ ಅವು ಈತನಿಂದ ಕಾವ್ಯಕ್ಕೆ ಬಂದಿವೆ. ಸಂಸ್ಕೃತದ ಜೈಮಿನಿ ಭಾರತಕ್ಕೆ ಅಷ್ಟೇನೂ ಪ್ರಾಶಸ್ತ್ಯ ಬಂದಿಲ್ಲ. ಕನ್ನಡದ ಗ್ರಂಥವಾದರೆ ಅಭಿಜ್ಞರಾದ ಯಾರಿಗಾದರೂ ಮೆಚ್ಚಾಗುವ ಗ್ರಂಥ. ಈ ವ್ಯತ್ಯಾಸಕ್ಕೆ ಕಾರಣ ಲಕ್ಷ್ಮೀಶನ ಕವಿತಾ ಶಕ್ತಿ. ಈ ಶಕ್ತಿ ಸಂಸ್ಕೃತದ ಮೂಲದಿಂದ ಇವನಿಗೆ ಬರಲಿಲ್ಲ; ಇವನಿಂದ ಸಂಸ್ಕೃತದ ಮೂಲಕ್ಕೆ ಸೇರಿ ಕನ್ನಡದಲ್ಲಿ ಹೊಸ ಕಾವ್ಯವನ್ನು ಹರಡಿತು.

ಜೈಮಿನಿ ಭಾರತವನ್ನು ಕುರಿತು ಹೇಳಬಹುದಾದ ಮಾತು ಇನ್ನೂ ಇದೆ. ಅದೆಲ್ಲವನ್ನೂ ಇಲ್ಲಿ ನಾನು ಸೂಚಿಸಿ ಕೂಡ ಇಲ್ಲ. ಲಕ್ಷ್ಮೀಶನ ಹಾಸ್ಯ ಪ್ರಶಂಸನೀಯವಾದದ್ದು. ಕೃಷ್ಣ ಭೀಮರ ಸಂವಾದದ ಹಾಸ್ಯವೂ ಚಂಡಿಯ ಕತೆಯ ಹಾಸ್ಯವೂ ನಮ್ಮ ಜನದಲ್ಲಿ ವಾಡಿಕೆಯಾದ ಸುಂದರ ವಾದ ಹಾಸ್ಯ. ಗಂಡುಡೆಯಲ್ಲಿ ಬಂದ ಪ್ರಮೀಳೆಯ ಹೆಣ್ಣು ಸೈನಿಕರ

ವರ್ಣನೆಯೂ ನಯವಾದ ಹಾಸ್ಯದಿಂದ ಬೆಳಗುತ್ತದೆ. ಇದರಂತೆ ಹಲವು ಸನ್ನಿವೇಶಗಳಲ್ಲಿ ಕವಿಯ ಹಾಸ್ಯ ಹೊರಸೂಸುತ್ತದೆ. ಈ ಹಾಸ್ಯದ ಮೂಲ ಈತನ ಭಾವನೆಯ ಔದಾರ್ಯ. ಈ ಕವಿಗೆ ಹೊಟ್ಟೆಬಾಕರ ವಿಷಯದಲ್ಲಿ ಗಂಡುಬೀರಿ ಹೆಂಗಸರ ವಿಷಯದಲ್ಲಿ ಶಕ್ತಿಗೆ ಮಿಂಚಿದ ಕೆಲಸಕ್ಕೆ ಹೋಗುವವರ ವಿಷಯದಲ್ಲಿ ಕನಿಕರ ಮತ್ತು ಹಿರಿತನದ ಸಹಾನುಭೂತಿ. ಆದ್ದರಿಂದ ಇವನ ಹಾಸ್ಯಕ್ಕೆ ಬಹಳ ಹತ್ತಿರದಲ್ಲಿ ಕಣ್ಣೀರಿದೆ. ಸತ್ಯಭಾಮೆ ದ್ರೌಪದಿಯನ್ನು ಕುರಿತು ನೀನು ಐವರು ಗಂಡರನ್ನು ಮರುಳು ಮಾಡಿದ ಪತಿವ್ರತೆ, ಕೃಷ್ಣನನ್ನು ಒಲಿಸಿಕೊಂಡೆ, ನಾನು ನಿನ್ನೊಂದಿಗೆ ಮಾತಾಡಲಂಜುತ್ತೇನೆ, ಎನ್ನುವಳು. ದ್ರೌಪದಿಗೆ ಕೃಷ್ಣನ ಒಲುಮೆ ಸತ್ಯಭಾಮೆಗೆ ಹೇಗೋ ಹಾಗೆ ಬರಿಯ ಹೆಮ್ಮೆಯ ವಿಷಯವಲ್ಲ. ಆದ್ದರಿಂದ ಅವಳ ನಗೆಗೆ ಇವಳು ಭಕ್ತಿಯ ಉತ್ತರವನ್ನು ಕೊಡುತ್ತಾಳೆ. ಈ ಕವಿಯ ಹೃದಯದಲ್ಲಿ ಎಲ್ಲ ರೀತಿಯ ಜನಕ್ಕೂ ವಿಶ್ವಾಸವುಂಟು. ದಾರಿ ನಡೆಯುವ ಜನರು, ಅವರಿಗೆ ನೀರುಕೊಡುವ ಹೆಂಗಸರು, ಅರಮನೆಯ ಅರಗಿಳಿಗಳಾಗಿರುವ ಹೆಂಗಸರು, ಚಂಡಿಯ ರಾದ ಕೋಪಿಗಳಾದ ಕಾಮಿಗಳಾದ ಹೆಂಗಸರು, ರಾಜಕುಮಾರಿಯರು, ಸೈನಿಕರು, ಬೇಡರು, ಬೇಡಿತಿಯರು, ದಾದಿಯರು. ಇವನು ಸ್ತ್ರೀತ್ವ ವನ್ನು ಗೌರವಿಸಿದನು; ಸ್ತ್ರೀಯ ಸ್ಥಿತಿಯನ್ನು ಕುರಿತು ಕನಿಕರಿಸಿದನು. ಇದೇ ಔದಾರ್ಯ ಇವನ ಮತದಲ್ಲಿ ಕಾಣುತ್ತದೆ. ನಮ್ಮ ಜನದಲ್ಲಿ ಶಿವ ವಿಷ್ಣು ಎಂಬ ಜಗಳ ಇನ್ನೂ ಹರಿದಿಲ್ಲ; ಈ ಜಗಳ ಇವನ ಕಾಲದಲ್ಲಿ ಇನ್ನೂ ಹೆಚ್ಚಾಗಿದ್ದಿರಬೇಕು. ಅಂಥದರಲ್ಲಿ ಈತನು ಶಿವ ವಿಷ್ಣುಗಳಲ್ಲಿ ಭೇದವನ್ನೆಣಿಸುವುದು ಪಾತಕವೆಂದು ಬಾಯಿಬಿಟ್ಟು ಹೇಳಿದಾನೆ. ಈ ಭಾವ ವೈಶಾಲ್ಯವೂ ಉದಾರ ಹೃದಯವೂ ಕವಿಯ ಸ್ವಭಾವದಿಂದ ಬಂದಿದ್ದಂತೆ ಅವನ ಪ್ರಪಂಚ ಜ್ಞಾನದಿಂದ ಬೆಳೆದಿದ್ದುವು. ಈ ಪ್ರಪಂಚ ಜ್ಞಾನವು ವಿಸ್ತಾರವಾದದ್ದು, ವಿವರವಾದದ್ದು. ಇದರಿಂದಲೇ ಇವನು ಚಿತ್ರಿಸುವ ಜನರು ನಮಗೆ ನಿಜವಾದ ವ್ಯಕ್ತಿಗಳಾಗಿ ಕಾಣುತ್ತಾರೆ; ಕತೆಗಳಲ್ಲಿಯ ನಡೆ ನುಡಿಗಳು ಸಹಜವಾಗಿ ಮೊಳೆಯುತ್ತವೆ, ಸಹಜವಾಗಿ ಬೆಳೆಯುತ್ತವೆ. ಒಟ್ಟಿನಲ್ಲಿ ಇವನ ದೃಷ್ಟಿ, ಒಂದು ಹಿರಿಯ

ನೀತಿಯ ದೃಷ್ಟಿಯಾಗಿದೆ. ಕಾವ್ಯದ ಮುಖ್ಯವಾದ ಧ್ವನಿ ಗಂಭೀರವಾಗಿಯೂ ಹಿತಕರವಾಗಿಯೂ ಇದೆ.

ಈ ಕವಿಯ ಸ್ಥಳ ಯಾವುದು ಮತ ಯಾವುದು ಎಂದು ಈಗ ಕೆಲವು ವರ್ಷಗಳ ಹಿಂದೆ ಒಂದು ಚರ್ಚೆ ಆರಂಭವಾಯಿತು. ಇದನ್ನು ಆರಂಭಮಾಡಿದವರು ನಮ್ಮ ಮಿತ್ರರಾದ ಶ್ರೀಮಾನ್ ತಳಕಿನ ವೆಂಕಣ್ಣಯ್ಯನವರೆಂದು ಕಾಣುತ್ತದೆ. ಲಕ್ಷ್ಮೀಶ ಕವಿ ದೇವನೂರಿನವನೆಂಬ ವಿಷಯದಲ್ಲಿಯೂ ಹೆಬ್ಬಾರ ಶ್ರೀವೈಷ್ಣವನೆಂಬ ವಿಷಯದಲ್ಲಿಯೂ ಅದುವರೆಗೆ ಯಾರಿಗೂ ಸಂದೇಹ ಬಂದಿದ್ದಂತೆ ತೋರುವುದಿಲ್ಲ. ಇದು ಸರಿಯೇ ಅಲ್ಲವೇ ಎಂದು ಒಬ್ಬರು ಚರ್ಚೆ ಎತ್ತಿದ ಮಾತ್ರಕ್ಕೇ ಇವನ ಊರು ದೇವಪುರ ಎಂಬ ಹೆಸರಿರುವ ಬೇರೆ ಊರುಗಳಲ್ಲಿ ಯಾವುದಾದರೂ ಇರಬಹುದು, ಇವನು ವೈಷ್ಣವನಲ್ಲದೆ ಇರಬಹುದು, ಎಂಬ ದೃಷ್ಟಿಯಿಂದ ಚರ್ಚೆಯನ್ನು ಬೆಳೆಯಿಸುವುದು ಸಾಧುವಾದ ಅನ್ವೇಷಣ ಮಾರ್ಗವಾಗಲಾರದು. ದೇವನೂರಿನಲ್ಲಿ ಲಕ್ಷ್ಮೀಶನು ಇಲ್ಲಿಯವನೆಂಬ ಪ್ರತೀತಿ ಬಹಳ ವರ್ಷಗಳಿಂದಿದೆ. ಇಲ್ಲಿ ಲಕ್ಷ್ಮೀನಾರಾಯಣನ ದೇವಾಲಯವಿದೆ. ಲಕ್ಷ್ಮೀಕಾಂತ ಹೆಬ್ಬಾರ್ ಎಂಬುದು ಕವಿಯ ಹೆಸರೆಂದೂ ಇವನ ತಂದೆಯ ಹೆಸರು ಅಣ್ಣಯ್ಯ ಎಂದೂ ಊರಿನ ಜನರಲ್ಲಿ ವೃದ್ಧರಾದವರು ಹೇಳುತ್ತಿದ್ದರು. ಅವರಿಂದ ಕೇಳಿದ ಕಿರಿಯರು ಈಗಲೂ ಹೇಳುತ್ತಾರೆ. ಕವಿಯ ಮನೆ ಇದ್ದ ಸ್ಥಳ ಎಂದು ದೇವಾಲಯದ ಮುಂದಣ ದೊಡ್ಡಬೀದಿಯಲ್ಲಿ ಒಂದು ಮನೆದಳವನ್ನು ತೋರಿಸುತ್ತಾರೆ. ಕವಿಯ ಮನೆತನದವರು ಇಂಥ ಊರಿನಲ್ಲಿ ಇದ್ದಾರೆ ಎಂದು ಕೆಲವು ವರ್ಷಗಳ ಹಿಂದೆ ಹೇಳುತ್ತಿದ್ದರು; ಇದ್ದರು ತೀರಿಹೋದರು ಎಂದು ಈಗ ಹೇಳುತ್ತಾರೆ. ಕವಿಯು ದೇವಾಲಯದಲ್ಲಿ ಕುಳಿತು ಕಾವ್ಯ ಬರೆಯುತ್ತಿದ್ದನೆಂದೂ ಅದರ ಜೀರ್ಣೋದ್ಧಾರಕ್ಕಾಗಿ ಹಣಗಳನ್ನೆತ್ತಿ ಕೆಲಸ ಮಾಡಿದನೆಂದೂ ಹೇಳುತ್ತಾರೆ. ಇದಕ್ಕೆ ಸಾಧಕವಾಗಿ ಲೆಕ್ಕಗಳನ್ನು ತೋರಿಸುತ್ತಾರೆ. ಈ ಲೆಕ್ಕಗಳು ಈಚಿನ ಕಾಲದ ಕಾಗದದಮೇಲೆ ಬರೆದಿರುವುದರಿಂದ ಇವು ಕವಿಯ ದಿನದವೋ ಅವನ ಮೊಮ್ಮಗ ಮರಿಮಗನ ದಿನಗಳವೋ ಎಂದು ಸಂದೇಹಪಡುವುದಕ್ಕೆ ಕಾರಣವಿದೆ.

ಆದರೂ ಜೈಮಿನಿಭಾರತವನ್ನು ಬರೆದ ಕವಿಗೂ ಈ ಲೆಕ್ಕಗಳನ್ನು ಬರೆದವನಿಗೂ ಏನೋ ಸಂಬಂಧವಿದ್ದಿರಬೇಕು ಎಂದು ಊಹಿಸಬಹುದಾಗಿದೆ. ಲಕ್ಷ್ಮೀಶನು ಇಲ್ಲಿ ಒಂದು ಕಟ್ಟೆಯ ಮೇಲೆ ಕುಳಿತಿರುತ್ತಿದ್ದನೆಂದೂ ಒಬ್ಬ ವೀರಶೈವ ಜ್ಞಾನಿಗೂ ಇವನಿಗೂ ಮಾತುಕತೆ ನಡೆದುವೆಂದೂ ಇಲ್ಲಿ ಒಬ್ಬ ವೃದ್ಧರು ಹೇಳುತ್ತಿದ್ದರು. ದೇವಾಲಯದಲ್ಲಿ ಆಳ್ವಾರುಗಳ ಜೊತೆಯಲ್ಲಿ ಒಂದು ವಿಗ್ರಹ ಹೆಚ್ಚಾಗಿದೆ. ಅದನ್ನು ಲಕ್ಷ್ಮೀಶ ಕವಿಯದೆಂದು ಊರವರು ಹೇಳುತ್ತಾರೆ; ಮತ್ತು ವರ್ಷ ವರ್ಷವೂ ಲಕ್ಷ್ಮೀಶನ ಉತ್ಸವ ಎಂದು ಒಂದು ಹಬ್ಬವನ್ನು ಮಾಡುತ್ತಾರೆ. ಇದಿಷ್ಟು ಪ್ರತೀತಿ ಬರಬೇಕಾದರೆ ಲಕ್ಷ್ಮೀಶ ಕವಿಯು ಇಲ್ಲಿಯವನಾಗಿದ್ದಿರಬೇಕೆಂದು ನಂಬಬಹುದು. ಇದರಲ್ಲಿ ಬಹು ಭಾಗ ಪೂರ್ವದಿಂದಲೂ ತಿಳಿದಿದ್ದ ಮಾತೇ ಹೊರತು ಚರ್ಚೆಯ ಉದ್ದೇಶದಿಂದ ಈಚೆಗೆ ತಿಳಿದ ವಿಷಯವಲ್ಲ. ಇಷ್ಟು ವಿಧವಾದ ಪ್ರತೀತಿ ಇನ್ನು ಬೇರೆ ಯಾವ ಊರಿನ ವಿಷಯದಲ್ಲೂ ಇರುವಂತೆ ಕಾಣುವುದಿಲ್ಲ. ಲಕ್ಷ್ಮೀಶನು ಕವಿತೆ ಬರೆದ ಊರಿನಲ್ಲಿ ಅವನ ಕೃತಿಯ ಒಂದು ಕೈ ಬರಹದ ಓಲೆ ಇಲ್ಲವಲ್ಲ ಎಂದು ಕೆಲವರು ಹೇಳಿರುವುದನ್ನು ನಾನು ಬಲ್ಲೆ. ಕವಿಯ ಊರಿನಲ್ಲಿ ಕಾವ್ಯದ ಪ್ರತಿ ಇಲ್ಲದಿರುವುದೇನೂ ನಮ್ಮ ಸೀಮೆಯಲ್ಲಿ ಆಶ್ಚರ್ಯಕ್ಕೆ ವಿಷಯವಲ್ಲ.

ಇದಾದಮೇಲೆ ಕವಿ ವೈಷ್ಣವನಾಗಿದ್ದಿರಲಾರನು, ಶೈವನಾಗಿದ್ದಿರಬೇಕು, ಹಲವು ಕಡೆ ಶಿವ ಶಿವಾ ಎಂದು ಹೇಳುವುದು ಬಂದಿದೆ, ಎಂದು ಮುಂತಾಗಿ ವಾದಿಸಬಹುದು. ಇದಕ್ಕೆ ಕೆಲವರು ಕವಿ ಶಿವ ಶಿವ ಎನ್ನಲಿಲ್ಲ; ಪಾತ್ರಗಳಿಂದ ಎನ್ನಿಸಿದಾನೆ, ಎಂದು ಸಮಾಧಾನ ಹೇಳುತ್ತಾರೆ. ಚಂದ್ರಹಾಸನ ಕತೆಯಲ್ಲಿ ಕವಿಯು ಊರ್ಧ್ವ ಪುಂಡ್ರಗಳಿಗೆ ಇತರ ವೈಷ್ಣವ ಲಾಂಛನಗಳಿಗೆ ಕೊಟ್ಟಿರುವ ಪ್ರಾಶಸ್ತ್ಯದಿಂದ ಈತನು ವೈಷ್ಣವನಾಗಿದ್ದಿರಬೇಕೆಂದು ಊಹಿಸಬಹುದಾಗಿದೆ. ಮೊತ್ತದಲ್ಲಿ ಈ ಆಕ್ಷೇಪ ಈ ಸಮಾಧಾನ ಎರಡೂ ಅಪ್ರಕೃತ. ಕುಮಾರವ್ಯಾಸನ ದಿನದಿಂದ ಲಕ್ಷ್ಮೀಶನ ದಿನದವರೆಗೆ ನಮ್ಮ ನಾಡ ಉತ್ತಮ ಭಾವನೆಯು ಶಿವ ವಿಷ್ಣುಗಳಲ್ಲಿ ಭೇದವನ್ನು ಖಂಡಿಸಿತೆಂಬುದು ನಾವು ಮುಖ್ಯವಾಗಿ ತಿಳಿಯಬೇಕಾದ ವಿಷಯ. ಭೇದವಾದಿಗಳಿದ್ದಂತೆ ಭೇದವನ್ನು ಖಂಡಿಸುವವರೂ ಇದ್ದರು.

ಈಗ ದೇಶದ ಉತ್ತಮ ಭಾವನೆ ಶಿವ ವಿಷ್ಣು ಮಾತ್ರವಲ್ಲ, ಅಲ್ಲಾ ಜಿಹೋವಾ ಗಾಡ್, ಎಲ್ಲಾ ಒಂದೇ ಎಂಬ ಮಾತಿಗೆ ಬಂದಿದೆ. ಇದು ತಪ್ಪು ಎನ್ನುವವರು ತಮ್ಮ ದೇವರಿಗೆ ಹೆಚ್ಚು ಮರ್ಯಾದೆ ಮಾಡಿದೇವೆ ಎಂದು ತಿಳಿಯಬಹುದು. ಇದು ಸರಿಯೆನ್ನುವವರು ಭೇದ ಭಾವವೇ ಪಾತಕವೆಂದು ತಿಳಿಯುತ್ತಾರೆ. ಹೀಗಿರುವಾಗ ಲಕ್ಷ್ಮೀಶನಂಥ ಸಂಸ್ಕೃತನಾದ ಕವಿಯ ಒಂದೆರಡು ಮಾತಿನಿಂದ ಅವನು ಶೈವನೇ ವೈಷ್ಣವನೇ ಎಂದು ನಿರ್ಧರಿಸುವ ಯೋಚನೆಮಾಡುವುದು ಸ್ವಲ್ಪ ಹೆಚ್ಚಿನ ಪ್ರಯತ್ನ. ಅಂತೂ ಕವಿಯು ವೈಷ್ಣವನಲ್ಲವೆಂಬ ಕಾರಣದಿಂದ ದೇವನೂರು ಇವನ ಸ್ಥಳವಲ್ಲ ಎಂದು ಸಾಧಿಸುವುದಕ್ಕಾಗುವುದಿಲ್ಲವೆಂದು ಹೇಳಬೇಕು.

ಇದರ ಮೇಲೆ ಸಂದೇಹಪಡುವೆವೆನ್ನುವವರಿಗೆ ನಂಬುವೆವೆನ್ನುವವರಿಗೆ ಯಾರೂ ಅಡ್ಡಿ ಬರುವಂತಿಲ್ಲ. ಅನ್ವೇಷಕರು ಬೇರೆ ಏನನ್ನಾದರೂ ಸಿದ್ಧಾಂತ ಮಾಡುವವರೆಗೆ ನಾವು ಸಂಪ್ರದಾಯವನ್ನನುಸರಿಸಿ ಕವಿ ಈ ಸ್ಥಳದವನೆಂದು ನಂಬೋಣ; ಇಲ್ಲಿ ಕವಿಯ ಜಯಂತ್ಯುತ್ಸವವನ್ನು ನಡೆಸೋಣ. ವಿಷಯ ಸಂದೇಹದಲ್ಲಿದೆಯೆಂದು ಉತ್ಸವವನ್ನು ನಿಲ್ಲಿಸುವುದು ಬೇಡ. ಬೇಕೆಂದು ತೋರಿದರೆ ಹಲವು ಸ್ಥಳಗಳಲ್ಲಿ ಉತ್ಸವವನ್ನು ಮಾಡೋಣ. ಕವಿ ಹುಟ್ಟಿದ್ದು ಒಂದು ಸ್ಥಳ, ಬರೆದದ್ದು ಒಂದು ಸ್ಥಳ ಅಥವಾ ಹತ್ತು ಸ್ಥಳ, ಮಾತ್ರ ಆದರೂ ಅವನ ಕಾವ್ಯ ಬೆಳಗಿದ್ದು ಒಟ್ಟು ಕರ್ಣಾಟಕವನ್ನು. ಕವಿ ವಿಷಯವಾಗಿ ಈಗ ನಿರ್ಧರಿಸಲಾಗದ ಸೂಕ್ಷ್ಮ ವಿಚಾರಗಳಿಗೆ ಅತಿ ಪ್ರಾಮುಖ್ಯತೆಯನ್ನು ಕೊಡದೆ ಅವನ ಕೃತಿಯಿಂದ ನಮ್ಮ ಬದುಕು ಎಷ್ಟು ರಂಜಿಸಬಹುದೆಂದು ನೋಡಿ ಅದರ ಸಂಪೂರ್ಣ ಫಲವನ್ನು ಜನರಿಗೆ ಒದಗಿಸುವುದು ನಮ್ಮ ವಿಮರ್ಶೆ ಈಗ ಅವಶ್ಯಕವಾಗಿ ಮಾಡಬೇಕಾದ ಕೆಲಸ.

ಇನ್ನು ಈ ಭಾಷಣವನ್ನು ಮುಗಿಸುತ್ತೇನೆ. ಲಕ್ಷ್ಮೀಶ ಕವಿಯು ಜನಪ್ರಿಯನಾಗಿರುವುದನ್ನು ನಾವೆಲ್ಲ ಬಲ್ಲೆವು. ಅದಕ್ಕೆ ಕಾರಣ ಅವನು ಜನತಾವತ್ಸಲನಾಗಿದ್ದದ್ದು. ನಿನ್ನೆ ಬೆಂಗಳೂರಿನಿಂದ ಬರುತ್ತ ನಾನು ದಾರಿಯಲ್ಲಿ ಒಂದು ಹಳ್ಳಿಯ ಬಳಿ ನಿಂತೆನು. ಊರ ಜನ ಹಿರಿಯರು ಕಿರಿಯರು ಮಕ್ಕಳು ಎಲ್ಲ ಬಂದು ಹತ್ತಿರ ನಿಂತರು. ಆ ಹಿರಿಯರಿಗೆ

ಆ ಕಿರಿಯರಿಗೆ ವ್ಯತ್ಯಾಸ ಗಾತ್ರದಲ್ಲಿ ಹೊರತು ಮನಸ್ಸಿನಲ್ಲಿ ನೀತಿಯಲ್ಲಿ ಇಲ್ಲ. ದೊಡ್ಡವರಲ್ಲಿ ಚಿಕ್ಕವರ ಸರಳವಾದ ನಡತೆ, ಚಿಕ್ಕವರಲ್ಲಿ ದೊಡ್ಡವರ ತಿಳಿವಿನ ವಿನಯ; ಎಲ್ಲರಿಗೂ ಆಗತಾನೆ ನೋಡಿದ ಹೊಸಬರ ವಿಷಯದಲ್ಲಿ ಬಹು ದಿನದಿಂದ ಬಲ್ಲ ಬಂಧುಗಳಲ್ಲಿರಬಹುದಾದ ಸೌಲಭ್ಯ. ಈ ಜನ, ಈ ಹೊಲ, ಈ ತೋಟ; ಈ ಊರು; ಇಲ್ಲಿ ನಾವು ನೆರೆದಿರುವ ಲಕ್ಷ್ಮೀರಮಣನ ಪುರಾತನ ದೇವಾಲಯ; ಇಕೋ ಇಲ್ಲಿ ಊರಮುಂದೆ ದೇವರ ಮುಖಚಂದ್ರನನ್ನು ನೋಡಿ ಮೇರೆವರಿಯುವ ಸೌಭಾಗ್ಯ ರತ್ನಾಕರದಂತೆ ವಿಶಾಲವಾದ ನೀರಹರಹು. ಲಕ್ಷ್ಮೀಶ ಕವಿಯು ಇದನ್ನೆಲ್ಲ ನೋಡಿ ಆನಂದಪಟ್ಟಿದ್ದನು. ಇದನ್ನು ನೋಡಿ ಆನಂದ ಪಡುವ ಪುಣ್ಯ ಈಗ ನಮ್ಮದು. ಅವನು ಈ ಜನ ಈ ನಾಡಿಗಾಗಿ ತನ್ನ ಆನಂದವನ್ನು ಕಾವ್ಯದಲ್ಲಿ ತಂದನು. ಮತ್ತೆ ಅವನಂತೆ ಈ ಜನಕ್ಕಾಗಿ ದುಡಿಯುವುದು ನಮ್ಮ ಕೆಲಸ. ನಾವು ಈ ಕೆಲಸವನ್ನು ಮಾಡುವೆವೋ ಇಲ್ಲವೋ ಎಂದು ನಮ್ಮ ಕವಿ ಕಾತರನಾಗಿರುವನೆಂದು ನನ್ನ ಮನಸ್ಸಿಗೆ ತೋರುತ್ತದೆ. ಅವನಿಗೇನೂ ಕಡಿಮೆಯಿಲ್ಲ; ಅವನು ದೈವಸಾನ್ನಿಧ್ಯ ದಲ್ಲಿದಾನೆ. ಆದರೆ ಅವನು ಜನತಾವತ್ಸಲನು; ಈ ಜನ ದುಃಸ್ಥಿತಿ ಯಲ್ಲಿದ್ದರೆ ತಾನು ಸುಖಿಯಾಗಿರಲಾರನು. ಕಾಮಧೇನು ಇಂದ್ರನ ಸಾನ್ನಿಧ್ಯದಲ್ಲಿ ಮಕ್ಕಳಿಗಾಗಿ ಕಣ್ಣೀರನ್ನಿಕ್ಕಿದಂತೆ, ಕನ್ನಡದ ಜನದ ಅವನತಿಗಾಗಿ ನಮ್ಮ ನಾಡ ಹಿರಿಯ ಜೀವಗಳು ದೇವರ ಮುಂದಿರು ವಾಗಲೂ ಚಿಂತಿಸುತ್ತಿರಬೇಕು. ಅವರಿಗೆ ಸ್ವಲ್ಪ ಸಮಾಧಾನವಾಗ ಬೇಕಾದರೆ ಕಲಿತವರೆಂಬ ನಾವು ನಮ್ಮ ಜನಕ್ಕಾಗಿ ದುಡಿಯಬೇಕು. ಹೀಗೆ ಮಾಡಿ ನಾವು ಈ ಕವಿಯೂ ಇನ್ನು ಇತರ ಕವಿಗಳೂ ಇನ್ನು ಇತರ ಹಿರಿಯ ಜೀವನಗಳೂ ಆರಂಭಿಸಿದ ಪೋಷಿಸಿದ ಜನಸೇವಾ ಸಂಪ್ರ ದಾಯವನ್ನು ನಿಲ್ಲಿಸಿಕೊಳ್ಳಬೇಕು; ನಮ್ಮ ಸಾಹಿತ್ಯವನ್ನು ಬೆಳೆಸಬೇಕು; ಅದನ್ನು ನಮ್ಮ ಜನದ ಜೀವನದಲ್ಲಿ ಬೆರೆಸಬೇಕು; ಆ ಜೀವನದಿಂದ ಅದನ್ನು ವೃದ್ಧಿಗೊಳಿಸಬೇಕು; ನಾವು ಇಲ್ಲಿ ಯಾಪನಮಾಡುವ ಕಾಲದಲ್ಲಿ ಸ್ವಲ್ಪವನ್ನಾದರೂ ವಿಶ್ವಜೀವನದ ಸೇವೆಯಲ್ಲಿ ಅಮರವೆನ್ನಿಸಬೇಕು. ಹೀಗೆ ಮಾಡುವ ಇಚ್ಛೆಯನ್ನೂ ಶಕ್ತಿಯನ್ನೂ ಭಗವಂತನು ನಮ್ಮ ಜನಕ್ಕೆಲ್ಲಾ ನೀಡಲಿ.

ಲಕ್ಷ್ಮೀಶ ಕವಿಯ ಈ ಉತ್ಸವವನ್ನು ಏರ್ಪಡಿಸಿ ಚಿಕ್ಕಮಗಳೂರಿನ ಕರ್ಣಾಟಕ ಸಂಘದವರೂ ದೇವನೂರಿನ ಮಹಾಜನರೂ ಕನ್ನಡ ಸಾಹಿತ್ಯಕ್ಕೂ ಕನ್ನಡದ ಜನತೆಗೂ ಹಿರಿದಾದ ಉಪಕಾರವನ್ನು ಮಾಡಿದ್ದಾರೆ. ಇದಕ್ಕಾಗಿ ನಾನು ಇವರಿಗೆ ಕೃತಜ್ಞತೆಯನ್ನು ಸೂಚಿಸುವುದನ್ನು ಕರ್ಣಾಟಕದ ಜನವೇ ಅನುಮೋದಿಸುವುದೆಂದು ನನ್ನ ನಂಬಿಕೆ. ಹಿಡಿದ ಕೆಲಸವನ್ನು ಇಷ್ಟು ವಿಜೃಂಭಣೆಯಿಂದ ಇಷ್ಟು ಚೆನ್ನಾಗಿ ನಡೆಯಿಸಿದ ಇವರ ಕಾರ್ಯಸನ್ನಾಹವು ಅಭಿನಂದನೀಯವಾದದ್ದು. ಇವರಿಗೆ ನೆರವಾಗಿ ನಿಂತ ಎಲ್ಲ ಆಶ್ರಯದಾತರಿಗೂ ಗುರುಪೀಠಗಳ ಹಿರಿಯರಿಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೂ ನಮ್ಮ ವಂದನೆ ಸಲ್ಲಬೇಕು. ಲಕ್ಷ್ಮೀಶ ಕವಿಯ ಜಯಂತ್ಯುತ್ಸವ ವರ್ಷ ವರ್ಷವೂ ನಡೆಯಲೆಂದೂ ಇದರಂತೆಯೇ ನಮ್ಮ ನಾಡ ಇತರ ಹಿರಿಯ ಜೀವನಗಳ ನೆನವು ನಮ್ಮ ಜನದಲ್ಲಿ ನೆಲಸಿ ನಮ್ಮ ದೇಶವು ಹಿಂದಣ ಆ ಸೌಭಾಗ್ಯಕ್ಕಿಂತ ಹೆಚ್ಚಿನ ಸೌಭಾಗ್ಯವನ್ನು ಮರಳಿ ಪಡೆಯಲೆಂದೂ ನಾನು ನಮ್ಮೆಲ್ಲರ ಪರವಾಗಿ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೇಘಸಂದೇಶ

ಪೂರ್ವದೇಶ ಪಶ್ಚಿಮದೇಶಗಳ ಸಾಹಿತ್ಯಗಳು ಭಿನ್ನರೀತಿಯುವೆಂದೂ ಅವುಗಳಲ್ಲಿ ಒಂದೊಂದಕ್ಕೆ ಮುಖ್ಯವಾದ ಯಾವುದೋ ಒಂದು ವ್ಯತ್ಯಾಸವಿದೆಯೆಂದೂ ನಾವೆಲ್ಲ ಸಾಮಾನ್ಯವಾಗಿ ತಿಳಿದುಕೊಂಡಿದ್ದೇವೆ. ಈ ಸಾಹಿತ್ಯರಾಶಿಗಳ ಒಟ್ಟಿನ ಲಕ್ಷಣವನ್ನು ಕುರಿತು ಇದು ಸರಿಯಾದ ಭಾವನೆಯೇ ಹೌದು; ಸಾಮಾನ್ಯ ಗ್ರಂಥಗಳಲ್ಲಿ ಈ ಭೇದ ಕಾಣುವುದೂ ನಿಜ. ಪೂರ್ವ ಮತ್ತು ಪಶ್ಚಿಮದೇಶಗಳ ಜನರ ದೃಷ್ಟಿ ಒಟ್ಟಿನಲ್ಲಿ ಬೇರೆ ಎನ್ನುವುದಾದರೆ ಅವರ ಸಾಹಿತ್ಯವು ಬೇರೆಯಾಗಿಯೇ ಇರಬೇಕು. ಆದರೆ ಈ ಸಾಹಿತ್ಯಗಳ ಅತ್ಯುತ್ತಮ ಕಾವ್ಯಗಳನ್ನು ನೋಡಿದರೆ ಭೇದಕ್ಕಿಂತಲೂ ಸಾಮ್ಯವೇ ವಿಶೇಷವಾಗಿ ಕಾಣುತ್ತದೆ. ಭೇದವಿರುವುದೆಲ್ಲ ರೀತಿಯಲ್ಲಿ; ವಿಷಯದಲ್ಲಿಯೂ ವಸ್ತುವಿನಲ್ಲಿಯೂ ಸಾಮ್ಯವಿದೆ. ಇದರಿಂದಲೇ ಕೇವಲ ಪ್ರಾಚ್ಯಪದ್ಧತಿಯಿಂದ ಸಾಹಿತ್ಯಾಭ್ಯಾಸಮಾಡಿರುವವರೂ ಪಾಶ್ಚಾತ್ಯ ಸಾಹಿತ್ಯದ ಉತ್ತಮ ಗ್ರಂಥಗಳನ್ನು ಮೆಚ್ಚಿ ಆತ್ಮೀಯ ಭಾವದಿಂದ ಅನುಭವಿಸಬಲ್ಲರು. ಪೂರ್ವದೇಶದ ಉತ್ತಮ ಕೃತಿಗಳನ್ನು ನೋಡಿ ಪಾಶ್ಚಾತ್ಯ ವಿದ್ವಾಂಸರೂ ಕವಿಗಳೂ ಹೀಗೆಯೇ ಮನಸೋಲುತ್ತಾರೆ. ಈ ಮಾತಿಗೆ ಷೇಕ್ಸ್‌ಪಿಯರ್ ಕಾಳಿದಾಸರ ಕೃತಿಗಳು ನಿದರ್ಶನಗಳು. ಕಾಳಿದಾಸನ ಕಾವ್ಯಗಳ ವಿಷಯದಲ್ಲಿ ಪಾಶ್ಚಾತ್ಯರು ವ್ಯಕ್ತಗೊಳಿಸಿರುವ ಉತ್ಸಾಹ ಇನ್ನು ಯಾವ ಕಾರಣದಿಂದ ಇಲ್ಲದಿದ್ದರೂ ಉತ್ತಮ ಸಾಹಿತ್ಯದ ಈ ಗುಣವನ್ನು ತೋರಿಸುವುದಕ್ಕೆ ಆವಶ್ಯಕವಾಗಿತ್ತು. ಪಾಶ್ಚಾತ್ಯ ಸಾಹಿತ್ಯಗಳಲ್ಲಿ ಬೇರೆಬೇರೆಯ ರೀತಿಯುವೆಂದು ಹೇಳುವ ಕಾವ್ಯಶಾಖೆಗಳಲ್ಲಿ ಒಂದೊಂದರಲ್ಲಿ ಒಂದೊಂದು ಉಚ್ಚರೀತಿಯ ಗ್ರಂಥವನ್ನು ಬೇಕೆಂದೇ ಬರೆದನೋ ಎಂಬಂತೆ ಈ ಕವಿಯು ಸುಂದರವಾದ ಒಂದು ಭಾವಗೀತೆ, ಉದಾತ್ತಶೈಲಿಯ ಒಂದು ಇತಿಹಾಸಕಾವ್ಯ, ಭಕ್ತಿಭಾವಪೂರಿತವಾದ ಒಂದು ಪುರಾಣಕಥೆ, ನಿರ್ಮಲವಾದ ಪ್ರೇಮದ ಸ್ವರೂಪವನ್ನು ವರ್ಣಿಸಿರುವ ಒಂದು ನಾಟಕ, ಹೀಗೆ ಬಹುರೂಪದ

ಗ್ರಂಥಗಳನ್ನು ಬರೆದಿದ್ದಾನೆ. ಇವು ಕಾವ್ಯಶೈಲದ ಹಲವು ಶಿಖರಗಳಾಗಿ ನಿಂತಿವೆ. ಭಾವಗೀತೆ ಎಂಬ ಜಾತಿಯ ಕಾವ್ಯವು ವಿಶೇಷವಾಗಿ ಸಿಕ್ಕುವುದು ಪಾಶ್ಚಾತ್ಯ ಸಾಹಿತ್ಯದಲ್ಲಿ. ಅದು ಭಾರತವರ್ಷದ ಸಾಹಿತ್ಯದಲ್ಲಿ ಅಷ್ಟು ಹೆಚ್ಚಾಗಿಲ್ಲ. ಮೇಘಸಂದೇಶ ಕಾವ್ಯವು ಈ ಜಾತಿಯದು. ನಮ್ಮಲ್ಲಿ ವಾಡಿಕೆಯಲ್ಲಿಲ್ಲದ ಜಾತಿಗೆ ಸೇರಿದ್ದಾದರೂ ಈ ಕಾವ್ಯವು ಪ್ರಪಂಚದ ಅತ್ಯುತ್ತಮ ಭಾವಗೀತೆಗಳಲ್ಲಿ ಒಂದಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಇದರ ಜೊತೆಗೆ ನಿಲ್ಲುವ ಬೇರೆ ಗ್ರಂಥವಿರುವಂತೆ ಕಾಣುವುದಿಲ್ಲ; ಪ್ರಪಂಚದ ಸಾಹಿತ್ಯದಲ್ಲಾಗಲಿ ಇದರ ಜೊತೆಗೆ ತೂಗುವ ಯೋಗ್ಯತೆಯನ್ನುಳ್ಳ ಗ್ರಂಥ ಹಲವು ಇಲ್ಲ. ಈ ಉಪನ್ಯಾಸದಲ್ಲಿ ಈ ಕಾವ್ಯವನ್ನು ಕುರಿತು ನಾಲ್ಕು ಮಾತನ್ನು ಹೇಳಲು ಪ್ರಯತ್ನಿಸಿದೆ.

ಕುಬೇರನ ಆಸ್ಥಾನದ ಅಧಿಕಾರಿಗಳಲ್ಲಿ ಒಬ್ಬನಾದ ಒಬ್ಬ ಯಕ್ಷನು ಯಾವುದೋ ಸಂದರ್ಭದಲ್ಲಿ ಯಜಮಾನನ ವಿಷಯದಲ್ಲಿ ತಪ್ಪಿ ನಡೆದು ಅವನ ಕೋಪಕ್ಕೆ ಪಾತ್ರನಾಗಿ ಅವನಿಂದ ಒಂದು ವರ್ಷದಷ್ಟು ಕಾಲ ಸತಿಯನ್ನಗಲಿರಬೇಕೆಂಬ ಶಾಪವನ್ನು ಪಡೆದು ತನ್ನ ಮಹಿಮೆಗಳನ್ನು ನೀಗಿಕೊಂಡು ರಾಮಗಿರ್ಯಾಶ್ರಮದಲ್ಲಿ ಬಂದು ನಿಂತನು. ಆಷಾಢ ಮಾಸ ಬಂದಿತು. ವಿರಹಾವಸ್ಥೆಯಿಂದ ಕೃಶನಾಗಿದ್ದ ಇವನು ಕಾತರನಾಗಿ ಪರ್ವತದ ಸಮೀಪದಲ್ಲಿ ಸುಳಿಯುತ್ತಿದ್ದ ಒಂದು ಮೋಡವನ್ನು ಕುರಿತು ತನ್ನ ಸತಿಗೆ ಒಂದು ಸಂದೇಶವನ್ನು ತೆಗೆದುಕೊಂಡುಹೋಗಬೇಕೆಂದು ಬೇಡಿದನು. ಮೋಡ ಎಲ್ಲಾದರೂ ಸಂದೇಶವನ್ನು ತೆಗೆದುಕೊಂಡುಹೋಗಬಲ್ಲುದೇ? ಆದರೆ ಕಾಮಾರ್ತನಾದ ಈ ಯಕ್ಷನು ಚೇತನಾಚೇತನಗಳಲ್ಲಿ ವಿವೇಚನೆಯನ್ನು ಕಳೆದುಕೊಂಡಿದ್ದನು. ಅವನು ಮೇಘವನ್ನು ಕುರಿತು ಹೀಗೆಂದನು: "ನೀನು ಹಿರಿಯ ವಂಶದವನು. ಪ್ರಿಯೆಯನ್ನು ಉಳಿದು ಆರ್ತನಾಗಿರುವ ನನ್ನಲ್ಲಿ ದಯಮಾಡಿ ನನ್ನ ಮಾತನ್ನು ತೆಗೆದುಕೊಂಡುಹೋಗಿ ನನ್ನ ಪ್ರಿಯೆಗೆ ಹೇಳಬೇಕು. ಅವಳು ಯಕ್ಷರ ನಗರವಾದ ಅಲಕಾನಗರದಲ್ಲಿ ಇದ್ದಾಳೆ. ನೀನು ಅಲ್ಲಿಗೆ ಹೋಗಬೇಕು. ನೀನು ಹೋಗಬೇಕಾದ ದಾರಿಯನ್ನು ಹೇಳುತ್ತೇನೆ ಕೇಳು. ಮೊದಲು ಆಮ್ರಕೂಟಕ್ಕೆ ಹೋಗು. ಅದರ

ವನಗಳ ಬೇಗೆಯನ್ನು ಕಡಮೆಮಾಡಿ ಮುಂದೆ ವಿಂಧ್ಯಪರ್ವತದ ಪಾದದಲ್ಲಿ ಹರಿಯುತ್ತಿರುವ ರೇವಾ ನದಿಯನ್ನು ನೋಡುತ್ತೀಯೆ. ಅಲ್ಲಿ ನೀರನ್ನು ತುಂಬಿಕೊಂಡು ದಶಾರ್ಣದೇಶವನ್ನು ಸೇರು. ವೇತ್ರವತೀ ನದಿಯ ನೀರನ್ನು ಕುಡಿದು ನೀಚೈರ್ಗಿರಿಯಲ್ಲಿ ನಿಲ್ಲು. ಮುಂದೆ ಪ್ರಯಾಣ ಸ್ವಲ್ಪ ಸುತ್ತಾಗುವುದಾದರೂ ಉಜ್ಜಯಿನೀ ನಗರಕ್ಕೆ ಹೋಗಿ ಆಮೇಲೆ ಮುಂದೆ ನಡೆ. ಆ ನಗರ ನೋಡಬೇಕಾದದ್ದು. ಅದನ್ನು ನೋಡದಿದ್ದರೆ ನಿನ್ನ ದೃಷ್ಟಿ ವಂಚಿತವಾದಂತೆ ಆಗುತ್ತದೆ. ನಿರ್ವಿಂಧ್ಯೆಯನ್ನು ದಾಟಿ ಅವಂತಿಯನ್ನು ಸೇರಿ ವಿಶಾಲಾ ನಗರವನ್ನು ಹೊಗು. ಅದರ ಪಕ್ಕದಲ್ಲಿ ಶಿಪ್ರಾ ನದಿ ಹರಿಯುತ್ತಿದೆ. ಆ ನಗರವು ಮಹದೈಶ್ವರ್ಯದ ನೆಲೆ. ಅಲ್ಲಿಂದ ಮುಂದೆ ಗಂಧವತೀ ನದಿಯ ತೀರದ ಚಂಡೀಶ್ವರ ದೇವಾಲಯ ವನ್ನು ಸಾರಿ ಮಹಾಕಾಳ ಕ್ಷೇತ್ರದಲ್ಲಿ ದೇವರನ್ನು ಸೇವಿಸಿ ಗಂಭೀರಾ ನದಿಯ ನೀರಿನ ಮೇಲೆ ನೆರಳುಮಾಡಿ ದೇವಗಿರಿಯನ್ನು ಸೇರಿ ಮುಂದೆ ಹೊರಟು ಬ್ರಹ್ಮಾವರ್ತದ ಮೇಲೆ ನೆರಳನ್ನು ಹರಡುತ್ತ ಸರಸ್ವತೀ ನದಿಯ ದಡವನ್ನು ಸೇರು. ಅಲ್ಲಿಂದ ಗಂಗಾ ನದಿಯ ಸಮೀಪವನ್ನು ಹೊಂದಿ ಹಿಮವತ್ಪರ್ವತದ ಉಪತಟವನ್ನು ದಾಟಿ ಕೈಲಾಸಪರ್ವತವನ್ನು ಸೇರು. ಇದು ಬಹಳ ಪವಿತ್ರವಾದ ಸ್ಥಾನ. ಇಲ್ಲಿ ಗೌರೀದೇವಿ ಶಿವನ ಜೊತೆಯಲ್ಲಿ ನಡೆಯುವಂದು ಅವಳ ಕಾಲ ಅಡಿಗೆ ಸೋಪಾನವಾಗು. ಅಲ್ಲಿಯೇ ಪಕ್ಕದಲ್ಲಿ ಅಲಕಾನಗರಿಯಿದೆ. ಅದನ್ನು ನೋಡಿ ನೀನು ಗುರುತಿಸದೆ ಇರಲಾರೆ. ಅದು ಐಶ್ವರ್ಯವಂತರು, ಭೋಗಿಗಳು, ಸುಖಿ ಗಳು, ಮಹಿಮಾವಂತರು, ರಸಿಕರು, ಇವರ ಆವಾಸ. ಅಲ್ಲಿ ಧನಪತಿಯ ಗೃಹದ ಉತ್ತರದಲ್ಲಿ ನನ್ನ ಗೃಹವಿದೆ. ಅದರ ಪಕ್ಕದಲ್ಲಿ ಒಂದು ಪುಷ್ಕರಿಣಿ ಯಿದೆ. ಅದರ ತೀರದಲ್ಲಿ ಒಂದು ಕ್ರೀಡಾಶೈಲವಿದೆ. ಅಲ್ಲೇ ಒಂದು ಅಶೋಕವೃಕ್ಷ ಕೇಸರವೃಕ್ಷ ಇವೆ. ಅಲ್ಲಿ ನವಿಲನ್ನಾಡಿಸುವ ವಾಸ ಯಷ್ಟಿಯಿದೆ. ಆ ಮನೆಯಲ್ಲಿ ವಿರಹಸಂತಾಪದಿಂದ ಕೃಶಳಾಗಿರುವ ನನ್ನ ಪತ್ನಿಯಿರುತ್ತಾಳೆ. ನೀನು ನನ್ನ ವೃತ್ತಾಂತವನ್ನು ತೆಗೆದುಕೊಂಡು ಬಳಿಸೇರುವುದರಿಂದ ಅವಳ ಎಡಗಣ್ಣ ರೆಪ್ಪೆ ಅದುರುವುದು. ಅವಳು ನಿದ್ರಿಸುತ್ತ ಇರುವುದಾದರೆ ಅವಳನ್ನು ಎಬ್ಬಿಸಬೇಡ. ಎದ್ದ ಮೇಲೆ

ಶೀತಲವಾದ ಗಾಳಿಯಿಂದ ಅವಳನ್ನು ಮೆಲ್ಲನೆ ಉಪಚರಿಸಿ 'ನಿನ್ನ ಪತಿಯ ಸ್ನೇಹಿತನು ನಾನು. ಅವನು ಜೀವಂತನಾಗಿದ್ದಾನೆ. ನಿನ್ನ ಕುಶಲವನ್ನೂ ಕೇಳುತ್ತಾನೆ' ಎಂದು ಮುಂತಾಗಿ ಹೇಳಿ, ಅವಳು ಹೇಳುವ ಉತ್ತರವನ್ನು ತಿಳಿದು ಮರಳಿ ಇತ್ತ ಬಂದು ನನಗೆ ತಿಳಿಸು. ನೀನು ನನ್ನ ಮಾತಿಗೆ ಉತ್ತರಕೊಡದೆ ಸುಮ್ಮನೆ ಇದ್ದೀಯೆ. ನನ್ನ ಪ್ರಾರ್ಥನೆಯನ್ನು ನಿರಾಕರಿಸಿರುವುದರಿಂದ ಹೀಗಿದ್ದೀಯೆಂದು ನಾನು ಊಹಿಸುವುದಿಲ್ಲ. ಶಬ್ದಮಾಡದೆಯೇ ನೀನು ಚಾತಕಗಳಿಗೆ ನೀರನ್ನು ಕೊಡುತ್ತೀಯೆ. ನನ್ನ ಇಷ್ಟವನ್ನೂ ಹೀಗೆಯೇ ಸಲಿಸುವೆ. ಹೀಗೆ ನೀನು ನನ್ನ ಪ್ರಾರ್ಥನೆಯನ್ನು ನಡೆಯಿಸಿಕೊಟ್ಟು ಸಂಭೃತಶ್ರೀಯಾಗಿ ಇಷ್ಟ ಬಂದ ದೇಶದಲ್ಲಿ ಸುತ್ತು. ನಿನಗೆ ಒಂದು ಕ್ಷಣವಾದರೂ ನಿನ್ನ ಪ್ರಿಯೆಯನ್ನು ಅಗಲಿರಬೇಕಾದ ಸಂದರ್ಭವೊದಗದಿರಲಿ."

ಇದು ಕವಿತೆಯ ವಸ್ತು, ಕಾವ್ಯದ ತಡಿಕೆ. ಕಾಳಿದಾಸನು ಈ ತಡಿಕೆಯಮೇಲೆ ಅಲಕಾನಗರದ ದಾರಿಯಲ್ಲಿರುವ ಹಲವು ಸ್ಥಳಗಳ ರಮ್ಯತೆಯನ್ನೂ ಅಲಕಾನಗರದ ಸೌಂದರ್ಯವನ್ನೂ ಅದರ ನಿವಾಸಿಗಳಾದ ಯಕ್ಷರ ಭೋಗವಿಭ್ರಮವನ್ನೂ ಅಲ್ಲಿ ವಿರಹಿಣಿಯಾಗಿ ಕೊರಗುತ್ತಿರುವ ಸುಂದರಿಯ ಅವಸ್ಥೆಯನ್ನೂ ಹಬ್ಬಿಸಿ ಕಾವ್ಯಲತೆಯನ್ನು ಬೆಳೆಸಿದ್ದಾನೆ. ಅದರಲ್ಲಿ ಇವನ ಪ್ರೇಮವಿಜ್ಞಾನ, ಸೌಂದರ್ಯಗ್ರಹಣಶಕ್ತಿ, ದೇಶಪ್ರೇಮ, ಧರ್ಮವಿಮರ್ಶೆ, ಭಗವದ್ಭಕ್ತಿ, ಉಚ್ಚವಾದ ವಿನಯ, ಎಲ್ಲವೂ ಹೂವಾಗಿ ಕಾಣುತ್ತವೆ. ಉದಾತ್ತವಾದ ಭಾವನಾಶಕ್ತಿಯೊಂದಿಗೆ ತಿಳಿಯಾದ ವಿಲಾಸವೂ ಸೂಕ್ಷ್ಮವಾದ ಊಹೆಯೂ ಬೆರೆತು ವಿರಹ ಶೃಂಗಾರದ ಈ ಕಾವ್ಯವು ಪ್ರೇಮದ ಪೂಜೆಗೆ ಮಾತಿನಿಂದ ಮಾಡಿದ ಅಮೃತಶಿಲೆಯ ದೇವಾಲಯದಂತೆ, ಪ್ರೇಮದೇವತೆಯ ಉತ್ಸವವನ್ನು ಬಿಜಮಾಡಿಸುವುದಕ್ಕೆ ನಿರ್ಮಿಸಿದ ಕುಂದಮುಂಟಪದಂತೆ, ತೋರುತ್ತದೆ. ಇದರಲ್ಲಿ ಕವಿಯ ಸಂಪೂರ್ಣ ಜೀವನವೇ ಪ್ರತಿಫಲಿಸಿದೆ. ಆದರೂ ಸುಂದರವಾದ ಕಟ್ಟಡದಲ್ಲಿ ಉಳಿದ ಎಲ್ಲ ಸೊಗಸು ಮುಖ್ಯಮೂರ್ತಿಯ ಮುಖ್ಯಭಾವದ ಸೊಗಸಿಗೆ ತಗ್ಗಿ ತೊಳಗುವಂತೆ ಇಲ್ಲಿ ಉಳಿದ ಎಲ್ಲ ಸೊಗಸೂ ಪ್ರೇಮ ತೊಟ್ಟಿರುವ ರೂಪದ ಸೊಗಸಿಗೆ ವಿಧೇಯವಾಗಿ ಕಾಣುತ್ತವೆ.

ಆರಂಭದ ಕೆಲವು ಪದ್ಯಗಳಲ್ಲಿಯೇ ಕವಿಯ ಪದ್ಧತಿಯು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಇಲ್ಲಿ ಕೊಡುವ ಐದು ಪದ್ಯಗಳ ಸರಳವಾದ ಅನುವಾದದಿಂದ ಇದು ಕಾಣಬಹುದು —

ಅವನೊರುವಂ ಯಕ್ಷನಧಿಕಾರಮದದಿಂದೆ
ದೊರೆಯ ಕೋಪವ ಗಳಿಸಿ, ವರುಷಕಾಲ
ದೈವೀಮಹಿಮೆಯುಳಿದು ಸತಿಯನಗಲಿರು ಎಂಬ
ಉರುವ ಶಾಪಕೆ ಸಿಲುಕಿ, ರಾಮಗಿರಿಯ
ಜನಕತನಯಾಸ್ನಾನ ಪುಣ್ಯೋದಕಂಗಳಿಂ
ನಿಡಿದು ನಿಬಿಡದ ನೆಳಲ ತರುರಾಜಿಯಿಂ
ಅನುಕೂಲಮಾದಾಶ್ರಮಂಗಳಲಿ ವಾಸಿಸುತ
ಕಡುಬೇನೆಯಲಿ ದಿನವ ನೂಕುತಿಹನು.

ಮುಂಗೈಯ ಬರಿಗೈದು ಕನಕವಲಯವನೆಳೆದು
ತೋಳದೆಸೆಗಿಡುವಂತೆ ಮೈ ಸೊರಗಿರೆ,
ಅಂಗನೆಯ ಹಂಬಲಲಿ ಕಾಮಿ ಹಲ ಮಾಸಗಳ
ಕಾಲವನು ನೀಸಿ ಆ ಗಿರಿಯೆಡೆಯಲಿ
ಆಷಾಢ ಉದಯಿಸಿದ ದಿನ ಕಂಡನಾ ಗಿರಿಯ
ಸಾನುದೇಶವನಪ್ಪಿ ಚೆಲುವನಾಂತು
ತೋಷದಲಿ ಮಣ್ಣ ಬಗೆವಾಟದಲಿ ತೊಡಗಿರುವ
ಆನೆವೊಲು ಕಣ್ಗೆಸೆದ ಮುಗಿಲೊಂದನು.

ಸೋಜಿಗದಿನಾಸೆಗಳ ಮೊಳೆಸುತಿರ್ದಾ ಮುಗಿಲ
ಮುಂದೆಸೆಯೊಳೆಂತೊ ಬಹು ಪೊಳ್ತು ಕುಳಿತು,
ರಾಜರಾಜಾನುಚರನುಗಿದು ಬಹ ಕಂಬನಿಯ
ಹಿಂದಟ್ಟಿ ತಡೆದು ನೆನಪಿನೊಳಾಳ್ದನು.
ಮುಗಿಲ ನೋಡುವ ವೇಳೆ ಸುಖಿಗಾದರೂ ಜೀವ
ಅನ್ಯಥಾವೃತ್ತಿಯನು ತಾಳ್ವುದೆನಲು
ಬಿಗಿದು ಕೊರಳಪ್ಪುವರನಗಲಿರುವ ವಿರಹಿಗಳ
ಬನ್ನವನು ಇನ್ನು ಬಣ್ಣಿಸುವುದೇನು ?

ಮಳೆಗಾಲ ಬಳಿಸರಿಯೆ ದಯಿತೆ ಜೀವವ ಧರಿಸಿ
ಉಸುರೊಳಿರುವಂತೆಸಗಲೆಂದು ದೀನಂ
ಕಳುಹಲಾಳೋಚಿಸಿದನಾ ಮುಗಿಲ ಮೊಗದಿಂದ
ಕುಶಲಿ ತಾನೆಂಬ ವಾರ್ತೆಯನು ಸತಿಗೆ.

ಇಂತೆಂದು ಕುಟಜಕುಸುಮದ ನವ್ಯಸೂನದಿಂ
ಮುಗಿಲಿಗರ್ಘವ ನೀಡಿ ಪ್ರೀತನಾಗಿ
ಸಂತಸಂ ಬರವೆಂದು ಸ್ವಾಗತವ ಬಯಸುತ್ತೆ
ಸೊಗದ ನುಡಿಯಿಂ ಮುಗಿಲ ನುಡಿಯಿಸಿದನು.

ಹೊಗೆಯಿಂದೆ ಉರಿಯಿಂದೆ ಸಲಿಲಮರುತಗಳಿಂದೆ
ಮೆಯ್ಯ ಪಡೆದಿಹುದೆಂಬ ಮುಗಿಲದೆತ್ತ?
ಬಗೆಯೆ ಪಟುಕರಣಗಳನಳವಟ್ಟ ಜೀವಿಗಳು
ಒಯ್ಯಬಹ ಸಂದೇಶವಿಷಯವೆತ್ತ?
ಇಂತೆಂಬ ತೆರನನೌತ್ಸುಕ್ಯದಲಿ ಯೋಚಿಸದೆ
ಆ ಮುಗಿಲ ಬೇಡಿಕೊಂಡನು ಯಕ್ಷನು.
ಹಂತ ಚೇತನ ಅಚೇತನ ಎರಡರಿದಿರೊಳುಂ
ಕಾಮಾರ್ತರಾದವರ್ ಕೃಪಣರಲ್ತೆ?

ಭಾವಗೀತೆಯಾದದ್ದರಿಂದ ಇಲ್ಲಿ ಕತೆಗೆ ಅವಕಾಶವಿಲ್ಲ. ಆದಕಾರಣ ಕವಿಯು ಯಕ್ಷನ ಹೆಸರು, ಕುಲ, ಗೋತ್ರ, ನಡೆದ ವಿಷಯ ಇವುಗಳಿಗಾಗಿ ಮಾತನ್ನು ವ್ಯರ್ಥಮಾಡದೆ ಭಾವಗೀತೆಯ ನಾಯಕನ ಅವಸ್ಥೆಯನ್ನು ಮಾತ್ರ ತಿಳಿಸಿ ಮುಂದಕ್ಕೆ ಹೊರಡುತ್ತಾನೆ. ಯಕ್ಷನು ವಸತಿ ಮಾಡಿಕೊಂಡಿದ್ದ ಸ್ಥಳವನ್ನು 'ಜನಕತನಯಾಸ್ನಾನ ಪುಣ್ಯೋದಕೇಷು', 'ಸ್ನಿಗ್ಧಚ್ಛಾಯಾ ತರುಷು', 'ರಾಮಗಿರ್ಯಾಶ್ರಮೇಷು' ಎಂದು ವರ್ಣಿಸಿದ್ದಾನೆ. ಸನ್ನಿವೇಶ ಸುಂದರವಾದದ್ದು; ಪಾವನಚರಿತೆಯಾದ ಸೀತಾದೇವಿಯ ನೆನವಿನಿಂದ ವಿಶುದ್ಧವಾದದ್ದು; ವಿರಹಿಹೃದಯಕ್ಕೆ ಶಾಂತಿಯನ್ನು ಕೊಡಬಲ್ಲದು. ಏಕೆಂದರೆ, ಪ್ರಣಯಿಗಳಿಗೆ ವಿರಹ ಹೊಸದಲ್ಲ. ಅಂದು ಆ ದೇವಿಯನ್ನುಳಿದು ಶ್ರೀ ರಾಮನು ಒಂಟಿಯಾಗಿರಲಿಲ್ಲವೆ? ಕೊರಗಲಿಲ್ಲವೆ? ಮರಳಿ ದೇವಿಯ ಜೊತೆ ಸೇರಿ ನೋವನ್ನು ಮರೆಯಲಿಲ್ಲವೆ? ಕಾವ್ಯದ ನೆಲೆ ಈ ಪದ್ಯದಲ್ಲಿ ಸುಲಭವಾಗಿ ಸೂಚಿತವಾಗಿದೆ. ಕೋವಿದನಾದ ಕಲೋಪಾಸಕನು ವಾಚಕವರ್ಗದ ಮುಂದೆ ಕುಳಿತ ಮೇಲೆ ಕಂಠವನ್ನು ಸರಿಮಾಡಿಕೊಳ್ಳುತ್ತ, ವಾದ್ಯವನ್ನು ಶ್ರುತಿಪಡಿಸುತ್ತ, ತಾನು ಕಲೆಯನ್ನು ಸಾಧಿಸಿದ ಕಷ್ಟವನ್ನು ವ್ಯಕ್ತಪಡಿಸುವುದಕ್ಕೆ ತನ್ನ ಅಭ್ಯಾಸದ ವ್ಯಾಯಾಮವನ್ನು ತೋರಿಸುತ್ತ, ಕಾಲಕಳೆಯುವುದಿಲ್ಲ. ನೀರಿನಲ್ಲಡಿಯಿಟ್ಟೊಡನೆ ಜೀವವನ್ನು ಒಳಕ್ಕೆಳೆಯುವ ಮೊಸಳೆಯಂತೆ

ಮೊದಲಲ್ಲೇ ನಮ್ಮನ್ನು ರಸದ ಪ್ರವಾಹದೊಳಕ್ಕೆ ಎಳೆಯುತ್ತಾನೆ. ಇದೇ ರೀತಿಯಲ್ಲಿ ಎರಡನೆಯ ಪದ್ಯದಲ್ಲಿಯೂ ಒಂದು ವಿಚಿತ್ರವಾದ ಚತುರತೆ ಕಾಣುತ್ತದೆ. ಆ ಪರ್ವತ; ಅದರಲ್ಲಿ ಅಬಲಾವಿಪ್ರಯುಕ್ತನಾದ ಕಾಮಿ ಯಕ್ಷ. ಕೈಬಳೆ ಸಡಿಲವಾಗಲು ಅದನ್ನು ಮೇಲಕ್ಕೆ ತಳ್ಳಿ ನಿಲ್ಲಿಸಿ ಕೊಂಡಿದ್ದಾನೆ. ಮುಂಗೈ ಬರಿದಾಗಿ ಕಾಣುತ್ತಿದೆ. ಆಷಾಢಮಾಸದ ಮೊದಲನೆಯ ದಿವಸ; ಪರ್ವತದ ತಪ್ಪಲನ್ನು ಅಪ್ಪಿರುವಂತೆ ಹೊಂದಿ ಕೊಂಡು ಒಂದು ಮೋಡ. ಅದು ಆನೆಯ ಬಣ್ಣವಾಗಿದೆ; ಮಣ್ಣನ್ನು ಅಗೆಯುವ ಆನೆಯಂತೆ ಚಲಿಸುತ್ತ ಸುಂದರವಾಗಿ ಕಾಣುತ್ತಿದೆ. ಅದನ್ನು ಯಕ್ಷನು ನೋಡುತ್ತಾನೆ. ಇಲ್ಲಿ ನಾಯಕನ ಪ್ರಕೃತಸ್ಥಿತಿಯು ಕಾಲ ದೇಶ ಅವಸ್ಥೆಗಳೊಡನೆ ಒಂದು ಚಿತ್ರದಲ್ಲಿ ಎಂಬಂತೆ ಚಿತ್ರಿಸಲ್ಪಟ್ಟಿದೆ. ರೇಖೆ ಗಳೆಲ್ಲ ಸ್ಪಷ್ಟವಾಗಿವೆ, ನಯವಾಗಿವೆ. ಚಿತ್ರದ ಭಾಗಗಳಲ್ಲಿ ಸಾಮರಸ್ಯವಿದೆ. ಪರ್ವತ ಋತು ಮೇಘಗಳು ಹಿರಿಯವು; ಆದರೂ ಹಿರಿದೆಂದು ವರ್ಣಿ ಸಲ್ಪಟ್ಟಿರುವ ಅಳಲಿನಿಂದ ಯಕ್ಷನು ಅವುಗಳ ಮಧ್ಯೆ ಕರಗಿಹೋಗದೆ ಹಿರಿದಾಗಿ ಕಾಣುತ್ತಿದ್ದಾನೆ. ಮೂರನೆಯ ಪದ್ಯದಲ್ಲಿ ವಿಷಯ ಹಿತವಾಗಿ ಮುಂದುವರಿಯುತ್ತದೆ. ಮನಸ್ಸಿನಲ್ಲಿ ಆಸೆಯನ್ನು ಮೊಳೆಯಿಸುವಂಥ ಮೋಡದ ಮುಂದೆ ಹೇಗೋ ಕುಳಿತು ಯಕ್ಷನು ಕಣ್ಣೀರನ್ನು ತಡೆದು ಕೊಳ್ಳುತ್ತ ಧ್ಯಾನಮಗ್ನನಾದನು. ಕವಿ ಹೀಗೆಂದು ಹೇಳಿ, ಪ್ರಿಯೆ ಜೊತೆ ಯಲ್ಲಿರುವ ಪ್ರಣಯಿಗಳಿಗೇ ಜೀವ ತೂಗಾಡುವಂಥ ಈ ಕಾಲದಲ್ಲಿ ವಿರಹಿ ಜನರ ಮಾತೇನು? ಎಂದು ತನ್ನ ಅನುಭವದ ವಿಸ್ತಾರವನ್ನು ಸೂಚಿಸು ತ್ತಾನೆ. ಯಕ್ಷನು ನೆನೆದನು ಎಂದು ಕವಿ ಹೇಳಿದ್ದಾನೆಯೇ ಹೊರತು ಏನನ್ನು ನೆನೆದನೆಂದು ಹೇಳುವುದಿಲ್ಲ. ಯಕ್ಷನು ಆಮೇಲೆ ಹೇಳುವ ಮಾತಿನಿಂದ ಅದನ್ನು ನಾವು ಊಹಿಸಬಹುದು. ರಾಮಗಿರಿಯಲ್ಲಿ ನಿಂತು ಉತ್ತರದ ಕಡೆಗೆ ನೋಡುತ್ತ ವಿರಹಿಯ ಮನಸ್ಸು ಅಲಕಾನಗರಿಯನ್ನು ಸೇರಿತು. ದೂರದ ಆ ಭೋಗಪುರಿಗೆ, ತಾನು ನಿಂತಿರುವ ಈ ರಾಮ ಗಿರಿಗೆ, ಎಷ್ಟು ಅಂತರ! ದಾರಿಯ ಅಂತರ; ಅವಸ್ಥೆಯ ಅಂತರ. ಯಕ್ಷನ ಮನಸ್ಸು ದಾರಿಯ ವನಗಳನ್ನೂ ಗಿರಿಗಳನ್ನೂ ನದಿಗಳನ್ನೂ ನಗರಗಳನ್ನೂ ನೆನೆದು ನೋಡುತ್ತ ಎಲ್ಲ ಕಡೆಯೂ ಪ್ರೇಮದ ಹಲವು

ತೆರದ ವ್ಯಾಪಾರಗಳನ್ನು ಕಾಣುತ್ತ ಎಲ್ಲ ಸೌಂದರ್ಯ ಎಲ್ಲ ಪ್ರೇಮದ ಆವಾಸವಾದ ಅಲಕೆಯನ್ನು ಸೇರಿ ತನ್ನ ಪಾಲಿಗೆ ಅಲ್ಲಿ ಮುಖ್ಯವಾದ ತನ್ನ ಸತಿಯಿರುವ ಗೃಹದಲ್ಲಿ ನಿಂತಿತು; ತನಗಾಗಿ ಕೊರಗುತ್ತಿರುವ ಆ ಸತಿಯ ಅವಸ್ಥೆಯನ್ನು ಕಣ್ಣಿಂದ ಕಂಡಂತೆ ಕಂಡು ಕಂದಿತು; ನೋವಿನಿಂದ ಕಣ್ಣಿನಲ್ಲಿ ನೀರು ಚಿಮ್ಮಲು ಈ ದೈನ್ಯ ತಕ್ಕುದಲ್ಲವೆಂದು ಅದನ್ನು ತಡೆಯಿತು. ಈ ಪದ್ಯದಲ್ಲಿ ಭಾವ ಹುದುಗಿರುವ ರೀತಿ ಅದ್ಭುತವಾಗಿದೆ; ಕಾಳಿದಾಸನು ತನ್ನ ಜೀವನದ ಯಾವುದೋ ಒಂದು ನೆನಪನ್ನೇ ವಸ್ತುವಾಗಿ ತೆಗೆದುಕೊಂಡನೋ ಎಂಬ ಕಲ್ಪನೆಯನ್ನು ಉಂಟುಮಾಡುತ್ತದೆ. ನಾಲ್ಕನೆಯ ಪದ್ಯದಲ್ಲಿ ಯಕ್ಷನು ದುಃಖಿತೆಯಾದ ಸತಿಗೆ ತನ್ನ ವೃತ್ತಾಂತವನ್ನು ತಿಳಿಸ ಬಯುಸಿ ಅವಳು ಜೀವಂತಳಾಗಿರುವಂತೆ ಮಾಡೋಣವೆಂದು ಉದ್ಯುಕ್ತನಾದದ್ದು ಉಕ್ತವಾಗಿದೆ. ತನ್ನ ನೋವಿನಿಂದ ಇತರರ ವಿಷಯದಲ್ಲಿ ಕನಿಕರಗೊಳ್ಳುವ ಉದಾರ ಹೃದಯನು ಇವನು. ಅಲ್ಲದೆ ಎಷ್ಟು ದುಃಖದಲ್ಲಾದರೂ ವಿನಯವನ್ನು ಮರೆಯದವನು. ಮೇಘವನ್ನು ಮಾತನಾಡಿಸಿ ತನ್ನ ಕೆಲಸಮಾಡಬೇಕೆಂದು ಯೋಚಿಸುತ್ತಾನೆ; ಅದನ್ನು ಪ್ರಾರ್ಥಿಸುವ ಮೊದಲು ಅಭಿನವ ಮಲ್ಲಿಕಾಕುಸುಮದಿಂದ ಅದಕ್ಕೆ ಅಂಜಲಿಯನ್ನು ಕೊಡುತ್ತಾನೆ, ಸ್ವಾಗತವನ್ನು ಬಯುಸುತ್ತಾನೆ. ಐದನೆಯ ಪದ್ಯದಲ್ಲಿ ಕವಿಯು ಯಕ್ಷನ ಹುಚ್ಚುತನವೆಂದು ಕಾಣಬಹುದಾದ ಈ ಪ್ರಯತ್ನವನ್ನು ಸಹಾನುಭೂತಿ ಸೂಚಕವಾದ ನಾಲ್ಕು ಮಾತುಗಳಿಂದ ಸಮರ್ಥಿಸುತ್ತಾನೆ; ಓದುವವರು ಅದನ್ನು ಮನ್ನಿಸುವಂತೆ ಮಾಡುತ್ತಾನೆ. ಅಚೇತನವಾದ ಮೋಡವು ಸಂದೇಶವನ್ನು ಹೇಗೆ ಒಯ್ಯಬಹುದು? ನಿಜ. ಒಯ್ಯಲಾರದು. ಆದರೆ ಸಂದೇಶ ಹೇಳುವವನಿಗೆ ಇದು ಮುಖ್ಯವಲ್ಲ. ಪ್ರಣಯಿಯು ತನ್ನ ನೋವಿನ ಹೊರೆಯನ್ನು ಇಳಿಸಿಕೊಳ್ಳಬೇಕು. ಈ ಆತುರಕ್ಕೆ ಚೇತನಾಚೇತನಗಳ ವಿವೇಚನೆಯಿಲ್ಲ. ಪ್ರಣಯಿಯು ಎಲ್ಲದರ ಮುಂದೂ ದೀನನಾಗಿ ಹೋಗುತ್ತಾನೆ. ಮೋಡಕ್ಕೆ ಕೆಲಸ ಹೇಳುವ ಗತಿಗೆ ಬಂದ ಯಕ್ಷನ ಪ್ರೇಮ ಎಂಥದೆಂದು ನಾವು ಇದರಿಂದ ಊಹಿಸಬೇಕು. ಕವಿಗೆ ಯಕ್ಷನ ವಿಷಯದಲ್ಲಿ ಬಹಳ ಮರುಕ; ನೀವೂ ಮರುಗಿ ಎಂದು ಅವನು ನಮಗೆ ಹೇಳುತ್ತಾನೆ. ಹೀಗೆ ಅವನು ನಮಗೆ

ಕಾವ್ಯದ ನಾಯಕನ ಪ್ರೇಮಸಮಾಧಿಯ ಕಲ್ಪನೆಯನ್ನು ಉಂಟುಮಾಡಿ ಕೊಡುತ್ತಾನೆ.

ಮುಂದಣ ಪದ್ಯಗಳಲ್ಲಿ ಈ ಗುಣಗಳೆಲ್ಲ ಪುನಃಪುನಃ ಕಾಣುತ್ತವೆ. ಇವುಗಳಲ್ಲಿ ಮೊದಲನೆಯದು ಕವಿಯ ಚಿತ್ರಕಲಾಶಕ್ತಿ. ನೀನು ಯಕ್ಷೇಶ್ವರರ ಅಲಕಾ ಎಂಬ ನಗರಿಗೆ ಹೋಗತಕ್ಕವನು ಎಂದು ಹೇಳಿ ಯಕ್ಷನು ಆ ನಗರವು 'ಬಾಹ್ಯೋದ್ಯಾನಸ್ಥಿತ ಹರಶಿರಶ್ಚಂದ್ರಿಕಾಧೌತಹರ್ಮ್ಯಾ' ಎಂದು ವರ್ಣಿಸುತ್ತಾನೆ. ಅಲಕಾನಗರಿಯು ಕೈಲಾಸದ ತಪ್ಪಲಲ್ಲಿ ಇರತಕ್ಕದ್ದು. ಕೈಲಾಸನಾಥ ಶ್ರೀ ಸೋಮೇಶ್ವರನ ಶಿರದ ಚಂದ್ರನ ಬೆಳಕು ಆ ನಗರದಮೇಲೆ ಸದಾ ಬೀಳುತ್ತಿರುತ್ತದೆ. ಕೈಲಾಸವು ಬಹಳ ಶ್ರೇಷ್ಠವಾದ ಸ್ಥಾನ. ಅಲಕೆ ಅದರ ಆಶ್ರಯದಲ್ಲಿದೆ. ಆದರೂ ಅಭಿಮಾನಿಯಾದ ಅಲಕಾನಗರವಾಸಿಗೆ ಕೈಲಾಸವು ತನ್ನ ನಗರದ ಉದ್ಯಾನದ ಭಾಗದಂತೆ ಕಾಣುವುದು. 'ಬಾಹ್ಯೋದ್ಯಾನಸ್ಥಿತ ಹರಶಿರಶ್ಚಂದ್ರಿಕಾ ಧೌತಹರ್ಮ್ಯಾ' ಎಂಬ ಮಾತಿನಿಂದ ಎಂಥ ಚಿತ್ರ ಆಗುತ್ತದೆಂಬುದು ಸನ್ನಿವೇಶವನ್ನು ಊಹಿಸಿದರೆ ತಿಳಿಯುವುದು. ಹರ್ಮ್ಯಗಳು ಬಿಳುಪು; ಕೈಲಾಸಗಿರಿಯು ಬಿಳುಪು; ಸೋಮೇಶ್ವರನು ಮಲ್ಲಿಕಾರ್ಜುನನು; ಅವನ ಸತಿ ಗೌರೀದೇವಿ; ಬಳಿಯಲ್ಲಿ ಗಂಗೆ ದುಕೂಲದಂತೆ ಶುಭ್ರವಾಹಿನಿಯಾಗಿ ಹರಿಯುತ್ತಿದ್ದಾಳೆ; ಈ ಒಂದೊಂದು ಚಿತ್ರವನ್ನೂ ಕವಿಯು ಆಯಾ ಸ್ಥಳದಲ್ಲಿ ಸಂಪೂರ್ಣವಾಗಿ ವರ್ಣಗಳಿಂದ ಚಿತ್ರಿಸಿದ್ದಾನೆ. ಕೈಲಾಸವು ದೇವವನಿತೆಯರ ದರ್ಪಣ; ಕುಮುದ ವಿಶದವಾದ ಉಚ್ಛ್ರಿತಶೃಂಗಗಳಿಂದ ಆಕಾಶವನ್ನು ವ್ಯಾಪಿಸಿ ನಿಂತಿದೆ; ತ್ರ್ಯಂಬಕನ ಆನಂದಾತಿಶಯದ ಅಟ್ಟಹಾಸವೇ ದಿನದಿನವೂ ರಾಶಿ ಸೇರಿ ಬೆಟ್ಟವಾಯಿತು ಎಂಬಂತೆ ಕಾಣುತ್ತದೆ. ಇಲ್ಲಿ ಒಂದು ಪಂಕ್ತಿಯಲ್ಲಿ ವರ್ಣಿಸಿದ ಅಲಕಾನಗರಿಗೆ ಕವಿ ಮುಂದೆ ಒಂದು ಪದ್ಯವನ್ನು ಕೊಟ್ಟಿದ್ದಾನೆ. ಆ ವರ್ಣನೆಯು ಇದರಂತೆಯೇ ಅನ್ಯಾದೃಶವಾದ ಭಾವನಾಶಕ್ತಿಯನ್ನು ತೋರಿಸುತ್ತದೆ:

ತಸ್ಯೋತ್ಸಂಗೇ ಪ್ರಣಯಿನ ಇವ ಸ್ರಸ್ತಗಂಗಾದುಕೂಲಾಂ
ನ ತ್ವಂ ದೃಷ್ಟ್ವಾ ನ ಪುನರಲಕಾಂ ಜ್ಞಾಸ್ಯಸೇ ಕಾಮಚಾರಿನ್
ಯಾ ವಃ ಕಾಲೇ ವಹತಿ ಸಲಿಲೋದ್ಗಾರಮುಚ್ಚೈರ್ವಿಮಾನಾ
ಮುಕ್ತಾಜಾಲಗ್ರಥಿತಮಲಕಂ ಕಾಮಿನೀವಾಭ್ರಬೃಂದಂ.

ಕೈಲಾಸ ಪರ್ವತದ ನಡುತಪ್ಪಲಲ್ಲಿ ಅಲಕಾನಗರಿ ಪ್ರಿಯನ ತೊಡೆಯ ಮೇಲೆ ಕುಳಿತ ಕಾಮಿನಿಯಂತೆ ಇದೆ. ಪಕ್ಕದಲ್ಲಿ ಶುಭ್ರಜಲದಿಂದ ಎಸೆಯುವ ಗಂಗಾನದಿ; ಆ ಪ್ರಿಯೆಯ ಮೈಯಿಂದ ಸರಿದು ಬಿದ್ದ ದುಕೂಲದಂತಿದೆ. ವರ್ಷಾಕಾಲದಲ್ಲಿ ನಗರದ ವಿಮಾನಗಳ ಬಳಿ ಮೋಡಗಳು ನೆರೆದು ಮಳೆ ಸುರಿಯಲು ಬಿಳಿಯ ವಿಮಾನ, ಕರಿಯ ಮೋಡ, ಬೆಳ್ಳಗೆ ಸೋರುತ್ತಿರುವ ನೀರಹನಿ ಇದೆಲ್ಲ ಸೇರಿ ಸುಂದರಿ ಯೊರ್ವಳು ತುರುಬಿನಲ್ಲಿ ಮುತ್ತಿನ ಸರಗಳನ್ನು ಸೇರಿಸಿ ಕಟ್ಟಿಕೊಂಡ ರೀತಿಯಲ್ಲಿ ಕಾಣುವುದು. ಇನ್ನೊಂದು ಕಡೆ ಕವಿಯು, ಕಾಮನಬಿಲ್ಲಿನ ಏಳು ವರ್ಣಗಳಿಂದ ಶೋಭಿಸುವ ಮೋಡವು ನವಿಲಗರಿಯಿಂದ ಸ್ಫುರಿತ ವಾದ ಕಾಂತಿಯುಳ್ಳ ಗೋಪಾಲಕೃಷ್ಣನಂತೆ ಕಾಣುವುದೆನ್ನುತ್ತಾನೆ. ಮತ್ತೊಂದು ಕಡೆ, ಸುರುಳಿಯಾಗಿ ಸುತ್ತಿ ಮೇಲಿಂದ ಬಿದ್ದಿರುವ ಮೋಡ ದಿಂದ ಬಿಳುಪಾದ ಕೈಲಾಸ ಪರ್ವತತಟವು ನೀಲವಾದ ವಸ್ತ್ರವನ್ನು ಹೆಗಲಲ್ಲಿ ಧರಿಸಿರುವ ಬಲರಾಮನಂತೆ ಕಾಣುತ್ತದೆ ಎನ್ನುತ್ತಾನೆ.

ಇದೆಲ್ಲ ಊಹೆಯಿಂದ ತಿದ್ದಿದ ಸೌಂದರ್ಯದ ವರ್ಣನೆ. ಕವಿಯು ವಾಸ್ತವವಾದ ರೀತಿಯಲ್ಲಿ ಸೌಂದರ್ಯವನ್ನು ಚಿತ್ರಿಸಿರುವುದೂ ಹೀಗೆಯೇ ಆನಂದದಾಯಕವಾಗಿದೆ. ಇದು ಯಕ್ಷನ ಗೃಹವನ್ನು ವರ್ಣಿಸು ವಲ್ಲಿ ಸ್ಪಷ್ಟವಾಗಿ ಕಾಣುತ್ತದೆ. "ಅಲ್ಲಿ ಧನಪತಿ ಗೃಹದ ಉತ್ತರದಲ್ಲಿ ನನ್ನ ಮನೆಯಿದೆ. ಕಾಮನಬಿಲ್ಲಿನ ರೀತಿ ಸುಂದರವಾದ ಅದರ ಹೊರ ಬಾಗಿಲು ದೂರಕ್ಕೆ ಕಾಣುತ್ತದೆ. ಅದರ ಆವರಣದ ಮೂಲೆಯಲ್ಲಿ ಕೈಗೆ ಎಟುಕುವಂತೆ ಹೂತೊಂಗಲುಗಳಿಂದ ಬಾಗಿ ನನ್ನ ಪತ್ನಿ ಸಾಕು ಮಗುವಂತೆ ಬೆಳೆಸಿರುವ ಬಾಲಮಂದಾರ ವೃಕ್ಷವಿದೆ. ಅಲ್ಲಿ ಮರಕತ ಶಿಲೆಯಿಂದ ಕಟ್ಟಿದ ಸೋಪಾನ ಮಾರ್ಗದ ಕೊಳವಿದೆ. ಸ್ನಿಗ್ಧ ವೈಡೂರ್ಯ ನಾಳಗಳ ಕೊನೆಯಲ್ಲಿ ಅರಳಿರುವ ಹೊಂದಾವರೆಗಳಿಂದ ಅದು ಹೊದೆದಿದೆ. ಅದರಲ್ಲಿ ಹಂಸಗಳು. ನೀನು ಬಂದಾಗಲೂ ಅವು ಮಾನಸ ಸರೋವರವನ್ನು ನೆನೆದುಕೊಳ್ಳುವುದಿಲ್ಲ. ಕೊಳವು ಅಷ್ಟು ರಮ್ಯವಾಗಿದೆ. ಆ ಕೊಳದ ಪಕ್ಕದಲ್ಲಿ ಕನಕಕದಳೀ ವೃಕ್ಷಗಳ ವೇಷ್ಟನ ದಿಂದ ಕಂಗೊಳಿಸುತ್ತ ಸುಂದರ ಇದ್ರನೀಲದಿಂದ ಮಾಡಿದ ಶಿಖರವನ್ನುಳ್ಳ

ಕ್ರೀಡಾಶೈಲವಿದೆ. ಅದು ಮಿಂಚಿನಿಂದ ಕೂಡಿರುವ ಅಂಚುಳ್ಳ ನಿನ್ನಂತೆ ಶೋಭಿಸುತ್ತದೆ. ಅಲ್ಲೇ ಒಂದು ರಕ್ತಾಶೋಕ, ಒಂದು ಕೇಸರವೃಕ್ಷ ಇವೆ. ಮತ್ತೆ ಅಲ್ಲೇ ಒಂದು ಮಾಧವೀ ಮಂಟಪ. ಅದರ ಮಧ್ಯೆ ಸ್ಫಟಿಕದ ಜಗುಲಿಯ ಮೇಲೆ ಬುಡದಲ್ಲಿ ಎಳೆಬಿದುರಿನ ವರ್ಣದ ಮಣಿಗಳಿಂದ ಕಟ್ಟಿದ ಚಿನ್ನದ ವಾಸಯಷ್ಟಿ ಇದೆ. ಕೈಬಳೆಗಳ ಮಂಜುಳ ನಾದದಿಂದ ಚಪ್ಪಾಳೆಗುಟ್ಟುತ್ತ ನನ್ನ ಕಾಂತೆ ಕುಣಿಯಿಸುವ ನವಿಲೊಂದು ಅದರ ಮೇಲೆ ಆಡುತ್ತದೆ. ಇದೆಲ್ಲವನ್ನೂ ಮತ್ತು ಬಾಗಿಲ ಬಳಿ ಬರೆದಿರುವ ಶಂಖಪದ್ಮಗಳನ್ನೂ ನೋಡಿ ನೀನು ನನ್ನ ಗೃಹವನ್ನು ಗುರುತಿಸು. ನಾನು ಇಲ್ಲದುದರಿಂದ ಆ ಮನೆ ಈಗ ಮಂಕಾಗಿರಬೇಕು. ಸೂರ್ಯನು ಇಲ್ಲದಿರುವಾಗ ಕಮಲವು ಕಳೆಯಿಂದ ಕೂಡಿರಲಾರದಷ್ಟೆ?"

ಸ್ಥಲ ಸೌಂದರ್ಯವನ್ನೂ ಸನ್ನಿವೇಶ ಸೌಂದರ್ಯವನ್ನೂ ಮನ ಮುಟ್ಟಿಸುವುದಕ್ಕೆ ಕವಿಯು ಉಪಮೆ ಉತ್ಪ್ರೇಕ್ಷೆಗಳನ್ನು ಧಾರಾಳವಾಗಿ ಉಪಯೋಗಿಸಿದ್ದಾನೆ. ಕಾಳಿದಾಸನ ಉಪಮೆ ಸಾಹಿತ್ಯದಲ್ಲಿ ಪ್ರಸಿದ್ಧವಾದದ್ದು. ಇಲ್ಲಿ ಹಲವು ಈ ಉತ್ತಮ ತರಗತಿಗೆ ಸೇರಿದುವು. ಪರ್ವತದ ತಪ್ಪಲಲ್ಲಿ ಚಲಿಸುತ್ತಿದ್ದ ಮೋಡವು ವಪ್ರಕ್ರೀಡೆಯಲ್ಲಿ ತೊಡಗಿದ ಆನೆಯಂತೆ ಇತ್ತು. ಕೈಲಾಸದ ಉಪತಟದ ವರ್ಣ ಆಗತಾನೆ ಕಡಿದ ಗಜದಂತದ ಹಾಗೆ ಇದೆ. ಎಷ್ಟು ದುಃಖ ಬಂದರೂ ಹೆಂಗಸು ಆಸೆಯಿಂದ ಜೀವಿಸಿರುವಳು; ಇನ್ನೇನು ಬಿದ್ದುಹೋಗುವುದು ಎಂಬಂತಿರುವ ಕುಸುಮಕ್ಕೆ ಸಮಾನವಾದ ಅಂಗನೆಯರ ಪ್ರಣಯ ಹೃದಯವನ್ನು ಆಶೆಯ ಬಂಧವು ಹಿಡಿದಿರುತ್ತದೆ. ಹೃದಯವು ಕುಸುಮವೆನ್ನುವುದೂ, ಆಸೆಯೆನ್ನುವುದು ಅಂಥ ಹೂವನ್ನು ಬೀಳದಂತೆ ವೃಂತದಲ್ಲಿ ನಿಲ್ಲಿಸಿಕೊಂಡಿರುವ ಬಂಧವೆನ್ನುವುದೂ ಕವಿಯ ಉದ್ದೇಶವನ್ನು ಸಂಪೂರ್ಣವಾಗಿ ಪ್ರಕಟಿಸುತ್ತವೆ. ದಶಪುರಿಯ ತರುಣಿಯರ ಕಣ್ಣುಗಳು "ಕುಂದಕ್ಷೇಪಾನುಗ ಮಧುಕರ ಶ್ರೀಮುಷಾ" ಎಂದು ವರ್ಣಿಸಿದೆ. ಮೇಘವು ರಮಣನ ವೃತ್ತಾಂತವನ್ನು ತಂದವೇಳೆ ಶುಭಸೂಚಕವಾಗಿ ಯಕ್ಷನ ಸತಿಯ ಕಣ್ಣುರೆಪ್ಪೆ ಅದುರುವುದು ಮೀನು ಸೋಕುವುದರಿಂದ ಕುವಲಯ ಅದುರುವಂತಿರುವುದೆಂದು ಹೇಳಿದೆ. ಇದು ಸುಂದರವಾದ ಉಪಮೆ;

ರಾಮಾಯಣದಲ್ಲಿ ಶ್ರೀರಾಮನು ಅರಣ್ಯಕ್ಕೆ ಹೊರಟಾಗ ಅಯೋಧ್ಯೆಯ ಸ್ತ್ರೀಯರು ಕಣ್ಣುಹನಿ ಹಾಕಿದರೆಂಬುದನ್ನು ವರ್ಣಿಸಿರುವ ಉಪಮೆಯನ್ನು ನೆನವಿಗೆ ತರುತ್ತದೆ. ಪತ್ನಿಯ ಹೃದಯವನ್ನು ಕುಸುಮಕ್ಕೆ ಹೋಲಿಸಿರುವಂತೆ ಕವಿ ಯಕ್ಷನ ಹೃದಯವನ್ನೂ ಒಂದು ಕುಸುಮಕ್ಕೆ ಹೋಲಿಸಿದ್ದಾನೆ. "ನನ್ನ ಪತ್ನಿಯ ಉತ್ತರವನ್ನು ನನ್ನ ಬಳಿ ತಂದು ಪ್ರಾತಃ ಕುಂದಪ್ರಸವ ಶಿಥಿಲವಾದ ನನ್ನ ಜೀವವನ್ನು ನಿಲ್ಲಿಸು." ಈ ಕಾವ್ಯದ ಉತ್ಪ್ರೇಕ್ಷೆಗಳೂ ಈ ಉಪಮೆಗಳಂತೆಯೇ ರಸವತ್ತಾಗಿವೆ. ಬಿಳಿದಾದ ಕೈಲಾಸಪರ್ವತವು ತ್ರ್ಯಂಬಕನ ಅಟ್ಟಹಾಸದ ರಾಶಿಯಂತೆ ಇದೆ. ರಾಮಗಿರಿಯು ಒಂದೊಂದು ವರ್ಷಾಕಾಲದಲ್ಲೂ ಮೋಡದ ಸಂಯೋಗದಿಂದ ಬಹುದಿನ ಬಿಟ್ಟಿದ್ದ ಪ್ರಿಯವಸ್ತು ಬಂದಕಾರಣ ಬಿಸಿನೀರನ್ನು ಬಿಡುತ್ತದಂತೆ. ಕಾದ ಕಲ್ಲಿನ ಮೇಲೆ ಬಿದ್ದ ನೀರು ಸ್ವಲ್ಪ ಬಿಸಿಯಾಗಿ ಹರಿಯುವುದು ಕಾವ್ಯದಲ್ಲಿ ಸ್ನೇಹವ್ಯಂಜಕವಾದ ಸ್ವಲ್ಪ ಉಷ್ಣವಾದ ಬಾಷ್ಪವಾಗಿದೆ. ಸೋತು ಸೋತು ಶಿಖರಗಳ ಮೇಲೆ ಅಡಿಯಿಟ್ಟು ಹೋಗುವುದಂತೆ ಮೋಡ. ಸಾಮಾನ್ಯವಾಗಿ ಮಳೆಗಾಲದ ಮೋಡದ ಓಟ ಹೀಗೆಯೇ. ಅದು ಕವಿಗೆ ಆಯಾಸದ ಫಲವೆಂದು ಕಾಣುತ್ತದೆ. ಗಂಗೆಯನ್ನು ಸೇರು ಎಂದು ಕವಿಯು ಹೇಳುತ್ತಾನೆ:

ಇನ್ನದರ ಮುಂದೆ ಕನಖಲದ ಸಾರೆಯೊಳೈದು
  ಹಿಮಗಿರಿಯ ಮೇಲಿನಿಂದವತರಿಸುವ
ಜಹ್ನುಋಷಿಕನ್ಯೆ ಆ ಸಗರನೃಪತಿಯ ಸುತರು
  ದಿವವೇರ್ದ ಸೋಪಾನಪಂಕ್ತಿಯನ್ನು;
ಗೌರೀಮುಖ ಭ್ರುಕುಟರಚನೆಯನು ನೊರೆಯಿಂದ
  ನಗುವಂತೆ ತೋರ್ದು ಚಂದ್ರನ ಮುಟ್ಟಿದ
ಪೇರಲೆಯ ಕೈಯಿಂದೆ ಶಂಭುವಿನ ಕೇಶವನು
  ಅಗಡುಹಿಡಿದಂತೆಸೆವ ದಿವಿಜನದಿಯ.

ಗಂಗೆಯಿಂದ ಸಗರಪುತ್ರರು ಸ್ವರ್ಗವೇರಿದರೆಂದು ಪುರಾಣದ ಕತೆ. ಆ ಏರುವುದು ಎನ್ನುವುದರಿಂದ ಅವಳು ಇಳಿದ ದಾರಿ ಕವಿಗೆ ಅವರು ಸ್ವರ್ಗಕ್ಕೇರುವ ಸೋಪಾನವಾಯಿತು. ನಭೋಮಂಡಲದಲ್ಲಿ ಶಿವನಿರುವ ಸ್ಥಳದಲ್ಲಿ ಚಂದ್ರನೂ ಗಂಗೆಯ ಅಲೆಗಳೂ ಇವೆ. ಗಂಗೆಯ ಶುಭ್ರವಾದ ನಿರ್ಮಲವಾದ ಪ್ರವಾಹದ ನೊರೆಯು ಬೆಳ್ಳನೆ ನಗೆಯಂತೆ ಕಾಣುತ್ತದೆ.

ಅಲೆ ಚಂದ್ರನನ್ನು ಹಿಡಿದಿರುವಂತೆ ಕಾಣುತ್ತದೆ. ಇದೆಲ್ಲ ಸೇರಿ ಕವಿಗೆ ಶಿವನ ಸಂಸಾರದ ಒಳಜಗಳದ ಒಂದು ಚಿತ್ರ ಎದುರಿಗೆ ಬಂದಿದೆ.

ಕಾವ್ಯದ ಮೊದಲ ಪದ್ಯಗಳಲ್ಲಿ ಸೂಚಿಸಿರುವ ಪ್ರೇಮಸಮಾಧಿಯ ಭಾವವು ಕಾವ್ಯದಲ್ಲಿ ಉದ್ದಕ್ಕೂ ಚಿತ್ರಿಸಲ್ಪಟ್ಟಿದೆ. ಪ್ರಿಯೆಯನ್ನಗಲಿ ಅವಳ ಸಹವಾಸವನ್ನು ಬಯಸುತ್ತಿರುವ ಯಕ್ಷನಿಗೆ ಎಲ್ಲೆಲ್ಲಿಯೂ ಕಾವ್ಯದ ವಸ್ತು, ಎಲ್ಲೆಲ್ಲಿಯೂ ಪ್ರೇಮದ ವ್ಯಾಪಾರಗಳೇ ಕಾಣುತ್ತವೆ. ಸುತ್ತ ಕಾನನಾಮ್ರಗಳಿಂದ ಪಾಂಡುವರ್ಣವಾಗಿ ಮಧ್ಯೆ ಶಿಖರದಲ್ಲಿ ಮೋಡ ಕುಳಿತು ಕಪ್ಪಗೆ ಕಾಣುವ ಆಮ್ರಕೂಟಗಿರಿಯು ಅಮರ ಮಿಥುನ ಗಳಿಗೆ ಭೂಮಿಯ ಸ್ತನದಂತೆ ಪ್ರೇಕ್ಷಣೀಯವಾಗುತ್ತದಂತೆ. ಮೋಡ ಗುಡುಗಿದಾಗ ಆಕಾಶಗಾಮಿಗಳಾದ ಸಿದ್ಧರನ್ನು ಅವರ ಸಹಚರಿಯರು ಆಲಿಂಗಿಸಿಕೊಳ್ಳುತ್ತಾರೆ. ಆದ್ದರಿಂದ ಸಿದ್ಧರಿಗೆ ಮೋಡದ ಮೇಲೆ ಅಭಿಮಾನ. ಮೋಡವು ವೇತ್ರವತಿಯ ತೀರವನ್ನು ಸೇರಿ, ಅದರ ರಸವನ್ನು ಹೀರಿ, ಕಾಮುಕತ್ವದ ಅವಿಕಲ ಫಲವನ್ನು ಪಡೆಯುತ್ತದೆ. ಉಜ್ಜಯಿನಿಯ ಚಿಕ್ಕ ಬೆಟ್ಟದಲ್ಲಿ ಪಣ್ಯಸ್ತ್ರೀರತಿಪರಿಮಳವನ್ನು ಕಾರು ತ್ತಿರುವ ಕಂದರಗಳು ನಗರದ ಭೋಗಿಗಳ ಉದ್ದಾಮ ಯೌವನವನ್ನು ಪ್ರಕಟಿಸುತ್ತವೆ.

ಎಲ್ಲಿ ಶಿಪ್ರಾ ನದಿಯ ಮಾರುತನು ಉದಯದಲಿ
  ಸಾರಸಂಗಳ ಮತ್ತಮಧುರಮಾದ
ಬಲ್ಲುಲಿಯ ನಿಡಿದಾಗಿ ಬೆಳೆಯಿಸುತೆ ಬಿರಿದೆರೆವ
  ನೀರೇಜದಿಂದೆ ನರುಗಂಪನಾಂತು
ಕಾಮಿನಿಯರೊಡಲಿಗನುಕೂಲಭಾವದಿ ಸುಳಿದು
  ಚಾಟುವಚನವ ನುಡಿದು ಬೇಡುತಿರುವ
ಪ್ರೇಮಿಯವೊಲವರ ಚೇತನಗಳನು ಸಂತಯಿಸಿ
  ಬೇಟದಾಯಾಸವನು ಕಳೆಯುತಿಹನು.

ಅಲ್ಲಿಯೂ ನಮ್ಮ ಈ ಮೇಘದೂತನು ಹೋಗಬೇಕು. ಶಿಪ್ರಾವಾತವು ಪ್ರಿಯತಮನಂತೆ ತರುಣಿಯರ ಸುರತ ಗ್ಲಾನಿಯನ್ನು ನಿವಾರಿಸುತ್ತದೆ. ಹಾಗೆಯೇ ಗಂಭೀರಾ ಒಂದು ಹೆಣ್ಣು; ಅದರ ನೀರು ಸರಿದುಹೋದ ನೀಲವಸನ; ತೀರದ ಬಿದುರಕೊಂಬೆ ಅದನ್ನು ಹಿಡಿದಿರುವ ಕೈ; ದಡವೇ ನಿತಂಬ. ಹೀಗೆ ಈ ಪ್ರೇಮಿಗೆ ಎಲ್ಲೆಲ್ಲಿಯೂ ಪ್ರಣಯದ ವ್ಯಾಪಾರವೇ

ಕಾಣುತ್ತದೆ. ತಾನು ದುಃಖಿತನಾದದ್ದರಿಂದ ಇವನಿಗೆ ಎಲ್ಲ ಪ್ರೇಮಿಗಳಲ್ಲಿಯೂ ಸಹಾನುಭೂತಿ, ಕನಿಕರ. ನಿರ್ವಿಂಧ್ಯೆ ವಿಭ್ರಮಮಾತ್ರದಿಂದ ಮೋಡದಲ್ಲಿ ತನಗಿರುವ ಪ್ರೀತಿಯನ್ನು ತೋರಿಸುವಳು. ಅವಳು ವಿರಹದಿಂದ ಕೃಶಳಾಗಿದ್ದಾಳೆ. ಮೋಡವು ಅವಳಿಗೆ ಆ ಕಾರ್ಶ್ಯಹೋಗುವಂತೆ ಮಾಡಬೇಕು. "ವಿಶಾಲಾ ನಗರದ ಸುಂದರಿಯರು ರಾತ್ರಿ ರಮಣರ ವಸತಿಗೆ ಹೋಗುತ್ತಿರಲು ಒರೆಗಲ್ಲಿನ ಮೇಲೆ ಹಚ್ಚಿದ ಚಿನ್ನದ ರೇಖೆಯಂತೆ ಕಾಣುವ ಮಿಂಚಿನಿಂದ ಅವರಿಗೆ ದಾರಿ ತಿಳಿಯುವಂತೆ ಮಾಡು. ಗಲಭೆಮಾಡಬೇಡ, ಹನಿ ಸುರಿಸಬೇಡ, ಅವರು ಭಯಪಡುವರು." ಮೋಡದ ಮಿಂಚೇಕೆಂದರೆ, ದೀಪ ಅವರಿಗೆ ಬೇಕಿಲ್ಲ, ಕ್ಷಣಮಾತ್ರ ದಾರಿ ಕಾಣಬೇಕು, ಮತ್ತೆ ಅವರಿಗೆ ಕತ್ತಲ ರಕ್ಷೆಬೇಕು. "ಉದಯದಲ್ಲಿ ಸೂರ್ಯನು ಕಮಲಗಳಿಗೆ ಸಮಾಧಾನ ಹೇಳಬೇಕಾಗಿದೆ. ಅದಕ್ಕೆ ಅಡ್ಡಿಬರಬೇಡ." ಕೋಪದಲ್ಲಿರುವ ಸತಿಯನ್ನು ಸಮಾಧಾನಪಡಿಸುವ ಕೆಲಸ ಕಷ್ಟ. "ನೀನು ಸಂದೇಶವನ್ನು ನನ್ನ ಪ್ರಿಯಳಿಗೆ ಹೇಳಿ, ಅವಳ ಉತ್ತರವನ್ನು ನನಗೆ ತಂದು ತಿಳಿಸಿ ಆಮೇಲೆ ನಿನ್ನ ಇಷ್ಟದಂತೆ ತಿರುಗು. ನಿನ್ನ ಪ್ರಿಯೆಯಾದ ಮಿಂಚಿಗೂ ನಿನಗೂ ಎಂದೆಂದಿಗೂ ವಿಪ್ರಯೋಗ ಉಂಟಾಗದಿರಲಿ." ಎಲ್ಲ ವಿರಹಿಗಳ ನೋವೂ ಇವನಿಗೆ ತನ್ನ ನೋವಿನಂತೆ ನಿಜ. ಎಲ್ಲ ಪ್ರಿಯರ ಪ್ರಣಯಿಗಳ ಕಷ್ಟವೂ ಇವನ ಕಷ್ಟ. ಈ ರೀತಿಯ ಕಾರುಣ್ಯವು ಪ್ರೇಮದಿಂದ ಬರುವ ಅತ್ಯುತ್ತಮ ಫಲ. ಪ್ರಿಯಪ್ರಿಯೆಯರಾದವರ ವಿಷಯದಲ್ಲಿಯೇ ಅಲ್ಲದೆ ಈ ಪ್ರಣಯಿಗೆ ಹೆಣ್ಣೆಂದರೇನೇ ಕನಿಕರ. ಗ್ರಾಮವಧುಗಳು ಮೋಡವನ್ನು ನೋಡುವುದನ್ನು ವರ್ಣಿಸುತ್ತ ಅವರು ಭ್ರೂವಿಕಾಸಾನಭಿಜ್ಞರೆನ್ನುತ್ತಾನೆ. ರಾತ್ರಿ ಕೊನೆಯಾಗುವ ವೇಳೆಗೆ ಮಿಂಚು ಚಿರವಿಲಸನದಿಂದ ಸೋತು ಹೋಗಿರುತ್ತದಂತೆ. ಬಿಸಿಲಿನಲ್ಲಿ ಹೂಕೊಯ್ಯುತ್ತಿರುವ ಹೆಂಗಸರು ಮೋಡ ಬಂದು ಸ್ವಲ್ಪ ನೆರಳಾದರೆ ಅದಕ್ಕೆ ಕೃತಜ್ಞರಾಗುತ್ತಾರಂತೆ. ಮಹಾಕಾಳದೇವಾಲಯದಲ್ಲಿ ನರ್ತಿಸುತ್ತ ಸೋತಿರುವ ಹೆಂಗಸರು ಎರಡು ಹನಿ ನೀರು ಮೇಲೆ ಬಿದ್ದರೆ ಆಪ್ಯಾಯಮಾನವಾದ ಅದನ್ನು ಸಂತೋಷದಿಂದ ನೋಡುತ್ತಾರಂತೆ. ಒಂದು ವಸ್ತುವಿನಲ್ಲಿ ನಿಜವಾಗಿ ಇದ್ದ ಪ್ರೇಮದಿಂದ

ಈ ಜೀವಕ್ಕೆ ವಿಶ್ವವೇ ಒಂದಾಯಿತು. ಈ ಎಲ್ಲ ಕನಿಕರ, ಈ ಎಲ್ಲ ಸೌಂದರ್ಯಪರಿಜ್ಞಾನ, ಈ ಎಲ್ಲ ಸ್ವಭಾವಜ್ಞತೆಯು ಯಕ್ಷನು ಸತಿಯನ್ನು ವರ್ಣಿಸಿರುವ ಪದ್ಯಗಳಲ್ಲಿಯೂ ಸಂದೇಶದಲ್ಲಿಯೂ ಕೊನೆಯ ಮೆಟ್ಟಲನ್ನು ಮುಟ್ಟಿಬಿಟ್ಟಿದೆ.

ತೆಳುಮೆಯ್ಯ ಚೆಲುವೆಣ್ಣು ನಡುವರೆಯದಂಗನೆ;
ಸುಲಿಪಲ್ಲ ಸತಿ ಪಕ್ವಬಿಂಬಾಧರೆ;
ತೆಳುವ ಪೊಡೆ ಚಕಿತಹರಿಣದ ತೆರದ ಕಣ್ಣವಳ್;
ಕುಳಿಯು ಗಂಭೀರ ನಾಭಿಯ ಸುಂದರಿ;
ಶ್ರೋಣೀಭರದ ಕತದಿ ಮೆಲ್ಲನೆಯ ನಡೆಯುವಳ್;
ಪೆರ್ಮೊಲೆಯ ಭಾರದಿಂ ನಸುಬಾಗಿಹಳ್;
ತಾನಿರುವಳಲ್ಲಿ ಯುವತಿಯರ ಸೃಷ್ಟಿಪುದರಲಿ
ಬೊಮ್ಮನಾದಿಯೊಳೆಸಗಿದವಳಿವಳೆನೆ.

ಈ ಸುಂದರಿಯು ಪ್ರಿಯನು ದೂರ ಇರುವುದರಿಂದ ಒಂಟಿಯಾದ ಚಕ್ರವಾಕಿಯಂತೆ ಮೌನವಾಗಿ ಇರುತ್ತಾಳೆ. ಶಿಶಿರದಿಂದ ಕೊರಗಿದ ಕಮಲದಂತೆ ತನ್ನ ಎಂದಿನ ಚೆಲುವಿನಿಂದ ಬೇರೆಯ ರೂಪವನ್ನು ಹೊಂದಿರುತ್ತಾಳೆ. ಅತ್ತು ಅತ್ತು ಅವಳ ಕಣ್ಣು ಕೆಂಪಗಿರುತ್ತದೆ. ಕೂದಲು ಮುಚ್ಚಿಕೊಂಡು ಅರ್ಧಕಾಣುವ ಅವಳ ಮುಖವು ಮೋಡ ಮುಚ್ಚಿದ ಚಂದ್ರನಂತಿರುತ್ತದೆ. "ನೀನು ನೋಡುವ ಸಮಯದಲ್ಲಿ ಇಲ್ಲ ದೇವರ ಪೂಜೆಯಲ್ಲಿ ನನ್ನನ್ನು ಕುರಿತು ಯೋಚಿಸುತ್ತಿರುವಳೊ; ಇಲ್ಲ ನೆನವಿನಿಂದ ನನ್ನ ಚಿತ್ರವನ್ನು ಬರೆಯುತ್ತಿರುತ್ತಾಳೊ; ಇಲ್ಲ ಪಂಜರದ ಶಾರಿಕೆಯನ್ನು ಕುರಿತು ಏನು ರಸಿಕೇ ನಮ್ಮ ಯಜಮಾನನನ್ನು ನೆನೆಯುತ್ತೀಯೋ ನೀನೆಂದರೆ ಅವನಿಗೆ ಬಹಳ ಇಷ್ಟ ಎನ್ನುತ್ತಿರುತ್ತಾಳೋ? ವೀಣೆಯನ್ನು ತೆಗೆದುಕೊಂಡು ನನ್ನನ್ನು ಕುರಿತು ಗೀತೆಯನ್ನು ನುಡಿಸುತ್ತಾ ಕಣ್ಣೀರಿನಿಂದ ತಂತಿ ತೋಯಲು ಅವಳು ತಾನೇ ರಚಿಸಿದ್ದಾದರೂ ಆ ಗೀತದ ಮಾತುಗಳನ್ನು ಮರಮರಳಿ ಮರೆಯುವಳು; ದೇಹಳೀ ಹೂವುಗಳನ್ನಿಡುತ್ತ ಕಳೆದ ದಿನಗಳನ್ನು ಲೆಕ್ಕಮಾಡುತ್ತಿರುವಳು ಅಥವಾ ತನ್ನ ಜೊತೆಯಲ್ಲಿರುವಂತೆ ಭಾವಿಸಿಕೊಂಡು ಸುಖಪಡುತ್ತಿರುವಳು. ಅವಳಿಗೆ ಹಗಲು ಹೇಗಾದರೂ ಸಖಿಯರೊಂದಿಗೆ ಕಳೆಯುತ್ತದೆ....ರಾತ್ರಿ ವಿನೋದಗಳಿಲ್ಲದ ಕಾರಣ

ಕಳೆಯುವುದಕ್ಕೆ ಕಷ್ಟವಾಗುತ್ತದೆ. ಅವಳು ಒಡವೆಗಳನ್ನು ತೆಗೆದು ಹಾಕಿರುತ್ತಾಳೆ. ನಾನು ಬಿಟ್ಟುಬಂದ ದಿನ ಹಾಕಿದ ಹೆರಳು ನಾನು ಮತ್ತೆ ಹೋಗುವವರೆಗೆ ಹಾಗೆಯೇ ಇದ್ದು ಹೋಗುತ್ತದೆ. ಅವಳಿಗೆ ಬಾಚಿಕೊಳ್ಳುವುದಕ್ಕೆ ಇಷ್ಟವಿಲ್ಲ.'' ಅಲ್ಲದೆ, ಅವಳು ಹೀಗಿರುವಳೆಂಬ ವಿಷಯದಲ್ಲಿ ಇವನಿಗೆ ಸಂಶಯವಿಲ್ಲ.

ನಿನ್ನ ಗೆಳತಿಯ ಮನದೊಳೆನ್ನ ಕುರಿತಿಹ ನೇಹ
ತುಂಬಿರುವುದೆಂದು ನಾಂ ಬಲ್ಲೆನದರಿಂ
ನನ್ನನಗಲಿದ ಮೊದಲ ವಿರಹವಿದರೊಳಗವಳ
ಹಂಬಲಿಂತಿಹುದೆಂದು ಊಹಿಸುವೆನು ;
ಬಹು ಸುಭಗನಾನೆಂಬ ಬರಿಹೆಮ್ಮೆ ಇಂದೆನ್ನ
ವಾಚಾಳನಾಗಿ ಮಾಡಿಲ್ಲವೈಸೆ.
ಸಹಜ ಸೋದರನ ನುಡಿಯೆಲ್ಲವೆಂಬುದ ಸಖಿಯು
ಆಚರಣೆಯಲಿ ನೋಳ್ಪೆ ಇನಿತರೊಳೆ ನೀಂ.

ಇಲ್ಲಿಯೂ ವರ್ಣನೆ ಕನಿಕರದ ಮಾತಿನಲ್ಲಿ ಕೊನೆಯಾಗುತ್ತದೆ. ''ನೀನು ಹೋದಾಗ ಅವಳೇನಾದರೂ ನಿದ್ರೆಯಲ್ಲಿದ್ದರೆ ಅವಳನ್ನು ಆಗಲೇ ಎಬ್ಬಿಸಬೇಡ, ಸುಮ್ಮನಿರು. ಸ್ವಪ್ನದಲ್ಲಿ ಅವಳು ನನ್ನನ್ನು ಸೇರಿದಂತೆ ಅನುಭವದಲ್ಲಿರಬಹುದು. ನೀನು ಎಬ್ಬಿಸಿದರೆ ನನ್ನನ್ನು ಅಪ್ಪಿಕೊಂಡಿರುವ ಸ್ಥಿತಿ ಕೊನೆಗಂಡೀತು. ಹೀಗೆ ಆಗದೇ ಇರಲಿ.''

ಇಷ್ಟಾದ ಮೇಲೆ ಅವಳಿಗೆ ಹೇಳುವ ಮಾತೇನು? ''ಹೇ ಮುತ್ತೈದೆ, ನಾನು ನಿನ್ನ ಪ್ರಿಯನ ಮಿತ್ರನು. ಅವನ ಸಂದೇಶವನ್ನು ತಂದಿದ್ದೇನೆ. ಅವನು ರಾಮಗಿರಿಯಲ್ಲಿ ಜೀವಂತನಾಗಿ ಇದ್ದಾನೆ. ನಿನ್ನ ಕುಶಲವನ್ನು ಕೇಳುತ್ತಾನೆ. ನಿನ್ನ ಎಲ್ಲ ಅವಸ್ಥೆಯನ್ನು ತಾನು ಅನುಭವಿಸುತ್ತಿದ್ದಾನೆ. ಸಖಿಯರ ಮಧ್ಯೆ ಇರುವಾಗ ನಿನ್ನನ್ನು ಮುಟ್ಟುವ ಆಸೆಯಾಗಲು ಕಿವಿಯಲ್ಲಿ ಏನನ್ನೋ ಹೇಳುವ ನೆಪವನ್ನು ಹುಡುಕುತ್ತಿದ್ದ ಆತನು ದೂರ ಇರುವುದರಿಂದ ತನ್ನ ಮಾತನ್ನು ನನ್ನಿಂದ ಹೇಳಿಕಳುಹಿಸಿದ್ದಾನೆ. ನಿನ್ನ ಸೊಗಸಿನ ಒಂದೊಂದು ಲಕ್ಷಣವನ್ನು ಒಂದೊಂದು ಕಡೆ ಕಾಣುತ್ತಾನೆ. ಒಟ್ಟು ನಿನ್ನ ಸೌಂದರ್ಯವನ್ನು ಎಲ್ಲಿಯೂ ಕಾಣದೆ ಇದ್ದಾನೆ. ನಿನ್ನ ಚಿತ್ರವನ್ನು ಬರೆದು ಅದರ ಪದತಲದಲ್ಲಿ ತನ್ನ

ಆಕಾರವನ್ನು ರಚಿಸೋಣವೆಂದು ನೋಡುತ್ತಾನೆ. ಕಣ್ಣಲ್ಲಿ ನೀರುಸುರಿದು ಚಿತ್ರ ಮುಗಿಯುವುದಿಲ್ಲ. ವಿಧಿಯು ಕಟ್ಟು ಚಿತ್ರದಲ್ಲಿ ಕೂಡ ಸೇರದಂತೆ ಮಾಡಿದೆ ಎಂದು ವ್ಯಥೆಪಡುತ್ತಿದ್ದಾನೆ. ಸ್ವಪ್ನದಲ್ಲಿ ನಿನ್ನನ್ನು ಕಂಡಂತೆ ನೆನೆದು ಅಪ್ಪಿಕೊಳ್ಳುತ್ತಾನೆ. ಉತ್ತರ ದಿಕ್ಕಿನಿಂದ ಬರುವ ಗಾಳಿ ನಿನ್ನ ಮೈಯನ್ನು ಸೋಕಿ ಬಂದಿರಬಹುದೆಂಬ ಕಾರಣ ಅದಕ್ಕೆ ಮೈಯೊಡ್ಡು ತ್ತಾನೆ. ಈಗಲೇ ಆಸೆ ತಡೆಯಲಾರದೆ ಇದೆ. ಇನ್ನು ಮಳೆಯ ದಿನ ಬಂದರೆ ಅವನ್ನು ಹೇಗೆ ಕಳೆಯುವುದು ಎಂದು ಹೆದರಿದ್ದಾನೆ. ನೀನು ಜೊತೆಯಲ್ಲಿರಲು ಮೂರು ಯಾಮದ ರಾತ್ರಿ ಒಂದು ಕ್ಷಣದಂತೆ ಕಳೆಯುತ್ತಿತ್ತು; ಬೇಗೆ ತಡೆಯುವಂತೆ ಆಗುತ್ತಿತ್ತು. ನೀನು ಇಲ್ಲದೆ ಈಗ ಅಸಹಾಯನಾಗಿದ್ದೇನೆ ಎನ್ನುತ್ತಾನೆ. 'ನಾನು ಹೇಗೋ ಜೀವವನ್ನು ಹಿಡಿದುಕೊಂಡಿದ್ದೇನೆ, ನೀನು ಕೂಡ ಹಾಗೆಯೇ ಇರು; ಕಷ್ಟ ಶಾಶ್ವತವಲ್ಲ. ಶಾಪ ಮುಗಿದ ಮೇಲೆ ನಾನು ಬಂದು ನಿನ್ನನ್ನು ಸೇರುತ್ತೇನೆ. ನಾಲ್ಕು ತಿಂಗಳನ್ನು ನಾಲ್ಕುಸಲ ಕಣ್ಣುಮುಚ್ಚಿ ತೆರೆಯು ವಂತೆ ಕಳೆ' ಎನ್ನುತ್ತಾನೆ. 'ನಾವು ಮನಸ್ಸಿನಲ್ಲಿ ಎಣಿಸಿಕೊಂಡ ಅಭಿಲಾಷೆಗಳನ್ನೆಲ್ಲ ಆಮೇಲೆ ಶರತ್ಕಾಲದ ತಿಂಗಳ ರಾತ್ರಿಗಳಲ್ಲಿ ಅನುಭವಿಸೋಣ' ಎಂದು ಹೇಳುತ್ತಾನೆ. ಇದೆಲ್ಲ ನಿಜವೆಂದು ನಿನಗೆ ತಿಳಿಯುವುದಕ್ಕೆ ಒಂದು ಅಭಿಜ್ಞಾನವನ್ನು ಹೇಳಿದ್ದಾನೆ. ಒಂದುಸಲ ನೀನು ನಿದ್ದೆಯಲ್ಲಿ ಅತ್ತೆಯಂತೆ. ಎಬ್ಬಿಸಿ, ಅತ್ತದ್ದು ಏಕೆ? ಎಂದು ಅವನು ಕೇಳಲು, ಬಹಳ ಬಲವಂತಮಾಡಿದ ಮೇಲೆ, ಅವನು ಮತ್ತಾವಳ ಜೊತೆಯಲ್ಲೋ ವಿಹರಿಸುತ್ತಿದ್ದಂತೆ ಸ್ವಪ್ನದಲ್ಲಿ ಕಂಡಿತು ಎಂದು ನೀನು ಹೇಳಿದೆಯಂತೆ. ಇದರಿಂದ ನನ್ನ ಮಾತಿನಲ್ಲಿ ನಂಬಿಕೆಯಿಟ್ಟು ಅವನಲ್ಲಿ ಅವಿಶ್ವಾಸಿನಿಯಾಗದೆ ಅವನು ಬರುವುದನ್ನು ನಿರೀಕ್ಷಿಸಿ ಜೀವದಿಂದಿರು."

ಈ ಸಂದೇಶದ ಸೊಗಸು ಸ್ವಭಾವಜ್ಞತೆ ಕಾವ್ಯದ ಉಳಿದ ವಿಷಯ ಗಳಿಗೆ ತಕ್ಕಂತಿವೆ. ಇದಕ್ಕಿಂತ ಸುಂದರವಾದ ಸಂದೇಶ ಪ್ರಿಯನಿಂದ ಪ್ರಿಯೆಗೆ ಹೋದದ್ದು ಸಾಹಿತ್ಯದಲ್ಲಿ ಎಲ್ಲಿಯೂ ಚಿತ್ರಿತವಾಗಿಲ್ಲ.

ಕಾವ್ಯದ ವಸ್ತುವಿನೊಂದಿಗೆ ಕಾಳಿದಾಸನ ದೇಶಭಕ್ತಿಯೂ ದೈವ ಭಕ್ತಿಯೂ ಹೆಣೆದುಕೊಂಡಿವೆಯೆಂದು ಮೇಲೆ ಹೇಳಿದೆ. ಮೇಘಕ್ಕೆ

ದಾರಿಯನ್ನು ಹೇಳುವಲ್ಲಿ ಕವಿಯು ಉಜ್ಜಯಿನಿಯನ್ನು ಕುರಿತು ಕೆಲವು ಪದ್ಯಗಳನ್ನು ಹಾಕಿದ್ದಾನೆ. ಅದನ್ನು ನೋಡದೆ ಇದ್ದರೆ ಕಣ್ಣನ್ನು ವಂಚಿಸಿದ ಹಾಗಾಗುತ್ತದಂತೆ. "See Naples and die" ಎಂದು ಪಾಶ್ಚಾತ್ಯರಲ್ಲಿ ಒಂದು ಮಾತಿದೆಯೆಂದು ಹೇಳುತ್ತಾರೆ. ಕಾಳಿದಾಸನ ಈ ಮಾತಿನ ಉಜ್ಜಯಿನಿಪ್ರೇಮವು ಈ ರೀತಿಯದು. ದೇವಲೋಕವನ್ನು ಬಿಡಬೇಕಾದ ಜೀವಗಳು ತಮ್ಮ ಉಳಿದ ಪುಣ್ಯಗಳನ್ನು ಅನುಭವಿಸಲು ಸ್ವರ್ಗದ ಒಂದು ಖಂಡವನ್ನು ತಂದಂತೆ ಇದೆಯಂತೆ ಈ ನಗರ. ತಿಳಿಯ ಬಂದಿರುವಷ್ಟು ಇತಿಹಾಸದಿಂದ ಆ ನಗರವು ಇವನು ಹೇಳುವ ವಿಭವಕ್ಕೆ ಆವಾಸವಾಗಿದ್ದುದು ನಿಜವೆಂದು ಕಾಣುತ್ತದೆ. ಇದನ್ನು ನೋಡಿದ್ದರಿಂದಲೇ ಕಾಳಿದಾಸನಿಗೆ ಅಲಕಾನಗರವನ್ನು ಅಷ್ಟು ಸೊಗಸಾಗಿ ವರ್ಣಿಸುವುದು ಸಾಧ್ಯವಾಯಿತು. ಉಜ್ಜಯಿನಿಯ ಆನೆಗಳು, ಕುದುರೆಗಳು, ಯೋಧರು, ಸುಂದರಿಯರು, ಉದ್ದಾಮ ಯೌವನದ ತರುಣರು, ವೇಶ್ಯೆಯರು, ಇವರನ್ನೆಲ್ಲ ಇವನು ಉತ್ಸಾಹದಿಂದ ವರ್ಣಿಸುತ್ತಾನೆ. ಅಲ್ಲಿಯ ಐಶ್ವರ್ಯವನ್ನು ವರ್ಣಿಸಿರುವ ಈ ಪದ್ಯದ ಸೊಗಸು ಪದಶಃ ಅನುಭವಿಸಬೇಕಾದದ್ದು:

ತಾರಮೌಕ್ತಿಕದಿಂದ ತರಳಗುಟಿಕಗಳಿಂದ
  ಸವೆದ ಹಾರಗಳೆನಿತೊ; ಶಂಖಶುಕ್ತಿ
ಆರಯಿಸಲೆನಿತು ಕೋಟಿಯೊ; ಹಾಯ್ವ ಕಿರಣಗಳ
  ಯುವಸಸಮವರ್ಣ ಮರಕತಗಳೆನಿತೊ;
ಇನ್ನು ಹವಳಗಳೆನಿತೊ; ವೈಶಾಲನಗರದಲಿ
  ಪಣ್ಯವೀಥಿಯಲಿ ಹರಹಿರುವ ತೆರದಿಂ
ಮುನ್ನೀರು ತನ್ನ ರತ್ನವನೆಲ್ಲ ಉಳಿದಿನ್ನು
  ತಣ್ಣೀರ ನಿಧಿ ಮಾತ್ರವೆಂದೆನಿಸಿತು.

ಇಲ್ಲಿ ರಾಶಿಬಿದ್ದ ರತ್ನಗಳನ್ನು ನೋಡಿದರೆ ಸಮುದ್ರದಲ್ಲಿ ಇನ್ನು ರತ್ನಗಳಿರಲಾರವೆಂಬಂತಿತ್ತು. ಇನ್ನಲ್ಲಿ ಉಳಿದದ್ದು ತಣ್ಣೀರು, ಉಪ್ಪುನೀರು ಮಾತ್ರ. ಇದರಂತೆಯೇ ಇವನ ದೈವಭಕ್ತಿಯೂ ಕಾವ್ಯದಲ್ಲಿ ಸದಾ ವ್ಯಕ್ತವಾಗುತ್ತದೆ. ಮೊದಲನೆಯ ಪದ್ಯದಲ್ಲಿ ಹೇಳಿರುವಂತೆ ರಾಮಗಿರಿಯ ಜಲಾಶ್ರಯಗಳು ಜನಕತನಯೆಯ ಸ್ನಾನದಿಂದ ಪುಣ್ಯತೀರ್ಥಗಳಾಗಿವೆ.

ಕವಿ ಆ ಗಿರಿಯನ್ನು ಮರಳಿ "ತಪಸಾಂ ವಂದ್ಯೈಃ ರಘುಪತಿ ಪದೈಃ ಮೇಖಲಾಸು ಅಂಕಿತಂ" ಎನ್ನುತ್ತಾನೆ. ಕೃಷ್ಣಬಲರಾಮರ ನೆನವು ಬಂದಿರುವ ಪದ್ಯಗಳು ಈ ಮೊದಲೇ ಉಕ್ತವಾಗಿವೆ. ಉಜ್ಜಯಿನಿಯ ಬಳಿಯ ಮಹಾಕಾಳ ದೇವಾಲಯದ ಮಾತೂ ಮೊದಲೇ ಬಂದಿದೆ. ಕವಿ ಷಣ್ಮುಖನ ದೇವಾಲಯದ ವಿಷಯವನ್ನೂ, ನೆನೆದವರ ಪಾಪವನ್ನು ಹರಿಸಿ ಮುಕ್ತಿಯನ್ನು ನೀಡುವ ಅರ್ಧೇಂದುಮೌಳಿಯ ಪಾದದ ಗುರುತುಳ್ಳ ಶಿಲೆಯ ವಿಷಯವನ್ನೂ ಹೇಳುತ್ತಾನೆ. ಈತನಿಗೆ ಶಿವನೂ ಗೌರಿಯೂ ಹೆತ್ತ ತಂದೆತಾಯಂತೆ ನಿಜವಾದ ವ್ಯಕ್ತಿಗಳು. ಅವರ ಸಂಸಾರದ ವಿಷಯವು ಕೆಲವು ಪದ್ಯಗಳಲ್ಲಿ ಬರುತ್ತದೆ. ಮಗನ ವಾಹನವಾದ ನವಿಲಿನ ಗರಿಯನ್ನು ಗೌರೀದೇವಿ ಪುತ್ರಪ್ರೇಮದಿಂದ ಕಿವಿಗೆ ಸೆಕ್ಕಿಸಿಕೊಳ್ಳುತ್ತಾಳೆ. ಮಗನ ಸಲುವಾಗಿ ಅದು ಅವಳಿಗೆ ಪ್ರಿಯವಾದ ಆಭರಣವಾಯಿತು. ಹಾಗೆಯೇ ಇನ್ನೊಂದು ಚಿತ್ರದಲ್ಲಿ ಶಂಭು ಜೊತೆಗೆ ಲೋಕಮಾತೆಯನ್ನು ಕರೆದುಕೊಂಡುಹೋಗಬೇಕಾದರೆ ತನ್ನ ಕೈಯನ್ನು ಆಕೆಗೆ ಕೊಡುತ್ತಾನೆ. ಕೊಡುವಂದು ಕೈಗೆ ಸುತ್ತಿಕೊಂಡಿದ್ದ ಹಾವನ್ನು ತೆಗೆದುಹಾಕುತ್ತಾನೆ.

ಕಾವ್ಯದಲ್ಲಿ ಅಲ್ಲಲ್ಲಿ ಕವಿಯು ತನ್ನ ಪ್ರಪಂಚಜ್ಞಾನದ ಸಾರವನ್ನೊಳಗೊಂಡ ಮಾತುಗಳನ್ನು ಹಾಕಿದ್ದಾನೆ. ಯಕ್ಷನು ಮೋಡಕ್ಕೆ ಸಂದೇಶವನ್ನು ಹೇಳಿದ್ದನ್ನು ಕುರಿತು "ಕಾಮಾರ್ತರು ಚೇತನಾಚೇತನಗಳಲ್ಲಿ ಪ್ರಕೃತಿ ಕೃಪಣರಲ್ಲವೆ?" ಎಂದು ಸಮರ್ಥಿಸಿರುವುದು ಇಂಥ ಒಂದು ಸಂದರ್ಭ. ಮೋಡವನ್ನು ಕುರಿತು ಯಕ್ಷನು "ನೀನು ಹಿರಿಯ ವಂಶದಲ್ಲಿ ಹುಟ್ಟಿದವನು. ಆದ್ದರಿಂದ ನಾನು ನಿನ್ನನ್ನು ಬೇಡುತ್ತಿದ್ದೇನೆ. ದೊಡ್ಡವರಲ್ಲಿ ಬೇಡಿ ಪಡೆಯದೆ ಇರುವುದು ಅಧಮರಲ್ಲಿ ಬೇಡಿ ಪಡೆಯುವುದಕ್ಕಿಂತ ಮೇಲು" ಎನ್ನುತ್ತಾನೆ. ಆಮ್ರಕೂಟಗಿರಿಯು ಮೇಘವನ್ನು ಪ್ರೀತಿಯಿಂದ ಬರಮಾಡಿಕೊಳ್ಳುವುದೆಂದು ಹೇಳುತ್ತ "ಕ್ಷುದ್ರನು ಕೂಡ ಪೂರ್ವದಲ್ಲಿ ಉಪಕಾರಮಾಡಿದವನಿಗೆ ಆಶ್ರಯವಿಲ್ಲವೆನ್ನುವುದಿಲ್ಲ. ಇನ್ನು ಉಚ್ಚನಾದವನ ಮಾತೇನು?" ಎನ್ನುತ್ತಾನೆ. ರೇವಾನದಿಯ ನೀರನ್ನು ಸ್ವೀಕರಿಸಿ ಮುಂದಕ್ಕೆ ಹೊರಟಾಗ "ಅಂತಃಸಾರಂ

ಘನ ತುಲಯಿತುಂ ನಾನಿಲೋ ಶಕ್ಷ್ಯತಿ ತ್ವಾಂ, ರಿಕ್ತಃ ಸರ್ವೋ ಭವತಿ ಹಿ ಲಘುಃ ಪೂರ್ಣತಾ ಗೌರವಾಯ" ಎನ್ನುತ್ತಾನೆ. ಬರಿದಾದವನು ಹಗುರವಾಗುತ್ತಾನೆ; ಗೌರವ ಬೇಕಾದರೆ ತುಂಬಿರಬೇಕು. ಮುದ್ದಾದ ಮಾತು; ಚೆನ್ನಾಗಿ ತಿರುಗಿದೆ. ಮುಂದೆ "ನೀನು ಉತ್ತರಕೊಡಲಿಲ್ಲವಾದ್ದರಿಂದ ನನ್ನ ಪ್ರಾರ್ಥನೆಯನ್ನು ನಿರಾಕರಿಸಿದೆಯೆಂದು ನಾನು ಭಾವಿಸುವುದಿಲ್ಲ; ಸಂತರ ಉತ್ತರವೆನ್ನುವುದು ಕಾರ್ಯವೇ" ಎನ್ನುತ್ತಾನೆ. ಇದರಂತೆ ಸ್ತ್ರೀಯರ, ಪ್ರಣಯಿಗಳ ಸ್ವಭಾವವನ್ನು ಕುರಿತು ಅಲ್ಲಲ್ಲಿ ಇನ್ನೂ ಮಾತುಗಳು ಇವೆ. ಎಲ್ಲದರಲ್ಲಿಯೂ ಇದೇ ಪ್ರಪಂಚಜ್ಞಾನ ಕಾಣುತ್ತದೆ.

ಇಲ್ಲಿ ಮಹಾಕವಿಯ ಮಾತಿನ ಲಾಲಿತ್ಯವನ್ನೂ ಔಚಿತ್ಯವನ್ನೂ ಕುರಿತು ಸ್ವಲ್ಪ ಪ್ರಸ್ತಾಪಮಾಡುವುದು ಆವಶ್ಯಕ. ಅಂತಸ್ಸಾರನಾದ ನಿನ್ನನ್ನು ಗಾಳಿ ಅಲುಗಾಡಿಸಲಾರದು ಎನ್ನುವಲ್ಲಿ ಯಕ್ಷನು ಮೋಡವನ್ನು "ಘನ" ಎಂದು ಕರೆಯುತ್ತಾನೆ. ಸಂತಪ್ತರಿಗೆ ನೀನು ಶರಣನು ಎನ್ನುವಾಗ "ಪಯೋದ" ಎಂದು ಕರೆಯುತ್ತಾನೆ. ಮಾತು ಆ ಸಂದರ್ಭಕ್ಕೆ ಉಚಿತವಾಗಿದೆ. ಕಾಮಾರ್ತರನ್ನು ಕುರಿತ "ಪ್ರಕೃತಿ ಕೃಪಣಾಃ" ಎನ್ನುವ ಮಾತು; ಅಲಕೆಯಲ್ಲಿ ಪ್ರಿಯೆ ಇರುವ ಸ್ಥಿತಿಯನ್ನು ಕುರಿತು "ಅವ್ಯಾಪನ್ನಾಂ" "ಸಾಯದೇ ಇರುವಳನ್ನು" ಎಂದರೆ ದುಃಖದಿಂದ ಸತ್ತಂತೆ ಆಗಿರುವಳು ಆದರೆ ಜೀವವನ್ನು ಬಿಗಿಹಿಡಿದಿರುವಳು ಎಂಬ ಅರ್ಥವನ್ನು ಕೊಡುವ ಮಾತು; ಕ್ಷುದ್ರರು ಕೂಡ ಉಪಕಾರಿಯ ವಿಷಯದಲ್ಲಿ ವಿಮುಖರಾಗುವುದಿಲ್ಲ, ಇನ್ನು ದೊಡ್ಡವರ ಮಾತೇನು ಎಂದು ಹೇಳುವಲ್ಲಿ ಆಮ್ರಗಿರಿಯನ್ನು "ಉಚ್ಚ" ಎಂದು ಹೇಳಿರುವುದು; ಉಜ್ಜಯಿನಿಯು ಸ್ವರ್ಗದ ಖಂಡವೆಂದು ಹೇಳುವಲ್ಲಿ "ಕಾಂತಿಮತ್ಖಂಡಮೇಕಂ" ಎಂದು ಭೂಲೋಕದಲ್ಲಿ ಉಜ್ಜಯಿನಿ ಒಂದೇ ಅಂಥ ನಗರ ಇನ್ನೊಂದಿಲ್ಲ ಎಂದು ತೋರುವುದಕ್ಕಾಗಿ "ಏಕಂ" ಎಂದು ಹಾಕಿರುವ ಮಾತು; ನಿನ್ನ ಸತಿ ಮಿಂಚು ರಾತ್ರಿಯೆಲ್ಲಾ ಹೊಳೆದು ಉದಯದ ವೇಳೆಗೆ ಸೋತಿರುತ್ತದೆಂಬಲ್ಲಿ ಅದು "ಚಿರವಿಲಸನದಿಂದ ಖಿನ್ನ" ಎಂದಿರುವ ಮಾತು: ಇವು ಇದಕ್ಕೆ ಉದಾಹರಣೆಗಳು.

ಇಂಥ ಮಾತು ಹುಡುಕದೆಯೇ ಬೇಕಾದಷ್ಟು ಸಿಕ್ಕುತ್ತದೆ. ಮಾತಿನ ಲಾಲಿತ್ಯಕ್ಕೆ ಈ ಮೊದಲು ಉದ್ಧೃತವಾಗಿರುವ ಪದ್ಯಗಳೇ ನಿದರ್ಶನಗಳು.

"ಹರಶಿರಶ್ಚಂದ್ರಿಕಾಧೌತಹರ್ಮ್ಯಾ."
"ದೀರ್ಘೀಕುರ್ವ್ವ ಪಟು ಮದಕಲಂ ಕೂಜಿತಂ ಸಾರಸಾನಾಂ."
"ಕೈಲಾಸಸ್ಯ ತ್ರಿದಶವನಿತಾ ದರ್ಪಣಸ್ಯಾತಿಥಿಃ ಸ್ಯಾಃ."
"ಸೋಪಾನತ್ವಂ ಕುರು ಮಣಿತಟಾರೋಹಣಾಯಾಗ್ರಯಾಯೀ."
"ಮಂದಾಕಿನ್ಯಾಃ ಸಲಿಲಶಿಶಿರೈಃ ಸೇವ್ಯಮಾನಾ ಮರುದ್ಭಿಃ."
"ಸೂರ್ಯಾಪಾಯೇ ನ ಖಲು ಕಮಲಂ ಪುಷ್ಯತಿ ಸ್ವಾಮಭಿಖ್ಯಾಂ."
"ಸೀಮಂತಿನೀನಾಂ ಕಾನ್ತೋದಂತಃ ಸುಹೃದುಪನತಃ
ಸಂಗಮಾತ್ಕಿಂಚಿದೂನಃ."
"ದಿಕ್ಸಂಸಕ್ತಾಪ್ರವಿರಳಘನಾವ್ಯಕ್ತಸೂರ್ಯಾತಪಾನಿ."

ಒಂದೊಂದು ಪದ್ಯವೂ ಹೀಗೆಯೇ ಇರುವಾಗ ವಾಕ್ಯಗಳನ್ನು ಎತ್ತಿಡುವುದು ಅನಾವಶ್ಯಕ. ಮಾತೆಲ್ಲ ಸುಲಭ. ಅವನ್ನು ಸುಲಭವಾಗಿ ಜೋಡಿಸಿದೆ; ಹೇಳುವುದಕ್ಕೆ ಹೊರಟ ಅರ್ಥ ಮಾತಿನ ತೊಂದರೆಯಿಂದ ತೊಡಕಾಗಿಲ್ಲ. ಇದು ಶೈಲಿಯಲ್ಲಿ ಅತ್ಯುತ್ತಮ ಗುಣ. ವೃತ್ತದ ಆನುಕೂಲ್ಯಕ್ಕಾಗಿ ವಿಶೇಷಣ ವಿಶೇಷ್ಯಗಳನ್ನು ಹಿಂದು ಮುಂದಾಗಿ ಹಾಕಿ ವ್ಯಾಕರಣ ರೂಪಗಳಿಂದ ಪದಗಳ ಸಂಬಂಧವನ್ನು ಸೂಚಿಸುವುದು ಸಂಸ್ಕೃತದಲ್ಲಿ ಸಾಮಾನ್ಯ ಪದ್ಧತಿ. ಇದರಿಂದ ಅನೇಕ ವೇಳೆ ಅನ್ವಯವು ತೊಡಕಾಗುವುದುಂಟು. ಈ ಕಾವ್ಯದಲ್ಲಿ ಕವಿ ಅಲ್ಲಲ್ಲಿ ಈ ರೀತಿ ಪದಗಳನ್ನು ಜೋಡಿಸಿದ್ದಾನೆ. ಆದರೆ ಇದರಿಂದ ಬರವಣಿಗೆ ತೊಡಕಾಗಿರುವುದು ಬಹಳ ಕಡಮೆ. ಉತ್ತಮವಾದ ಭಾವಕ್ಕೆ ತಕ್ಕ ಮೈಯಾದಾಗ ಮಾತು ಸಾರ್ಥಕವಾಗುತ್ತದೆ. ಇದನ್ನು ಮಾಡುವವರ ಸಂಖ್ಯೆ ಎಲ್ಲ ಭಾಷೆಯಲ್ಲೂ ಎಂದೂ ಕಡಮೆಯೇ. ಮಾತನ್ನು ಮುಂದಿಟ್ಟು ಅರ್ಥವನ್ನು ಮರೆಯಿಸದೆ, ಅರ್ಥ ಮುಖ್ಯವೆಂದು ಮಾತನ್ನು ಹೇಗೋ ಜೋಡಿಸಿಬಿಡದೆ, ಕಾವ್ಯದಲ್ಲಿ ಅದಕ್ಕೆ ಇದು ಇದಕ್ಕೆ ಅದು ಹೊಂದಿರುವಂತೆ ಬರೆಯುವವರು ಇನ್ನೂ ಕಡಮೆ. ಇಂಥ ಕವಿಗಳಲ್ಲಿ ಕಾಳಿದಾಸನು ಅಗ್ರಪಂಕ್ತಿಯ ಕವಿ.

ಕಾವ್ಯದಲ್ಲಿ ಶ್ಲೇಷೆಯರ ಮಾತು ಹಲವೆಡೆ ಬರುತ್ತದೆ. "ಕಾರ್ಶ್ಯಂ ಯೇನ ತ್ಯಜತಿವಿಧಿನಾ ತತ್ ತ್ವಯೈವೋಪಪಾದ್ಯಃ" ಎಂದು ನದಿಯ

ವಿಷಯದಲ್ಲಿ ಹೇಳಿರುವ ಮಾತಿನಿಂದ ಹೆಣ್ಣಿನ ವಿಷಯದಲ್ಲಿ ಸ್ವಲ್ಪ ಮರ್ಯಾದೆಗೆ ಕಡಮೆಯ ಭಾವನೆಯೊಂದನ್ನು ಅತಿರಸಿಕರು ಎಣಿಸುವ ಸಂಭವ ಉಂಟು. ಉಜ್ಜಯಿನಿಯ ತರುಣರ ಉದ್ದಾಮ ಯೌವನವು ಮೆಚ್ಚುಗೆಯ ವಿಷಯವಾದರೂ ಅದು ವ್ಯಕ್ತವಾದ ರೀತಿಯು ಮೆಚ್ಚ ತಕ್ಕದ್ದಲ್ಲವೆಂದು ನೀತಿಜ್ಞರಿಗೆ ತೋರಬೇಕು. ಮಾನವಂತರಿಗೆ ಇಲ್ಲಿ ಬರುವ ವಿವೃತಜಘನ ನೀವೀಬಂಧೋಚ್ಛ್ವಸನಗಳ ಮಾತು ಹೆಚ್ಚೆಂದು ಕಾಣಬಹುದು. ತನ್ನ ಸತಿಯ ತೊಡೆಯನ್ನು ಸಖನಿಗೆ ವರ್ಣಿಸಿದ್ದು ಯಕ್ಷನಲ್ಲಿ ಸ್ವಲ್ಪ ಅನುಚಿತವೆಂದು ಮಾನಕ್ಕಾಗಿ ಸೊರಗದ ರಸಿಕರಿಗೂ ಕಂಡೀತು. ಇಂಥ ಆಕ್ಷೇಪಕ್ಕೆಲ್ಲ ಉತ್ತರ ಹೇಳುವುದು ಸಾಧ್ಯವಲ್ಲ; ಇಲ್ಲಿ ಹೇಳಿರುವ ಹಲವನ್ನು ಕುರಿತು ಸಮಾಧಾನವನ್ನು ಹೇಳಬಹುದು. ಯಕ್ಷನು ಮಾತನಾಡುತ್ತಿದ್ದದ್ದು ಮೋಡದೊಂದಿಗೆ. ಮೋಡ ನಿರ್ಜೀವವೆಂದು ಅವನು ತೀರ ಮರೆತಿರಲಿಲ್ಲ. ನಿಜದಲ್ಲಿ ನೋಡಿದರೆ ಅವನ ಮಾತು ತನಗೆ ತಾನೇ ಹೇಳಿಕೊಂಡದ್ದು. ಆದ್ದರಿಂದ ಯಕ್ಷನಲ್ಲಿ ಯಾವ ಮಾತೂ ಅನುಚಿತವಲ್ಲ. ಯಕ್ಷನಲ್ಲಿ ಅನುಚಿತವಲ್ಲದಿದ್ದರೂ ಕಾವ್ಯದಲ್ಲಿ ಹಾಕುವುದಕ್ಕೆ ಅನರ್ಹವೆಂದು ಕವಿಗೆ ತೋರಬೇಕಾಗಿತ್ತು ಎಂದು ಆಕ್ಷೇಪ ಇರಬಹುದು. ಇದಕ್ಕೆ ಸಮಾಧಾನವೇನೆಂದರೆ ಇದು ಕಾವ್ಯ ಎನ್ನುವುದು; ಸಾಲದ್ದಕ್ಕೆ ಉಜ್ಜಯಿನಿಯ ಭೋಗ, ಉಜ್ಜಯಿನಿಯ ವಿಭವ, ಉಜ್ಜಯಿನಿಯ ಐಶ್ವರ್ಯದಲ್ಲಿ ಉದಯಿಸಿದ ಕಾವ್ಯ. ಇಂಥ ಭೋಗಸಾಗರದಲ್ಲಿರುತ್ತ ಬರೆದ ಕಾವ್ಯದಲ್ಲಿ ಈ ವಿಷಯಗಳು ಇಷ್ಟು ಮಿತವಾಗಿ, ಇಷ್ಟು ನಿರ್ಮಲವಾಗಿ ಬಂದಿರುವುದಕ್ಕೆ ನಾವು ಸಂತೋಷ ಪಡಬೇಕು. ಇತರ ದೇಶದ ಐಶ್ವರ್ಯದ ಸಾಹಿತ್ಯಗಳಲ್ಲಿ ಇದಕ್ಕೆ ಮೀರಿದ ಮಾತುಗಳಿರುತ್ತವೆ; ಅವುಗಳಲ್ಲಿ ಇಲ್ಲಿರುವಷ್ಟು ನಯವಿರು ವುದಿಲ್ಲ. ಈ ವಿಷಯದಲ್ಲಿಯೂ ಕಾಳಿದಾಸನು ಕವಿವರ್ಗದ ಗುರುವೇ ಸರಿ. ಎಂದರೆ ಅವನು ವರ್ಣಿಸಿದ ಇಂಥ ವಿಷಯಗಳನ್ನೆಲ್ಲ ಹೊಸಕಾಲದ ಕಾವ್ಯದಲ್ಲಿ ವರ್ಣಿಸುವುದಕ್ಕೆ ಹೋಗಬೇಕೆಂದಲ್ಲ. ಅವನ ಕಾಲದ ಪರಿಸ್ಥಿತಿಯಲ್ಲಿ ಅವನು ವಹಿಸಿದಷ್ಟು ಎಚ್ಚರಿಕೆಯನ್ನು ನಮ್ಮ ಕಾಲದಲ್ಲಿ ನಾವು ವಹಿಸಿದರೆ ನಮ್ಮ ಕಾವ್ಯ ನಿರ್ಮಲವಾಗುತ್ತದೆ ಎಂದು ಮಾತ್ರ ಇಲ್ಲಿ ಅಭಿಪ್ರಾಯ.

ಇಷ್ಟು ಸಣ್ಣದಾದರೂ ಈ ಕಾವ್ಯದಲ್ಲಿ ಕಾಳಿದಾಸನ ಹೃದಯದ ಸುಂದರವಾದ ಒಂದು ಭಾವಚಿತ್ರ ಸಿಕ್ಕುತ್ತದೆ. ಅವನ ದೇಶಪ್ರೇಮ, ಧರ್ಮಪ್ರೇಮ, ದೈವಭಕ್ತಿ, ಉದಾರ ಹೃದಯ, ಮಾನವನ ಜೀವನವನ್ನು ಕುರಿತ ಕನಿಕರ, ಪ್ರಕೃತಿಯಲ್ಲಿ ಮಾಡಿದ ಈಶ್ವರಾನುಷ್ಠಾನ, ಅವನ ಸೌಂದರ್ಯಗ್ರಹಣಶಕ್ತಿ, ಕವಿಮನೋವೃತ್ತಿ, ರಸಿಕತೆ, ಆಡಂಬರವಿಲ್ಲದ ಪಾಂಡಿತ್ಯ, ನಿಸ್ಸೀಮವಾದ ಕಲಾಕೌಶಲ್ಯ — ಇವೆಲ್ಲ ಈ ಗ್ರಂಥದಲ್ಲಿ ಕಾಣುತ್ತವೆ. ಈ ಕಾವ್ಯದ ಪದ್ಯಗಳನ್ನು ಓದುತ್ತ, ನಾವು ಕವಿಯನ್ನು ಎದುರಿಗೆ ಕುಳಿತಿರುವಂತೆ, ಕೃತಿಯನ್ನು ರಚಿಸುತ್ತಿರುವಂತೆ, ವೃತ್ತವನ್ನು ಓದುತ್ತಿರುವಂತೆ ಭಾವಿಸಿಕೊಳ್ಳುವುದು ಸಾಧ್ಯ. ಪೂರ್ವದಲ್ಲಿ ಆಚಾರ್ಯರು ತಮ್ಮ ದೇಹವನ್ನು ಬಿಡಬೇಕಾಗಿಬಂದ ಸಂದರ್ಭದಲ್ಲಿ ಲೋಹದಲ್ಲಿ ಪ್ರತಿಮೆಯನ್ನು ಮಾಡಿಸಿ ಅದರಲ್ಲಿ ತಮ್ಮ ಜೀವವನ್ನು ನಿಕ್ಷೇಪಿಸಿ ಕಳೇಬರವನ್ನು ಉಳಿದರೆಂದು ಹೇಳುವುದುಂಟು. ಕವಿಯಾದವರೆಲ್ಲ ತಮ್ಮ ಕಾವ್ಯದಲ್ಲಿ ತಮ್ಮ ಜೀವಕಳೆಯನ್ನಿಡುವುದಕ್ಕೆ ಯತ್ನಮಾಡುತ್ತಾರೆ. ಚೇತನ ಹಿರಿದಾದರೆ ಕಾವ್ಯದಲ್ಲಿ ಕಳೆ ಬರುತ್ತದೆ. ಕಿರಿದಾದರೆ ಅದು ಮಲಿನವಾಗಿರುತ್ತದೆ. ಅಲ್ಲದೆ ಕಿರಿಯ ಚೇತನಕ್ಕೆ ತನ್ನ ಕಳೆಯನ್ನು ಹೀಗೆ ತೆಗೆದಿಡುವ ಶಕ್ತಿಯೂ ಇರುವುದಿಲ್ಲ. ಗಾನಕುಶಲನ ಅಭ್ಯಾಸವು ಒಂದು ಸ್ವರವನ್ನು ಮಾತ್ರ ಹೇಳುವ ರೀತಿಯಲ್ಲಿ ಕಾಣುವಂತೆ ಸತ್ಯವಂತನ ಒಂದೊಂದು ನಡೆಯಲ್ಲಿ ಅವನ ಸತ್ಯನಿಷ್ಠೆ ಕಾಣುವಂತೆ ನಿಪುಣನಾದ ಕವಿಯ ಒಂದು ಪದ್ಯದಲ್ಲಿಯೇ ಅವನ ಜೀವನ ಪ್ರತಿಬಿಂಬವಾಗಿರುತ್ತದೆ. ಕವಿಗುರುವಿನ ಈ ಕಾವ್ಯವನ್ನು ಓದಿ ಸುಖಿಸುವ ಯಾರೂ ಅವನು ತೀರಿಹೋದನೆಂದು ಹೇಳಲಾರರು. ಅದರಲ್ಲಿ ತುಡಿಯುತ್ತಿರುವ ನಾಡಿ ಯನ್ನು ಹಿಡಿದು ನೋಡಿದ ಯಾರೂ ನಮ್ಮ ಕಾವ್ಯಕ್ಕೆ ಏನು ಗತಿ ಎಂದು ಭಯಪಡಲಾರರು. ಕಾಳಿದಾಸನು ಪ್ರಪಂಚದ ಇತರ ತನ್ನ ಜೊತೆಯ ಕವಿಗಳೊಂದಿಗೆ ಸೇರಿ ನಮ್ಮ ಪ್ರಪಂಚಕ್ಕೆ "ನಿರಾಶರಾಗಬೇಡಿ. ಯತ್ನ ಮಾಡಿ, ಉತ್ತಮ ಕಾವ್ಯವನ್ನು ಎಲ್ಲರೂ ಬರೆಯುವಿರಿ. ಒಳ್ಳೆಯ ಬಾಳನ್ನು, ತುಂಬಿದ ಬಾಳನ್ನು ಬಾಳಿ; ಒಳ್ಳೆಯ ಕಾವ್ಯವನ್ನು, ತುಂಬಿದ ಕಾವ್ಯವನ್ನು ಬರೆಯುವಿರಿ. ಈ ಕಾವ್ಯ ಪೂರ್ವದೇಶದ್ದು, ಈ ಕಾವ್ಯ

ಪಶ್ಚಿಮದೇಶದ್ದು ಎನ್ನಬೇಡಿ. ಇಲ್ಲದ ಭೇದವನ್ನು ಊಹಿಸಬೇಡಿ. ಪ್ರಪಂಚದ ಕಾವ್ಯವೆಲ್ಲ ಒಂದೇ. ಸೋತೆವೆನ್ನಬೇಡಿ. ಇನ್ನಿಲ್ಲವೆನ್ನಬೇಡಿ. ಉತ್ತಮವಾದ ಕಾವ್ಯದ ದಾರಿ ಸುಲಭವಾದ ದಾರಿ. ಇದೋ ನೋಡಿ, ನಾವು ನಡೆದ ದಾರಿ. ಇಲ್ಲಿ ನಡೆಯಿರಿ" ಎಂದು ಕೈತೋರಿಸಿ ಹೇಳುತ್ತಿದಾನೆ. ಅವನ ಮಾತನ್ನು ಕೇಳಿ ಅವನು ಹೇಳುವ ದಾರಿಯಲ್ಲಿ ನಡೆಯುವುದು ನಮ್ಮ ಕವಿಗಳ ಕರ್ತವ್ಯ, ನಮ್ಮ ಜನತೆಯ ಕರ್ತವ್ಯ.

ಗಯಟೇ ಕವಿಯ ಮಾತು: ನಾಟಕಗಳನ್ನು ಕುರಿತು

೧

ಜರ್ಮನ್ ಮಹಾಕವಿ ಗಯಟೆ ತಮ್ಮ ತರುಣಮಿತ್ರ ಎಕರ್‌ಮನ ರೊಂದಿಗೆ ಆಡಿದ ಮಾತುಗಳಲ್ಲಿ ಕಾವ್ಯದ ಸ್ವರೂಪಸ್ವಭಾವಕರ್ತವ್ಯಗಳನ್ನು ಕುರಿತ ಕೆಲವನ್ನು ಈ ಮೊದಲು ಒಂದು ಉಪನ್ಯಾಸದಲ್ಲಿ ನಮ್ಮ ಜನರ ಮುಂದೆ ಇರಿಸಿದ್ದಾಗಿದೆ. ವೇಮರ್ ರಾಷ್ಟ್ರಕ್ಕೆ ಹೋದ ಹೊಸದರಲ್ಲೇ ಕವಿಗೆ ಅಲ್ಲಿನ ನಾಟಕ ಮಂದಿರವನ್ನು ಒಂದು ವ್ಯವಸ್ಥೆಗೆ ತರುವ ಕೆಲಸ ಮೇಲೆ ಬಿತ್ತು. ಆ ಸಂದರ್ಭದಲ್ಲಿ ಅವರು ನಾಟಕಗಳನ್ನು ಬರೆದರು, ಬರೆಯಿಸಿದರು; ನಟನಟಿಯರನ್ನು ಬರಮಾಡಿಕೊಂಡರು, ತರಪೇತು ಮಾಡಿದರು; ನಾಟಕರಂಗದ ಹತ್ತು ವಿಷಯವನ್ನು ಕುರಿತು ಸಿದ್ಧಾಂತ ಮಾಡಿ ಪ್ರಯೋಗಿಸಿ ನೋಡಿದರು. ಜರ್ಮನಿಯ ಸಾಹಿತ್ಯದಲ್ಲಿ ಪ್ರಸಿದ್ಧಿಗೆ ಬಂದ ಅನೇಕ ನಾಟಕಗಳು ಈ ಮಂದಿರದ ಆಶ್ರಯದಲ್ಲಿ ರೂಪುಗೊಂಡುವು. ಈ ಕಾರಣದಿಂದ ನಾಟಕ, ನಟನ, ರಂಗ ಮುಂತಾದ ವಿಷಯಗಳಲ್ಲಿ ಗಯಟೆ ಬಹಳ ಪರಿಶ್ರಮಪಡೆದಿದ್ದರು. ಇವರು ಎಕರ್‌ಮನರೊಂದಿಗೆ ಆಡಿದ ಮಾತಿನಲ್ಲಿ ಇವುಗಳ ವಿಷಯ ಆಗಾಗ ಬರುತ್ತಲೇ ಇರುತ್ತದೆ. ರೀತಿಯಿಂದಲೂ ವಿಷಯದಿಂದಲೂ ಈ ಮಾತಿನಲ್ಲಿ ತುಂಬ ಸ್ವಾರಸ್ಯವಿದೆ. ಅಲ್ಲದೆ ಇದರಲ್ಲಿ ಬಹುಭಾಗ ಎಲ್ಲಾ ಕಾಲಕ್ಕೂ ಅನ್ವಯಿಸುವ ಮಾತು. ಇಂಥ ಮಾತಿನಲ್ಲಿ ಕೆಲವು ಹಿಂದಣ ಉಪನ್ಯಾಸದಲ್ಲಿ ಬಂದಿವೆ. ನಮ್ಮ ಜನರಿಗೆ ರುಚಿಸಬಹುದು, ಉಪಯೋಗವಾಗಬಹುದು, ಎಂಬ ಭಾವನೆ ಯಿಂದ ಇಂಥ ಮಾತಿನ ಇನ್ನಷ್ಟನ್ನು ಈ ಉಪನ್ಯಾಸದಲ್ಲಿ ವಿವರಿಸಿದೆ.

೨

ಗಯಟೆಯವರಿಗೆ ನಾಟಕದ ಕಾರ್ಯದ ವಿಷಯದಲ್ಲಿ ದೊಡ್ಡ ಅಭಿಪ್ರಾಯವಿತ್ತು. ಇನ್ನೇನು ಉದ್ಧಾರ ಮಾಡದಿದ್ದರೂ ಅದು ಉಳಿದ ಕೆಲವು ವಿನೋದಕ್ಕಿಂತ ಕ್ಷೇಮಕರವೆಂದು ಅವರ ಭಾವನೆ.

“ತಕ್ಕಷ್ಟು ತರುಣನಾಗಿ ಕೆಟ್ಟದಾರಿಗೆ ಸುಳಿಯದ ಯಾವನಿಗಾಗಲಿ ಕಾಲವನ್ನು ಸುಖವಾಗಿ ಕಳೆಯುವುದಕ್ಕೆ ನಾಟಕ ಮಂದಿರದಂತೆ ಅನುಕೂಲ ವಾದ ಬೇರೊಂದು ಸ್ಥಳ ಇರಲಾರದು. ಅಲ್ಲಿ ಯಾರೂ ಮಾತನಾಡಿಸು ವುದಿಲ್ಲ. ಇಷ್ಟವಿದ್ದರೆ ಬಾಯಿ ತೆಗೆಯಬಹುದು, ಇಲ್ಲದಿದ್ದರೆ ಬೇಡ. ರಾಜನಂತೆ ಆರಾಮವಾಗಿ ಕುಳಿತು ಎದುರಿನಲ್ಲಿ ನಾಟಕ ಹರಿಯುತ್ತಿರಲಾಗಿ ಮನಸ್ಸನ್ನೂ ಇಂದ್ರಿಯಗಳನ್ನೂ ಎದೆತುಂಬ ನಲಿಸಬಹುದು. ಅಲ್ಲಿ ಕಾವ್ಯವಿದೆ, ಚಿತ್ರವಿದೆ, ಗಾನವಿದೆ, ಗೀತವಿದೆ, ನಟನೆಯಿದೆ, ಜೊತೆಗೆ ಇನ್ನೇನೇನೋ ಇದೆ. ಈ ಎಲ್ಲ ಕಲೆಯೂ ತಾರುಣ್ಯ ಸೌಂದರ್ಯಗಳ ಅತಿಶಯಿತ ಮೋಹದ ಶಕ್ತಿಯೂ ಒಂದೇ ವೇಳೆ ಮನಸ್ಸನ್ನು ಮುಟ್ಟು ವುದಾದರೆ ಇದಕ್ಕೆ ಎಣೆಯಾಗಬಲ್ಲ ವಿನೋದಗುಚ್ಛ ಬೇರೆ ಎಲ್ಲಿ? ನಾಟಕ ಅರ್ಧ ಚೆನ್ನವಾಗಿದ್ದು ಅರ್ಧ ಚೆನ್ನವಲ್ಲದಿರುವಾಗಲೂ ಅಷ್ಟೆ. ಎಲ್ಲಿಯೋ ಕುಳಿತು ಕಿಟಕಿಯಿಂದ ಹೊರಕ್ಕೆ ನೋಡುವುದಕ್ಕಿಂತ ಅಥವಾ ಇಸ್ಪೀಟಾಟದ ಮಧ್ಯೆ ಹೊಗೆಯ ಅಡಿ ಕುಳಿತಿರುವುದಕ್ಕಿಂತ ಅಂಥ ನಾಟಕವನ್ನಾದರೂ ನೋಡುವುದು ಸುಖ.”

ಅದು ಒಳ್ಳೆಯ ನಾಟಕವೇ ಆದರೆ ಅದರಿಂದ ರಾಷ್ಟ್ರಕ್ಕೆ ಬಹಳ ಒಳ್ಳೆಯದಾಗುತ್ತದೆ, ಜನರನ್ನು ಎಚ್ಚರಗೊಳಿಸುವುದಕ್ಕೆ ಅದು ಅತ್ಯುತ್ತಮ ಸಾಧನ.

“ಶ್ರೇಷ್ಠನಾದ ದೃಶ್ಯಕವಿಯು ವಿಶೇಷ ಬರೆಯತಕ್ಕವನೂ ಆಗಿದ್ದು ಪ್ರಬಲವಾದ ಒಂದು ಉತ್ತಮ ಉದ್ದೇಶದಿಂದ ಬೇರೆ ಪ್ರೇರಿತನಾಗಿ ಅದು ಅವನ ಕೃತಿಗಳಲ್ಲೆಲ್ಲ ವ್ಯಾಪಿಸಿದ್ದಾದರೆ ಅವನು ತನ್ನ ಕೃತಿಗಳ ಹೃದಯವು ತನ್ನ ಜನರ ಹೃದಯವಾಗಿ ಪರಿಣಮಿಸುವಂತೆ ಮಾಡಿಬಿಡ ಬಹುದು. ಹೀಗೆ ಮಾಡುವುದು ಉತ್ತಮವಾದ ಕಾರ್ಯ. ಕಾರ್ನೆಲನ ಕೃತಿಯಿಂದ ಹೊರಟ ಪ್ರಭಾವ ವೀರರನ್ನು ಸೃಷ್ಟಿಮಾಡಿತು. ಇದು ನೆಪೋಲಿಯನಿಗೆ ಸಹಾಯವಾಯಿತು. ಏಕೆಂದರೆ ಅವನಿಗೆ ವೀರರಾದ ಜನ ಬೇಕಾಗಿದ್ದರು. ಈ ಕಾರಣದಿಂದ ಅವನು ಕಾರ್ನೆಲ್ ಜೀವಂತನಾಗಿದ್ದರೆ ಅವನನ್ನು ಒಬ್ಬ ರಾಜನನ್ನಾಗಿ ಮಾಡುತ್ತಿದ್ದೆನೆಂದು ಹೇಳಿದನು. ತನ್ನ ಧರ್ಮವನ್ನು ಅರಿತ ದೃಶ್ಯಕವಿಯು ಸದಾ ಅದರ ಉತ್ತಮ ಭಾಗದ

ಬೆಳವಣಿಗೆಗಾಗಿ ದುಡಿಯಬೇಕು. ಹೀಗೆ ತನ್ನ ಜನದ ಮೇಲೆ ತನ್ನ ಕೃತಿಯಿಂದ ಉದಾತ್ತವೂ ಶ್ರೇಯಸ್ಕರವೂ ಆದ ಪರಿಣಾಮವುಂಟಾಗುವಂತೆ ನೋಡಿಕೊಳ್ಳಬೇಕು.''

೩

ನಾಟಕ ಒಳ್ಳೆಯದಾಗಿ ಬಂದು ನಾಟಕ ಮಂದಿರಗಳು ಚೆನ್ನಾಗಿ ಕೆಲಸಮಾಡಬೇಕಾದರೆ ಜನರು ಅದಕ್ಕೆ ಸಹಾಯಮಾಡಬೇಕು. ಅದಕ್ಕೆ ಅವರಲ್ಲಿ ಸಂಸ್ಕೃತಿ ಇರಬೇಕು:

"ಇಟಲಿ ಫ್ರಾನ್ಸ್ ದೇಶಗಳಲ್ಲಿ ನಾಟ್ಯ ಕಲೆಯ ವಿಷಯದಲ್ಲಿ ಜನತೆಯ ಅಭಿರುಚಿ ಬಹು ಸಂಸ್ಕೃತವಾಗಿದೆ. ಅದನ್ನು ಇನ್ನು ತಿದ್ದುವುದು ಕಷ್ಟ. ನಮ್ಮ ನಾಟ್ಯರಂಗದಲ್ಲೋ ನಾವು ಬಹುರೀತಿಯ ದೃಶ್ಯಗಳ ಕಲಸುಮೇಲಾಟವನ್ನು ತೋರಿಸುತ್ತೇವೆ. ರುಚಿ ತಿಳಿಯಾಗುವುದಕ್ಕೆ ಇದು ದೊಡ್ಡ ಅಡ್ಡಿ. ನಿನ್ನೆ ರುದ್ರನಾಟಕವನ್ನು ಆಡಿದ ಸ್ಥಳದಲ್ಲಿಯೇ ಇಂದು ಒಂದು ಕೋತಿಕೊಂಗನಾಟ. ಒಂದು ದಿನ ಕಂಡ ರಸ ಅಥವಾ ರೀತಿಯನ್ನು ಮಾರನೆಯ ದಿನ ಪೋಷಿಸುವುದಿಲ್ಲ. ಇದರಿಂದ ಜನದ ರಸಜ್ಞತೆ ಕಲಕಿಹೋಗುತ್ತದೆ. ಯಾವುದರಲ್ಲಿ ಏನನ್ನು ನಿರೀಕ್ಷಿಸುವುದೆಂದು ಅದಕ್ಕೆ ತಿಳಿಯುವುದಿಲ್ಲ; ಯಾವ ಒಂದು ಕೃತಿಯನ್ನಾಗಲಿ ತಿಳಿದುಕೊಳ್ಳುವುದಕ್ಕೂ ಅದರ ಗುಣವನ್ನು ಗ್ರಹಿಸುವುದಕ್ಕೂ ಅದು ಕಲಿಯಲಾಗುವುದಿಲ್ಲ.''

ಜನರು ಹೊಸ ಹೊಸ ನಾಟಕ ಬೇಕೆಂದು ಕೇಳುತ್ತ ನಾಟಕ ಮಂದಿರಗಳು ಹೊಸ ಹೊಸ ನಾಟಕವನ್ನು ದಿನ ಬಿಟ್ಟು ದಿನ ಹಾಕುತ್ತ ಬಂದರೆ ನಾಟಕ ಚೆನ್ನಾಗಿ ಬೆಳೆಯಲಾರದು:

"ನನ್ನ ಬಹು ವರ್ಷದ ಅನುಭವದಲ್ಲಿ ನನಗೆ ಇದು ಮುಖ್ಯ ವಿಷಯವೆಂದು ಕಂಡುಬಂದಿದೆ. ಹಲವು ವರ್ಷ ಚೆನ್ನಾಗಿ ನಡೆಯಬಹುದೆಂದು ಖಚಿತವಾಗಿ ನಿರೀಕ್ಷಿಸಬಹುದಾದ ಹೊರತು ಯಾವ ನಾಟಕವನ್ನಾಗಲಿ ಸಂಗೀತದ ದೃಶ್ಯವನ್ನಾಗಲಿ ಅಭ್ಯಾಸಮಾಡಿಸಕೂಡದು. ಐದಂಕದ ಒಂದು ನಾಟಕವನ್ನು ಪಾಠಮಾಡುವುದರಲ್ಲಿ ಅಥವಾ ಅದೇ ಉದ್ದದ ಒಂದು ಗೀತದೃಶ್ಯವನ್ನು ಅಭ್ಯಾಸಮಾಡುವುದರಲ್ಲಿ ಎಷ್ಟು ಶಕ್ತಿ

ವೆಚ್ಚವಾಗುತ್ತದೆ ಎನ್ನುವುದನ್ನು ಯಾರೂ ಯೋಚನೆಮಾಡುವುದಿಲ್ಲ. ಗಾಯಕನು ದೃಶ್ಯದ ಎಲ್ಲ ಸ್ಥಾನಗಳನ್ನೂ ಅಂಕಗಳನ್ನೂ ಚೆನ್ನಾಗಿ ಸ್ವಾಧೀನಮಾಡಿಕೊಳ್ಳುವ ಮೊದಲು, ವಾದ್ಯಗಾರರು ಮೇಳವಾಗಿ ಸಂಗೀತವನ್ನು ನುಡಿಸುವ ಮೊದಲು, ಬಹಳ ಕೆಲಸ ನಡೆಯಬೇಕು.

ಒಂದು ಒಳ್ಳೆಯ ನಾಟಕ ಅಥವಾ ಗೀತದೃಶ್ಯವನ್ನು ಒಂದುಸಲ ಅಭ್ಯಾಸಮಾಡಿದ ಮೇಲೆ ಅದನ್ನು ಆಗಾಗ ಆಡುತ್ತಿರಬೇಕು. ಎಂದರೆ ಅದು ಜನರನ್ನು ಆಕರ್ಷಿಸುವುದೇ ಆದರೆ ತಕ್ಕಷ್ಟು ಜನ ಎಲ್ಲಿಯವರೆಗೆ ಬರುತ್ತಾರೋ ಅಲ್ಲಿಯವರೆಗೂ ಅದನ್ನು ಹಾಕಬೇಕು. ಹಿಂದೆ ಆಡಿ ಬಿಟ್ಟಿರುವ ನಾಟಕ ದೃಶ್ಯಗೀತವನ್ನಾದರೂ ಚೆನ್ನಾಗಿ ಆಡುವುದಕ್ಕೆ ತುಂಬ ಅಭ್ಯಾಸ ಬೇಕಾಗುವ ಸಂದರ್ಭದಲ್ಲಿ ಹೀಗೆಯೇ ಮಾಡಬೇಕು. . . . ಸದಾ ಹೊಸ ನಾಟಕ ಬೇಕೆನ್ನುವುದೂ ಒಳ್ಳೆಯದಾದ ನಾಟಕ ಅಥವಾ ದೃಶ್ಯ ಗೀತವನ್ನು ಕಷ್ಟಪಟ್ಟು ಅಭ್ಯಾಸಮಾಡಿಸಿ ಒಂದೇಸಲವೋ ಎರಡೇ ಸಲವೋ ನೋಡಿ ಆಮೇಲೆ ಬಿಡುವುದೂ ತೀರ ಬಿಡದೇ ಇದ್ದರೂ ಆಟಕ್ಕೆ ಆಟಕ್ಕೆ ಮಧ್ಯೆ ಒಂದೂವರೆ ಅಥವಾ ಎರಡು ತಿಂಗಳು ಅಂತರವನ್ನು ಬಿಡುವುದೂ ಮಂದಿರಕ್ಕೆ ಹಾನಿಮಾಡುತ್ತದೆ. ಹಾಗೆ ಮಾಡುವುದು ಅಂಥ ಕೃತಿಯನ್ನು ಅಭ್ಯಾಸಮಾಡಿರುವ ಕಲೆಗಾರರ ಶಕ್ತಿಯ ಅಕ್ಷಮ್ಯವಾದ ದುರ್ವಿನಿಯೋಗ.

"ಇಟಲಿಯಲ್ಲಿ ಒಂದೇ ಗೀತದೃಶ್ಯವನ್ನು ನಾಲ್ಕು ವಾರದ ದಿನ ಆರು ವಾರದ ದಿನ ಸಂಜೆ ಸಂಜೆಯೂ ಆಡುತ್ತಾರೆ. ಅಲ್ಲಿಯ ಜನರು ಇದು ಬೇಡ, ಹೊಸದು ಬೇಕು ಎಂದು ಹೇಳುವುದಿಲ್ಲ. ಪ್ಯಾರಿಸ್ ನಗರದ ಸುಸಂಸ್ಕೃತ ರಸಿಕರು ತಮ್ಮ ಪೂರ್ವದ ನಾಟಕಗಳನ್ನು ನೋಡಿ ನೋಡಿ ಅವನ್ನು ಬಾಯಿಪಾಠಮಾಡಿರುತ್ತಾರೆ. ಅದರ ಒಂದೊಂದು ಅಕ್ಷರವೂ ಹೇಗೆ ನುಡಿಯುತ್ತದೆಯೆಂದು ಅವರ ಕಿವಿ ತಿಳಿದಿರುತ್ತದೆ. ಈ ವೇಮರ್ ನಗರದಲ್ಲಿ ನನ್ನ ಇಫಿಜೀನಿಯಾ ಮತ್ತು ಟಾಸೋ ನಾಟಕಗಳನ್ನು ಆಡಿ ನಮ್ಮವರು ನನಗೆ ಗೌರವ ತೋರಿದ್ದಾರೆ. ಆದರೆ ಎಷ್ಟುಸಲ ಆಡಿದಾರೆ? ಮೂರು ನಾಲ್ಕು ವರ್ಷಗಳಲ್ಲಿ ಒಂದುಸಲವಿಲ್ಲ. ಜನರಿಗೆ ಅವು ಬೇಸರ ವಂತೆ. ಬೇಸರವಾಗುವುದು ನಿಜ. ನಟರಿಗೆ ಅವನ್ನು ಆಡುವುದಕ್ಕೆ

ಬೇಕಾದ ಅಭ್ಯಾಸವಿಲ್ಲ; ಜನರಿಗೆ ಅದನ್ನು ತಿಳಿಯುವುದಕ್ಕೆ ಬೇಕಾದ ಅಭ್ಯಾಸವಿಲ್ಲ. ಮತ್ತೆ ಮತ್ತೆ ಪಾಠಮಾಡಿ ನಟರು ಪಾತ್ರಗಳ ಹೃದಯವನ್ನು ಇನ್ನಷ್ಟು ಗ್ರಹಿಸಿದರೆ ಅವರ ಅಭಿನಯಕ್ಕೆ ಜೀವಕಳೆ ಬರುವುದು; ಅವರು ಆಡುವ ಮಾತು ಪಾಠದಿಂದ ಬಂದದ್ದಲ್ಲ, ಅವರ ಜೀವನದಿಂದ ಬಂದದ್ದು ಎಂಬಂತೆ ಕಾಣುವುದು. ಅದು ಹಾಗೆ ಆದಾಗ್ಯೆ ಜನ ಅದನ್ನು ನೋಡಿ ಬೇಸರಪಡಲಾರದು, ನೋಡುತ್ತ ತೆಪ್ಪಗೆ ಕುಳಿತಿರಲಾರದು.

"ಜರ್ಮನಿಯಲ್ಲಿ ನಾಟಕಕಲೆಯನ್ನು ಸ್ಥಾಪಿಸುವುದು ಸಾಧ್ಯವೆಂದು ಒಂದು ಕಾಲದಲ್ಲಿ ನಾನು ಭಾವಿಸಿದೆನು. ಅಷ್ಟೇ ಅಲ್ಲ, ನಾನು ಆ ಕೆಲಸದಲ್ಲಿ ಸಹಾಯಮಾಡಬಹುದೆಂದೂ, ಭದ್ರವಾದ ತಳಹದಿಯನ್ನು ಹಾಕಬಹುದೆಂದೂ ಕೂಡ ನನಗೆ ಒಂದು ಭ್ರಮೆಯಿತ್ತು. ಇಫಿಜೀನಿಯಾ ಟಾಸೋ ನಾಟಕಗಳನ್ನು ಬರೆದಾಗ ಅವುಗಳಿಂದ ಈ ಕೆಲಸ ಆಗಬಹುದೆಂದು ನಾನು ನಿರೀಕ್ಷಿಸಿದೆನು. ಅದು ಬಾಲಿಶ ನಿರೀಕ್ಷೆಯಾಯಿತು. ನನ್ನ ನಾಟಕದಿಂದ ಯಾರೂ ಕದಲಮೆದಲಲಿಲ್ಲ. ಎಲ್ಲ ಯಥಾಸ್ಥಿತಿಯಾಗಿತ್ತು. ನಾನು ಬರೆದ ನಾಟಕದಿಂದ ಏನಾದರೂ ಪರಿಣಾಮವಾಗಿದ್ದು ಜನ ಅವನ್ನು ಮೆಚ್ಚಿದ್ದರೆ ಆ ನಾಟಕಗಳಂತ ನಾಟಕ ಇನ್ನೂ ಹತ್ತನ್ನು ಬರೆಯುತ್ತಿದ್ದೆ. ಅದಕ್ಕೆ ವಸ್ತುವಿಲ್ಲದೆ ಇರಲಿಲ್ಲ. ಆದರೆ ಅಂಥ ಕೃತಿಗಳನ್ನು ಕಳೆಕಟ್ಟುವಂತೆ ಆಡಿ ತೋರಿಸುವುದಕ್ಕೆ ತಕ್ಕ ನಟರಿರಲಿಲ್ಲ, ವಿಶ್ವಾಸದಿಂದ ನೋಡಿ ಮೆಚ್ಚುವುದಕ್ಕೆ ಜನವಿರಲಿಲ್ಲ."

೪

ತುಂಬ ಕೆಲಸ ನಡೆದಿರುವ ಸಾಹಿತ್ಯದಲ್ಲಿ ಮತ್ತೆ ಮತ್ತೆ ಹೊಸ ಹೊಸ ಕೆಲಸ ಬರುತ್ತಲೇ ಇರುವುದು ಸಾಧ್ಯವಲ್ಲ. ತಾವು ಬರೆಯಲಾರಂಭಿಸಿದ ಕಾಲದಲ್ಲಿ ತಮ್ಮ ಭಾಷೆಯಿದ್ದ ಸ್ಥಿತಿಯನ್ನು ಕುರಿತು ಗಯಟೆ ಹೀಗೆ ಹೇಳಿದರು:

"ನಾಟಕ ಬರೆಯುವ ಶಕ್ತಿಯನ್ನು ತಕ್ಕಮಟ್ಟಿಗೆ ಪಡೆದಿರುವ ಯಾವನೇ ಆಗಲಿ ಷೇಕ್ಸ್‌ಪಿಯರ್ ಕವಿಯ ಕೃತಿಗಳನ್ನು ಗಮನಿಸದೆ ಇರುವುದು ಸಾಧ್ಯವಲ್ಲ. ಅದೇಕೆ, ಅವುಗಳನ್ನು ಚೆನ್ನಾಗಿ ಪರೀಕ್ಷಿಸದೆ ಇರುವುದು ಸಾಧ್ಯವಲ್ಲ. ಹಾಗೆ ಅವುಗಳನ್ನು ಪರೀಕ್ಷಿಸಿದ್ದೇ ಆದರೆ

ಅವನಿಗೆ ಒಂದು ವಿಷಯ ಸ್ಪಷ್ಟವಾಗುವುದು. ಅದು ಯಾವುದೆಂದರೆ: ಷೇಕ್ಸ್‌ಪಿಯರ್ ಕವಿಯು ಮಾನವಸ್ವಭಾವವನ್ನು ಅದರ ಸಕಲ ಪ್ರವೃತ್ತಿಗಳಲ್ಲಿಯೂ ಎಲ್ಲ ಏರುಬೀಳುಗಳಲ್ಲಿಯೂ ವರ್ಣಿಸಿ ಮುಗಿಸಿದ್ದಾನೆ ಎನ್ನುವುದು; ಷೇಕ್ಸ್‌ಪಿಯರ್ ಹಾಗೆ ಮಾಡಿರುವುದರಿಂದ ತನಗೆ ಮಾಡುವುದಕ್ಕೆ ಏನೂ ಉಳಿದಿಲ್ಲ ಎನ್ನುವುದು. ನಿಜವಾಗಿಯೂ ಗುಣವನ್ನು ಪರಿಶೀಲಿಸುವ ಮನಸ್ಸುಳ್ಳವನಾದರೆ ಇಂಥ ಅಸಾಧ್ಯವಾದ ಅಗಾಧವಾದ ಶ್ರೇಷ್ಠತೆ ಕಾರ್ಯದಲ್ಲಿ ಮೊದಲೇ ಕಂಡಿದೆಯೆಂದು ತಿಳಿದಮೇಲೆ ಆ ಲೇಖಕನಿಗೆ ಕಾಗದದ ಮೇಲೆ ಲೇಖನಿಯನ್ನು ಇಡುವುದಕ್ಕೆ ಧೈರ್ಯ ಬರುವುದು ಹೇಗೆ?

"ನಮ್ಮ ದೇಶದಲ್ಲಿ ಐವತ್ತು ವರ್ಷದ ಹಿಂದೆ ನನಗೆ ಈ ಕಷ್ಟವು ಒದಗಲಿಲ್ಲ. ಆಗ ಇದ್ದ ಬರವಣಿಗೆಯನ್ನು ನಾನು ಬೇಗನೆ ನೋಡಿ ಮುಗಿಸಿದೆನು. ಅದರಿಂದ ನಾನು ಭೀತನಾಗುವಂತೆ ಇರಲಿಲ್ಲ. ಅದು ನನ್ನ ಗಮನವನ್ನು ಬಹುಕಾಲ ಹಿಡಿಯಲಿಲ್ಲ. ನಾನು ಬೇಗನೆ ಜರ್ಮನ್ ಸಾಹಿತ್ಯವನ್ನೂ ಅದರ ಪರಿಶೀಲನೆಯನ್ನೂ ಹಿಂದೆ ಬಿಟ್ಟು ಬದುಕು ಬರಹದ ಕಡೆಗೆ ಮನಸ್ಸನ್ನು ತಿರುಗಿಸಿದೆನು. ಹೀಗೆ ನಾನು ನನಗೆ ಸಹಜವಾದ ಬರವಣಿಗೆಯಲ್ಲಿ ಮುಂದೆ ಮುಂದೆ ಹೋಗಿ ಒಂದೊಂದು ಕಾಲದ ಕೃತಿಗಳಂತೆ ಕೃತಿಗಳನ್ನು ರಚಿಸಿದೆನು. ನಾನು ಆಂಗ್ಲೇಯನಾಗಿ ಹುಟ್ಟಿದ್ದು ನನ್ನ ಪ್ರಾಯದ ಅರಿವಿನಲ್ಲಿ ಆ ಭಾಷೆಯ ಅಸಂಖ್ಯಾತ ಉತ್ತಮ ಕೃತಿಗಳನ್ನು ನೋಡಿದ್ದರೆ ಅವು ನನ್ನನ್ನು ಅದುಮಿಬಿಡುತ್ತಿದ್ದುವು; ಏನುಮಾಡುವುದೆಂದು ನನಗೆ ತೋಚದಂತೆ ಮಾಡುತ್ತಿದ್ದುವು. ನಾನು ನಮ್ಮ ಭಾಷೆಯಲ್ಲಿ ತಾರುಣ್ಯದ ಉತ್ಸಾಹದಿಂದ ಬರೆದ ರೀತಿಯಲ್ಲಿ ಬರೆಯುವುದು ಆಗ್ಯೆ ಆಗುತ್ತಿರಲಿಲ್ಲ. ಏನುಮಾಡುವುದೆಂದು ಚಿಂತಿಸಬೇಕಾಗುತ್ತಿತ್ತು. ಹೊಸ ದಾರಿಯನ್ನು ಹುಡುಕುವುದಕ್ಕೆ ಬಹುಕಾಲ ಯೋಚಿಸಬೇಕಾಗುತ್ತಿತ್ತು."

ಕವಿ ಹಿರಿಯನಾಗಬೇಕಾದರೆ ಅವನು ಬರೆಯುವ ಕಾಲ ಅವನ ಕೆಲಸಕ್ಕೆ ಅನುಕೂಲವಾಗಿರಬೇಕು. ಸುತ್ತ ಒಳ್ಳೆಯ ಕೆಲಸ ನಡೆಯುತ್ತಿರಬೇಕು. ಅತಿಬುದ್ಧಿಯ ವಿಮರ್ಶೆ ಅದಕ್ಕೆ ತೊಡರಾಗಿ ಬರುತ್ತಿರಬಾರದು:

"ಷೇಕ್ಸ್‌ಪಿಯರ್ ಕವಿಯ ಮಹತ್ವದ ಬಹುಭಾಗವು ಅವನ ಕಾಲದಿಂದ ಬಂದದ್ದೆಂದು ಒಪ್ಪದವರು ಒಂದು ವಿಷಯವನ್ನು ಯೋಚಿಸಲಿ. ಷೇಕ್ಸ್‌ಪಿಯರ ಬರವಣಿಗೆ ಈಗಣ ಇಂಗ್ಲೆಂಡಿನಲ್ಲಿ ಸಾಧ್ಯವೆ? ತಪ್ಪು ಹುಡುಕುವ, ಬೆಣ್ಣೆಯಲ್ಲಿ ಕೂದಲು ತೆಗೆಯುವ, ಪತ್ರಿಕೆಗಳ ಈ ನತದ್ರಷ್ಟ ಕಾಲದಲ್ಲಿ?

"ಶ್ರೇಷ್ಠವಾದ ಕೃತಿ ಬೆಳೆಯಬೇಕಾದರೆ ಬರಹ ಅಕ್ಷುಬ್ಧವಾಗಿ ಅಕುಟಿಲವಾಗಿ ಕುಡಿದ ನೀರು ಕದಲದ ರೀತಿಯಲ್ಲಿ ನಡೆಯಬೇಕು. ಅದು ಈಗ ಸಾಧ್ಯವಲ್ಲ. ಈ ಕಾಲದಲ್ಲಿ ನಮ್ಮ ಯೋಗ್ಯತೆ ಜನದ ಮುಂದೆ ಬಿದ್ದಿದೆ. ಬೇರೆ ಬೇರೆ ಐವತ್ತು ಸ್ಥಳಗಳಲ್ಲಿ ಪ್ರಕಟವಾಗುವ ದಿನದಿನದ ವಿಮರ್ಶೆಗಳು, ಅವುಗಳಿಂದ ಜನದಲ್ಲಿ ಉತ್ಪನ್ನವಾಗಿರುವ ಹರಟೆ, ಇವು ನಿರ್ದುಷ್ಟವಾದ ಕೃತಿ ತಲೆದೋರದಂತೆ ಮಾಡಿವೆ. ಈಗಿನ ದಿವಸದಲ್ಲಿ ಈ ಗಲಭೆಯಿಂದೆಲ್ಲ ದೂರ ನಿಂತು ಪ್ರಯತ್ನಪೂರ್ವಕವಾಗಿ ಒಬ್ಬೊಂಟಿಗನಾಗದಂಥ ಲೇಖಕನು ಕೆಟ್ಟನೆಂಬುದು ನಿಜ."

ಜರ್ಮನ್ ದೇಶದಲ್ಲಿ ಅನುಕೂಲವಾದ ಸನ್ನಿವೇಶ ಇಲ್ಲದ್ದರಿಂದ ನಾಟಕ ರಚನೆಗೆ ಆರಂಭಮಾಡಿದ ಲೆಸಿಂಗ್ ಕವಿಯ ಕೆಲಸ ಜನರು ಸಾಮಾನ್ಯವೆನ್ನುವಂಥದಾಯಿತು:

"ಜನರು ಲೆಸಿಂಗನ ಕೃತಿಗಳನ್ನು ಪೂರ್ವಿಕರ ಕೃತಿಗಳೊಂದಿಗೆ ಹೋಲಿಸಿ ಇವು ಕೆಲಸಕ್ಕೆ ಬಾರದವು ಎಂದು ಹೇಳುತ್ತಾರೆ. ಹೀಗೆಂದರೇನು? ಅವನ ಕೃತಿ ಸಣ್ಣದಾಯಿತೆಂದು ದೂರುವ ಬದಲು ಇಂಥ ಶಕ್ತಿವಂತನು ಇಂಥ ಸಣ್ಣಕಾಲದಲ್ಲಿ ಜೀವಿಸಬೇಕಾಯಿತೇ ಎಂದು ಕನಿಕರ ತೋರು. ಅವನ ಕಾಲ ಅವನಿಗೆ ಆ ನಾಟಕಗಳ ವಸ್ತುವಿಗಿಂತ ಒಳ್ಳೆಯ ವಸ್ತುಗಳನ್ನು ಕೊಡಲಾರದೆ ಹೋಯಿತು."

೫

ಉಚ್ಛ್ರಾಯಸ್ಥಿತಿಯಲ್ಲಿದ್ದ ಕಾವ್ಯ ಕೆಡುವುದೆನ್ನುವುದೂ ಒಬ್ಬ ಕವಿಯಿಂದಲ್ಲ; ಜನದ ಬಾಳುವೆಯ ಸ್ಥಿತಿಯಿಂದ:

"ಯಾವನಾದರೂ ಒಬ್ಬನಿಂದ ಒಂದು ಕಲೆ ಹೀನಸ್ಥಿತಿಗೆ ಬಂದಿತೆನ್ನುವ ಮಾತನ್ನು ಮೊತ್ತದಲ್ಲಿ ನಾನು ಒಪ್ಪುವುದಿಲ್ಲ. ಕಲೆ ಕೆಡಬೇಕಾದರೆ

ವಿವರಿಸಿ ಹೇಳುವುದಕ್ಕಾಗದ ಬಹು ಕಾರಣಗಳು ಒಟ್ಟುಗೂಡಬೇಕು. ಗ್ರೀಕರ ನಾಟಕದ ಕ್ಷೀಣದಶೆಯು ಯೂರಿಪಿಡೀಸನಿಂದ ಆಯಿತೆನ್ನುವುದು ಅಸಮಂಜಸ. ಕಾಲ ಶ್ರೇಷ್ಠವಾಗಿದ್ದಾಗ ಅದು ಬೆಳವಣಿಗೆಯ ದಾರಿಯಲ್ಲಿ ಹೋಗುತ್ತದೆ. ಆಗ ಅಲ್ಪಕೃತಿಗಳಿಂದ ಏನೂ ತೊಂದರೆ ಆಗುವುದಿಲ್ಲ. ಯೂರಿಪಿಡೀಸನ ಕಾಲ ಎಂಥ ಶ್ರೇಷ್ಠಕಾಲ! ಅದು ಅಭಿರುಚಿಯ ಕ್ಷೀಣತೆಯ ಕಾಲವಲ್ಲ, ಉಚ್ಛ್ರಾಯದ ಕಾಲ. ಆಗ ಶಿಲ್ಪ ಇನ್ನೂ ಶಿಖರವನ್ನು ಮುಟ್ಟಿರಲಿಲ್ಲ; ಚಿತ್ರ ಎಳೆತನದಲ್ಲಿತ್ತು. ಯೂರಿಪಿಡೀಸನ ಕೃತಿಗಳಲ್ಲಿ ಸೋಫೊಕ್ಲೀಸನ ಕೃತಿಗಳೊಂದಿಗೆ ಹೋಲಿಸಿದರೆ ಕೊರತೆಗಳು ಕಾಣುತ್ತವೆ. ಆದರೆ ಅವನನಂತರ ಬಂದ ಕವಿಗಳು ಕೊರತೆಗಳನ್ನು ಅನುಸರಿಸಿ ಇವುಗಳಿಂದ ಕೆಡುವುದು ಆವಶ್ಯಕವಾಗಿರಲಿಲ್ಲ. ಇವನ ನಾಟಕಗಳಲ್ಲಿ ಕೆಲವು ದೊಡ್ಡ ಗುಣಗಳಿದ್ದುವು. ಅವುಗಳಲ್ಲಿ ಕೆಲವು ಸೋಫೊಕ್ಲೀಸನ ನಾಟಕಗಳಿಗಿಂತ ಉತ್ತಮವಾಗಿದ್ದುವು. ಅನುಕರಿಸಿದ ಕವಿಗಳು ಅವುಗಳ ಸದ್ಗುಣಗಳನ್ನು ಅನುಕರಿಸುವುದಕ್ಕೆ ಏಕೆ ಯತ್ನಿಸಲಿಲ್ಲ? ಹೀಗೆ ಮಾಡಿ ಅವರು ಯೂರಿಪಿಡೀಸನಷ್ಟಾದರೂ ದೊಡ್ಡವರಾಗಬಹುದಾಗಿತ್ತು. ಗ್ರೀಕರ ಶೋಕನಾಟಕಗಳ ಮೂವರು ಮಹಾಕವಿಗಳನಂತರ ಹಾಗೆಯೇ ಮಹನೀಯರಾದ ನಾಲ್ಕು, ಐದು, ಆರನೆಯ ಮಹಾನಾಟಕಕಾರರು ಬರದೆ ಹೋದರು. ಇದು ಏಕೆ ಎಂದು ಕಾರಣ ಹೇಳುವುದು ಕಷ್ಟ. ಆದರೂ ನಾವು ಸ್ವಲ್ಪ ಕಾರಣವನ್ನು ಊಹಿಸಬಹುದು; ನಿಜವನ್ನು ಸ್ವಲ್ಪಮಟ್ಟಿಗೆ ಗ್ರಹಿಸಬಹುದು.

"ಮನುಷ್ಯನು ಸರಳಚೇತನ. ಅವನು ಇನ್ನೆಷ್ಟು ವಿಶಾಲ ಬಹುಮುಖ ಅಗಾಧವಾಗಿದ್ದರೂ ಅವನ ಬಾಳುವೆ ಅವಸ್ಥೆಗಳ ಚಕ್ರ ಬೇಗ ಮುಗಿಯುತ್ತದೆ. ಬಡಪಾಯಿ ನಮ್ಮ ಜರ್ಮನ್ ಜನದಲ್ಲಿರುವಂತೆ ಇದ್ದಿದ್ದರೆ ಗ್ರೀಕರಲ್ಲಿಯೂ ನಾಲ್ಕು, ಐದು ಮತ್ತು ಆರನೆಯ ಕವಿಗಳಿಗೆ ಸ್ಥಳವಿರಬಹುದಾಗಿತ್ತು. ನಮ್ಮಲ್ಲಿ ಲೆಸಿಂಗ್ ಬರೆದಿರುವುದು ಎರಡೋ ಮೂರೋ ನಾಟಕ. ನಾನು ಬರೆದಿರುವುದು ಮೂರೋ ನಾಲ್ಕೋ. ಸ್ಕಿಲ್ಲರ್ ಬರೆದಿರುವುದು ನಾಲ್ಕೋ, ಐದೋ. ನಮ್ಮಲ್ಲಿ ತಕ್ಕಮಟ್ಟಿನ ನಾಟಕ ಎನ್ನಬಹುದಾದದ್ದು ಇಷ್ಟು. ಗ್ರೀಕರ ಮೂವರು ಮಹಾಕವಿಗಳಲ್ಲಿ

ಒಬ್ಬೊಬ್ಬನೂ ಒಂದು ನೂರರಷ್ಟು ಕೃತಿಗಳನ್ನು ಬರೆದನು. ಹೋಮರನ ದುಃಖ ಸನ್ನಿವೇಶಗಳೂ ಚರಿತ್ರೆಯ ವೀರಕಥೆಗಳೂ ಕೆಲವು ಮೂರುಸಲ ನಾಲ್ಕುಸಲ ಕೃತಿಗಳಲ್ಲಿ ವ್ಯವಹೃತವಾದುವು. ಇಂಥ ಕೃತಿ ವೈಪುಲ್ಯದಲ್ಲಿ ಬರಬರುತ್ತ ವಸ್ತುಗಳು ಮುಗಿದುವೆಂದೂ ಆಮೇಲೆ ಬಂದ ಕವಿಯು ಏನುಮಾಡುವುದೆಂದು ತೋರದೆ ಬಗೆಹರಿಯದೆ ನಿಂತನೆಂದೂ ನಾವು ಊಹಿಸಬಹುದು.

"ನಿಜವಾಗಿ ನೋಡಿದರೆ ಅವನು ಬರೆಯಬೇಕಾದುದು ತಾನೆ ಏಕೆ? ಸಾಕಾದಷ್ಟು ಕೃತಿ ಆಗಿರಲಿಲ್ಲವೆ? ಈಸ್‌ಕೈಲಸ್, ಸೋಫೊಕ್ಲೀಸ್, ಯೂರಿಪಿಡೀಸರ ಕೃತಿಗಳು ಜಾತಿಯಲ್ಲಿ ಆಳದಲ್ಲಿ ಮರಳಿ ಮರಳಿ ನೋಡಿದರೂ ಬೇಸರವಾಯಿತೆಂದು ಬದಿಗಿಡದ ರೀತಿಯವಾಗಿರಲಿಲ್ಲವೆ? ಅವರ ಕೆಲಸದಲ್ಲಿ ಉಳಿದು ಬಂದಿರುವ ಒಂದು ಹಿಡಿ ಚೂರುಗಳೇ ಇಷ್ಟು ಆಳವಾಗಿವೆ, ಇಷ್ಟು ವಿಶಾಲವಾಗಿವೆ. ಯೂರೋಪ್ ಖಂಡದ ಬಡಪಾಯಿಗಳು ನಾವೆಲ್ಲ ಹಲವು ಶತಮಾನ ಅವುಗಳನ್ನು ಕುರಿತು ವಿಚಾರಮಾಡಿದ್ದೇವೆ. ಇನ್ನು ಹಲವು ಶತಮಾನಕ್ಕೆ ನಮಗೆ ಅವುಗಳಲ್ಲಿ ಆಹಾರವಿದೆ, ಉದ್ಯೋಗವಿದೆ."

ಹೀಗೆ ಒಬ್ಬ ಕವಿಗೆ ಸಲ್ಲದ ಆರೋಪವನ್ನು ಮಾಡುವುದು ವಿಮರ್ಶೆಯಲ್ಲಿ ವಕ್ರಪದ್ಧತಿ. ಇಂತ ವಿಮರ್ಶೆಗೆ ಉತ್ತಮವಾದ ಕೃತಿಯಲ್ಲಿ ಕೂಡ ಇಲ್ಲದ ತಪ್ಪು ಕಾಣುತ್ತದೆ:

"ಸ್ಕ್ಲೆಗಲನಂತ ಮನುಷ್ಯನಿಗೆ ಮಾಲಿಯರನ ರೀತಿಯ ಸರಳ ಸ್ವಭಾವವು ಕಣ್ಣನ್ನು ಕುಕ್ಕುತ್ತದೆ. ಅವನಲ್ಲಿ ಯಾವುದೂ ಒಪ್ಪುವುದಿಲ್ಲ; ಅವನನ್ನು ಕಂಡರೆ ಸಹಿಸುವುದಿಲ್ಲ. ನಾನು ಮಿಸಾನ್‌ತ್ರೋಪ್ ನಾಟಕವನ್ನು ಮರಳಿ ಮರಳಿ ಓದುತ್ತೇನೆ. ಅದನ್ನು ಕಂಡರೆ ನನಗೆ ಬಹು ಪ್ರೇಮ. ಸ್ಕ್ಲೆಗಲನಿಗೆ ಈ ನಾಟಕವೆಂದರೆ ಬೆಂಕಿ. ಅವನು ಟಾರ್‌ಟೂಫ್ ನಾಟಕವನ್ನು ವಿಧಿಯಿಲ್ಲದೆ ಸ್ವಲ್ಪ ಹೊಗಳುತ್ತಾನೆ. ಆದರೆ ಒಡನೆಯೇ ತಿರುಗಿ ಆದಷ್ಟು ದೂರುವುದಕ್ಕೆ ಆರಂಭಮಾಡುತ್ತಾನೆ. ಓದಿದೆವೆಂಬ ಹೆಂಗಸರನ್ನು ಮಾಲಿಯರ್ ಪರಿಹಾಸ್ಯಮಾಡಿರುವಷ್ಟನ್ನು ಸ್ಕ್ಲೆಗಲನು ಮನ್ನಿಸಲಾರನು. ತಾನು ಮಾಲಿಯರ್ ಜೊತೆಯಲ್ಲಿ

ಇದ್ದಿದ್ದರೆ ಅವನು ಪ್ರಾಯಶಃ ತನ್ನನ್ನು ಪರಿಹಾಸ್ಯಮಾಡುತ್ತಿದ್ದನೆಂದು ಅವನು ತಿಳಿದಿರಬಹುದು ಎಂದು ನನ್ನ ಸ್ನೇಹಿತರೊಬ್ಬರು ಹೇಳುತ್ತಾರೆ. ಇದು ನಿಜವಿರಬಹುದು.

"ಸ್ಕ್ಲೆಗಲ್ ಬಹಳ ಓದಿದವನೆನ್ನುವುದು ನಿರ್ವಿವಾದವಾದ ವಿಷಯ. ಅವನ ಅದ್ಭುತವಾದ ಪಾಂಡಿತ್ಯವನ್ನೂ ವಿಸ್ತಾರವಾದ ಗ್ರಂಥಪರಿಚಯವನ್ನೂ ನೋಡಿದರೆ ಭಯವಾಗುತ್ತದೆ. ಆದರೆ ವಿಮರ್ಶಕನಲ್ಲಿ ಇಷ್ಟು ಸಾಲದು. ಸೀಮೆಯಲ್ಲಿಲ್ಲದ ಪಾಂಡಿತ್ಯವಾದರೂ ರಸಜ್ಞತೆಯಾಗಲಾರದು. ಅವನ ವಿಮರ್ಶೆ ತೀರಾ ಏಕದೃಷ್ಟಿಯದು. ಎಲ್ಲಾ ನಾಟಕಗಳಲ್ಲಿಯೂ ಅವನು ನೋಡುವುದು ಕಥೆಯ ತಡಿಕೆ, ಅದರ ಜೋಡಣೆ. ಹಿಂದಿನ ಇಂಥ ನಾಟಕದಲ್ಲಿ ಇದೇ ರೀತಿಯ ಸನ್ನಿವೇಶವಿದೆ ಎಂದು ಕೆಲವು ಸಣ್ಣ ವಿಷಯಗಳನ್ನು ಎತ್ತಿತೋರಿಸುತ್ತಾನೆ. ಸುಂದರವಾದ ಜೀವನ ಅಥವಾ ಉನ್ನತ ಚೇತನದ ಸಂಸ್ಕೃತಿಯೇನನ್ನು ಕವಿ ಕಾವ್ಯದಲ್ಲಿ ತೋರಿಸಿದ್ದಾನೆ ಎನ್ನುವುದನ್ನು ಇವನು ಗಣಿಸುವುದೇ ಇಲ್ಲ. ಆದರೆ ನಾಟಕವೊಂದರಲ್ಲಿ ಗ್ರಂಥಕರ್ತನ ಪ್ರಿಯವೋ ಹಿರಿದೋ ಆದ ಬಾಳು ಕಾಣದಿದ್ದರೆ ಇನ್ನು ಯಾವ ಚಮತ್ಕಾರ ಇದ್ದು ಏನು ಪ್ರಯೋಜನ? ಆ ಬಾಳಲ್ಲವೇ ಜನರ ಮೇಲೆ ಪರಿಣಾಮವನ್ನುಂಟುಮಾಡುವುದು?

"ಸ್ಕ್ಲೆಗಲನು ಫ್ರೆಂಚ್ ನಾಟಕವನ್ನು ವಿಮರ್ಶಿಸಿರುವ ರೀತಿಯನ್ನು ಯಾವನಾದರೂ ಕ್ಷುದ್ರವಿಮರ್ಶಕನಾಗಬೇಕಾದರೆ ಅನುಸರಿಸಬೇಕಾದ ರೀತಿ ಎಂದು ನಾನು ಭಾವಿಸುತ್ತೇನೆ. ಇಂಥ ವಿಮರ್ಶಕನು ಒಳ್ಳೆಯ ಗುಣವನ್ನು ತಿಳಿಯುವ ದೃಷ್ಟಿ ಯಾವುದೂ ಇಲ್ಲದೆ ಇರುತ್ತಾನೆ. ಇವನಿಗೆ ನಿರ್ದುಷ್ಟವಾದ ಸ್ವಭಾವವೂ ಉನ್ನತವಾದ ಶೀಲವೂ ಹುಲ್ಲು ಹೊಟ್ಟು ಎಂಬಂತೆ ನಿರುಪಯೋಗವಾಗಿ ಕಾಣುತ್ತವೆ."

೬

ನಾಟಕದಿಂದ ಒಳ್ಳೆಯದಾಗಬೇಕಾದರೆ ಅದರ ಮೂಲದಲ್ಲಿ ದೊಡ್ಡ ಭಾವನೆಯಿರಬೇಕು.

"ಪ್ಲೇಟನ್‌ರವರ ಕೃತಿಗಳಲ್ಲಿ ಚಾತುರ್ಯವಿದೆ; ಒಂದು ರೀತಿಯ ಪೂರ್ಣತೆಯಿದೆ. ಆದರೆ ತೂಕವಿಲ್ಲ; ಭಾವಗಾಂಭೀರ್ಯವಿಲ್ಲ. ಇವುಗಳ

ರೀತಿ ಓದುವವನ ಮನಸ್ಸಿನಲ್ಲಿ ಆಳವಾದ ಸ್ಥಿರವಾದ ಭಾವನೆಯನ್ನು ಉಂಟುಮಾಡುವುದಲ್ಲ. ಜೀವದ ತಂತುಗಳನ್ನು ಹಗುರವಾಗಿ ಕ್ಷಣ ಮಾತ್ರಕ್ಕೆ ಮಿಡಿಯುವಂಥದು.

"ಸಾಮಾನ್ಯವಾಗಿ ಲೇಖಕನ ಗ್ರಂಥರಚನ ಶಕ್ತಿಗಿಂತಲೂ ಹೆಚ್ಚಾಗಿ ಜನರ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡುವುದು ಅವನ ನಡತೆ. ಫ್ರೆಂಚ್ ಜನರು ಲಾ ಫಾನ್‌ಟೈನ್ ಕವಿಯನ್ನು ಬಹು ಗೌರವ ದಿಂದ ಕಾಣುತ್ತಾರೆ. ಇದು ಅವನ ಕವಿತಾಶಕ್ತಿಗಾಗಿ ಅಲ್ಲ; ಅವನ ಬರಹದಲ್ಲಿ ವ್ಯಕ್ತವಾಗಿರುವ ಮನೋಧರ್ಮದ ಉನ್ನತಿಗಾಗಿ."

ಇರುವ ಸ್ಥಿತಿಯಲ್ಲಿ ತಪ್ಪನ್ನು ಹುಡುಕುತ್ತ ತಪ್ಪನ್ನು ಹೇಳುತ್ತ ಹೋದರೆ ಕಾವ್ಯದಿಂದ ಸಾಕಾದಷ್ಟು ಒಳ್ಳೆಯದಾಗುವುದಿಲ್ಲ. ಅದು ಸರಿಯಾದದ್ದನ್ನು ತಿಳಿಸಬೇಕು; ಒಳ್ಳೆಯದನ್ನು ಕಟ್ಟಬೇಕು.

"ಪೂರ್ವದಿಂದ ಬಂದದ್ದು ಮತ್ತು ದೇಶವಾತ್ಸಲ್ಯಕ್ಕೆ ಸಂಬಂಧ ಪಟ್ಟದ್ದು, ಇವುಗಳ ತ್ಯಾಗದಿಂದ ಬೈರನ್ ಕವಿ ಜೀವನದಲ್ಲಿ ನಿರ್ಭಾಗ್ಯ ನಾದನು. ಅಲ್ಲದೆ ಆತನ ಕ್ರಾಂತಿಕಾರಕಬುದ್ಧಿಯೂ ಅದರೊಂದಿಗೆ ಸೇರಿ ಬಂದ ನಿರಂತರವಾದ ಕ್ಷುಬ್ಧ ಮನೋಧರ್ಮವೂ ಅವನ ಕಾವ್ಯಶಕ್ತಿಯ ಬೆಳವಣಿಗೆಗೆ ಅಡಚಣೆಯಾದುವು. ನಿರಂತರವಾದ ನಾಸ್ತಿಕವಾದವೂ ದೋಷಾನ್ವೇಷಣವೂ ಇವನ ಅತ್ಯುತ್ತಮ ಕೃತಿಗಳಿಗೂ ಕುಂದನ್ನು ತಂದಿವೆ. ಕವಿಯ ಅತೃಪ್ತಿ ಓದುವವನಿಗೆ ಸೋಕುವುದು ಹಾಗಿರಲಿ. ಇಂಥ ಎಲ್ಲ ವಿರೋಧದ ಉದ್ದೇಶ ನಾಸ್ತಿ ಎನ್ನುವುದು. ಮತ್ತೆ ಮತ್ತೆ ನಾಸ್ತಿ ಎನ್ನುವುದರಲ್ಲಿ ಪ್ರಯೋಜನವಿಲ್ಲ. ಕೆಟ್ಟದೆಂದು ನಾವು ಯಾವುದನ್ನು ಹೇಳುತ್ತೇವೆ ಅದು ಕೆಟ್ಟದೇ ಆಗಿತ್ತು ಎನ್ನು. ಹಾಗೆ ಹೇಳಿದ್ದರಿಂದ ನಮಗೇನು ಲಾಭ? ಆದರೆ ನಾವು ಕೆಟ್ಟದೆಂದು ಹೇಳುವ ಅಂಶ ಒಳ್ಳೆಯದಾಗಿತ್ತೆನ್ನು. ಆಗ ಅದನ್ನು ದೂರಿ ನಾವು ಕೆಡಕನ್ನು ಮಾಡುತ್ತೇವೆ. ಸರಿಯಾದ ಕೆಲಸವನ್ನು ಮಾಡುವೆನೆನ್ನು ವವನು ಕೂಗಾಡಬಾರದು, ಚೆನ್ನಾಗಿ ಆಗದ ಕೆಲಸವನ್ನು ಕುರಿತು ಕಾತರನಾಗಬಾರದು. ತಾನು ಚೆನ್ನಾದದ್ದನ್ನು ಮಾಡುವುದಕ್ಕೆ ತೊಡಗ ಬೇಕು. ಏಕೆಂದರೆ, ಜೀವನದಲ್ಲಿ ಮುಖ್ಯವಾದ ಕೆಲಸ ಕಿತ್ತು

ಎಸೆಯುವುದಲ್ಲ, ಎತ್ತಿ ನಿಲ್ಲಿಸುವುದು. ಇದರಲ್ಲಿ ಮನುಷ್ಯನಿಗೆ ಪಾವನವಾದ ಸುಖವಿದೆ.''

ಆವಶ್ಯಕವಾದರೆ ಒಂದು ಸಾಹಿತ್ಯ ಇನ್ನೊಂದು ಸಾಹಿತ್ಯದಿಂದ ಒಳ್ಳೆಯ ಭಾವನೆಯನ್ನು ತರುವುದು ಒಳ್ಳೆಯದು, ತರಬೇಕು:

''ಫ್ರೆಂಚ್ ಜನರು ನಮ್ಮವರ ಗ್ರಂಥಗಳನ್ನು ಪರಿವರ್ತಿಸಿಕೊಳ್ಳುತ್ತಾರೆ. ಇದು ಅವರಿಗೆ ಒಳ್ಳೆಯದು. ಅವರ ಕಾವ್ಯ ಆಕೃತಿಯಲ್ಲಿಯೂ ವಿಷಯದಲ್ಲಿಯೂ ವಿಸ್ತಾರವಾಗಿಲ್ಲ. ಆದಕಾರಣ, ಅವರು ಈ ಗುಣಗಳನ್ನು ಬೇರೆ ಕಡೆಯಿಂದ ತರಬೇಕಾಗಿದೆ. ನಮ್ಮಲ್ಲಿ ಆಕಾರ ಅನಿರ್ಧರವಾಗಿರುವುದು ಎಂಬ ಕೊರತೆ ಉಂಟು; ಆದರೆ ವಿಷಯ ಅವರಿಗಿಂತ ಬಹಳ ಹೆಚ್ಚು....ಫ್ರೆಂಚ್ ಜನರಿಗೆ ಅರಿವಿದೆ; ಭಾವವಿದೆ; ಆದರೆ ಭದ್ರವಾದ ಒಂದು ನಂಬಿಕೆಯಿಲ್ಲ, ದೃಢವಾದ ಒಂದು ಭಕ್ತಿಯಿಲ್ಲ. ಸಮಯಕ್ಕೆ ಉಪಯೋಗವಾಗುವುದು, ತನ್ನವರಿಗೆ ಸಹಾಯವಾಗುವುದು, ಎನ್ನುವುದು ಯಾವುದೋ ಅದು ಸರಿಯಾದದ್ದೆಂದು ಫ್ರೆಂಚ್ ಜನರಿಗೆ ತೋರುತ್ತದೆ.''

ನಾಟಕಕಾರನು ಉನ್ನತ ಧ್ಯೇಯವನ್ನಿಟ್ಟುಕೊಂಡು ಕೆಲಸಮಾಡಬೇಕು. ತನ್ನ ದಿನಕ್ಕೆ ದೊಡ್ಡವನೆನಿಸಿಕೊಂಡರೆ ಸಾಕೆಂದು ನೋಡಬಾರದು:

''ನಾಟಕಕಾರನು ತನ್ನ ಕಾಲದ ಇತರ ಬರಹಗಾರರನ್ನೂ ಪ್ರತಿಸ್ಪರ್ಧಿಗಳನ್ನೂ ನೋಡುತ್ತ ಇದ್ದರೆ ಪ್ರಯೋಜನವಿಲ್ಲ. ನೂರು ವರ್ಷಗಳಿಂದ ಜನರ ಮನ್ನಣೆಯನ್ನೂ ಆದರವನ್ನೂ ಪಡೆದಿರುವ ಪೂರ್ವಿಕರ ಕೃತಿಗಳನ್ನು ನೋಡಬೇಕು. ಅಷ್ಟೇ ಅಲ್ಲ, ನಿಜವಾಗಿಯೂ ಒಳ್ಳೆಯ ಶಕ್ತಿಯುಳ್ಳ ದೃಶ್ಯಕವಿಗೆ ಹೀಗೆ ಮಾಡುವುದು ಆವಶ್ಯಕವಾಗುತ್ತದೆ. ಹೀಗೆ ಶ್ರೇಷ್ಠ ಪೂರ್ವಿಕರ ಸಹವಾಸ ಬೇಕಾಗುವುದೇ ಆತನ ಶಕ್ತಿ ದೊಡ್ಡದೆಂದು ತೋರಿಸುವ ಒಂದು ಲಕ್ಷಣ.''

ಎಂದರೆ ಯೋಗ್ಯತೆ ಇಲ್ಲದವನು ಪೂರ್ವಿಕರ ಕೃತಿಗಳನ್ನು ನೋಡಿದ ಮಾತ್ರಕ್ಕೆ ದೊಡ್ಡವನಾಗುತ್ತಾನೆಂದಲ್ಲ. ಬರೆಯುವನಲ್ಲಿ ಯೋಗ್ಯತೆ ಇದ್ದರೆ ಅವರ ಪರಿಚಯದಿಂದ ಅವನ ಶಕ್ತಿ ಬೆಳೆಯುತ್ತದೆ:

''ಕೆಲಸಕ್ಕೆ ಬಾರದ ಮನುಷ್ಯನು ಏನುಮಾಡಿದರೂ ಕೆಲಸಕ್ಕೆ

ಬಾರದೆಯೇ ಇರುತ್ತಾನೆ. ಸಣ್ಣ ಮನಸ್ಸು ಪೂರ್ವದ ಹಿರಿಯರ ಮನಸ್ಸಿನ ಅನುದಿನ ಪರಿಚಯದಿಂದ ದೊಡ್ಡದಾಗುವುದಿಲ್ಲ. ಆದರೆ ಯಾರು ಉನ್ನತ ಜೀವಿಯೋ ಯಾರ ಆತ್ಮದಲ್ಲಿ ಮುಂದಕ್ಕೆ ದೊಡ್ಡ ಶೀಲವನ್ನೂ ಮನಸ್ಸಿನ ಪರಿಪಾಕವನ್ನೂ ಪಡೆಯುವ ಗುಣವನ್ನು ದೇವರು ಇರಿಸಿದಾನೋ ಅಂಥವನು ಪುರಾತನ ರೋಮನರು ಗ್ರೀಕರ ಉನ್ನತ ಜೀವನದ ನಿರಂತರ ಪರಿಚಯದಿಂದ ತಾನೂ ದಿನದಿನವೂ ಅದೇ ಉನ್ನತಿಗೆ ಸ್ಪಷ್ಟವಾಗಿ ಹತ್ತಿರ ಹತ್ತಿರ ಸೇರುತ್ತಾನೆ.''

ಮಿಲ್ಟನ್ ಕವಿ ಗ್ರೀಕರ ನಾಟಕಗಳ ರೀತಿಯಲ್ಲಿ ಬರೆದ ಸ್ಯಾಮ್ಸನ್ ನಾಟಕವನ್ನು ಕುರಿತು ಗಯಟೆ ಹೀಗೆಂದು ಹೇಳಿದರು:

''ನಾನು ಈಚೆಗೆ ಮಿಲ್ಟನ್ ಕವಿಯ ಸ್ಯಾಮ್ಸನ್ ನಾಟಕವನ್ನು ಓದಿದೆನು. ಹೊಸ ಕಾಲದ ಇನ್ನು ಯಾವ ಕವಿಯ ಬೇರೆ ಯಾವ ಕೃತಿಗಿಂತಲೂ ಇದು ಹೆಚ್ಚಾಗಿ ಪುರಾತನ ಭಾಗವನ್ನೊಳಗೊಂಡಿದೆ. ಮಿಲ್ಟನ್ ಬಹು ದೊಡ್ಡವನು. ಅಲ್ಲದೆ ಅವನೇ ಕುರುಡನಾಗಿದ್ದುದರಿಂದ ಅವನು ಕುರುಡನಾದ ಸ್ಯಾಮ್ಸನನ ಅವಸ್ಥೆಯನ್ನು ಅಷ್ಟು ಸರಿಯಾಗಿ ವರ್ಣಿಸಲು ಸಾಧ್ಯವಾಯಿತು. ಮಿಲ್ಟನ್ ನಿಜವಾಗಿಯೂ ಕವಿ; ನಾವು ಮನಃಪೂರ್ವಕವಾಗಿ ಗಮನಿಸಬೇಕಾದ ಕವಿ!''

೭

ವೇಮರ್ ನಗರದ ನಾಟಕ ಮಂದಿರವನ್ನು ತಾವು ನಡೆಸಿದ ವಿಚಾರವಾಗಿ ಗಯಟೆಯವರು ಒಂದು ಸಲ ಹೀಗೆಂದರು:

''ಮಂಡಲೇಶ್ವರರು ನಾಟಕ ಮಂದಿರದ ಚಾಲನೆಯನ್ನು ನನ್ನ ಸಂಪೂರ್ಣ ಸ್ವಾತಂತ್ರ್ಯಕ್ಕೆ ಬಿಟ್ಟುಬಿಟ್ಟರು. ಇದರಿಂದ ನಾನು ಅದನ್ನು ನನಗೆ ಬೇಕಾದಹಾಗೆ ನಡೆಸಿದೆನು. ವೈಭವದ ಪರದೆಗಳನ್ನೂ ಆಡಂಬರದ ವೇಷಭೂಷಣಗಳನ್ನೂ ಒದಗಿಸುವುದಕ್ಕೆ ನಾನು ಯತ್ನ ಮಾಡಲಿಲ್ಲ. ಒಳ್ಳೆಯ ನಾಟಕಗಳನ್ನು ಮುಖ್ಯವೆಂದು ಸಂಪಾದಿಸಿದೆನು. ದುಃಖದ ನಾಟಕಗಳಿಂದ ವಿಕಟ ವಿನೋದದವರೆಗೆ ಬಂದ ನಾಟಕವೆಲ್ಲ ಬರಲಿ ಎಂದೆನು. ಆದರೆ ನಾನು ಒಪ್ಪಿಕೊಳ್ಳಬೇಕಾದರೆ ನಾಟಕದಲ್ಲಿ ಏನೋ ಒಂದು ಗುಣ ಇರಬೇಕಿತ್ತು. ಅದು ಶ್ರೇಷ್ಠ ಮತ್ತು ಚತುರವಾಗಿ,

ಅಥವಾ ಹರ್ಷಜನಕವಾಗಿ ಮತ್ತು ಲಲಿತವಾಗಿ, ಹಾಗಿಲ್ಲದಿದ್ದರೆ ಶುದ್ಧ ಮತ್ತು ಸ್ವಲ್ಪವಾದರೂ ಸಾರವತ್ತಾಗಿ, ಇರುವುದು ಅವಶ್ಯಕವಾಗಿತ್ತು. ಮೂದೇವಿ, ದುರ್ಬಲ, ಅಶ್ರುಮಿಶ್ರ, ಅತಿರೇಕ, ಬೂಟ, ಭಯಂಕರ, ನೀತಿವಿರೋಧ ಎಂದು ಯಾವುದು ಕಂಡಿತೋ ಅದೆಲ್ಲವನ್ನೂ ನಾನು ಹೊರಗಟ್ಟಿದೆನು.''

ನಟರ ವರ್ಗವನ್ನು ಸಭ್ಯವಾಗಿ ಮಾಡಿದ ವಿಷಯವನ್ನು ಕುರಿತು ಇವರು ಹೀಗೆಂದರು :

''ನಾನು ಒಳ್ಳೆಯ ನಾಟಕಗಳ ಮೂಲಕ ನಟರ ಮಟ್ಟವನ್ನು ಎತ್ತಿದೆನು. ಉತ್ತಮವಾದ ಕೃತಿಯನ್ನು ನಿರಂತರ ಪಾಠಮಾಡುವುದೂ ನಿರಂತರ ಅದನ್ನು ಅಭ್ಯಾಸದಲ್ಲಿಡುವುದೂ ಸ್ವಭಾವವಾಗಿ ಸ್ವಲ್ಪವಾದರೂ ಧೀಮಂತನಾದ ನಟನನ್ನು ಬೆಲೆಗೆ ಬರುವ ವಸ್ತುವನ್ನಾಗಿ ಮಾಡದೆ ಬಿಡುವುದಿಲ್ಲ. ಅಲ್ಲದೆ ನಾನೂ ಸದಾ ನಟರ ಸಂಪರ್ಕದಲ್ಲಿರುತ್ತಿದ್ದೆನು. ನಾಟಕ ಮೊದಲನೆಯ ಸಲ ಅಭ್ಯಾಸವಾಗುವಾಗ ನಾನೂ ಅಲ್ಲಿರುತ್ತ ಒಬ್ಬೊಬ್ಬನಿಗೂ ಅವನ ಪಾತ್ರವನ್ನು ವಿವರಿಸುತ್ತಿದ್ದೆನು. ಮುಖ್ಯವಾದ ಅಭ್ಯಾಸದ ಸಮಯದಲ್ಲಿ ಜೊತೆಗಿದ್ದು ಅಭಿನಯವನ್ನು ಹೇಗೆ ಸರಿಪಡಿಸಬಹುದೆಂಬ ವಿಚಾರದಲ್ಲಿ ಅವರೊಡನೆ ಮಾತನಾಡುತ್ತಿದ್ದೆನು. ಯಾವ ಒಂದು ಪ್ರದರ್ಶನಕ್ಕೂ ಹೋಗದೆ ನಿಲ್ಲುತ್ತಿರಲಿಲ್ಲ. ಪ್ರದರ್ಶನವಾದ ಮಾರನೆಯ ದಿನ ಅದರಲ್ಲಿ ನನಗೆ ಸರಿಹೋಗದ ಅಂಶಗಳಿದ್ದರೆ ಅವನ್ನು ನಟರಿಗೆ ತಿಳಿಸುತ್ತಿದ್ದೆನು. ಈ ರೀತಿಯಲ್ಲಿ ನಾನು ನಟರನ್ನು ಅವರ ಕಲೆಯಲ್ಲಿ ಮುಂದರಿಸಿದೆನು.''

ಗಯಟೆ ಎಕರ್‌ಮನರ ಈ ಸಂಭಾಷಣೆಗಳ ಕಾಲದಲ್ಲಿ ಈ ಹಳೆಯ ನಾಟಕ ಮಂದಿರವು ಸುಟ್ಟುಹೋಯಿತು. ಅದರಿಂದ ಗಯಟೆಯವರಿಗೆ ಬಹು ದುಃಖವಾಯಿತು :

''ನಮಗೆಲ್ಲರಿಗೂ ಇದು ದೊಡ್ಡ ದುಃಖ. ನನ್ನ ಮೊಮ್ಮಗ ಬೆಳಗ್ಗೆ ನನ್ನ ಹಾಸಿಗೆಯ ಬಳಿಗೆ ಬಂದು ನನ್ನ ಕೈಹಿಡಿದುಕೊಂಡು ನನ್ನ ಕಡೆ ದೃಷ್ಟಿಸಿ ನೋಡುತ್ತ ಮನುಷ್ಯರ ಕೆಲಸವೆಲ್ಲ ಇಷ್ಟೆ ಎಂದನು. ನನಗೆ ಸಮಾಧಾನ ತರಬೇಕೆಂದು ಅವನು ಈ ಮಾತನ್ನು ಹೇಳಿದನು. ಇಂಥ

ಸಂದರ್ಭದಲ್ಲಿ ಇದಕ್ಕಿಂತ ಹೆಚ್ಚು ಏನು ಹೇಳಬಹುದು? ಈ ನಾಟಕಶಾಲೆ ನಾನು ಮೂವತ್ತು ವರ್ಷ ಸಂತೋಷದಿಂದ ದುಡಿದ ರಂಗಭೂಮಿ. ಅದು ಇಂದು ಬೂದಿಯಾಯಿತು. ಆದರೇನು? ವುಲ್ಫ್ ಹೇಳಿದಂತೆ ಮನುಷ್ಯನ ಕೆಲಸವೆಲ್ಲ ಇಷ್ಟೆ.

"ಕಳೆದ ಕಾಲದ ನನ್ನ ಮತ್ತು ಸ್ಕಿಲ್ಲರನ ಬಹು ವರ್ಷಗಳ ಕೆಲಸದ ಮತ್ತು ಒಬ್ಬೊಬ್ಬ ಪ್ರಿಯ ಶಿಷ್ಯ ನಟನಟಿಯ ಪ್ರವೃದ್ಧಿಯ ಅನೇಕ ಯೋಚನೆಗಳು ನನಗೆ ನೆನಪಿಗೆ ಬಂದವು. ನನ್ನ ಮನಸ್ಸು ಇದರಿಂದ ಕಲಕಿತು."

ಇದಾದಮೇಲೆ ಹೊಸ ನಾಟಕ ಮಂದಿರವನ್ನು ಕಟ್ಟುವ ಯೋಚನೆ ಮೊದಲಾಯಿತು. ಹೊಸ ನಾಟಕ ಮಂದಿರವನ್ನು ಕಟ್ಟುವುದಕ್ಕೂ ಅದಕ್ಕೆ ತಕ್ಕ ಸಲಕರಣೆಗಳನ್ನು ಒದಗಿಸುವುದಕ್ಕೂ ಖರ್ಚು ಹೆಚ್ಚಾಗುತ್ತದೆಂದು ಯಾರೋ ಹೇಳಿದರು. ಇದಕ್ಕೆ ಗಯಟೆ ಹೀಗೆಂದರು:

"ಇದನ್ನೆಲ್ಲ ನಾನು ಬಲ್ಲೆ. ಖರ್ಚನ್ನು ಕಡಮೆಮಾಡುವ ಸಂದರ್ಭದಲ್ಲಿ ಕಡಮೆ ಸಂಬಳಕ್ಕೆ ಒಪ್ಪಿಕೊಳ್ಳುವಂತೆ ಯಾರೋ ಕೆಲಸಕ್ಕೆ ಬಾರದ ನಟರನ್ನು ಕರೆಯಬೇಕೆನ್ನುವರು. ಆದರೆ ಇಂಥ ಏರ್ಪಾಡಿನಿಂದ ಖಜಾನೆ ಬಹಳ ಉದ್ಧಾರವಾಗುವುದಿಲ್ಲ.

"ಇಂಥ ಪ್ರಧಾನ ವಿಷಯದಲ್ಲಿ ಕಾಸನ್ನು ಉಳಿಸುವ ಯತ್ನಕ್ಕಿಂತ ಮುಖ್ಯವಾದದ್ದು ಖಜಾನೆಗೆ ಹಣ ತರುವ ಏರ್ಪಾಡು. ಒಂದೊಂದು ಸಂಜೆಯೂ ನಾಟಕ ಮಂದಿರ ತುಂಬಿರಲಿ ಎನ್ನುವುದು ನಮ್ಮ ಧ್ಯೇಯವಾಗಿರಬೇಕು. ಇದಕ್ಕೆ ಒಬ್ಬ ತರುಣ ಗಾಯಕ ಅಥವಾ ಗಾಯಕಿ, ಚತುರನಾದ ಒಬ್ಬ ನಾಯಕ, ನಿಜವಾದ ಶಕ್ತಿ ಮತ್ತು ತಕ್ಕಷ್ಟು ಚೆಲುವು ಇರುವ ಚತುರಳಾದ ತರುಣ ನಾಯಕಿ, ಬಹುಮಟ್ಟಿಗೆ ಕಾರಣರಾಗುತ್ತಾರೆ. ಅಷ್ಟೇಕೆ? ನಾನು ಈಗಲೂ ನಾಟಕ ಮಂದಿರದ ಮುಖ್ಯಾಧಿಕಾರಿಯಾದರೆ ಖಜಾನೆಗೆ ಹಣಬರಲಿ ಎನ್ನುವುದಕ್ಕಾಗಿ ಇದಕ್ಕಿಂತಲೂ ಮುಖ್ಯವಾದ ಒಂದು ಏರ್ಪಾಡನ್ನು ಮಾಡುತ್ತಿದ್ದೆನು. ಆಗ್ಯೆ ನಮಗೆ ಕೇಳಿದಷ್ಟು ಹಣ ಬಾರದೆ ಇರುತ್ತಿರಲಿಲ್ಲವೆಂದು ನನಗೆ ಕಾಣುತ್ತಿತ್ತು." ಹೀಗೆಂದರೆ ಏನು ಎಂದು ಕೇಳಿದ್ದಕ್ಕೆ, ಗಯಟೆ: "ಒಂದು ಸುಲಭವಾದ ಉಪಾಯವನ್ನು

ನಾನು ಮಾಡುತ್ತಿದ್ದೆ. .ಅದು ಯಾವುದೆಂದರೆ, ಭಾನುವಾರದ ದಿನ ನಾಟಕವನ್ನಿಟ್ಟುಕೊಳ್ಳುವುದು. ಇದರಿಂದ ವರ್ಷದಲ್ಲಿ ನಲವತ್ತು ಸಂಜೆಯ ಹಣ ಹೆಚ್ಚಾಗಿ ಬರುವುದು. ಎಂದರೆ ಖಜಾನೆಗೆ ಹತ್ತು ಹದಿನೈದು ಸಾವಿರ ಡಾಲರಿಗೆ ಕಡಮೆಯಿಲ್ಲದೆ ಬಂದೀತು.''

ಭಾನುವಾರಗಳಲ್ಲಿ ಅರಮನೆಯ ವಿನಕೆಗಳು ಇರುವುದರಿಂದ ನಾಟಕ ಮಂದಿರದಲ್ಲಿ ನಾಟಕಗಳನ್ನಿಡುವುದಕ್ಕೆ ಅಡ್ಡಿಯಾಗಬಹುದು ಎಂದು ಇತರರು ಹೇಳಿದರು. ಆ ಮಾತಿಗೆ ಗಯಟೆ ಹೀಗೆಂದರು: ''ಮಂಡಲೇಶ್ವರರ ದರ್ಬಾರಿನಲ್ಲಿ ಸೌಜನ್ಯವಿದೆ, ವಿವೇಚನೆಯಿದೆ. ನಗರಕ್ಕೂ ನಗರದ ಒಂದು ಮುಖ್ಯಸಂಸ್ಥೆಗೂ ಒಳ್ಳೆಯದನ್ನು ತರುವ ಇಂಥ ಏರ್ಪಾಡಿಗೆ ಅದು ಅಡ್ಡಿಮಾಡಲಾರದು. ಭಾನುವಾರದ ವಿನಕೆಗಳನ್ನು ಸ್ವಲ್ಪ ತೊಂದರೆ ಯಾದರೂ ಅದು ಇನ್ನೊಂದು ದಿನಕ್ಕೆ ಹಾಕೀತು. ಹೀಗೆ ಮಾಡುವುದು ಮನಸ್ಸಿಗೆ ಒಪ್ಪದಿದ್ದಲ್ಲಿ ಭಾನುವಾರಗಳಲ್ಲಿ ಆಡುವುದಕ್ಕಾಗಿ ಅರಮನೆಯವರು ನೋಡಲಪೇಕ್ಷಿಸದೆ ಊರಿನ ಸಾಮಾನ್ಯ ಜನ ನೋಡುವುದಕ್ಕೆ ಅನುಕೂಲವಾಗಿ ಖಜಾನೆಗೆ ಹಣವನ್ನು ತರುವಂಥ ನಾಟಕಗಳನ್ನು ಹಾಕಬಹುದು.''

ಹೊಸ ನಾಟಕ ಮಂದಿರವನ್ನು ಗಯಟೆಯವರ ಉದ್ದೇಶದಂತೆ ಕಟ್ಟದೆ ಸಾಮಾನ್ಯವಾಗಿ ಕಟ್ಟಬೇಕೆಂದು ನಿರ್ಧಾರವಾಯಿತು. ಇದು ತಿಳಿದಾಗ ಗಯಟೆ ಹೀಗೆಂದರು: ''ಖರ್ಚು ಹೆಚ್ಚಾಗುತ್ತದೆಂಬ ಮಾತಿನಿಂದ ಮಂಡಲೇಶ್ವರರಿಗೆ ಹೆದರಿಕೆಯನ್ನುಂಟುಮಾಡಿ ಬೇರೆ ನಕ್ಷೆಯಂತೆ ಕಟ್ಟಿದರೆ ಹಣ ಉಳಿಯುವುದೆಂದು ಕಾರಣ ಹೇಳಿ ಈ ಜನರು ಅವರನ್ನು ತಮ್ಮಂತೆ ತಿರುಗಿಸಿಕೊಂಡಿದಾರೆ. ಸಂತೋಷ. ಹೊಸ ನಾಟಕ ಮಂದಿರ ಹೊಸದೊಂದು ಚಿತೆ. ಎಂದಿದ್ದರೂ ಸುಡತಕ್ಕದ್ದು, ಏನಾದರೂ ಆಗಿ ಬೆಂಕಿ ಬೀಳತಕ್ಕದ್ದು. ಈ ಕಾರಣದಿಂದ ನಾನು ಈ ವಿಷಯದಲ್ಲಿ ಸಮಾಧಾನವಾಗಿಯೇ ಇದ್ದೇನೆ. ಅಲ್ಲದೆ ಕಟ್ಟಡ ಸಾಮಾನ್ಯವಾಯಿತೆ ಇಲ್ಲ ಸ್ವಲ್ಪ ಚೆನ್ನವಾಯಿತೆ ಎನ್ನುವುದು ಸಣ್ಣ ವಿಷಯ; ಚರ್ಚೆಮಾಡ ಬೇಕಾದಷ್ಟು ಮುಖ್ಯವಾದದ್ದಲ್ಲ. ಹೊಸ ಮಂದಿರವು ನಾನು ಮನಸ್ಸಿನಲ್ಲಿ ಮಾಡಿಕೊಂಡ ಸುಂದರಭವನವಾಗದಿದ್ದರೂ ತಕ್ಕಮಟ್ಟಿಗೆ ಚೆನ್ನಾಗಿಯೇ

ಇರುತ್ತದೆ. ಅದಕ್ಕೆ ನಾವೆಲ್ಲ ಹೋಗುತ್ತೇವೆ. ಅದು ನಮಗೆ ಸುಖವನ್ನು ಕೊಡುತ್ತದೆ.

"ಮಂಡಲೇಶ್ವರರು ನಾಟಕ ಮಂದಿರವು ಶಿಲ್ಪದ ದೃಷ್ಟಿಯಿಂದ ದಿವ್ಯವಾಗಿರಬೇಕಾದದ್ದಿಲ್ಲವೆಂಬ ತಮ್ಮ ಅಭಿಪ್ರಾಯವನ್ನು ನನಗೆ ತಿಳಿಸಿದರು. ತಪ್ಪೆಂದು ತೋರುವ ಇನ್ನೊಂದು ಮಾತನ್ನು ಅವರು ಹೇಳಿದರು; ನಾಟಕ ಮಂದಿರ ಹಣ ತರುವ ಒಂದು ಮನೆ, ಮತ್ತೇನೂ ಅಲ್ಲ ಎಂದು. ಹೇಳಿದ ಒಡನೆ ಈ ಅಭಿಪ್ರಾಯ ಸ್ವಲ್ಪ ಪ್ರಾಕೃತವೆಂದು ಕಾಣುತ್ತದೆ. ಸರಿಯಾಗಿ ನೋಡಿದರೆ ಅದರಲ್ಲಿ ಉದಾತ್ತಭಾವ ಇಲ್ಲದೆ ಇಲ್ಲ. ನಾಟಕ ಮಂದಿರ ಖರ್ಚನ್ನು ಸಂಪಾದಿಸಿಕೊಡುವುದಲ್ಲದೆ ಹೆಚ್ಚು ಹಣವನ್ನು ತರಬೇಕೆನ್ನುವುದಾದರೆ ಅದರಲ್ಲಿ ಎಲ್ಲವೂ ಅತ್ಯುತ್ತಮವಾಗಿರಬೇಕು. ಅದರ ಚಾಲಕರು ದಕ್ಷರಾಗಿರಬೇಕು; ನಟರು ಚತುರರಾಗಿರಬೇಕು; ಅದರ ನಾಟಕಗಳು ಸದಾ ಒಳ್ಳೆಯವಾಗಿರಬೇಕು. ಹೀಗಿದ್ದರಲ್ಲವೇ ಅದು ದಿನವೂ ತುಂಬ ಜನ ಸೇರುವಂತೆ ಮಾಡುವುದು, ಹಣವನ್ನು ತರುವುದು?

"ಷೇಕ್ಸ್‌ಪಿಯರ್ ಮಾಲಿಯರರು ಕೂಡ ಈ ಉದ್ದೇಶದಿಂದಲೇ ಕೆಲಸಮಾಡಿದರು. ತಮ್ಮ ನಾಟಕ ಮಂದಿರಗಳಿಂದ ಹಣವನ್ನು ಸಂಪಾದಿಸಬೇಕೆನ್ನುವುದು ಮುಖ್ಯವಾಗಿ ಅವರ ಅಭಿಪ್ರಾಯ. ಮುಖ್ಯ ಉದ್ದೇಶವನ್ನು ಸಾಧಿಸುವುದಕ್ಕಾಗಿ ಅವರು ಎಲ್ಲವೂ ಸಾಧ್ಯವಾದಷ್ಟು ಚೆನ್ನಾಗಿರುವಂತೆ ಪ್ರಯತ್ನಮಾಡುವುದು ಅವಶ್ಯಕವಾಯಿತು. ಪೂರ್ವದ ಒಳ್ಳೆಯ ನಾಟಕಗಳಲ್ಲದೆ ಹೊಸರೀತಿಯ ಚತುರ ಕೃತಿಗಳು ಜನರನ್ನು ಒಲಿಸಿ ಸೆಳೆಯುವಂಥವನ್ನು ಮಾಡಬೇಕಾಯಿತು. ಟಾರ್‌ಟೂಫ್ ನಾಟಕವನ್ನು ಆಡಕೂಡದೆಂದಾಗ ಮಾಲಿಯರನಿಗೆ ವಜ್ರಾಘಾತ. ಗ್ರಂಥಕರ್ತ ಮಾಲಿಯರನಿಗೆ ಆದದ್ದಕ್ಕಿಂತ ನಾಟಕ ಸಂಘದ ಯಜಮಾನ ಮಾಲಿಯರನಿಗೆ ಹೆಚ್ಚು ಪೆಟ್ಟಾಯಿತು. ಅವನು ಒಂದು ನಾಟಕ ಸಂಘದ ಕಷ್ಟಸುಖವನ್ನು ನೋಡಿಕೊಳ್ಳಬೇಕಾಗಿತ್ತು, ತನಗೂ ತನ್ನ ನಟರಿಗೂ ಅನ್ನವನ್ನು ಸಂಪಾದಿಸಬೇಕಾಗಿತ್ತು.

"ಮಂದಿರಕ್ಕೆ ಹಣ ಹೆಚ್ಚಾಗಿಯಾದರೂ ಬರಲಿ ಕಡಮೆಯಾಗಿ ಆದರೂ ಬರಲಿ, ಅದರ ಯಜಮಾನನಿಗೆ ಲಾಭ ನಷ್ಟ ಇಲ್ಲ, ಎನ್ನುವ ಸ್ಥಿತಿ

ಮಂದಿರಕ್ಕೆ ಕುಂದಕ. ನಾಟಕ ಮಂದಿರಕ್ಕೆ ಇದಕ್ಕಿಂತ ದೊಡ್ಡ ಕುಂದಕ ಬೇರೆ ಇರಲಾರದು. ಹೇಗಾದರೂ ಆಗಲಿ ಎನ್ನುವಲ್ಲಿ ಅವನು ಆಯವ್ಯಯಗಳ ಕಡೆಗೆ ಲಕ್ಷ್ಯಕೊಡದೆ ಇದ್ದುಬಿಡಬಹುದು. ವರ್ಷದ ಉದ್ದಕ್ಕೂ ಮಂದಿರದ ವರಮಾನ ಎಷ್ಟೇ ಕಡಮೆಯಾದರೂ ವರ್ಷದ ಕೊನೆಗೆ ಆ ಕೈಬಿಟ್ಟುಹೋದ ಹಣವನ್ನು ಬೇರೊಂದು ಕಡೆಯಿಂದ ಭರ್ತಿ ಮಾಡಿಕೊಂಡು ತನ್ನ ನಷ್ಟವನ್ನು ವಾಸಿಮಾಡಿಕೊಳ್ಳಬಹುದು. ಮನುಷ್ಯನ ಸ್ವಭಾವದಲ್ಲಿ ಇದು ಒಂದು ಸಹಜಪ್ರವೃತ್ತಿ. ಸ್ವಂತದ ಆಗುಹೋಗುಗಳ ಆಸೆ ಭಯದಿಂದ ಅವನನ್ನು ದೂಡದೆ ಇದ್ದಾಗ ಅವನು ಕಾರ್ಯದಲ್ಲಿ ಸಡಿಲವಾಗುತ್ತಾನೆ. ವೇಮರ್ ಅಂಥ ನಗರದಲ್ಲಿ ಒಂದು ನಾಟಕ ಮಂದಿರವು ತನ್ನ ವೆಚ್ಚವನ್ನು ತಾನೇ ಸಂಪಾದಿಸಿಕೊಳ್ಳಬೇಕೆನ್ನುವುದೂ ಅದಕ್ಕೆ ರಾಜನ ಖಜಾನೆಯಿಂದ ಹಣ ಬರದೆ ಇರಬೇಕೆನ್ನುವುದೂ ಒಳ್ಳೆಯದಲ್ಲ. ಆದರೆ ಸಹಾಯಕ್ಕೂ ಮೊದಲು ಕೊನೆಯುಂಟು. ಅಲ್ಲದೆ ವರಮಾನದಲ್ಲಿ ಒಂದು ಸಾವಿರ ಹೊನ್ನು ಹೆಚ್ಚಾಯಿತೇ ಕಡಮೆಯಾಯಿತೇ ಎನ್ನುವುದು ಸಣ್ಣ ವಿಷಯವಲ್ಲ. ವರಮಾನ ಕಡಮೆಯಾಗುವುದೂ ಯೋಗ್ಯತೆ ತಗ್ಗುವುದೂ ನಾಟಕಮಂದಿರಕ್ಕೆ ಸಹಜವಾದ ಅಪಾಯಗಳು. ಹೀಗಾದಾಗ ಹಣದ ನಷ್ಟ ಮಾತ್ರವಾಗುವುದಿಲ್ಲ; ಜೊತೆಗೆ ಮರ್ಯಾದೆಯ ನಷ್ಟವೂ ಸೇರುತ್ತದೆ."

೮

ನಾಟಕವಾಡುವುದಕ್ಕೆ ಒಳ್ಳೆಯ ಪರದೆ ಪೋಷಾಕು ಬೇಕೆನ್ನುವುದು ನವೀನ ಕಾಲದಲ್ಲಿ ಎಲ್ಲಾ ಕಡೆಯೂ ಬರುವ ಮಾತು. ಹಳೆಯ ನಾಟಕ ಮಂದಿರ ಸುಟ್ಟುಹೋದದ್ದರಿಂದ ಕೊಂಚಕಾಲ ಬೇರೆ ಎಲ್ಲಾದರೂ ನಾಟಕಗಳನ್ನು ಆಡಬಹುದು, ಆದರೆ ಪರದೆಗಳು ಕೂಡ ಉಳಿದಿಲ್ಲ ಎಂದ ಮಾತಿಗೆ ಗಯಟೆ: "ತುಂಬ ಅಲಂಕಾರದ ಪರದೆಗಳು ಆವಶ್ಯಕವಲ್ಲ. ದೊಡ್ಡ ನಾಟಕಗಳನ್ನು ಆಡಬೇಕಾದ ಆವಶ್ಯಕವೂ ಇಲ್ಲ. ನಾಟಕಗಳನ್ನು ಪೂರ ಆಡಬೇಕೆನ್ನುವುದೂ ಇಲ್ಲ. ಬಹು ಉತ್ತಮವಾದ ನಾಟಕವನ್ನೇ ಆಡಬೇಕೆನ್ನುವ ಆವಶ್ಯಕತೆ ಅಷ್ಟು ಇಲ್ಲ. ಮುಖ್ಯವಿಷಯವೇನೆಂದರೆ ಸ್ಥಾನ ಬಹಳ ಮಾರ್ಪಡದ ದೃಶ್ಯವನ್ನು ಹುಡುಕಬೇಕು. ಒಂದಂಕದ

ಹರ್ಷನಾಟಕ, ಒಂದಂಕದ ವಿನೋದ ದೃಶ್ಯ, ಒಂದು ಸಂಗೀತ ನಾಟಕ, ಆಮೇಲೆ ಯಾವುದೋ ಒಂದು ಆಲಾಪನೆ, ಮೇಳ, ಮೂರ್ಛನ, ಇಷ್ಟವಾದ ಒಂದು ಗೀತದೃಶ್ಯ: ಇಷ್ಟಾದರೆ ಒಂದು ಸಂಜೆಗೆ ಬೇಕಾದಷ್ಟು ವಿನೋದವಾಯಿತು. ಏಪ್ರಿಲ್ ತಿಂಗಳನ್ನು ಹೇಗಾದರೂ ಕಳೆದರೆ ಆಯಿತು. ಮೇ ತಿಂಗಳಲ್ಲಿ ವನಪ್ರದೇಶದ ಗಾಯಕರು ಬರುವರು.''

ಪರದೆಗಳು ಹೇಗಿರಬೇಕು ಎಂದು ಇವರು ಹೇಳಿರುವ ಮಾತೂ ಇವರ ಪರಿಶ್ರಮದ ಆಳವನ್ನೂ ಇವರ ದೃಷ್ಟಿಯ ಸೂಕ್ಷ್ಮತೆಯನ್ನೂ ತೋರಿಸುತ್ತದೆ: ''ಪರದೆಗಳ ಬಣ್ಣ ನಟರ ವಸ್ತ್ರಗಳ ಎಲ್ಲ ಬಣ್ಣಗಳಿಗೂ ಅನುಕೂಲವಾದದ್ದಾಗಿರಬೇಕು. ಆದರೆ ಪರದೆಯವನು ಇಷ್ಟು ನಿಷ್ಪಕ್ಷಪಾತವಾದ ಬಣ್ಣವನ್ನು ಉಪಯೋಗಿಸಲಾಗದೆ ಹೋಗಿ ಕೆಂಪು ಅಥವಾ ಹಳದಿಯ ಕೋಣೆಯನ್ನೋ ಬಿಳಿಯ ಡೇರೆಯನ್ನೋ ಹಸುರು ತೋಟವನ್ನೋ ಬರೆಯಬೇಕಾದರೆ ನಟರು ಬುದ್ಧಿಯನ್ನು ಉಪಯೋಗಿಸಿ ತಮ್ಮ ವಸ್ತ್ರಗಳು ಆ ಬಣ್ಣಕ್ಕೆ ವಿರೋಧವಾಗದಂತೆ ನೋಡಿಕೊಳ್ಳಬೇಕು. ಕೆಂಪು ಅಂಗಿ ನೀಲಿ ಷರಾಯಿ ಹಾಕಿಕೊಂಡು ನಟನು ಕೆಂಪುಬಣ್ಣದ ಪರದೆಯ ಕೊಟಡಿಗೆ ಬಂದರೆ ಅವನ ಮೈಮೇಲಣ ಭಾಗ ಮಾಯವಾಗುತ್ತದೆ; ಅವನ ಕಾಲು ಮಾತ್ರ ಕಾಣುತ್ತದೆ. ಅದೇ ವಸ್ತ್ರದಲ್ಲಿ ಅವನು ಹಸುರು ತೋಟವನ್ನು ಹೊಕ್ಕರೆ ಅವನ ಕಾಲು ಮರೆಯಾಗುತ್ತದೆ. ಮೈಯ ಮೇಲಿನ ಅರ್ಧ ಎತ್ತಿ ಕಾಣುತ್ತದೆ'' ಎಂದು ಇವರು ತಮ್ಮ ಒಂದು ಅನುಭವವನ್ನು ಹೇಳಿದರು; ಮತ್ತು ಕೆಂಪು ಹಸುರು ಬಣ್ಣವನ್ನೇ ಹಾಕಬೇಕಾದರೂ ಬಣ್ಣಗಾರನು ಮಿತವಾಗಿ ಹಾಕಬೇಕೆಂದರು.

೯

ರಂಗದಲ್ಲಿ ಸೊಗಸಬೇಕಾದರೆ ನಾಟಕವನ್ನು ಅದಕ್ಕೆ ಅನುಕೂಲವಾಗಿ ಬರೆದಿರಬೇಕು. ಬರೆಯುವಾಗ ರಂಗದ ದೃಷ್ಟಿಯಿಂದ ಬರೆಯದಿದ್ದರೆ ಆಮೇಲೆ ಅದನ್ನು ತಿದ್ದುವುದು ಕಷ್ಟವಾಗುತ್ತದೆ. ಸ್ಕಿಲ್ಲರ್ ಕವಿ ಮೊದಮೊದಲು ಬರೆದ ನಾಟಕಗಳು ರಂಗಕ್ಕೆ ಅನುಕೂಲವಾಗಿರಲಿಲ್ಲ. ಅವುಗಳನ್ನು ತಿದ್ದುವುದು ಕಷ್ಟವಾಯಿತು.

''ಸ್ಕಿಲ್ಲರ್ ಈ ವಿಷಯವನ್ನು ಕುರಿತು ನನ್ನ ಸಂಗಡ ಬಹಳ

ಮಾತಾಡಿದನು. ಅವನ ಮೊದಲ ನಾಟಕಗಳನ್ನು ಕಂಡರೆ ಅವನಿಗೇ ಬೇಸರ. ನಮ್ಮ ನಾಟಕಮಂದಿರದ ನಿರ್ವಾಹ ಅವನ ಕೈಯಲ್ಲಿದ್ದಾಗ ಅವನ್ನು ಆಡುವುದಕ್ಕೆ ಅವನು ಒಪ್ಪಲೇ ಇಲ್ಲ. ಕೊನೆಗೆ ನಮಗೆ ನಾಟಕ ಗಳಿಲ್ಲದೇ ಹೋದುವು. ನಮ್ಮ ಮಂದಿರಕ್ಕೆ ಅವನ ಆರಂಭದ ಮೂರು ನಾಟಕ ಸಿಕ್ಕಿದರೆ ಆದೀತು ಎಂದುಕೊಂಡೆವು. ಆದರೆ ಅವುಗಳನ್ನು ತಿದ್ದುವುದಕ್ಕೆ ಆಗಲಿಲ್ಲ. ಭಾಗಭಾಗ ಹಾಗೆ ಹೆಣೆದುಕೊಂಡಿದ್ದುವು. ಸ್ಕಿಲ್ಲರನೇ ಈ ಕೆಲಸಕ್ಕೆ ಕೈಹಾಕಿ ಆಗುವುದಿಲ್ಲವೆಂದು ಅವು ಹೇಗಿದ್ದುವೋ ಹಾಗೆಯೇ ನಿಲ್ಲಿಸಿದನು.''

ಹಾಗಾದರೆ, ರಂಗಕ್ಕೆ ಬರೆಯುವ ನಾಟಕ ಹೇಗಿರಬೇಕು ?

''ಅದು ಸೂಚನೆಯ ದಾರಿಯಲ್ಲಿ ಹೋಗಬೇಕು. ಎಂದರೆ ಒಂದೊಂದು ಸಂಗತಿಯೂ ಅದರಷ್ಟಕ್ಕೆ ಅದು ಸ್ವಾರಸ್ಯವಾಗಿರಬೇಕು ಮತ್ತು ಅದಕ್ಕಿಂತ ಮುಖ್ಯವಾದ ಇನ್ನೊಂದು ಸಂಗತಿಯ ಕಡೆಗೆ ನಡೆಯ ಬೇಕು. ಮಾಲಿಯರನ ಟಾರ್ಟೂಫ್ ನಾಟಕವು ಈ ದೃಷ್ಟಿಯಿಂದ ಅತ್ಯುತ್ತಮ ಆದರ್ಶ. ಅದರ ಮೊದಲನೆಯ ದೃಶ್ಯವು ಕಥೆಯನ್ನು ಎಷ್ಟು ಚೆನ್ನಾಗಿ ಸೂಚಿಸುತ್ತದೆ, ನೋಡು. ಮೊದಲಿಂದಲೂ ಒಂದೊಂದು ವಿಷಯವೂ ರಸವತ್ತಾಗಿದೆ ಮತ್ತು ಮುಂದೆ ಬರಲಿರುವ ಅದಕ್ಕಿಂತ ಮುಖ್ಯವಾದ ವಿಷಯವನ್ನು ನಿರೀಕ್ಷಿಸುವಂತೆ ಮಾಡುತ್ತದೆ. ಲೆಸಿಂಗ್ ಕವಿಯ ನ್ಯಾಥನ್ ನಾಟಕದ ಆರಂಭವೂ ಶ್ಲಾಘನೀಯವಾಗಿದೆ. ಆದರೆ ಟಾರ್ಟೂಫ್ ನಾಟಕದ ಮೊದಲ ದೃಶ್ಯದಂತ ದೃಶ್ಯ ಪ್ರಪಂಚದಲ್ಲಿ ಒಂದಕ್ಕಿಂತ ಹೆಚ್ಚಿರಲಾರದು. ಅದರ ಜಾತಿಯಲ್ಲಿ ಅದು ಅತ್ಯುತ್ತಮ ವಾದದ್ದು, ಅನುಪಮವಾದದ್ದು.

''ಕಾಲ್ಡರಾನನಲ್ಲಿ ಇದೇ ರೀತಿ ರಂಗಕ್ಕೆ ಅಂದವಾದ ಹೊಂದಿಕೆ ಕಾಣುತ್ತದೆ. ಅವನ ಕೃತಿಗಳೆಲ್ಲ ಆಡುವುದಕ್ಕೆ ಅನುಕೂಲವಾಗಿವೆ. ಕೃತಿಯ ರಸಕ್ಕೆ ಪೋಷಕವಾಗದ ಒಂದು ಸಂಗತಿ ಅವುಗಳಲ್ಲಿರುವುದಿಲ್ಲ. ಕಾಲ್ಡರಾನನು ಪ್ರತಿಭಾಶಾಲಿ ಸರಿ. ಅಷ್ಟೇ ಅಲ್ಲದೆ ಅವನ ರಸಜ್ಞತೆಯೂ ಬಹಳ ನಯವಾದದ್ದು.''

ಗಯಟೆಯವರ ಎಗ್ಮಾಂಟ್ ನಾಟಕವನ್ನು ಆಡುವುದರಲ್ಲಿ ರಂಗಕ್ಕೆ

ಹೊಂದಿಸುವುದಕ್ಕಾಗಿ ಒಂದು ಮುಖ್ಯವಾದ ಪಾತ್ರವನ್ನು ಬಿಟ್ಟು ಆಡಿದ ಮಾತಿಗೆ ಅವರು ಹೀಗೆಂದರು: "ನೀನು ಹೇಳುವುದು ನಿಜ. ನಾನು ಆ ನಾಟಕವನ್ನು ಬರೆದಾಗ ಎಲ್ಲ ವಿಷಯವನ್ನೂ ಯೋಚಿಸಿ ಬರೆದೆನು. ಇದನ್ನು ಬೇರೆ ಹೇಳಬೇಕಾಗಿಲ್ಲ. ಆದಕಾರಣ, ಒಟ್ಟು ನಾಟಕಕ್ಕಾಗಿ ಕಲ್ಪಿಸಿದ ಮತ್ತು ಒಟ್ಟು ನಾಟಕಕ್ಕೆ ಗುರಿಯಾಗಿರುವ ಒಂದು ಮುಖ್ಯ ಪಾತ್ರ ವನ್ನು ಅದರಿಂದ ಕಿತ್ತೊಗೆದರೆ ನಾಟಕ ರಸಗೆಡುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಸ್ಕಿಲ್ಲರನ ಸ್ವಭಾವದಲ್ಲಿ ಸ್ವಲ್ಪ ಒರಟುತನವಿತ್ತು. ಅನೇಕವೇಳೆ ಅವನು ತನ್ನ ಮನಸ್ಸಿನ ಯಾವುದೋ ಒಂದು ತೋರಿಕೆಯಂತೆ ಕೆಲಸಮಾಡಿ ಬಿಡುವನು. ತನ್ನ ಕೈಯಲ್ಲಿದ್ದ ವಸ್ತುವಿಗೆ ಅವನು ಸಾಕಾದಷ್ಟು ಮರ್ಯಾದೆ ಯನ್ನು ತೋರಿಸುತ್ತಿರಲಿಲ್ಲ" ಎಂದರು. "ತಿದ್ದುವುದಕ್ಕೆ ಬಿಟ್ಟದ್ದು ನಿಮ್ಮ ತಪ್ಪು ಎಂದು ಜನ ಹೇಳುವರು" ಎಂದುದಕ್ಕೆ ಗಯಟೆ: "ನಾವು ಅನೇಕವೇಳೆ ಇಂಥ ವಿಷಯಕ್ಕೆ ಇಷ್ಟದಿಂದ ಒಪ್ಪುವುದಿಲ್ಲ. ಅಲಸರಾಗಿರು ವುದರಿಂದ ಒಪ್ಪಿದಂತಾಗುತ್ತದೆ. ಸಾಲದ್ದಕ್ಕೆ ಆಗ ನನಗೆ ಬಹು ಮುಖ್ಯ ವಾದ ಇತರ ಕೆಲಸಗಳಿದ್ದುವು. ಎಗ್ಮಾಂಟ್ ನಾಟಕವನ್ನು ಕುರಿತು ನನಗೆ ಬಹಳ ಆಸಕ್ತಿಯಿರಲಿಲ್ಲ. ಆದುದರಿಂದ ಸ್ಕಿಲ್ಲರನ್ನು ಅವನ ಇಷ್ಟದಂತೆ ಬಿಟ್ಟೆನು. ಈಗ ನನಗೆ ಏನು ಒಂದು ಸಮಾಧಾನವೆಂದರೆ ಸದ್ಯ ಪುಸ್ತಕ ಅಚ್ಚಿನಲ್ಲಿದೆ. ಅಲ್ಲಲ್ಲಿ ರಂಗಗಳಲ್ಲಿ ನಾಟಕ ಸಂಘಗಳು ಅದನ್ನು ಸಂಕ್ಷೇಪಿ ಸದೆ ಹೇಗೆ ಬರೆದಿದೆಯೋ ಹಾಗೆ ಆಡುತ್ತಾರೆ ಎನ್ನುವುದು."

ರಂಗಕ್ಕೆ ಒಂದು ರೂಪ, ಓದುವುದಕ್ಕೆ ಒಂದು ರೂಪ ಎಂದರೆ ನಾಟಕದಲ್ಲಿ ಸುಖ ಕಡಮೆ:

"ನಾಟಕಕಾರನು ನಾಟಕವನ್ನು ಬರೆದಂತೆಯೇ ಆಡುವುದಕ್ಕೆ ಅನುಕೂಲವಾಗಿ ಬೆಳೆಸಬೇಕು. ಹಾಗಿಲ್ಲದಿದ್ದರೆ ನನಗೆ ನಾಟಕದ ವಿಷಯ ದಲ್ಲಿ ಮೆಚ್ಚಿಕೆ ಕಡಮೆ; ಅದು ಕೃತಿಯಲ್ಲಿ ಒಂದು ದೋಷ. ಇದರಿಂದ ನನಗೆ ನಾಟಕ ನೋಡುವ ಸುಖ ಅರ್ಧದಷ್ಟು ಕಡಮೆಯಾಗುತ್ತದೆ."

ಸ್ಕಿಲ್ಲರ್ ಹೀಗೆಯೇ ಮಾಡಿದ್ದಾನಲ್ಲವೇ ಎಂದು ಹೇಳಿದ್ದಕ್ಕೆ ಗಯಟೆ: "ಹೌದು, ಅವನು ಈ ತಪ್ಪನ್ನು ಮಾಡಿರುವುದು ನಿಜ. ಅದರಲ್ಲಿಯೂ ಅವನು ಯೌವನದಲ್ಲಿ ಬರೆದ ಅವನ ಮೊದಲ ಕೃತಿಗಳು ಮುಗಿಯುವುವೇ

ಇಲ್ಲವೋ ಎನ್ನುವಂತೆ ಕಾಣುತ್ತವೆ. ಅವನಿಗೆ ಮನಸ್ಸಿನಲ್ಲಿ ತುಂಬ ವಿಷಯವಿತ್ತು, ಹೇಳುವುದು ಬಹಳವಿತ್ತು; ಅದನ್ನು ಹಿಡಿಯುವುದಕ್ಕೆ ಆಗಲಿಲ್ಲ. ಆಮೇಲೆ ಈ ದೋಷ ಅವನಿಗೇ ತಿಳಿಯಿತು. ಆಗ ಅವನು ಬಹಳ ತೊಂದರೆ ತೆಗೆದುಕೊಂಡನು. ದುಡಿತದಿಂದ ಓದಿನಿಂದ ತನ್ನ ಪ್ರವೃತ್ತಿಯನ್ನು ತಿದ್ದುವುದಕ್ಕೆ ಯತ್ನಮಾಡಿದನು. ಕೊನೆಗೂ ಅವನು ಅದನ್ನು ತೀರ ಗೆಲ್ಲಲಿಲ್ಲ. ಒಂದು ವಸ್ತುವನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ, ಅದು ತನ್ನನ್ನು ಮುಳುಗಿಸದಂತೆ ತಡೆಯುವುದಕ್ಕೆ, ಕೇವಲ ಆವಶ್ಯಕವಾದದ್ದು ಯಾವುದೋ ಅದಷ್ಟರಲ್ಲಿ ಗಮನವನ್ನು ನಿಲ್ಲಿಸುವುದಕ್ಕೆ, ಗ್ರಂಥಕಾರನು ಕವಿಭೀಮನಾಗಿರಬೇಕು. ಇದು ನಾವು ತಿಳಿದುಕೊಂಡಿರಬಹುದಾದಷ್ಟು ಸುಲಭವಾಗಿಲ್ಲ."

ರಂಗಕ್ಕಾಗಿ ಬರೆಯುವ ನಾಟಕ ಬಹು ಜನಕ್ಕೆ ತಿಳಿಯುವಂತೆ ಇರಬೇಕು :

"ನಾಟಕಕಾರನಲ್ಲಿ ದೊಡ್ಡ ಗುಣ ಏನೆಂದರೆ, ಜನತೆಯ ಅಭಿರುಚಿಗಳ ಜಾಡನ್ನು ಹಿಡಿದು ಬರೆಯುವುದು. ಅವನ ಲೇಖನದ ದಾರಿ ಜನತೆಯ ದಾರಿಯೊಂದಿಗೆ ಹೊಂದಿದರೆ ಅವನ ಕಾರ್ಯ ಸಿದ್ಧಿಸಿದಂತೆಯೇ.... ಇದರಲ್ಲಿ ಕವಿ ಎಷ್ಟು ದೊಡ್ಡವನೆನ್ನುವುದು ಮುಖ್ಯವಿಷಯವಲ್ಲ. ಅವನು ದೊಡ್ಡವನಾಗದಿರುವುದೇ ಅನುಕೂಲವಾಗಬಹುದು. ಜನಸಾಮಾನ್ಯಕ್ಕಿಂತ ಬಹು ಎತ್ತರಕ್ಕೆ ಹೋಗದ ಲೇಖಕನು ಈ ಕಾರಣದಿಂದಲೇ ಬಹು ಜನದ ಮೆಚ್ಚಿಕೆಯನ್ನು ಪಡೆಯಬಹುದು. ಈ ವಿಚಾರದಲ್ಲಿ ಪ್ರಾಯಶಃ ಇದು ಸಿದ್ಧಾಂತವೆನ್ನಬಹುದು. ರಂಗಕ್ಕಾಗಿ ನಾಟಕ ಬರೆಯುವುದು ಒಂದು ವ್ಯಾಪಾರ. ಅದರ ಗುಟ್ಟನ್ನು ತಿಳಿದವನು ಅದಕ್ಕೆ ಹೋಗಬೇಕು. ತಿಳಿಯದವನು ಸುಮ್ಮನಿರಬೇಕು."

೧೦

ರಂಗಕ್ಕೆಂದೇ ಬರೆದರೂ ನಾಟಕವು ಕಾವ್ಯದ ದೃಷ್ಟಿಯಿಂದಲೂ ಉತ್ತಮವಾಗಿರಬಹುದು :

"ಷೇಕ್ಸ್‌ಪಿಯರ ನಾಟಕಗಳು ರಂಗಕ್ಕಾಗಿ ಬರೆದವಾದರೂ ರಂಗಸ್ಥಳದ ನಾಟಕಗಳಲ್ಲ. ಷೇಕ್ಸ್‌ಪಿಯರ್ ಆ ನಾಟಕಗಳನ್ನು ತನ್ನ

ಒಳಗಣಿಂದ ತೋರಿದಂತೆ ಬರೆದನು. ಅಲ್ಲದೆ ಅವನ ಕಾಲವೂ ಆಗಣ ರಂಗದ ಏರ್ಪಾಡುಗಳೂ ಅವನಿಗೆ ತೊಂದರೆಕೊಡುವಂಥವಾಗಿರಲಿಲ್ಲ. ಜನರು ಅವನು ಏನು ಕೊಟ್ಟರೆ ಅದಕ್ಕೆ ಒಪ್ಪಿಕೊಳ್ಳಬೇಕಾಗಿತ್ತು. ಅದೇ ಷೇಕ್ಸ್‌ಪಿಯರ್ ಮೆಡ್ರಿಡ್ ಅರಮನೆಯಲ್ಲಿಯೋ ಹನ್ನೆರಡನೆಯ ಲೂಯಿಯ ಕಾಲದ ರಂಗದಲ್ಲಿಯೋ ಕೆಲಸಮಾಡಿದ್ದರೆ ಈಗ ಅವನಲ್ಲಿ ಕಾಣಬರುವ ರಚನೆಗಿಂತ ಭದ್ರವಾದ ರಚನೆಗೆ ಪ್ರಾಯಶಃ ಅವನು ತೊಡಗುತ್ತಿದ್ದನು. ಆದರೆ ಇದಕ್ಕಾಗಿ ನಾವು ಚಿಂತಿಸಬೇಕಾದದ್ದಿಲ್ಲ. ರಂಗದ ನಾಟಕವಾಗಿ ಅವನ ನಾಟಕದಲ್ಲಿ ಎಷ್ಟು ಕೊರತೆಯಿದೆಯೋ ಕವಿತೆಯ ದೃಷ್ಟಿಯಿಂದ ಅದರಲ್ಲಿ ಅಷ್ಟು ಗುಣ ಸೇರಿದೆ. ಷೇಕ್ಸ್‌ಪಿಯರ್ ಕವಿ ಮಾನವಹೃದಯವನ್ನು ಬಹು ಬಲ್ಲವನು. ಮನುಷ್ಯನ ಸ್ವಭಾವದ ಅಂತರಂಗಗಳನ್ನು ಅವನ ಕೃತಿಗಳಿಂದ ನಾವು ತಿಳಿದುಕೊಳ್ಳಬಹುದು."

ನಿಜವಾದ ಕಾವ್ಯಶಕ್ತಿಯುಳ್ಳವನು ರಂಗಕ್ಕಾಗಿ ಬರೆಯುವಲ್ಲಿ ಬರುವ ತೊಡಕುಗಳನ್ನು ಇವರು ತಮ್ಮ ಮತ್ತು ಸ್ಕಿಲ್ಲರನ ಪದ್ಧತಿಗಳನ್ನು ಕುರಿತು ಮಾತನಾಡುತ್ತಾ ಹೀಗೆ ವಿವರಿಸಿದರು:

"ಸ್ಕಿಲ್ಲರ್ ಕವಿಯು ದೊಡ್ಡ ವಿಷಯವನ್ನು ತೆಗೆದುಕೊಂಡು ಅದನ್ನು ಅತ್ತ ಇತ್ತ ತಿರುಗಿಸುವನು; ಹೀಗೆ ಹಾಗೆ ತಿದ್ದುವನು. ಆದರೆ ಅವನು ತನ್ನ ನಾಟಕದ ವಸ್ತುವನ್ನು ಹೊರಗಿನಿಂದ ಮಾತ್ರ ನೋಡುತ್ತಿದ್ದನು; ಒಳಭಾಗದಿಂದ ಸಹಜವಾಗಿ ಅದನ್ನು ಬೆಳೆಸುವುದು ಅವನಿಗೆ ಸೇರಿದುದಲ್ಲ. ....ಧೈರ್ಯವಾಗಿ ಬರೆಯುತ್ತ ಇದ್ದದ್ದರಿಂದ ಅವನು ಕಾರ್ಯಕಾರಣಗಳನ್ನು ಹೊಂದಿಸುವುದಕ್ಕೆ ಸಾಕಾದಷ್ಟುತೊಂದರೆ ತೆಗೆದುಕೊಳ್ಳುತ್ತಿರಲಿಲ್ಲ. ಟೆಲ್ ನಾಟಕದಲ್ಲಿ ಗೆಸ್ಲರ್ ದೊರೆ ಮರದಿಂದ ಒಂದು ಸೇಬಿನ ಹಣ್ಣನ್ನು ಕಿತ್ತು ಹುಡುಗನ ತಲೆಯ ಮೇಲಿಟ್ಟು ಇದನ್ನು ಹೊಡಿ ಎಂದು ಅವನ ತಂದೆಗೆ ಹೇಳುವ ಸಂದರ್ಭದಲ್ಲಿ ನನಗೂ ಸ್ಕಿಲ್ಲರಿಗೂ ನಡೆದ ಚರ್ಚೆ ನನಗೆ ನೆನವಿದೆ. ಕಾರಣವೇ ಇಲ್ಲದೆ ಹೀಗೆ ಮಾಡಿದನು ಎಂದು ಬರೆಯುವುದು ನನ್ನ ಸ್ವಭಾವಕ್ಕೆ ವಿರೋಧ. ಹುಡುಗನು ತನ್ನ ತಂದೆಯ ಚಾತುರ್ಯವನ್ನು ಕುರಿತು ರಾಜನಲ್ಲಿ ಜಂಭ ಕೊಚ್ಚುವಂತೆ ಮಾಡಿ ತನ್ನ ತಂದೆ ನೂರು ಗಜದ ದೂರದಲ್ಲಿ ನಿಂತು ಮರದಲ್ಲಿರುವ ಹಣ್ಣನ್ನು ಹೊಡೆಯಬಲ್ಲನೆಂದು ಹೇಳಿಸಿ

ರಾಜನ ಕಾಠಿಣ್ಯಕ್ಕೆ ಒಂದು ಕಾರಣವನ್ನು ಒದಗಿಸು ಎಂದು ನಾನು ಒತ್ತಾಯ ಮಾಡಿದೆನು. ಮೊದಲಲ್ಲಿ ಸ್ಕಿಲ್ಲರ್ ಇದಕ್ಕೆ ಒಪ್ಪಲಿಲ್ಲ. ನಾನು ಚರ್ಚೆಮಾಡಿ ನನ್ನ ಆಶಯವನ್ನು ಸ್ಪಷ್ಟಪಡಿಸಿದಮೇಲೆ ಒಪ್ಪಿಕೊಂಡು ಹಾಗೆ ಮಾಡಿದನು. ನನ್ನದಾದರೆ ಇನ್ನೊಂದು ತಪ್ಪು: ಕಾರಣಗಳನ್ನು ತೋರಿಸುವ ಅತಿ ಪ್ರಯತ್ನದಲ್ಲಿ ನಾನು ನನ್ನ ನಾಟಕಗಳು ರಂಗವನ್ನು ಸೇರದಂತೆ ಮಾಡಿದೆನು. ನನ್ನ ಯೂಜೆನೀ ನಾಟಕವು ಕಾರಣಗಳ ಒಂದು ಸರ. ಇಂಥ ನಾಟಕವು ರಂಗದಮೇಲೆ ಸೊಗಸುವುದಿಲ್ಲ. ಸ್ಕಿಲ್ಲರ್ ಕವಿಯ ಪ್ರತಿಭೆ ರಂಗಕ್ಕಾಗಿಯೇ ಮಾಡಿದಂತಿತ್ತು; ನಾಟಕದಿಂದ ನಾಟಕಕ್ಕೆ ಅವನು ಮುಂದುವರಿದನು; ನಾಟಕದಿಂದ ನಾಟಕಕ್ಕೆ ಅವನ ಕೆಲಸ ನಯವಾಯಿತು. ಆದರೆ ಒಂದು ವಿಚಿತ್ರ ಏನೆಂದರೆ ಮೊದಲ ನಾಟಕ ಬರೆದಾಗ ಹೇಗೋ ಕೊನೆಗೂ ಹಾಗೆ ಅವನಿಗೆ ಭಯಾನಕ ರಸದಲ್ಲಿ ಮಮತೆ ಹೆಚ್ಚು. (ಎಂದು ಉದಾಹರಣೆಯನ್ನು ಹೇಳಿ) ಅವನು ಬಹು ದೊಡ್ಡಮನುಷ್ಯ, ಬಹು ವಿಚಿತ್ರದ ಮನುಷ್ಯ.''

ಇದಾದಮೇಲೆ ಸ್ನೇಹದ ನೆನವಿನಲ್ಲಿ:

''ಒಂದೊಂದು ವಾರವೂ ಅವನು ಮಾರ್ಪಟ್ಟನು, ನಯವಾದನು. ನಾನು ನೋಡಿದ ಒಂದೊಂದು ಸಲವೂ ಅವನು ವಿದ್ಯೆಯಲ್ಲಿ ತಿಳಿವಿನಲ್ಲಿ ಮುಂದುವರಿದಂತೆ ಕಾಣುತ್ತಿದ್ದನು. ಅವನು ನನಗೆ ಬರೆದಿರುವ ಕಾಗದಗಳು ನನ್ನಲ್ಲಿರುವ ನೆನವಿನ ವಸ್ತುಗಳಲ್ಲಿ ಅತ್ಯುತ್ತಮವಾದುವು. ಅವು ಅವನ ಲೇಖನಗಳಲ್ಲಿ ಕೂಡ ಅತ್ಯುತ್ತಮವಾದುವು. ಅವನ ಕೊನೆಯ ಕಾಗದವನ್ನು ಪುಣ್ಯವಸ್ತುವೆಂಬಂತೆ ನಾನು ನನ್ನ ಒಡವೆಗಳ ಜೊತೆಯಲ್ಲಿ ಇಟ್ಟುಕೊಂಡಿದೇನೆ.''

೧೧

ನಟರನ್ನು ತಿದ್ದುವುದು ನಾಟಕ ಮಂದಿರಗಳ ಕೆಲಸದಲ್ಲಿ ಮುಖ್ಯವಾದ ಭಾಗ. ಗಯಟೆ ಇದರ ವಿಷಯ ಹೇಳಿದ ಮಾತೂ ವಿಶೇಷ ಪರಿಶ್ರಮವನ್ನು ತೋರಿಸುತ್ತದೆ.

ಹೊಸ ನಟನನ್ನು ಆರಿಸುವುದಕ್ಕೆ ಹೇಗೆ ಮಾಡುತ್ತಿದ್ದಿರೆಂದರೆ:

''ಹೀಗೆಯೇ ಎಂದು ಹೇಳಲಾರೆ. ಇದನ್ನು ಬೇರೆ ಬೇರೆ ರೀತಿಯಲ್ಲಿ

ಮಾಡುತ್ತಿದ್ದೆ. ಅವನು ಮೊದಲೇ ಹೆಸರುವಾಸಿಯಾಗಿದ್ದರೆ ಅವನನ್ನು ನಟಿಸಲು ಬಿಟ್ಟು ಅವನು ನಮ್ಮ ಇತರ ಕಲೆಗಾರರೊಂದಿಗೆ ಹೊಂದುವನೋ ಎಂದು ನೋಡುತ್ತಿದ್ದೆ; ಎಂದರೆ ಅವನ ರೀತಿ ರಚನೆ ನಮ್ಮ ಸಮುದಾಯಕ್ಕೆ ವಿರೋಧವಾದೀತೇ ಅಥವಾ ಅದರಲ್ಲಿನ ಒಂದು ಕೊರತೆಯನ್ನು ಅವನು ಹರಿಸುವನೇ ಎಂದು. ಅವನು ಹಿಂದೆ ಎಂದೂ ಅಭಿನಯಿಸದ ಹೊಸಬ ನಾಗಿದ್ದರೆ ಮೊದಲು ಅವನ ವೈಯಕ್ತಿಕ ಗುಣಗಳನ್ನು ನೋಡುತ್ತಿದ್ದೆ; ಎಂದರೆ ಜನರನ್ನು ಒಲಿಸುವ ಒಪ್ಪಿಸುವ ಲಕ್ಷಣಗಳು ಅವನಲ್ಲಿ ಇವೆಯೇ ಮತ್ತು ಎಲ್ಲಕ್ಕೂ ಹೆಚ್ಚಾಗಿ ಅವನು ತನ್ನನ್ನು ತಾನು ಸ್ವಾಧೀನದಲ್ಲಿರಿಸಿ ಕೊಳ್ಳಬಲ್ಲನೇ ಎಂದು. ಇಂಥ ಸಂಯಮವಿಲ್ಲದೆ ಹೊಸ ಜನದ ಮಧ್ಯದಲ್ಲಿ ತನ್ನ ಅತ್ಯುತ್ತಮ ಗುಣದಿಂದ ಕಾಣಲಾರದೆ ಇರುವ ಮನುಷ್ಯನು ಪ್ರಾಯಶಃ ಒಳ್ಳೆಯ ನಟನಾಗಲಾರನು. ನಟನವೃತ್ತಿ ನಟನಿಂದ ಸದಾ ಕಾಲವೂ ನಾನು ಎನ್ನುವ ದುರಭಿಮಾನವನ್ನಲ್ಲ, ಇನ್ನೊಂದು ಮೊಗ ವಾಡದ ಧಾರಣೆಯವನ್ನು, ನಿರೀಕ್ಷಿಸುತ್ತದೆ.

"ಹೊಸಬನ ಆಕಾರವೂ ರೀತಿಯೂ ನನಗೆ ಒಪ್ಪಿದರೆ ಅವನನ್ನು ಏನನ್ನಾದರೂ ಓದಹೇಳಿ ಅವನ ಶಾರೀರದ ಬಲವನ್ನೂ ಮಟ್ಟವನ್ನೂ ಯೋಗ್ಯತೆಗಳನ್ನೂ ಪರೀಕ್ಷಿಸುತ್ತಿದ್ದೆನು. ಮಹಾಕವಿಯೊಬ್ಬನ ಉದ್ದಾಮ ಕೃತಿಯನ್ನು ಕೊಟ್ಟು ಉದಾತ್ತ ವಿಷಯಗಳನ್ನು ಅನುಭವಿಸುವುದಕ್ಕೂ ವಚಿಸುವುದಕ್ಕೂ ಬರುತ್ತದೆಯೇ ಎಂದೂ, ಆಮೇಲೆ ತೀವ್ರವೂ ದುರ್ದಮವೂ ಆದ ವಸ್ತುವಿನ ಕೃತಿಯನ್ನು ಕೊಟ್ಟು ಅವನಿಗೆ ಅದನ್ನು ನುಡಿಯುವ ಶಕ್ತಿ ಇದೆಯೇ ಎಂದೂ, ಆಮೇಲೆ ಅರಿವು ಚತುರತೆ ಮುಖ್ಯ ವಾದ ಕೃತಿ, ವ್ಯಂಗ್ಯವಾಗಿ ವಿನೋದವಾಗಿರುವ ಕೃತಿ, ಇವನ್ನು ಕೊಟ್ಟು ಅವನು ಅಂಥ ಕೃತಿಗಳನ್ನು ಹೇಗೆ ನುಡಿಯುತ್ತಾನೆ, ನುಡಿತ ಅವನಿಗೆ ಸಾಕಾದಷ್ಟು ಧಾರಾಳವಾಗಿದೆಯೋ ಎಂದೂ ತಿಳಿಯುತ್ತಿದ್ದೆನು. ಆಮೇಲೆ ನೊಂದ ಒಂದು ಹೃದಯದ ಬೇನೆಯನ್ನೋ ಒಂದು ದೊಡ್ಡ ಜೀವದ ಖೇದವನ್ನೋ ಒಳಗೊಂಡ ಕೃತಿಯೊಂದನ್ನು ಕೊಡುತ್ತಿದ್ದೆನು. ಇದರಿಂದ ಅವನು ಶೋಕರಸವನ್ನು ಪ್ರದರ್ಶಿಸಬಲ್ಲನೇ ಎನ್ನುವುದು ಕಾಣುತ್ತಿತ್ತು.

“ಈ ಎಲ್ಲ ವಿಷಯದಲ್ಲಿಯೂ ಅವನನ್ನು ಕುರಿತು ಒಪ್ಪಿಗೆಯಾದ ಮೇಲೆ ಅವನು ಪ್ರಮುಖ ನಟನಾಗುವನೆಂದು ಸಕಾರಣವಾದ ನಿರೀಕ್ಷೆ ಹುಟ್ಟುತ್ತಿತ್ತು. ಅವನು ಕೆಲವು ವಿಷಯಗಳಲ್ಲಿ ಇತರ ವಿಷಯಗಳಿಗಿಂತ ಹೆಚ್ಚು ಶಕ್ತಿಯನ್ನು ಪಡೆದಿದ್ದರೆ ಅವನಿಗೆ ತಕ್ಕ ಆ ಕೆಲಸ ಯಾವುದೆಂದು ನಾನು ಗುರುತುಮಾಡಿಕೊಳ್ಳುತ್ತಿದ್ದೆನು. ಇದಲ್ಲದೆ ನನಗೆ ಇಷ್ಟು ಹೊತ್ತಿಗೆ ಅವನು ಯಾವ ಪಾತ್ರಗಳಿಗೆ ಅನರ್ಹನೆಂದು ತಿಳಿಯುತ್ತಿತ್ತು. ಅವನು ತನ್ನ ಆ ದುರ್ಬಲವಾದ ಭಾಗಗಳಲ್ಲಿ ಬಲವನ್ನು ಪಡೆಯುವಂತೆ ತಿದ್ದಿ ಕೊಳ್ಳುವಂತೆ ಮಾಡುವುದಕ್ಕೆ ಯತ್ನಿಸುತ್ತಿದ್ದೆನು. ಉಚ್ಚಾರಣೆಯಲ್ಲಿ ದೋಷಗಳಿದ್ದರೆ ಗ್ರಾಮ್ಯರೂಪಗಳಿದ್ದರೆ ಅವುಗಳನ್ನು ಬಿಟ್ಟುಬಿಡುವಂತೆ ಹೇಳುತ್ತಿದ್ದೆನು. ಈ ದೋಷಗಳಿಲ್ಲದ ಇನ್ನೊಬ್ಬ ಕಲೆಗಾರನಲ್ಲಿಗೆ ಹೋಗಿ ಕೃತಿಗಳ ವಾಚನವನ್ನು ಜೊತೆಯಲ್ಲಿ ಅಭ್ಯಾಸಮಾಡೆಂದು ಸಲಹೆ ಕೊಡುತ್ತಿದ್ದೆನು. ಅವನಿಗೆ ನರ್ತನ ಮತ್ತು ಕತ್ತಿಯ ವರಸೆ ಬರುವುದೇ ಎಂದು ವಿಚಾರಿಸಿ ಅವು ಬಾರದೇ ಇದ್ದರೆ ಅವನನ್ನು ನರ್ತನದ ಮತ್ತು ಕತ್ತಿವರಸೆಯ ಉಪಾಧ್ಯಾಯರ ಬಳಿಗೆ ಸ್ವಲ್ಪ ಕಾಲ ಕಳುಹಿಸುತ್ತಿದ್ದೆನು.

“ರಂಗದಮೇಲೆ ಬರುವುದಕ್ಕೆ ಆವಶ್ಯಕವಾದಷ್ಟು ತರಪೇತಾದಾಗ ಅವನಿಗೆ ನಾನು ಮೊದಲು ಅವನ ಸ್ವಭಾವಕ್ಕೆ ಅನುಗುಣವಾದ ಪಾತ್ರ ಗಳನ್ನು ಕೊಡುತ್ತಿದ್ದೆನು. ಆ ಪಾತ್ರಗಳಲ್ಲಿ ಅವನು ಸಾಧ್ಯವಾದಷ್ಟು ತನ್ನ ಸ್ವಭಾವವನ್ನು ಪ್ರಕಟಿಸಬೇಕೆಂದು ಅಪೇಕ್ಷಿಸುತ್ತಿದ್ದೆನು. ಇದಾದಮೇಲೆ ಅವನು ಬಹು ತೀವ್ರವಾದ ಸ್ವಭಾವದವನಾದರೆ ಮಂದವಾದ ಪಾತ್ರ ಗಳನ್ನು ಕೊಡುತ್ತಿದ್ದೆನು. ಅತಿ ಶಾಂತ ಅತಿ ಮಂದವಾದ ಸ್ವಭಾವದವ ನಾದರೆ ತೀವ್ರವಾದ ಆತುರವಾದ ಪಾತ್ರಗಳನ್ನು ಕೊಡುತ್ತಿದ್ದೆನು. ತನ್ನನ್ನು ಒಂದು ಬದಿಗಿಟ್ಟು ಇನ್ನೊಂದು ವ್ಯಕ್ತಿಯ ಸ್ವಭಾವವನ್ನು ಕಲಿಯಲೆನ್ನುವುದಕ್ಕಾಗಿ ಹೀಗೆ ಮಾಡುತ್ತಿದ್ದೆನು.”

ನಟರು ತಮ್ಮ ಪಾತ್ರಗಳನ್ನು ಸರಿಯಾಗಿ ನಿರ್ವಹಿಸುವುದಕ್ಕೆ ಬಹು ರೀತಿಯ ತಿಳಿವನ್ನು ಸಂಪಾದಿಸಬೇಕಾಗುತ್ತದೆ:

“ನಟನಾಗುವವನು ನ್ಯಾಯವಾಗಿ ಒಬ್ಬ ಶಿಲ್ಪಿಯ ಹತ್ತಿರಕ್ಕೋ ಒಬ್ಬ ಚಿತ್ರಕಾರನ ಹತ್ತಿರಕ್ಕೋ ಹೋಗಿ ಅನೇಕ ವಿಷಯಗಳನ್ನು

ಕಲಿಯಬೇಕು. ಗ್ರೀಕರ ನಾಯಕನ ಪಾತ್ರವನ್ನು ಅಭಿನಯಿಸಬೇಕಾದರೆ ಆ ಕಾಲದಿಂದ ಬಂದಿರುವ ಪೂರ್ವ ಶಿಲ್ಪಗಳನ್ನು ಎಚ್ಚರಿಕೆಯಿಂದ ನೋಡುವುದು ಆವಶ್ಯಕ. ಹೀಗೆ ಮಾಡುವುದರಿಂದ ಆಗಣ ಜನರ ನಡೆ ನಿಲುವುಗಳ ಒನಪು ಅವನಿಗೆ ತಿಳಿಯುವುದು. ಸುಮ್ಮನೆ ಮೈ ಹೇಗಿತ್ತೆಂದು ತಿಳಿದರೂ ಸಾಲದು. ಪೂರ್ವದ ಮತ್ತು ಈಗಿನ ಕಾಲದ ಉತ್ತಮ ಗ್ರಂಥಗಳನ್ನು ಕಷ್ಟದಿಂದ ಪರಿಶೀಲಿಸಿ ಅವನು ತನ್ನ ಮನಸ್ಸನ್ನೂ ಚೆನ್ನಾಗಿ ತಿದ್ದಿಕೊಳ್ಳಬೇಕು. ಇದರಿಂದ ಅವನಿಗೆ ಅವನ ಪಾತ್ರದ ಭಾವ ಗ್ರಹಿಕೆಗೆ ಬರುತ್ತದೆ. ಅವನ ಚೇತನವೆಲ್ಲಕ್ಕೂ ಒಂದು ಔನ್ನತ್ಯ ನೆರೆಯುತ್ತದೆ. ಇಂಥ ಶಿಕ್ಷೆ ಅವನ ನಡೆನುಡಿಯೆಲ್ಲವನ್ನೂ ಮೇಲುಪಡಿಸುತ್ತದೆ.''

ಆದರೆ ಒಂದು ದೋಷವಿದ್ದಿತೋ ಇದು ಯಾವುದೂ ಉಪಯೋಗಕ್ಕೆ ಬರುವುದಿಲ್ಲ. ಅವನು ತನ್ನ ಪಾತ್ರದ ಮಾತನ್ನು ಪಾತ್ರಕ್ಕೆ ಸಹಜವಾದ ರೀತಿಯಲ್ಲಿ ನುಡಿಯಬೇಕು. ಎಂದರೆ ತನ್ನ ಪಂಕ್ತಿಯನ್ನು ಚೆನ್ನಾಗಿ ಕಂಠಪಾಠ ಮಾಡಬೇಕು. ಮಾತು ಮಾತನ್ನೂ ಮರೆತು ಜ್ಞಾಪಕ ಮಾಡಿಕೊಳ್ಳುತ್ತ ನಿಂತರೆ ಪಾತ್ರದ ನಟನ ಕೆಡುತ್ತದೆ:

''ನಟನು ತನ್ನ ಪಾತ್ರದ ಮಾತನ್ನು ಕಲಿಯದೆ ಮಾತು ಮಾತಿಗೂ ನೆನವುಗಾರನ ಕಡೆ ತಿರುಗುವ ಅವಸ್ಥೆಗಿಂತ ಹೆಚ್ಚು ಭೀಕರ ಸನ್ನಿವೇಶವಿಲ್ಲ. ಅವನು ಹೀಗೆ ಮಾಡಿದರೆ ಅವನ ಅಭಿನಯವು ನಿರರ್ಥಕವಾಗುತ್ತದೆ, ಅದರಲ್ಲಿ ಜೀವವಿರುವುದಿಲ್ಲ, ಕಳೆಯಿರುವುದಿಲ್ಲ.''

ನಟರ ಕೆಲಸ ದೊಡ್ಡದು. ಅವರು ಶಕ್ತರಾದರೆ ಸಾಮಾನ್ಯ ನಾಟಕವೂ ಸೊಗಸಬಹುದು :

''ನಾಟಕ ಸಾಮಾನ್ಯವಾದದ್ದಾದರೆ ಸಾಮಾನ್ಯರಾದ ನಟರು ಅದನ್ನು ಅಭಿನಯಿಸಬಹುದೆನ್ನುವುದು ಬಹು ತಪ್ಪಾದ ಭಾವನೆ. ಎರಡನೆಯ ಅಥವಾ ಮೂರನೆಯ ತರಗತಿಯ ನಾಟಕ ಉತ್ತಮರೀತಿಯ ನಟರು ಅಭಿನಯಿಸಿದರೆ ರಂಗದಲ್ಲಿ ಬಹುವಾಗಿ ಸೊಗಸಬಹುದು. ಅದೇ ತರಗತಿಯ ನಾಟಕವನ್ನು ಎರಡನೆಯ ಅಥವಾ ಮೂರನೆಯ ತರಗತಿಯ ನಟರು ಅಭಿನಯಿಸಿದ್ದೇ ಆದರೆ ಅದು ಸೊಗಸದೇ ಇರುವುದರಲ್ಲಿ ಆಶ್ಚರ್ಯ ವಿಲ್ಲ. ಸಾಮಾನ್ಯ ನಟರು ಶ್ರೇಷ್ಠವಾದ ನಾಟಕದಲ್ಲಿ ಬಹಳ ಉಪಯೋಗಕ್ಕೆ

ಬರುತ್ತಾರೆ. ಚಿತ್ರಗಳಲ್ಲಿ ಕಡಮೆ ಬೆಳಕಿನ ಆಕೃತಿಗಳು ಮಾಡುವ ಕೆಲಸವನ್ನು ಇವರು ಅಂಥ ನಾಟಕದಲ್ಲಿ ಮಾಡುತ್ತಾರೆ. ಇವು ಇರುವುದರಿಂದ ತುಂಬು ಬೆಳಕಿನ ಆಕೃತಿಗಳು ಇನ್ನಷ್ಟು ಪ್ರಕಾಶವಾಗಿ ಕಾಣುತ್ತವೆ.''

ಕವಿ ನಟ ನಟಿಯರನ್ನು ನಡೆಸಿಕೊಂಡ ವಿಷಯದಲ್ಲಿ ಹೇಳಿದ ಮಾತೂ ಹೀಗೆಯೇ ಬೋಧಕವಾಗಿದೆ. ನಟ ನಟಿಯರನ್ನು ಸರಿಯಾಗಿ ನಡೆಸಿಕೊಳ್ಳುವುದು ಕಷ್ಟವಿರಬೇಕು ಎಂಬ ವಿಷಯಕ್ಕೆ: ``ಕಠಿಣವಾದ ಶಿಕ್ಷೆಯಿಂದ ಬಹು ಕೆಲಸ ನಡೆಯುತ್ತದೆ; ಪ್ರೇಮದಿಂದ ನಡೆಯುವುದು ಇನ್ನೂ ಹೆಚ್ಚು. ಆದರೆ ಗುಣದೋಷಗಳನ್ನು ಸರಿಯಾಗಿ ಪರಿಶೀಲಿಸಿ ಅವರು ಇವರು ಎಂದು ದಾಕ್ಷಿಣ್ಯಕ್ಕೆ ಒಳಗಾಗದೆ ನ್ಯಾಯವನ್ನು ಮಾಡುವುದರಿಂದ ಇದೆಲ್ಲಕ್ಕಿಂತ ಹೆಚ್ಚಿನ ಕೆಲಸ ನಡೆಯುತ್ತದೆ.

``ನನಗೆ ಈ ಸಂದರ್ಭದಲ್ಲಿ ಎರಡು ಶತ್ರುಗಳಿದ್ದುವು. ಅವುಗಳ ವಿಷಯದಲ್ಲಿ ನಾನು ಎಚ್ಚರವಾಗಿರಬೇಕಾಗಿತ್ತು. ಒಂದು ಯಾವುದೆಂದರೆ, ಗುಣ ಕಂಡಲ್ಲಿ ನನಗೆ ಹುಟ್ಟುತ್ತಿದ್ದ ಅತಿಶಯವಾದ ವಿಶ್ವಾಸ. ಇದರಿಂದ ನಾನು ಪಕ್ಷಪಾತಮಾಡುವ ಸಂಭವವಿತ್ತು. ಇನ್ನೊಂದು ಏನೆಂಬುದನ್ನು ನಾನು ಬಾಯಿಬಿಚ್ಚಿ ಹೇಳುವುದಿಲ್ಲ; ನಿನಗೇ ಅದು ತಿಳಿಯುತ್ತದೆ. ನಮ್ಮ ನಟವರ್ಗದಲ್ಲಿ ಸುಂದರ ತರುಣಿಯರಿಗೇನೂ ಕಡಮೆಯಿರಲಿಲ್ಲ. ಅವರ ಮನೋಧರ್ಮ ಕೂಡ ಚಿತ್ತಾಕರ್ಷಕವಾಗಿತ್ತು. ಅವರಲ್ಲಿ ಹಲವರನ್ನು ಕುರಿತು ನನಗೆ ಪ್ರಣಯದ ಸೆಳೆತ ತಲೆದೋರುವುದು. ಅವರಲ್ಲಿ ಕೆಲವರು ತಾವೂ ನನ್ನಲ್ಲಿ ಪ್ರೇಮವನ್ನು ಸೂಚಿಸುವರು. ಆದರೆ ನಾನು ಆಸೆಯನ್ನು ತಡೆದುಕೊಂಡೆನು. ಇದು ಇಷ್ಟರಲ್ಲಿಯೇ ಮುಗಿಯಬೇಕು ಎಂದು ನಿರ್ಧರಮಾಡಿಕೊಂಡೆನು. ನನ್ನ ಸ್ಥಾನವೆಂಥದೆಂದೂ ಆ ಸ್ಥಾನಕ್ಕೆ ತಕ್ಕವನಾಗಿರಬೇಕಾದರೆ ಹೇಗೆ ಇರಬೇಕೆಂದೂ ನನ್ನ ಮನಸ್ಸಿಗೆ ತಿಳಿದಿತ್ತು. ನಾನು ಅಲ್ಲಿ ಉಳಿದವರಂತೆ ಸಾಮಾನ್ಯ ವ್ಯಕ್ತಿ ಅಲ್ಲ; ಸಂಘದ ಯಜಮಾನ. ಕ್ಷಣಮಾತ್ರದ ಸುಖಾನುಭವಕ್ಕಿಂತ ಸಂಘವೆನ್ನುವುದರ ಏಳಿಗೆ ನನಗೆ ಮುಖ್ಯ. ನಾನು ಎಂಥದಾದರೊಂದು ಪ್ರಣಯ ಪ್ರಸಂಗದಲ್ಲಿ ತೊಡಗಿದ್ದರೆ ಅಯಸ್ಕಾಂತದ ಹತ್ತಿರಿರುವ ಉತ್ತರಸೂಚಿಯಂತೆ ನಾನು ಸರಿಯಾದದ್ದನ್ನು ತಿಳಿಯಲು ಅಶಕ್ತನಾಗುತ್ತಿದ್ದೆನು.

"ಹೀಗೆ ಪ್ರಣಯದಿಂದ ದೂರದಲ್ಲಿರುತ್ತ ಸದಾ ನನ್ನನ್ನು ನಾನೇ ಹಿಡಿತದಲ್ಲಿಟ್ಟುಕೊಂಡು ನಾನು ನಾಟಕ ಸಂಘವನ್ನೂ ಹಿಡಿತದಲ್ಲಿರಿಸಿಕೊಂಡೆನು. ನನ್ನನ್ನು ಎಲ್ಲರೂ ತಕ್ಕ ಗೌರವದಿಂದ ಕಾಣುತ್ತಿದ್ದರು. ಹೀಗಲ್ಲದಿದ್ದರೆ ಇಂಥ ಯಾಜಮಾನ್ಯ ಮುಕ್ತಾಯಕ್ಕೆ ಬಂದಂತೆಯೇ."

ಈ ಜನರೊಂದಿಗೆ ಹೆಣಗುವುದು ಕಷ್ಟ. ನಾಟಕ ಮಂದಿರದ ಚಾಲಕನಿಗೆ ಏನಿರಬೇಕೆಂದು ಇವರು ಇನ್ನೊಂದು ಮಾತಿನಲ್ಲಿ ಹೇಳಿದರು:

"ನಟರನ್ನು ತಿದ್ದುವವನಿಗೆ ಅನಂತವಾದ ಸಹನೆಯಿರಬೇಕು."

೧೨

ಲೇಖನವು ದೊಡ್ಡ ಧ್ಯೇಯದಿಂದ ಹೊರಡಬೇಕು. ಆದರೆ ಶ್ರೇಷ್ಠವಾದ ನಾಟಕ ಒಂದು ಭಾವವನ್ನು ಹೇಳುವುದಕ್ಕೆಂದು ಹೊರಡುವುದಿಲ್ಲ. ಅದರ ಉದ್ದೇಶ ಅನುಕೂಲವಾದ ಒಂದು ವಸ್ತುವನ್ನು ದೃಶ್ಯದ ರೀತಿಯಲ್ಲಿ ವಿವರಿಸುವುದು. ಅದನ್ನು ಅದು ನೆರವೇರಿಸಬೇಕು.

ಸೋಫೊಕ್ಲೀಸನು ನಾಟಕದಲ್ಲಿ ಕಾಣುವ ನೀತಿಯನ್ನು ಕುರಿತು ಯೋಚಿಸುವುದಕ್ಕಿಂತ ಅದರ ವಸ್ತು ಚೆನ್ನಾಗಿ ಬೆಳೆಯುವುದರ ಬಗ್ಗೆ ಹೆಚ್ಚು ಗಮನಕೊಡುತ್ತಿದ್ದನೆಂಬ ಮಾತಿಗೆ ಗಯಟೆ ಹೀಗೆಂದರು:

"ನಾಟಕಕಾರನು ನೀತಿಯ ಪ್ರಚಾರವನ್ನು ಮನಸ್ಸಿನಲ್ಲಿಟ್ಟುಕೊಳ್ಳುವ ವಿಷಯದಲ್ಲಿ ಅಡ್ಡಿ ಏನೂ ಇಲ್ಲ. ಆದರೆ ಕಥಾವಸ್ತುವನ್ನು ಸ್ಪಷ್ಟವಾಗಿ ಮನತಟ್ಟುವಂತೆ ಸಭೆಯ ಮುಂದೆ ತರಬೇಕಾದಾಗ ಬರಿಯ ನೀತಿಗಾಗಿ ಅವನು ಏನೂ ಮಾಡುವುದಕ್ಕಾಗುವುದಿಲ್ಲ. ಆಗ ಏನು ಮಾಡಬೇಕು ಏನು ಬಿಡಬೇಕು ಎನ್ನುವುದಕ್ಕೆ ನೀತಿ ವಿಜ್ಞಾನಕ್ಕಿಂತ ಹೆಚ್ಚಾಗಿ ಉಲ್ಲೇಖನ ಶಕ್ತಿಯೂ ರಂಗಸ್ಥಲದ ಪರಿಚಯವೂ ಬೇಕಾಗುತ್ತದೆ. ವಸ್ತುವಿನಲ್ಲಿ ನೀತಿ ಒಂದು ಇರುವುದೇ ನಿಜವಾದರೆ ಅದು ತಾನೇ ಕಾಣುತ್ತದೆ. ಕವಿ ತನ್ನ ವಸ್ತುವನ್ನು ಶಕ್ತಿಯುಕ್ತವಾಗಿ ಉತ್ತಮ ಕಲಾದೃಷ್ಟಿಯಿಂದ ಬೆಳೆಸುವುದನ್ನು ನೋಡಿಕೊಂಡರೆ ಸಾಕು. ಕವಿಯು ಸೋಫೊಕ್ಲೀಸನಂತೆ ದೊಡ್ಡ ಜೀವವುಳ್ಳವನಾದರೆ, ಅವನು ಏನೇ ಮಾಡಲಿ ಅವನ ಪ್ರಭಾವ ನೀತಿಗೆ ಅನುಸಾರವಾಗಿಯೇ ಇರುತ್ತದೆ."

ಇಂಥಾ ನಾಟಕವನ್ನು ವಿಮರ್ಶಿಸುವವನು ಭಾವದ ದೃಷ್ಟಿಯಿಂದ

ಅದನ್ನು ಪರೀಕ್ಷಿಸಿದರೆ ನಾಟಕದಲ್ಲಿ ದೋಷ ಕಾಣಬಹುದು. ಅದಕ್ಕೆ ಬರೆದವನು ಹೊಣೆಯಲ್ಲ, ವಿಮರ್ಶಿಸಿದವನು ಹೊಣೆ:

"ಹೆನ್ರಿಕ್ಸರು ಗ್ರೀಕರ ಈ ನಾಟಕಗಳನ್ನು ವಿಮರ್ಶಿಸುವುದರಲ್ಲಿ ಭಾವವನ್ನು ಮುಂದಿಟ್ಟುಕೊಂಡು ಹೊರಡುತ್ತಾರೆ; ಸೋಫೊಕ್ಲೀಸನು ತನ್ನ ನಾಟಕಗಳ ಕಥೆಯನ್ನು ಕಲ್ಪಿಸುವಲ್ಲಿಯೂ ಜೋಡಿಸುವಲ್ಲಿಯೂ ಭಾವದಿಂದ ಹೊರಟನೆಂಬಂತೆಯೂ ಪಾತ್ರಗಳ ಲಿಂಗವನ್ನೂ ಅಂತಸ್ತನ್ನೂ ಅವಕ್ಕಾಗಿ ಏರ್ಪಡಿಸಿದನೆಂಬಂತೆಯೂ ಚರ್ಚೆಯನ್ನು ನಡೆಸುತ್ತಾರೆ. ಆದರೆ ಸೋಫೊಕ್ಲೀಸನು ನಾಟಕವನ್ನು ಬರೆದಾಗ ಭಾವದಿಂದ ಹೊರಡಲಿಲ್ಲ. ಅವನು ಮಾಡಿದ್ದೇನು? ಪೂರ್ವದಿಂದ ಬಂದು ಸಿದ್ಧವಾಗಿದ್ದ ಜನಪ್ರಿಯವೂ ಮತ್ತು ದೊಡ್ಡ ಭಾವವನ್ನು ಒಳಗೊಂಡುದೂ ಆದ ಕಥೆಯೊಂದನ್ನು ಕೈಗೆ ತೆಗೆದುಕೊಂಡನು. ತೆಗೆದುಕೊಂಡಮೇಲೆ ಅದನ್ನು ರಂಗಕ್ಕೆ ಅನುಕೂಲವಾಗುವಂತೆ ಉತ್ತಮವೂ ಫಲಕಾರಿಯೂ ಆದ ರೀತಿಯಲ್ಲಿ ಒದಗಿಸಿಕೊಳ್ಳುವುದಕ್ಕೆ ಯತ್ನಿಸಿದನು."

ತಮ್ಮ ಫೌಸ್ಟ್ ನಾಟಕವನ್ನು ಕುರಿತು ಜನರು ಇಂಥ ಪ್ರಶ್ನೆ ಕೇಳುವ ವಿಷಯವಾಗಿ ಗಯಟೆ ಒಂದುಸಲ ಹೀಗೆಂದರು:

"ನಿಮ್ಮ ಫೌಸ್ಟ್ ನಾಟಕದಲ್ಲಿ ಯಾವ ಭಾವವನ್ನು ರೂಪುಗೊಳಿಸಬೇಕೆಂದು ನಿಮ್ಮ ಅಭಿಪ್ರಾಯ ಎಂದು ಕೇಳುತ್ತಾರೆ. ಅದು ನನಗೆ ತಿಳಿದಿದ್ದರಲ್ಲವೇ ನಾನು ಇವರಿಗೆ ಹೇಳುವುದು? .... ಒಟ್ಟು ನಾಟಕದ ಮೂಲದಲ್ಲಿ ಒಂದೊಂದು ದೃಶ್ಯದಲ್ಲಿ ಇರುವುದು ಒಂದು ಭಾವವಲ್ಲ... .. ಕೃತಿಯಲ್ಲಿ ಯಾವುದಾದರೊಂದು ಭಾವವನ್ನು ಪ್ರಕಟಿಸುವುದು ನನ್ನ ಕವಿತೆಯ ಮಾರ್ಗವೇ ಅಲ್ಲ."

೧೩

ಗ್ರೀಕರ ನಾಟಕಗಳಲ್ಲಿ ಏಕಖಂಡದ ನಿಯಮ ಎಂದು ಕರೆಯಬಹುದಾದ ಒಂದು ನಿಯಮವುಂಟು. ಇದರ ಪ್ರಕಾರವಾಗಿ, ದೃಶ್ಯದ ಸಂಗತಿ ಆರಂಭಿಸಿದುದು ಮೊದಲು ಕೊನೆಯವರೆಗೆ ಒಂದೇ ಸ್ಥಾನದಲ್ಲಿ ನಡೆಯಬೇಕು, ಒಂದು ದಿನದೊಳಗಾಗಿ ನಡೆದದ್ದಾಗಿರಬೇಕು, ಎಲ್ಲ ಸಂಗತಿಯೂ ಒಂದು ಮುಖ್ಯ ಕಥೆಯ ಅಂಗವಾಗಿರಬೇಕು. ದೃಶ್ಯ

ಚೆನ್ನಾಗಿರಬೇಕಾದರೆ ಈ ನಿಯಮ ಆವಶ್ಯಕವೇ ಇಲ್ಲವೇ ಎನ್ನುವುದು ಪಾಶ್ಚಾತ್ಯ ಸಾಹಿತ್ಯದಲ್ಲಿ ಬಹು ಚರ್ಚೆಯಾಗಿರುವ ವಿಷಯ. ಯಾವ ನಿಯಮಕ್ಕೂ ಒಳಗಾಗದ ಜೀವನವನ್ನು ನಡೆಯಿಸಿ ಬೈರನ್ ಕವಿ ನಾಟಕದಲ್ಲಿ ಈ ನಿಯಮವನ್ನು ಒಪ್ಪಿಕೊಂಡನು. ಈ ಮಾತನ್ನು ಕುರಿತು ಗಯಟೆ ಹೀಗೆಂದರು :

" ಆತನು ಈ ನಿಯಮದ ಉದ್ದೇಶವನ್ನು ಸಾಮಾನ್ಯರಿಗಿಂತ ಹೆಚ್ಚಾಗಿ ಗ್ರಹಿಸಲಿಲ್ಲ. ನಾಟಕದ ವಸ್ತು ವಿಶದವಾಗಿರಲಿ ಎನ್ನುವುದೇ ಈ ಉದ್ದೇಶ. ಈ ಉದ್ದೇಶವನ್ನು ಸಾಧಿಸುವುದಕ್ಕೆ ಅದು ನೆರವಾದಾಗ ಅದು ಒಳ್ಳೆಯ ನಿಯಮ. ಆದರೆ ನಿಯಮವನ್ನು ಅನುಸರಿಸುವುದರಿಂದ ವಸ್ತು ವಿಶದವಾಗದೆ ಕ್ಲಿಷ್ಟವಾದರೆ ನಿಯಮವನ್ನು ಒಂದು ನಿಯಮವೆನ್ನುವುದೂ ಅದನ್ನು ಅನುಸರಿಸುವುದೂ ಅವಿವೇಕ ವರ್ತನೆಯಾಗುತ್ತದೆ. ನಾವು ಈ ನಿಯಮವನ್ನು ಗ್ರೀಕರಿಂದಲ್ಲವೆ ತೆಗೆದುಕೊಂಡಿದೇವೆ. ಗ್ರೀಕರೇ ಇದನ್ನು ಎಲ್ಲಾ ಸಮಯದಲ್ಲಿಯೂ ಇಟ್ಟುಕೊಳ್ಳಲಿಲ್ಲ. ಯೂರಿಪಿಡೀಸನ ಫೀಟನ್ ಮತ್ತು ಇನ್ನು ಕೆಲವು ನಾಟಕಗಳಲ್ಲಿ ಸ್ಥಳ ಮಾರ್ಪಡುತ್ತದೆ. ಇದರಿಂದ ಅವರಿಗೆ ವಸ್ತು ವಿಶದವಾಗುವುದೇ ಮುಖ್ಯವಾಗಿತ್ತೆನ್ನುವುದೂ ನಿಯಮವನ್ನು ಅನುಸರಿಸುವುದು ಅದರಷ್ಟು ಮುಖ್ಯವಾಗಿರಲಿಲ್ಲವೆನ್ನುವುದೂ ಸ್ಪಷ್ಟವಾಗುತ್ತದೆ. ಕೇವಲ ಒಂದು ನಿಯಮವನ್ನನುಸರಿಸುವುದೆನ್ನುವುದು ದೊಡ್ಡ ವಿಷಯವಲ್ಲ.

" ಷೇಕ್ಸ್‌ಪಿಯರ್ ಕವಿಯ ನಾಟಕಗಳು ಈ ಏಕಖಂಡದ ನಿಯಮದಿಂದ ತಪ್ಪುವುದು ಎಷ್ಟು ಸಾಧ್ಯವೋ ಅಷ್ಟೂ ತಪ್ಪಿವೆ. ಆದರೆ ಅವುಗಳಲ್ಲಿ ವಸ್ತು ವಿಶದವಾಗಿದೆ. ಎಲ್ಲಿಯೂ ಕಥಾವಸ್ತು ಅಲ್ಲಿಗಿಂತ ವಿಶದವಾಗಿರಲಾರದು. ಈ ಕಾರಣದಿಂದ ಗ್ರೀಕರು ಈ ನಾಟಕಗಳನ್ನು ನೋಡಿದ್ದರೆ ಇವುಗಳಲ್ಲಿ ತಪ್ಪು ಹುಡುಕದೆ ಒಪ್ಪಿಕೊಳ್ಳುತ್ತಿದ್ದರು. ಫ್ರೆಂಚ್ ನಾಟಕಕಾರರು ಸ್ಥಾನ ಕಾಲಗಳ ಏಕತೆಯ ನಿಯಮವನ್ನು ಚಾಚೂ ತಪ್ಪದೆ ಅನುಸರಿಸಿದಾರೆ. ಆದರೆ ಇವರ ಕಥೆಯ ವಸ್ತು ಕೆಲವುವೇಳೆ ವಿಶದವಾಗಿರುವುದಿಲ್ಲ. ಇದಕ್ಕೆ ನಿದರ್ಶನವೇನೆಂದರೆ ಇವರು ನಾಟಕದ ತೊಡಕನ್ನು ನಾಟಕದ ರೂಪದಲ್ಲಿ ಬಿಡಿಸುವುದಿಲ್ಲ, ಕಥೆ ಹೇಳುವ ರೀತಿಯಲ್ಲಿ ಬಿಡಿಸುತ್ತಾರೆ.

"ಸ್ಥಳ ಕಾಲಗಳ ಏಕತೆಯೆನ್ನುವುದು ಗ್ರೀಕರ ಅಭಿಪ್ರಾಯಕ್ಕೆ ಅನುಗುಣವಾಗಿ ಸಹಜವಾಗಿರುವುದು ಯಾವಾಗ ಎಂದರೆ, ಕಥಾವಸ್ತು ಅಡಕವಾಗಿರಬೇಕು, ಏಕಕಾಲ ಪ್ರಮಾಣದಲ್ಲಿ ನಮ್ಮ ಕಣ್ಣೆದುರಿಗೆ ವಿವರವಾಗಿ ಪ್ರಕಾಶವಾಗುವಂತಿರಬೇಕು, ಆಗ. ಕಥಾವಸ್ತು ವಿಸ್ತಾರವಾಗಿದ್ದು ಹಲವು ಸ್ಥಳಗಳಲ್ಲಿ ನಡೆಯತಕ್ಕದ್ದಾಗಿದ್ದರೆ ಅದನ್ನು ಒಂದೇ ಸ್ಥಾನದಲ್ಲಿ ಮುಗಿಸಬೇಕಾದ ಕಾರಣವಿಲ್ಲ. ಅದರಲ್ಲಿಯೂ ಈಗ ನಮ್ಮ ರಂಗಸ್ಥಳದ ಸೌಕರ್ಯಗಳಲ್ಲಿ ಸ್ಥಳವನ್ನು ಮಾರ್ಪಡಿಸುವುದಕ್ಕೆ ಆಗಣ ಕಾಲದಲ್ಲಿದ್ದ ಅಡ್ಡಿಯಿಲ್ಲವಾದದ್ದರಿಂದ ಒಂದೇ ಸ್ಥಳ ಅಥವಾ ಕಾಲದಲ್ಲಿ ಕಥೆ ಕಾಣಬೇಕೆನ್ನುವ ಆವಶ್ಯಕತೆಯಿಲ್ಲ."

೧೪

ರಾಜನ ಮಂತ್ರಿಯಾಗಿ ಸುಖದಲ್ಲಿದಾರೆ, ಇವರು ಸಾಮಾನ್ಯ ಲೇಖಕರಂತೆ ಜನತಾವತ್ಸಲರಾಗಿರಲಾರರು, ಎಂದು ಗಯಟೆಯುವರ ವಿಷಯದಲ್ಲಿ ಅಸೂಯೆಯ ಮಾತು ಆಗಾಗ ಬರುತ್ತಿತ್ತು. ವೇಮರ್ ನಗರದ ಜನತೆಗಾಗಿ ನಾಟಕರಂಗವನ್ನು ಸ್ಥಾಪಿಸುವುದು ನಿಮ್ಮಿಂದಾಗದು ಎಂದು ಜೆಲ್ಟರ್ ಎಂಬ ಮಿತ್ರನು ಗಯಟೆಯುವರಿಗೆ ಬರೆದನು. ಅವರು ಅದಕ್ಕೆ ನಕ್ಕು ಹೀಗೆಂದರು: "ನಾನು ನನ್ನ ಜೀವಮಾನವನ್ನೆಲ್ಲ ಜನರಿಗಾಗಿ ಮತ್ತು ಅವರ ಅಭಿವೃದ್ಧಿಗಾಗಿ ಉಪಯೋಗಿಸಿದ್ದೇನೆ. ಇಂಥವನು ಅವರಿಗಾಗಿ ನಾಟಕರಂಗವನ್ನೇಕೆ ಸ್ಥಾಪಿಸಲಾಗದು? ಆದರೆ ಈ ನಮ್ಮ ವೇಮರ್ ನಗರದಲ್ಲಿ, ಜನರು ಪರಿಹಾಸ್ಯಕ್ಕೆ ಹೇಳುತ್ತಾರಲ್ಲಾ ಹಾಗೆ, ಹತ್ತುಸಾವಿರ ಕವಿಗಳೂ ಇನ್ನು ಕೆಲವರು ಪ್ರಜೆಗಳೂ ಇದಾರೆ. ಇಂಥ ಊರಿನಲ್ಲಿ ಪ್ರಜೆಯೆನ್ನುವುದೆಲ್ಲಿ? ಅದಕ್ಕೆ ನಾಟಕರಂಗವನ್ನು ಸ್ಥಾಪಿಸುವುದೆನ್ನುವುದು ಹೇಗೆ? ಮುಂದಕ್ಕೆ ವೇಮರ್ ನಗರವು ದೊಡ್ಡ ನಗರವಾಗುವುದು ನಿಜ. ಆದರೆ ಅದರ ಪ್ರಜೆಗಳು ದೊಡ್ಡದೊಂದು ರಂಗಸ್ಥಲವನ್ನು ಸ್ಥಾಪಿಸಿ ಅದನ್ನು ನಡೆಸುವುದಕ್ಕೆ ಸಾಕಾದಷ್ಟು ಬೆಳೆಯಬೇಕಾದರೆ ಹಲವು ಶತಮಾನ ಬೇಕು."

ಜೆಲ್ಟರರ ಮಾತು ಗಯಟೆ ಜನರಿಗೆ ಬೇಕಾದದ್ದನ್ನು ಹೇಳುವವರಲ್ಲ, ಸಾಮಾನ್ಯ ಜನವನ್ನು ಪ್ರೀತಿಸುವವರಲ್ಲ, ಎಂಬ ಒಂದು ಅಭಿಪ್ರಾಯವನ್ನು

ಕುರಿತದ್ದು. ಇದನ್ನು ಅವರಿಗೆ ವಿವರಿಸಿದಾಗ, ಗಯಟೆ ಹೀಗೆ ಉತ್ತರ ಹೇಳಿದರು:

"ಜನದ ಅಭಿಪ್ರಾಯದಲ್ಲಿ ತಪ್ಪಾದ ಒಂದು ಸ್ಥಾನಕ್ಕೆ ಬರುವುದು ಎಷ್ಟು ಸುಲಭವೆಂದು ನೋಡಿದರೆ ಆಶ್ಚರ್ಯವಾಗುತ್ತದೆ. ನನಗೆ ತಿಳಿದ ಮಟ್ಟಿಗೆ ನಾನು ಎಂದೇ ಆಗಲಿ ಜನರಿಗೆ ವಿರೋಧವನ್ನು ಬಯಸುವವರ ಜೊತೆಗೆ ಸೇರಲಿಲ್ಲ. ಆದರೆ ಈಗ ನಾನು ಜನಕ್ಕೆ ಮಿತ್ರನಲ್ಲವೆಂದು ಸಿದ್ಧಾಂತವಾಗಿಹೋಗಿದೆ. ನಾನು ಕ್ರಾಂತಿಕಾರರ ದೊಂಬಿಗಳಿಗೆ ಮಿತ್ರನಲ್ಲ. ಅವುಗಳ ಉದ್ದೇಶ ದರೋಡೆ, ಕೊಲೆ, ದಾಳಿ. ಜನಕ್ಕೆ ಒಳ್ಳೆಯದು ಎಂಬ ಮೊಗವಾಡದ ಹಿಂದೆ ಇರುತ್ತ ಇಂಥ ಜನರ ಕಣ್ಣು ಅಲ್ಪ ರೀತಿಯ ಸ್ವಾರ್ಥದಲ್ಲಿ ದೃಷ್ಟಿ ಇಟ್ಟಿರುತ್ತದೆ. ಇವರಿಗೆ ನಾನು ಮಿತ್ರನಲ್ಲವೇ ಅಲ್ಲ. ನಾನು ಇವರ ಮಿತ್ರನಾಗುವುದೂ ಇಲ್ಲ. ಒರಟಾಟದಿಂದ ಉರುಳಿಸುವುದೆನ್ನುವುದು ನನಗೆ ಒಪ್ಪುವುದಿಲ್ಲ. ಅದರಿಂದ ಬರುವಷ್ಟು ಒಳ್ಳೆಯದು ಅದರಿಂದ ಅಳಿಯುತ್ತದೆ. ಇಂಥ ಸಂದರ್ಭಕ್ಕೆ ಕಾರಣವಾಗುವ ಧನಿಕರನ್ನು ಕಂಡರೆ ನನಗೆ ಆಗುವುದಿಲ್ಲ. ಅದರಂತೆಯೇ ಅಂಥ ಸಂದರ್ಭದಲ್ಲಿ ಒರಟಾಟಮಾಡುವ ಕ್ರಾಂತಿಕಾರರನ್ನೂ ನಾನು ಒಪ್ಪುವುದಿಲ್ಲ. ಇಷ್ಟುಮಾತ್ರದಿಂದ ನಾನು ಜನರ ಹಗೆಯಾದೆನೆ? ಹೀಗೆ ಹೇಳುವುದು ನಾನೊಬ್ಬನೆ? ವಿವೇಕಿಯಾದ ಯಾವ ಮನುಷ್ಯನೇ ಆಗಲಿ ನನ್ನಂತೆ ಭಾವಿಸುವುದಿಲ್ಲವೆ?

"ಇದಲ್ಲದೆ ನಾನು ರಾಜಸೇವಕನು, ಶ್ರೀಮಂತರ ದಾಸನು ಎಂದು ಹೇಳುತ್ತಾರೆ. ಇದರಿಂದ ಏನಾಯಿತು? ಹಾಗಾದರೆ, ನಾನು ಸೇವಿಸುತ್ತಿರುವ ರಾಜನೇನು ಕ್ರೂರಿಯೇ, ದುಷ್ಟನೇ? ಜನರಿಂದ ಸುಲಿಗೆಮಾಡಿ ತನ್ನ ಸುಖವನ್ನೇ ನೋಡಿಕೊಳ್ಳುವ ಅರಸನಿಗೆ ನಾನು ಸೇವೆಮಾಡುತ್ತೇನೆಯೇ? ಅಂಥ ರಾಜರೂ ಅವರು ಇರಬಹುದಾದ ಕಾಲವೂ ಹಿಂದೆ ಹೋದುವು. ನಾನು ಐವತ್ತು ವರ್ಷ ನಮ್ಮ ಅರಸರೊಂದಿಗೆ ಬಹು ಹತ್ತಿರದ ಸೇವೆಯಲ್ಲಿ ಇದ್ದಿದೇನೆ. ಐವತ್ತು ವರ್ಷ ಅವರೊಂದಿಗೆ ದುಡಿದಿದೇನೆ, ಕೆಲಸಮಾಡಿದೇನೆ. ಅವರು ರಾಷ್ಟ್ರದ ಶುಭಸಾಧಕವಾದ ಮತ್ತು ಪ್ರಜೆಗಳ ಸ್ಥಿತಿಯನ್ನು ಚೆನ್ನಮಾಡುವ ವಿಷಯಗಳನ್ನು ಕುರಿತು ಯೋಚನೆಮಾಡದ

ದಿನ ಈ ಐವತ್ತು ವರ್ಷದಲ್ಲಿ ಒಂದು ದಿನ ಇಲ್ಲ. ನಾನು ಇದನ್ನು ಬಿಟ್ಟು ಏನು ಹೇಳಿದರೂ ಅದು ಸತ್ಯಕ್ಕೆ ವಿರೋಧ. ಅವರ ಬದುಕೋ? ರಾಜ ಪದವಿಯಿಂದ ಆತನಿಗೆ ದುಡಿತ ದುಗುಡ ಹೊರತು ಬೇರೆ ಬಂದ ಫಲವೇನು? ಆತನ ಗೃಹವಾಗಲಿ ವಸ್ತ್ರವಾಗಲಿ ಭೋಜನವಾಗಲಿ ಹಣವಂತನಾದ ಆತನ ಒಬ್ಬ ಪ್ರಜೆಯ ಗೃಹವಸ್ತ್ರ ಭೋಜನಗಳಿಗಿಂತ ಹೆಚ್ಚಿನದಾಗಿಲ್ಲ. ನಮ್ಮ ನಾಡಿನ ರೇವಿನ ಪಟ್ಟಣಕ್ಕೆ ಹೋಗಿ ನೋಡಿ. ಧನಿಕನಾದ ಒಬ್ಬ ವರ್ತಕನ ಮನೆಯಲ್ಲಿ ಊಟ ಉಪಚಾರ ನಮ್ಮ ಅರಸರ ಊಟ ಉಪಚಾರಕ್ಕೆ ಮಿಗಿಲಾಗಿರುತ್ತದೆ. ಈ ವರ್ಷ ನಾವು ನಮ್ಮ ಮಂಡಲೇಶ್ವರರ ಆಳ್ವಿಕೆಯ ಐವತ್ತು ವರ್ಷದ ಉತ್ಸವವನ್ನು ನಡೆಯಿಸುತ್ತೇವೆ. ಆದರೆ ನ್ಯಾಯವಾಗಿ ನೋಡಿದರೆ ಈ ಆಳ್ವಿಕೆಯೆನ್ನು ವುದೆಲ್ಲ ಸಂತತವಾದ ಒಂದು ದಾಸ್ಯವೆನ್ನಬೇಕಲ್ಲದೆ ಮತ್ತೇನು? ದೊಡ್ಡ ಉದ್ದೇಶಗಳ ಸಾಧನೆಗೆ ದಾಸ್ಯ, ತನ್ನ ಪ್ರಜೆಯ ಸೌಖ್ಯಕ್ಕೆ ದಾಸ್ಯ. ನಾನು ರಾಜನ ದಾಸನಾಗಿರುವುದೇ ನನಗೆ ಒಂದು ಸಂತೋಷ; ನಾನು ದಾಸ ನಾಗಿರುವುದು ಜನದ ಸೌಖ್ಯಕ್ಕೆ ತಾನೇ ದಾಸನಾದ ರಾಜನಿಗೆ.''

೧೫

ತಮ್ಮ ಮಿತ್ರ ಸ್ಕಿಲ್ಲರ್ ಕವಿಯ ನಾಟಕಗಳ ವಿಷಯ ಇವರ ಮಾತಿನಲ್ಲಿ ಆಗಾಗ ಬರುತ್ತದೆ ಎನ್ನುವುದು ಈ ಮೊದಲೇ ಕಂಡಿರಬೇಕು. ಅವರಿಗೆ ಅವನ ವಿಷಯದಲ್ಲಿ ಬಹಳ ಮೆಚ್ಚಿಗೆ. ಆದರೂ ತಪ್ಪು ಕಾಣದೆ ಇರುತ್ತಿರಲಿಲ್ಲ. ಅವನ ಕೆಲಸದ ವಿಷಯದಲ್ಲಿ ಇವರು ಒಂದು ಸಲ ಹೀಗೆಂದರು:

''ಕಾಲ್ಡರಾನನು ಸ್ಕಿಲ್ಲರ್ ಕವಿಗೆ ಅಪಾಯವನ್ನು ತರುತ್ತಿದ್ದನು; ಅವನನ್ನು ತಪ್ಪುದಾರಿಗೆ ಎಳೆಯುತ್ತಿದ್ದನು. ಸ್ಕಿಲ್ಲರ್ ತೀರಿಹೋದ ಅನಂತರದವರೆಗೆ ಕಾಲ್ಡರಾನನ ಕೃತಿಗಳು ನಮ್ಮಲ್ಲಿ ಪ್ರಚುರವಾಗದೆ ಇದ್ದದ್ದು ಒಳ್ಳೆಯದಾಯಿತು. ಲಕ್ಷಣದಲ್ಲಿ ರಂಗವಿಧಾನದಲ್ಲಿ ಅವನು ಅತ್ಯಂತ ಶಕ್ತನು. ಸ್ಕಿಲ್ಲರಿನ ವಿಶೇಷ ಅದಲ್ಲ. ಇವನು ವಿಷಯದಲ್ಲಿ ಶುದ್ಧ, ಶ್ರದ್ಧಾಳು, ಹಿರಿಯ ಉದ್ದೇಶವುಳ್ಳವನು. ಕಾಲ್ಡರಾನನ ಸಂಪರ್ಕ ದಿಂದ ಇವನು ಈ ಗುಣಗಳಲ್ಲಿ ಯಾವುದನ್ನು ಕಳೆದುಕೊಂಡಿದ್ದರೂ

ಅನ್ಯಾಯವಾಗುತ್ತಿತ್ತು. ಸಾಲದ್ದಕ್ಕೆ ಇವು ಹೋಗುವುದು ಹೊರತಾಗಿ ಕಾಲ್ಡರಾನನ ಇತರ ರೀತಿಯ ಮಹಿಮೆ ಇವನಿಗೆ ಬರುತ್ತಿತ್ತೆನ್ನುವುದು ನಿಶ್ಚಯವಲ್ಲ."

ಇನ್ನೊಂದು ಸಲ: "ಸ್ಕಿಲ್ಲರ್ ಹೇಗೆ ಬರೆದರೂ ಈಚಿನ ನಮ್ಮ ಲೇಖಕರ ಕೃತಿಗಿಂತ ಚೆನ್ನವಲ್ಲದ ಕೃತಿಯನ್ನು ಬರೆಯುವುದಕ್ಕೆ ಅವನಿಗೆ ಸಾಧ್ಯವಿರಲಿಲ್ಲ. ಅವನು ತನ್ನ ಉಗುರು ತೆಗೆಯಬೇಕಾದರೂ ಈ ಮಹನೀಯರಿಗಿಂತ ಮೇಲೆಂಬುದನ್ನು ತೋರಿಸಿದನು."

ಸ್ವಾತಂತ್ರ್ಯದ ಭಾವನೆಗಾಗಿ ಸ್ಕಿಲ್ಲರ್ ಪಟ್ಟ ಕಷ್ಟವನ್ನು ಕುರಿತು ಇವರು ಒಂದುಸಲ ಹೀಗೆ ಹೇಳಿದರು:

"ಸ್ಕಿಲ್ಲರನ ಕೃತಿಗಳಲ್ಲೆಲ್ಲ ಸ್ವಾತಂತ್ರ್ಯದ ಭಾವನೆ ಹೊಕ್ಕಿದೆ. ಆದರೆ ಅವನ ತಿಳಿವಳಿಕೆ ಬೆಳೆದು ಅವನು ಬೇರೆ ಮನುಷ್ಯನಂತೆ ಆದ ಹಾಗೆಲ್ಲಾ ಈ ಭಾವನೆಯ ಸ್ವರೂಪವೂ ಮಾರ್ಪಟ್ಟಿತು. ಯೌವನದಲ್ಲಿ ಅವನ ಮನಸ್ಸನ್ನು ತುಡುಕಿ ಅವನ ಕವಿತೆಗಳಿಗೆಲ್ಲಾ ಬಣ್ಣ ಕೊಟ್ಟದ್ದು ಶಾರೀರಕ ಸ್ವಾತಂತ್ರ್ಯ. ವಯಸ್ಸಾದ ಮೇಲೆ ಇದನ್ನು ಮಾಡಿದ್ದು ತಾತ್ತ್ವಿಕ ಸ್ವಾತಂತ್ರ್ಯ. ಸ್ವಾತಂತ್ರ್ಯವೆನ್ನುವುದು ವಿಚಿತ್ರ ವಸ್ತು. ಇದು ಒಬ್ಬೊಬ್ಬನಿಗೂ ಎಷ್ಟು ಬೇಕೋ ಅಷ್ಟು ಇದೆ. ಅವನು ಅದನ್ನು ಉಪಯೋಗಿಸುವುದಿಲ್ಲ ಅಷ್ಟೆ. ಉಪಯೋಗಿಸುವುದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯ ಇದ್ದು ಪ್ರಯೋಜನವೇನು?.... ಯಾವನಿಗಾಗಲಿ ಆರೋಗ್ಯವುಳ್ಳ ಜೀವನವನ್ನು ನಡೆಸುತ್ತ ತನ್ನ ಪಾಲಿಗೆ ಬಂದಿರುವ ಕೆಲಸವನ್ನು ಮಾಡಿಕೊಂಡು ಇರುವುದಕ್ಕೆ ತಕ್ಕ ಸ್ವಾತಂತ್ರ್ಯವಿದ್ದರೆ ಅದು ಸಾಕಾದಷ್ಟು ಸ್ವಾತಂತ್ರ್ಯವೆನ್ನಬೇಕು. ಇಷ್ಟನ್ನು ಎಲ್ಲರೂ ಸಂಪಾದಿಸಬಹುದು. ಅಲ್ಲದೆ ನಾವು ಯಾರೇ ಆಗಲಿ ಬಾಳು ನಿಯಮಿಸುವ ಕಾಯಿದೆಗಳಿಗೆ ತಗ್ಗಿ ನಡೆವರೆ ಮಾತ್ರ ಸ್ವತಂತ್ರರಾಗಬಹುದು. ನಮಗಿಂತ ದೊಡ್ಡದಿದೆಯೆಂದು ಒಪ್ಪದೆ ಇರುವುದು ಅಲ್ಲ ಸ್ವಾತಂತ್ರ್ಯ; ನಮಗೆ ದೊಡ್ಡದಾದದ್ದನ್ನು ಗೌರವಿಸುವುದು ಸ್ವಾತಂತ್ರ್ಯ. ತಾತ್ತ್ವಿಕ ಸ್ವಾತಂತ್ರ್ಯದ ಭಾವನೆ ಸ್ಕಿಲ್ಲರ್ ಕವಿಯನ್ನು ಕೊಂದಿತೆಂದೇ ಹೇಳಬಹುದು. ಅದರ ಕಾರಣದಿಂದ ಅವನು ತನ್ನ ಶಕ್ತಿಗೆ ಮೀರಿದ ಕೆಲಸಕ್ಕೆ ಕೈಹಚ್ಚಿದನು. ಸ್ಕಿಲ್ಲರ್ ಇಲ್ಲಿ ನಿಂತಾಗ ನಮ್ಮ

ಮಂಡಲೇಶ್ವರರು ವರ್ಷಕ್ಕೆ ೧,೦೦೦ ಹೊನ್ನಿನ ಸಂಬಳವನ್ನು ಕೊಟ್ಟರು. ಅನಾರೋಗ್ಯದ ದೆಸೆಯಿಂದ ಅವನು ಕೆಲಸಮಾಡಿ ಸಂಪಾದಿಸಲಾಗದೆ ಹೋದಾಗ ಇನ್ನಷ್ಟನ್ನು ಕೊಡುತ್ತೇನೆಂದರು. ಸ್ಕಿಲ್ಲರ್ ಆ ಇನ್ನಷ್ಟನ್ನು ತೆಗೆದುಕೊಳ್ಳಲಿಲ್ಲ. ಅದು ನನಗೆ ಬೇಡ ಎಂದನು. ನನಗೆ ಶಕ್ತಿಯಿದೆ, ನಾನು ಅದನ್ನು ಉಪಯೋಗಿಸಿ ನನಗೆ ಬೇಕಾದದ್ದನ್ನು ಸಂಪಾದಿಸಬೇಕು ಎಂದನು. ಬರಬರುತ್ತ ಸಂಸಾರ ಬೆಳೆದಾಗ ಅವನು ಜೀವನಕ್ಕಾಗಿ ವರ್ಷಕ್ಕೆ ಎರಡು ನಾಟಕಗಳನ್ನು ಬರೆಯಬೇಕಾಯಿತು. ಇದಕ್ಕಾಗಿ ಅವನು ಆರೋಗ್ಯವಿಲ್ಲದ ಎಷ್ಟೋ ದಿನ ಎಷ್ಟೋ ವಾರ ಬಲವಂತದಿಂದ ಬರವಣಿಗೆಯ ಕೆಲಸವನ್ನು ಮಾಡಿದನು....ನಮ್ಮ ಪ್ರಾಜ್ಞರು ಹಲವರು ಅವನ ಕೃತಿಗಳಲ್ಲಿ ಕಂಡುಹಿಡಿಯುವ ತಪ್ಪುಗಳು ಈ ಕಾರಣದಿಂದ ಉಂಟಾದುವೆಂದು ನನ್ನ ಎಣಿಕೆ. ಕರ್ತವ್ಯನಿಷ್ಠೆಯನ್ನು ನಾನೂ ಒಪ್ಪುತ್ತೇನೆ. ಅದರಿಂದ ಎಷ್ಟು ಒಳ್ಳೆಯದು ಬರುತ್ತದೆಂದು ನಾನು ಬಲ್ಲೆ. ಆದರೆ ಇದು ಅತಿಯಾಗಬಾರದು. ಆಗ್ಗೆ ಈ ತಾತ್ತ್ವಿಕ ಸ್ವಾತಂತ್ರ್ಯದ ಭಾವನೆಯಿಂದ ಕೆಟ್ಟುದಾಗುತ್ತದೆ.''

ಆದರೆ ಯಾವಾಗಲೋ ಸ್ಕಿಲ್ಲರ್ ಆಡಿದ ಮಾತುಗಳ ವಿವರಣೆಯನ್ನು ಓದಿದಾಗ ಇವರು ಹೀಗೆಂದರು: ''ಅವನ ಮಾರ್ಗ ಋಜುವಾದದ್ದು. ಅದೇ ಮಾನವನಿಗೆ ತಕ್ಕದ್ದು. ನಮ್ಮನ್ನಾದರೋ ಅವಸ್ಥೆ ಬಗ್ಗಿಸುತ್ತದೆ. ಅದು ಬಗ್ಗಿಸುತ್ತಿರುವುದು ನಮಗೇ ತಿಳಿಯುತ್ತದೆ.''

೧೬

ಸಾಹಿತ್ಯದಲ್ಲಿ ಬರುವ ಪ್ರಶ್ನೆಗಳು ಜೀವನದಲ್ಲಿ ಬರುವ ಪ್ರಶ್ನೆಗಳಂತೆ ಯಾವ ಕಾಲ ದೇಶದಲ್ಲಿಯೂ ಪ್ರಾಯಶಃ ಒಂದೇ ಅರ್ಥದವು. ಅವುಗಳ ಮುಖ ಸ್ವಲ್ಪ ಬೇರೆಯಾದಂತೆ ಕಾಣಬಹುದು; ನಿಜವಾದ ವ್ಯತ್ಯಾಸ ಬಹಳವಿರುವುದಿಲ್ಲ. ಅವುಗಳಿಗೆ ಉತ್ತರವೂ ಅಷ್ಟೆ. ಈಗ ನಮ್ಮ ಸೀಮೆಯ ನಾಟಕದ ಸ್ಥಿತಿಯನ್ನು ನೋಡಿದರೆ ಗಯಟೆಯವರ ಮಾತಿನ ಬಹುಭಾಗ ನಮಗೆ ಉಪಯೋಗಕ್ಕೆ ಬರುವಂತಿದೆ.

ನಮ್ಮ ನಾಟಕಕಾರರು ನಾಟಕವನ್ನು ಜನರ ಏಳ್ಗೆಯ ಸಾಧನವಾಗಿ ಮಾಡಬೇಕಾಗಿದೆ. ಅದಕ್ಕಾಗಿ ಅವರು ದೊಡ್ಡ ಧ್ಯೇಯಗಳನ್ನಿಟ್ಟುಕೊಂಡು

ನಾಟಕಗಳನ್ನು ಬರೆಯಬೇಕು. ಒಳ್ಳೆಯ ಕಾವ್ಯಗಳಾಗುವಂತೆ ಹಾಗೆಯೇ ರಂಗಕ್ಕೆ ಹೊಂದುವಂತೆ ಬರೆಯಬೇಕು. ನಾಟಕ ಸಂಘಗಳು ದೊಡ್ಡ ಉದ್ದೇಶದಿಂದ ಇಂಥ ನಾಟಕಗಳನ್ನು ರಂಗದಲ್ಲಿ ತರಬೇಕು. ನಟರು ತಮ್ಮ ಕೆಲಸ ಶ್ರೇಷ್ಠವಾದದ್ದೆಂದು ತಿಳಿದು ಅದರಲ್ಲಿ ಶಕ್ತರಾಗಲು ಯತ್ನಮಾಡಬೇಕು. ಅವರು ಆಟಗಾರರು, ಕಡಮೆಯ ರೀತಿಯ ಜನರು, ಎಂದೆಣಿಸದೆ ಸಭ್ಯರಾದ ಜನರು ಅವರನ್ನು ಗೌರವದಿಂದ ಕಂಡು ನಾಟಕ ವೃತ್ತಿಯ ಅಂತಸ್ತನ್ನು ಹೆಚ್ಚಿಸಬೇಕು. ನಾಟಕದ ಸೊಗಸು ಪರದೆ ಪೋಷಾಕಿಗಿಂತ ಕೃತಿಯಲ್ಲಿಯೂ ಅದಕ್ಕಿಂತ ಹೆಚ್ಚಾಗಿ ನಟಿಸುವುದರಲ್ಲಿಯೂ ಇದೆ ಎಂದು ಸಂಘಗಳೂ ತಿಳಿಯಬೇಕು, ಜನರೂ ತಿಳಿಯಬೇಕು. ವಿಮರ್ಶಕರು ಸಹಾಯಮಾಡುವಂತಹ ವಿಮರ್ಶೆಯನ್ನು ಮಾಡಬೇಕು. ಬರೆಯುವವರೂ ದೋಷೋದ್ಘಾಟನವೇ ದೊಡ್ಡದೆಂಬಂತೆ ಬರೆಯದೆ ಜನವೂ ಸಮಾಜವೂ ನಡೆಯಬೇಕಾದ ದಾರಿ ಯಾವುದೆಂದು ತೋರಿಸುವಂತೆ ಬರೆಯಬೇಕು. ಈ ಎಲ್ಲ ದೃಷ್ಟಿಯಿಂದಲೂ ಗಯಟಿಯವರ ಮಾತಿನಲ್ಲಿ ನಮಗೆ ಸೂಚನೆಯಿದೆ, ಸಲಹೆಯಿದೆ.

ತಮಿಳ ವೈಷ್ಣವ ಪ್ರಬಂಧಗಳು

೧

ಕರ್ಣಾಟಕದ ವೈಷ್ಣವದಾಸರ ಕೀರ್ತನಗಳನ್ನು ಕುರಿತು ಕೆಲವು ವರ್ಷಗಳ ಹಿಂದೆ ಬರೆದ ಒಂದು ಲೇಖನದಲ್ಲಿ ನಾನು ಆ ಕೀರ್ತನೆಗಳು ತಮಿಳಿನ ಆಳ್ವಾರುಗಳ ಪ್ರಬಂಧಗಳ ಯೆಹೂದ್ಯರ ಸಾಂ ಎಂಬ ಭಕ್ತಿ ಗೀತಗಳ ರೀತಿಯ ಕೃತಿಗಳು ಎಂದು ಹೇಳಿದೆನು. ಈಚೆಗೆ ಡೇವಿಡ್ ಮಹಾರಾಜನನ್ನು ಕುರಿತ ಒಂದು ಲೇಖನದಲ್ಲಿ ಯೆಹೂದ್ಯರ ಭಕ್ತಿ ಗೀತಗಳ ಪರಿಚಯವನ್ನು ನಮ್ಮ ಜನರಿಗೆ ಸ್ವಲ್ಪಮಟ್ಟಿಗೆ ಮಾಡಿಕೊಟ್ಟ ದ್ದಾಯಿತು. ಯೆಹೂದ್ಯರು ನಮಗೆ ದೂರದ ಜನ; ಅವರ ಭಾಷೆ ಯಾದರೂ ನಮ್ಮ ಭಾಷೆಗೆ ಸಂಬಂಧಪಟ್ಟ ಭಾಷೆಯಲ್ಲ. ನಮ್ಮ ಜನರಿಗೆ ಆ ಜನ ಆ ಭಾಷೆಯ ಭಕ್ತಿ ಗೀತಗಳು ಪರಿಚಯವಿಲ್ಲದಿರುವುದು ಆಶ್ಚರ್ಯಕ್ಕೆ ಕಾರಣವಲ್ಲ. ತಮಿಳಾದರೋ ಕನ್ನಡಕ್ಕೆ ಸಂಬಂಧಪಟ್ಟ ಭಾಷೆ; ತಮಿಳು ಜನ ಕನ್ನಡಿಗರಿಗೆ ನೆರೆಯ ಜನ. ವೈಷ್ಣವ ಧರ್ಮದ ಪ್ರತಿಷ್ಠಾಪಕರಾದ ರಾಮಾನುಜಾಚಾರ್ಯರು ಕನ್ನಡನಾಡಿನಲ್ಲಿ ಬಹು ಕಾಲ ಕೆಲಸಮಾಡಿದರು. ಅವರ ಮತವನ್ನು ಅವಲಂಬಿಸಿದ ಜನ ಕರ್ಣಾಟಕದಲ್ಲಿ ತಕ್ಕಷ್ಟು ಸಂಖ್ಯೆ ಇದೆ. ಆದರೂ ರಾಮಾನುಜಾಚಾರ್ಯ ರಿಗೆ ಹಿಂದೆ ಈ ಮತವನ್ನು ನಡೆಯಿಸಿಕೊಂಡು ಬಂದಿದ್ದ ತಮಿಳುನಾಡಿನ ಭಕ್ತರಾದ ಈ ಆಳ್ವಾರುಗಳ ಪ್ರಬಂಧಗಳು ಕನ್ನಡಿಗರಿಗೆ ಇನ್ನೂ ಪರಿಚಿತ ವಾಗಿಲ್ಲವೆಂದು ಹೇಳಬಹುದು. ಇದು ಸ್ವಲ್ಪಮಟ್ಟಿಗೆ ಆಶ್ಚರ್ಯವನ್ನುಂಟು ಮಾಡತಕ್ಕ ವಿಷಯವಾಗಿದೆ. ಇದಕ್ಕೆ ಮುಖ್ಯಕಾರಣ ಈ ಪ್ರಬಂಧಗಳನ್ನು ಒಂದು ಮತದ ಗ್ರಂಥಗಳೆಂದು ಜನರು ಭಾವಿಸಿರುವುದು. ಯಾವ ಕೃತಿ ಯಾಗಲಿ ಯಾವಾಗ ಒಂದು ಮತದ ಗ್ರಂಥವಾಯಿತೋ ಆಗ ಆ ಮತ ದವರಲ್ಲದವರು ತನ್ನನ್ನು ನೋಡಬೇಕಾದದ್ದಿಲ್ಲವೆಂದು ಹೇಳುತ್ತದೆ ಎನ್ನ ಬಹುದು. ಕನ್ನಡನಾಡಿನ ರಾಮಾನುಜ ಮತೀಯರು ಪ್ರಬಂಧಗಳನ್ನು

ನೋಡಬೇಕೆಂಬ ಇಚ್ಛೆ ಉಂಟಾದಾಗ ಅವನ್ನು ತಮಿಳಿನಲ್ಲೇ ನೋಡಿ ತಮಗೆ ಬೇಕಾದಷ್ಟನ್ನು ತಿಳಿದುಕೊಳ್ಳುತ್ತಾರೆ. ಅವರಲ್ಲಿ ಉಳಿದ ಮಂದಿ ಈ ಗ್ರಂಥಗಳನ್ನು ನೋಡುವುದೇ ಇಲ್ಲ. ಇತರ ಮತದವರಿಗೆ ಹೇಗೋ ಹಾಗೆ ಇವರ ಪಾಲಿಗೂ ಈ ಪ್ರಬಂಧಗಳು ಇಲ್ಲದಂತೆಯೇ ಗಣನೆ. ಕನ್ನಡಿಗರಿಗೆ ಈ ಪ್ರಬಂಧಗಳ ಪರಿಚಯ ಆಗುವುದು ಅವಶ್ಯಕ ವೆಂದು ಅಥವಾ ಕನ್ನಡನಾಡಿನ ವೈಷ್ಣವರಿಗೆ ಅವರ ಮತಗ್ರಂಥವನ್ನು ಕನ್ನಡದ ಅರ್ಥದೊಡನೆ ದೊರಕಿಸಿಕೊಡಬೇಕೆಂದು ಕೆಲವರು ಮಹನೀ ಯರು ಈ ಮೊದಲು ಪ್ರಯತ್ನಮಾಡಿದ್ದುಂಟು. ಶ್ರೀಮಾನ್ ಮ. ಭಿ. ಶ್ರೀನಿವಾಸೈಯಂಗಾರ್ಯರವರು ಈ ಪ್ರಬಂಧಗಳಲ್ಲಿ ಕೆಲವಾದ ತಿರುಪ್ಪ ಲ್ಲಾಂಡು, ತಿರುಪ್ಪಾವೈ, ತಿರುಪ್ಪಳ್ಳಿಯೆಳುಚ್ಚಿ, ಮುಂತಾದ ಕೃತಿಗಳನ್ನು ಈಗ್ಗೆ ಸುಮಾರು ನಲವತ್ತು ವರ್ಷಗಳ ಹಿಂದೆ ಕನ್ನಡದಲ್ಲಿ ವ್ಯಾಖ್ಯಾನ ದೊಡನೆ ಪ್ರಕಟಿಸಿದರು. ಆ ಪುಸ್ತಕಗಳು ಅಷ್ಟೇನೂ ಪ್ರಚಾರಕ್ಕೆ ಬರಲಿಲ್ಲ. ಈಚೆಗೆ ಶ್ರೀಮಾನ್ ಎಂ. ಟಿ. ನರಸಿಹ್ಮೈಯಂಗಾರ್ಯರವರು ಆಳ್ವಾರುಗಳಲ್ಲಿ ಒಬ್ಬರಾದ ನಮ್ಮಾಳ್ವಾರ್ರವರ ಸಾವಿರ ಪದ್ಯವನ್ನು ಅರ್ಥ ಮತ್ತು ಸಂಸ್ಕೃತ ಶ್ಲೋಕರೂಪವಾದ ಪ್ರತಿ ಕೃತಿಯೊಡನೆ ಪ್ರಕಟ ಸಿದರು. ಜೊತೆಗೆ ಶ್ರೀವೈಷ್ಣವರು ನಿತ್ಯವೂ ಅನುಸಂಧಾನಮಾಡ ಬೇಕೆಂಬ ಪ್ರಬಂಧ ಭಾಗವನ್ನು ಅರ್ಥ ಮತ್ತು ಸಂಸ್ಕೃತ ಭಾಷಾಂತರ ದೊಡನೆ ಅಚ್ಚುಹಾಕಿಸಿದರು. ಈ ಗ್ರಂಥವನ್ನು ಶ್ರೀವೈಷ್ಣವರನೇಕರು ತೆಗೆದುಕೊಂಡಿದಾರೆಂದು ತೋರುತ್ತದೆ. ಶ್ರೀವೈಷ್ಣವರಲ್ಲದವರನ್ನು ಇದು ಕೂಡ ಮುಟ್ಟಲ್ಲ. ನಿಜವಾಗಿ ನೋಡಿದರೆ ಆಳ್ವಾರುಗಳ ಪ್ರಬಂಧ ಗಳು ಒಂದು ಮತದವರಿಗೆ ಮಾತ್ರ ಉಪಯೋಗವಾಗುವ ಕೃತಿಗಳಲ್ಲ. ಉಳಿದ ಮತಗಳವರೂ ಅವುಗಳನ್ನು ಓದಿ ಸಂತೋಷಪಡಬಹುದು. ಅವುಗಳಿಂದ ತಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಸಹಾಯವನ್ನು ಪಡೆಯ ಬಹುದು. ಮತ ದೃಷ್ಟಿಯನ್ನು ಬಿಟ್ಟವರು ಅವನ್ನು ಕಾವ್ಯವೆನ್ನುವ ಭಾವನೆಯಿಂದಲೇ ಓದಿ ಸುಖಿಸಬಹುದು. ಕನ್ನಡದ ನಮ್ಮ ಜನರಿಗೆ ಸಾಹಿತ್ಯದ ದೃಷ್ಟಿಯಿಂದ ಈ ಕೃತಿಗಳ ಸ್ವರೂಪ ಏನೆಂಬುದನ್ನು ತಿಳಿಸುವ ಉದ್ದೇಶದಿಂದ ಈ ಉಪನ್ಯಾಸವನ್ನು ಬರೆದಿದೆ.

೨

ವೈಷ್ಣವಧರ್ಮ ಮೊದಲಾದದ್ದು ಇತಿಹಾಸದ ಯಾವ ಕಾಲದಲ್ಲಿ ಎಂಬ ವಿಷಯ ಇನ್ನೂ ನಿಷ್ಕರ್ಷೆಯಾಗಿ ಸಿದ್ಧಾಂತವಾಗಿಲ್ಲ. ಈ ವಿಷಯವನ್ನು ಕುರಿತು ಸಾಂಪ್ರದಾಯಿಕವಾಗಿ ಮಾತನಾಡುವವರು ಈ ಧರ್ಮ ಇತಿಹಾಸದಲ್ಲಿ ಯಾವುದಾದರೊಂದು ಕಾಲದಲ್ಲಿ ಆರಂಭವಾಯಿತೆಂಬ ಮಾತಿಗೇ ಒಪ್ಪುವುದಿಲ್ಲ. ಸಂಶೋಧನ ದೃಷ್ಟಿಯಿಂದ ಈ ವಿಷಯವನ್ನು ಪರಿಶೀಲಿಸಿರುವವರು ವಿಷ್ಣು ಎಂಬ ದೈವ ವೇದದ ಕಾಲದಲ್ಲಿ ಹಿಂದೂ ಧರ್ಮದಲ್ಲಿ ಅಷ್ಟು ಪ್ರಮುಖವಾಗಿರಲಿಲ್ಲವೆಂದು ಹೇಳುತ್ತಾರೆ. ಸಂಪ್ರದಾಯಕ್ಕೆ ಕಟ್ಟು ಬೀಳದ ಯಾರಾದರೂ ಈ ಅಭಿಪ್ರಾಯ ಸರಿಯಾದದ್ದೆಂದು ಒಪ್ಪಬೇಕು. ವೇದದಲ್ಲಿ ಮುಖ್ಯ ದೈವ ಇಂದ್ರನಾಗಬಹುದು, ರುದ್ರನಾಗಬಹುದು, ವರುಣನಾಗಬಹುದು, ಮರುತನಾಗಬಹುದು, ಆದರೆ ವಿಷ್ಣು ಹೇಗೂ ಅಲ್ಲ, ಶಿವನೂ ಅಲ್ಲ. ಶಿವನೂ ವಿಷ್ಣುವೂ ಈಗ ಅವರಿಗೆ ಹಿಂದೂ ಧರ್ಮದಲ್ಲಿರುವ ಮುಖ್ಯ ಸ್ಥಾನವನ್ನು ವೇದಗಳ ಕಾಲ ಕಳೆದ ಹಲವು ಶತಮಾನಗಳಮೇಲೆ ಪಡೆದರು. ಅದೇ ಕಾಲದಲ್ಲೋ ಅದಕ್ಕೆ ಹಿಂದಾಗಿಯೋ ಹಿಂದೂ ಧರ್ಮದಲ್ಲಿ ಭಕ್ತಿಯ ಮಾರ್ಗ ಒಂದು ಸ್ಫುಟವಾದ ರೂಪವನ್ನು ಪಡೆಯಿತು. ಇತ್ತ ವಿಷ್ಣು, ಇತ್ತ ಶಿವನು, ಭಕ್ತಿಗೆ ವಿಷಯರಾಗಿ ನಿಂತರು. ಈ ಎರಡು ದೈವಗಳೂ ಇವರನ್ನು ಕುರಿತ ಭಕ್ತಿಯ ಮಾರ್ಗವೂ ದಕ್ಷಿಣ ದೇಶದಲ್ಲಿ ಮೊದಲಾದುವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಶಿವನನ್ನು ಕುರಿತೂ ವಿಷ್ಣುವನ್ನು ಕುರಿತೂ ಐತಿಹ್ಯಗಳು ಬೆಳೆದುವು. ಪೂರ್ವದಿಂದ ಬಂದ ಉತ್ತಮ ಗ್ರಂಥಗಳಲ್ಲಿ ಇವರ ಪಾರಮ್ಯವನ್ನು ಸ್ಥಾಪಿಸಲು ಗ್ರಂಥ ಭಾಗಗಳು ಪ್ರಕ್ಷಿಪ್ತವಾದವು. ವಿಷ್ಣುವಿನ ಅವತಾರದ ಕಥೆಗಳು ಶಿವನ ಪಂಚವಿಂಶತಿ ಲೀಲೆಗಳು ಜನಸಾಮಾನ್ಯದ ಮನಸ್ಸನ್ನು ಒಲಿಸಿ ಭಕ್ತಿಮಾರ್ಗಕ್ಕೆ ಸೆಳೆದುವು. ಹೀಗಾಗಿ ನಾಡೆಲ್ಲ ಒಂದು ಕಾಲದಲ್ಲಿ ಶಿವ ಅಥವಾ ವಿಷ್ಣುವನ್ನು ಕುರಿತ ಭಕ್ತಿಗೆ ಒಳಪಟ್ಟಿತೆಂದು ಹೇಳಬಹುದು. ಹೀಗಿರುತ್ತ ಭಕ್ತಿ ಜನಸಾಮಾನ್ಯದ ಮನಸ್ಸನ್ನು ಮುಟ್ಟಿ ಅವರ ಬಾಳನ್ನು ತಿದ್ದಿ ಅವರ ಬೆಳೆವಣಿಗೆಗೆ ಕಾರಣವಾದಾಗ ಅಲ್ಲಲ್ಲಿ ಭಕ್ತಿ ಜೀವನವು ಅದಕ್ಕೆ ಸಹಜವಾದ ಉತ್ಕರ್ಷ

ಸ್ಥಿತಿಯನ್ನು ಪಡೆದು ಹಲಕೆಲವು ಜನರನ್ನು ಮಾಹಾತ್ಮ್ಯಕ್ಕೆ ಮುಟ್ಟಿಸಿತು. ಇಂತಹವರು ತಮ್ಮ ಭಕ್ತಿಯನ್ನು ನುಡಿಯುವುದಕ್ಕಾಗಿ ಕೃತಿಗಳನ್ನು ರಚಿಸಿದರು. ತಮ್ಮ ಭಕ್ತಿಯ ದೈವವನ್ನು ಸಾಕ್ಷಾತ್ಕಾರಮಾಡಿಕೊಂಡು ಅದರ ಭಾವದಲ್ಲಿ ಮಗ್ನರಾಗಿದ್ದ ಈ ಮಹಾತ್ಮರನ್ನು ವಿಷ್ಣು ಭಕ್ತಿಯ ಸಂಪ್ರದಾಯದ ಜನ ಆಳ್ವಾರುಗಳು ಎಂದು ಕರೆದರು. ಆಳ್ವಾರ್ ಎಂದರೆ ಭಗವಂತನಲ್ಲಿ ಆಳುವವರು, ಅದ್ದಿರುವವರು, ಮುಳುಗಿರುವವರು. ಆಳ್ವಾರುಗಳು ರಚಿಸಿದ ಕೃತಿಗಳನ್ನು ಸಂಪ್ರದಾಯದ ಮುಖಂಡರು ಬೆಲೆಯ ವಸ್ತುಗಳೆಂದು ಪಾಠಮಾಡಿ ಕಲಿತು ಜನರಿಗೆ ಕಲಿಸಿ ಪೂಜೆಯ ವೇಳೆಯಲ್ಲಿ ಹಾಡಲು ಏರ್ಪಡಿಸಿದರು. ಈ ಕೃತಿಗಳೇ ತಮಿಳಿನ ವೈಷ್ಣವ ಪ್ರಬಂಧಗಳು. ವೈಷ್ಣವ ಸಂಪ್ರದಾಯದ ಈ ಪ್ರಬಂಧಮಾಲೆಯಲ್ಲಿ ಒಟ್ಟು ನಾಲ್ಕು ಸಾವಿರ ಪದ್ಯಗಳು ಸೇರಿವೆ. ಇವುಗಳನ್ನು ರಚಿಸಿದವರು ಹನ್ನೆರಡು ಜನ ಆಳ್ವಾರುಗಳು, ಮತ್ತು ರಾಮಾನುಜಾಚಾರ್ಯರ ಕಾಲದ ಒಬ್ಬ ಇಬ್ಬರು ಮಹನೀಯರು. ನಾಲ್ಕು ಸಾವಿರದ ಪ್ರಬಂಧದಲ್ಲಿ ಒಂದು ಸಾವಿರ ಈ ಮೊದಲೇ ಉಕ್ತರಾದ ನಮ್ಮಾಳ್ವಾರರ ಕೃತಿ. ಇನ್ನೊಂದು ಸಾವಿರ ತಿರುಮಂಗೈ ಎಂಬ ಹೆಸರಿನ ಇನ್ನೊಬ್ಬ ಆಳ್ವಾರರ ಕೃತಿ. ಉಳಿದ ಎರಡು ಸಾವಿರ ಉಳಿದ ಎಲ್ಲ ಆಳ್ವಾರುಗಳು ಹತ್ತು ಇಪ್ಪತ್ತು ನೂರರಂತೆ ರಚಿಸಿದ ಕೃತಿಗಳು. ಇವುಗಳ ಕರ್ತೃಗಳ ಹೆಸರನ್ನೂ ತಿಳಿದಮಟ್ಟಿನ ಚರಿತ್ರೆಯನ್ನೂ ಸೂಚಿಸಿ ಅವರ ಕೃತಿಗಳನ್ನು ಕುರಿತು ಎರಡು ಮಾತನ್ನು ಹೇಳಿ ಮುಂದೆ ಅಲ್ಲಲ್ಲಿ ಕೃತಿಗಳ ಕೆಲವು ಭಾಗಗಳನ್ನೂ ಕೊಟ್ಟಿದೆ.

೩

ಈ ಪ್ರಬಂಧಗಳ ಆದಿಯನ್ನು ಕುರಿತು ಸಂಪ್ರದಾಯ ಒಂದು ಇತಿಹಾಸವನ್ನು ಹೇಳುತ್ತದೆ. ಎಲ್ಲಕ್ಕೂ ಮೊದಲಿನ ಪ್ರಬಂಧಗಳನ್ನು ಬರೆದವರು ಮೊದಲ ಮೂರು ಆಳ್ವಾರುಗಳಾದ ಪೊಯ್ಗೈಯ್ ಆಳ್ವಾರ್, ಪೂದತ್ತಾಳ್ವಾರ್, ಪೇಯ್ ಆಳ್ವಾರ್ ಎಂಬ ಭಕ್ತರಂತೆ. ಪೊಯ್ಗೈಯ್ ಎಂದರೆ ಸರೋವರ. ಪೂದ ಎನ್ನುವುದು ಸಂಸ್ಕೃತದ ಭೂತ ಎನ್ನುವ ಪದ ತಮಿಳಿನಲ್ಲಿ ಧರಿಸಿರುವ ಆಕಾರ. ಪೇಯ್ ಎಂದರೆ ಮರುಳು,

ಹುಚ್ಚು ಎಂದರ್ಥ. ಪೊಯ್ಗೈಯ್ ಆಳ್ವಾರು ಕಾಂಚೀಪುರದಲ್ಲಿ ಒಂದು ಸರೋವರದಲ್ಲಿ ತಾವರೆಯ ಹೂವಲ್ಲಿ ಜನ್ಮವೆತ್ತಿದರೆಂದು ಐತಿಹ್ಯ. ಈ ಕಾರಣದಿಂದ ಅವರಿಗೆ ಆ ಹೆಸರು. ಪೂದತ್ತಾಳ್ವಾರು ಭಗವಂತನ ಭೂತ ಅಥವಾ ಆತ್ಮ ಎಂಬ ಅರ್ಥದಿಂದ ಆ ಹೆಸರನ್ನು ಪಡೆದರು. ಪೇಯಾಳ್ವಾರು ಮೈಲಾಪುರಿಯಲ್ಲಿ ಹುಟ್ಟಿದವರು. ಭಕ್ತಿಯ ಉದ್ರೇಕ ದಿಂದ ಇವರು ಹುಚ್ಚರಂತೆ ತಿರುಗಾಡುತ್ತಿದ್ದುದರಿಂದ ಇವರಿಗೆ ಈ ಹೆಸರಾಯಿತು. ಮೂವರು ಭಕ್ತರೂ ಅಲ್ಲಲ್ಲಿ ಸಂಚರಿಸುತ್ತ ಒಂದು ದಿನ ರಾತ್ರಿ ತಿರುಕೋವಿಲೂರಿಗೆ ಬಂದು ಸೇರಿದರಂತೆ. ಪೊಯ್ಗೈಯ್ ಆಳ್ವಾರು ಬೀದಿಯಲ್ಲಿ ಹೋಗುತ್ತಿರಲಾಗಿ ಮಳೆ ಆರಂಭವಾಗಲು ಅಲ್ಲಿ ಒಂದು ಮನೆಯ ಮುಂದೆ ಜಗಲಿಯಮೇಲೆ ಮಲಗಿಕೊಂಡರು. ಅಷ್ಟರಲ್ಲೇ ಅಲ್ಲಿಗೆ ಪೂದತ್ತಾಳ್ವಾರು ಬಂದು ಜಗಲಿಯಮೇಲೆ ಏರಿದರು. ಪೊಯ್ಗೈಯ್ ಆಳ್ವಾರ್ ಅವರಿಗೆ ಸ್ಥಳವನ್ನು ಕೊಡುವುದಕ್ಕಾಗಿ ಮಲಗಿದ್ದವರು ಎದ್ದು ಕುಳಿತುಕೊಂಡರು. ಸ್ವಲ್ಪದರಲ್ಲೇ ಅಲ್ಲಿಗೆ ಪೇಯಾಳ್ವಾರೂ ಬಂದು ಜಗಲಿಯ ಮೇಲೆ ಏರಿದರಂತೆ. ಅಲ್ಲಿ ಮೂವರಿಗೆ ಕುಳಿತುಕೊಳ್ಳುವುದಕ್ಕೆ ಸ್ಥಳ ಸಾಲಲಿಲ್ಲ. ಆದದ್ದರಿಂದ ಮೂವರೂ ಎದ್ದು ನಿಂತುಕೊಂಡರು. ಇದ್ದ ಸ್ವಲ್ಪ ಸ್ಥಳದಲ್ಲಿ ಹೀಗೆ ಮೂವರೂ ಸರಿಸಿಕೊಂಡು ನಿಂತು ತಾವೆಲ್ಲ ವೈಷ್ಣವರಾದಕಾರಣ ಭಗವಂತನನ್ನು ಕುರಿತು ಪರಸ್ಪರ ಮಾತನಾಡುತ್ತಿದ್ದರು. ಆಗ ಇವರಿಗೆ ತಮ್ಮ ಜೊತೆಗೆ ತಮ್ಮ ಮಧ್ಯೆ ಬೇರೆ ಯಾರೋ ನಿಂತಂತೆ ಮೂವರಿಗೂ ಅನುಭವವಾಯಿತು. ಆಳ್ವಾರುಗಳು ಆಶ್ಚರ್ಯ ದಿಂದ ಇದು ಯಾರಿರಬಹುದೆಂದು ಯೋಚಿಸಿದರಂತೆ. ತಮ್ಮ ಮಧ್ಯೆ ವ್ಯಕ್ತವಾದ ಆ ನಾಲ್ಕನೆಯ ತತ್ತ್ವ ಭಕ್ತವತ್ಸಲನಾದ ಭಗವಂತನೆಂದು ಮೂವರ ಮನಸ್ಸಿಗೂ ತೋರಿತು. ಆಗ ಅವರು ತಮ್ಮ ಭಕ್ತಿಯನ್ನು ಹೊರಸೂಸಿ ನೂರು ನೂರು ಪದ್ಯದ ಮೂರು ಹಾಡನ್ನು ಹಾಡಿದರು. ಪೊಯ್ಗೈಯ್ ಆಳ್ವಾರು ರಚಿಸಿದ ಮೊದಲ ಪದ್ಯದ ಅರ್ಥ ಇದು :

ನೆಲವೇ ಹಣತೆಯಾಗಿ ಹರಹಿದ ಕಡಲು ನೆಯ್ಯಾಗಿ
ಬಿಸುಗದಿರ ಸೂರ್ಯನೇ ಸೊಡರ ಕೊಡಿಯಾಗಿರಲು
ಎಡರ ಕಡಲಾದ ಸಂಸಾರ ಅಳಿಯಲಿ ಎಂದು
ಸೊಡರಂತ ಚಕ್ರವನು ಹಿಡಿದವನ ಕೆನ್ನಡಿಗೆ
ನುಡಿಮಾಲೆಯಿದನು ತೊಡಿಸಿದೆನು.

ಪೂದತ್ತಾಳ್ವಾರ್ರ ಮೊದಲ ಪದ್ಯದ ಅರ್ಥ ಹೀಗೆ:

ಭಕ್ತಿಯೇ ಹಣತೆ ಮನದಾಸೆಯೇ ನೆಯ್ಯಾಗಿ
ಆನಂದ ಅರುಗಿ ಭಾವವೆ ವರ್ತಿಯಾಗಿರಲು
ಬೆಳಗಿ ಹಚ್ಚಿದೆನರಿವಸೊಡರ, ಆತುಮುಕರಗಿ
ತಿಳಿವೀವ ತಮಿಳರಿತ ನಾನು ನಾರಾಯಣಗೆ.

ಇದು ಪೇಯ್ ಆಳ್ವಾರು ಹಾಡಿದ ಮೊದಲ ಪದ್ಯದ ಅರ್ಥ:

ಸಿರಿಯನ್ನು ಕಂಡೆನು; ಹೊನ್ನೊಡಲ ಕಂಡೆನು;
ತೊಳಪ ಸೂರ್ಯನ ತೆರದ ಚೆಲು ಹೊಗರ ಕಂಡೆನು.
ರಣದೆ ಹೊಳೆಯುವೆ ಹೊನ್ನ ಚಕ್ರ ಮುರಿ ಶಂಖವನು
ಕಡಲ ಬಣ್ಣದ ನನ್ನ ಹರಿಯ ಬಳಿ ಕಂಡೆನು.

ಈ ಮೂವರಾದ ಮೇಲೆ ಬಂದವರು ತಿರುಮಳಿಶೈ ಆಳ್ವಾರು. ಇವರು ನಾರಾಯಣನು ಸರ್ವೋತ್ತಮನು, ಬ್ರಹ್ಮನು ಅವನ ಮಗನು, ಆ ಬ್ರಹ್ಮನಿಗೆ ಮಗನು ಈಶ್ವರನು, ಎಂಬ ಸಿದ್ಧಾಂತವನ್ನು ತಮ್ಮ ಪದ್ಯಗಳಲ್ಲಿ ಬರೆದಿಟ್ಟರು. ಈ ನಾಲ್ವರೂ ಆಳ್ವಾರುಗಳ ಪರಂಪರೆಯಲ್ಲಿ ಮೊದಲಿಗರು. ಇವರಿಂದ ಆರಂಭವಾದ ಸಂಪ್ರದಾಯವನ್ನು ನಿಜವಾಗಿಯೂ ಒಂದು ರೂಪಕ್ಕೆ ತಂದವರು ಇವರನಂತರ ಬಂದ ನಮ್ಮಾಳ್ವಾರ್.

೪

ನಮ್ಮಾಳ್ವಾರು ತಾಮ್ರಪರ್ಣೀ ನದಿಯ ತೀರದ ಕುರುಗೈ ಎಂಬ ಊರಿನಲ್ಲಿ ದ್ವಾಪರಯುಗದ ಕೊನೆಯಲ್ಲಿ ಅಥವಾ ಕಲಿಯುಗದ ಆರಂಭದಲ್ಲಿ ಜನಿಸಿದರೆಂದು ಸಂಪ್ರದಾಯದ ಇತಿಹಾಸ. ಹುಟ್ಟುವಂದೇ ಇವರು ಭಕ್ತರಾಗಿದ್ದು ಸಮಾಧಿ ಸ್ಥಿತಿಯಲ್ಲಿ ಪ್ರಪಂಚಕ್ಕೆ ಬಂದರೆಂದೂ ತಂದೆ ತಾಯಿಗಳು ಇವರನ್ನು ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿ ದೇವರ ಎದುರಿಗೆ ಕುಳ್ಳಿರಿಸಿದರೆಂದೂ ಆಗ ಇವರ ಕಣ್ಣು ತೆರೆಯಿತೆಂದೂ ಇದೇ ಇತಿಹಾಸದಲ್ಲಿ ಹೇಳಿದೆ. ತಾಯಿ ತಂದೆ ಆಗ ಇವರನ್ನು ಆ ಊರಿನ ಬಳಿಯ ದೊಡ್ಡದೊಂದು ಹುಣಿಸೆಯ ಮರದ ಕೆಳಗೆ ಕೂರಿಸಿದರು. ಹೀಗೆ ಇವರು ಹದಿನಾರು ವರ್ಷ ಬೆಳೆದರಂತೆ. ಈ ಕಾಲಕ್ಕೆ ತಮಿಳುನಾಡಿನ ಉತ್ತರ ಭಾಗದಲ್ಲಿ ಮಧುರಕವಿ ಎಂಬೊಬ್ಬ ಮಹಾನುಭಾವರು ಇರುತ್ತಿದ್ದರು. ಅವರಿಗೆ ಒಂದು ರಾತ್ರಿ ದಕ್ಷಿಣದ ದಿಶೆಯಲ್ಲಿ ಅಪ್ರಾಕೃತವಾದ

ದಿವ್ಯ ತೇಜಸ್ಸೊಂದು ಕಂಡಿತು. ಇದೇನು ಬೆಳಕಿರಬಹುದು ಎಂದು ಅವರು ಯೋಚಿಸಿದರು. ಮಾರನೆಯ ದಿನ ಮೂರನೆಯ ದಿನ ಅದೇ ಸ್ಥಳದಲ್ಲಿ ಅದೇ ದಿವ್ಯ ತೇಜಸ್ಸು ಅವರಿಗೆ ನಿಶ್ಚಲವಾಗಿ ಕಂಡಿತು. ಈ ಬೆಳಕು ಏನೆಂದು ಪರೀಕ್ಷಿಸಬೇಕೆಂಬದಾಗಿ ಅವರು ಹೊರಟು ಬಂದು ಕುರುಗೈ ಪಟ್ಟಣವನ್ನು ಸಾರಿ ಬೆಳಕು ಇರುವುದು ಈ ಹುಣಿಸೆಯ ಮರದ ಅಡಿಯಲ್ಲಿ ಎಂದು ತಿಳಿದು ಆ ಸ್ಥಳವನ್ನು ಸೇರಿದರು; ನಮ್ಮಾಳ್ವಾರವರ ಸ್ಥಿತಿಯನ್ನು ನೋಡಿ ಈ ಭಗವದ್ಭಕ್ತರನ್ನು ಆಶ್ರಯಿಸಿ ಉದ್ಧಾರವಾಗ ಬೇಕೆಂದು ಅವರ ಶಿಷ್ಯರಾಗಿ ನಿಂತರು. ನಮ್ಮಾಳ್ವಾರು ಭಗವಂತನ ಅನುಭವದಿಂದ ಪಕ್ವವಾದ ತಮ್ಮ ಮನಸ್ಸನ್ನು ಒಂದು ಸಾವಿರ ಪದ್ಯದಲ್ಲಿ ಹೊರಸೂಸಿದರಂತೆ. ಮಧುರಕವಿಯಾಳ್ವಾರು ಈ ಗ್ರಂಥಗಳನ್ನು ತಾವು ಪಾಠಮಾಡಿ ಜನರಲ್ಲಿ ಪ್ರಚಾರಕ್ಕೆ ತಂದರು. ಬಾಯಿಂದ ಬಾಯಿಗೆ ಹೋಗುತ್ತ ಈ ಪದ್ಯಗಳು ಜನರಲ್ಲಿ ವಾಡಿಕೆಯಲ್ಲಿದ್ದರೂ ಒಂದು ಕಡೆ ಒಟ್ಟಾಗಿ ಸಿಕ್ಕುವಂತಿರಲಿಲ್ಲ. ಶ್ರೀವೈಷ್ಣವರ ಸಂಪ್ರದಾಯದಲ್ಲಿ ಆಳ್ವಾರುಗಳ ಪರಂಪರೆ ಮುಗಿದು ಆಚಾರ್ಯರ ಪರಂಪರೆ ಆರಂಭವಾಗುವ ಕಾಲಕ್ಕೆ ಇವರ ಪದ್ಯಗಳನ್ನೂ ಇತರ ಭಕ್ತರ ಪದ್ಯಗಳನ್ನೂ ಒಂದು ಕಡೆ ಸೇರಿಸುವುದು ಅವಶ್ಯಕವೆಂದು ಆಚಾರ್ಯವರ್ಗದ ಮೊದಲಿಗರೆಂದು ಪ್ರಸಿದ್ಧರಾಗಿರುವ ನಾಥಮುನಿಗಳಿಗೆ ಕಂಡಿತು. ಅವರು ದಿವ್ಯ ದೇಶಗಳಿಗೆಲ್ಲ ಹೋಗಿ ಪ್ರಬಂಧಗಳ ಕೃತಿಗಳನ್ನು ಒಟ್ಟುಗೂಡಿಸಿದರು. ಅದರಲ್ಲಿಯೂ ಮುಖ್ಯವಾಗಿ ನಮ್ಮಾಳ್ವಾರ ಕೃತಿಗಳನ್ನು ಒಟ್ಟುಗೂಡಿಸಿದ್ದು ಅವರ ಮಹತ್ಕಾರ್ಯ. ಈ ಮೊದಲೇ ಹೇಳಿರುವಂತೆ ನಾಲ್ಕು ಸಾವಿರ ಪ್ರಬಂಧದಲ್ಲಿ ಒಂದು ಸಾವಿರಕ್ಕೆ ಹೆಚ್ಚಾದ ಪ್ರಬಂಧ ನಮ್ಮಾಳ್ವಾರ ಕೃತಿ. ಇವರ ಹಿಂದೆ ಬರೆದಿದ್ದ ಗ್ರಂಥ ಬಹಳ ಕಡಿಮೆ; ಆಮೇಲೆ ಪ್ರಬಂಧಗಳನ್ನು ಬರೆದ ಎಲ್ಲರಿಗೂ ನಮ್ಮಾಳ್ವಾರು ಮೇಲ್ಪಂಕ್ತಿ. ಹೀಗೆ ಇವರಿಂದ ನಿರ್ಮಿತವಾದ ಪ್ರಬಂಧವನ್ನು ಒಟ್ಟನಲ್ಲಿ ತಿರುವಾಯ್ಮೊಳಿ ಎಂದರೆ ಸಿರಿಬಾಯ ನುಡಿ ಎಂದು ಹೇಳುತ್ತಾರೆ. ಇವರ ಪ್ರಬಂಧಗಳ ಸ್ವರೂಪ ತಿಳಿಯುವಂತೆ ಅವುಗಳಲ್ಲಿ ಕೆಲವನ್ನು ಕುರಿತು ಎರಡು ಮಾತನ್ನು ವಿವರವಾಗಿ ಹೇಳುವುದು ಅವಶ್ಯಕ.

೫

ಭಗವಂತನ ಸ್ವರೂಪವನ್ನು ಕುರಿತ ತಮ್ಮ ಭಾವನೆಯನ್ನು ನಮ್ಮಾಳ್ವಾರು ಈ ಮಾತುಗಳಲ್ಲಿ ಹೇಳಿದಾರೆ:

ಹೆಚ್ಚನ್ನು ಮೀರಿಸುವ ಹೆಚ್ಚಿನ ಆನಂದವನ್ನು ಉಳ್ಳವನು ಯಾರು,
ಮಂಕುತನ ಉಳಿಯದಂತೆ ತಿಳಿಯ ಅರಿವನ್ನು ಅನುಗ್ರಹಿಸಿದವನು ಯಾರು,
ಮರವಿಲ್ಲದ ಅಮರರುಗಳ ಅಧಿಪತಿ ಯಾರು,
ದೂಸರನಾರಿಸುವ ಅವನ ಸೊಡರಡಿಯನ್ನಾಶ್ರಯಿಸಿ
ಬಾಳು ಓ ನನ್ನ ಮನವೇ.

ಮನದ ಒಳಗಣ ಮಲ ಹರಿವಂತೆ ಅರಳಾಗಿ ಮಿಕ್ಕು ಬೆಳೆಯುವ,
ಮನದ ತಿಳಿವಿನ ಅಳವಿಲ್ಲದ, ಇಂದ್ರಿಯಗಳ ಮೂಲಕ ಬರುವ
ತಿಳಿವೆಂಬುದಿಲ್ಲದ,
ಸಮನಾದ ಸಂಪೂರ್ಣ ಜ್ಞಾನ ಸಂಪೂರ್ಣ ಆನಂದವುಳ್ಳ,
ಅಂದು ಇಂದು ಮುಂದು ಎಂದೂ ಸಮನಿಲ್ಲದ ಮಿಗಿಲಿಲ್ಲದ,
ಅವನು ನನ್ನ ಉಸಿರು.

ಅದು ಇಲ್ಲದವನು, ಇದು ಉಳ್ಳವನು, ಎಂದು ನೆನೆಯಬಾರದವನು;
ನೆಲದ ದೇಶದಲ್ಲಿ ನಭದ ದೇಶದಲ್ಲಿ ರೂಪುಳ್ಳವನಾಗಿ ರೂಪಿಲ್ಲದಿರುವವನು;
ಪೊಲನಲ್ಲಿದ್ದು ಪೊಲನಲ್ಲದಿರುವವನು;
ತನ್ನನ್ನು ಬಿಟ್ಟು ಏನೂ ಇಲ್ಲದಿರುವವನು; ಹರಹಿದ ಕಲ್ಯಾಣದಾತನು;
ಆ ಒಬ್ಬನನ್ನು ನಾವು ಸಾರಿದೆವು.

ನಾವವನಿವನುವನು, ಅವಳಿವಳುವಳಿವಳು,
ತಾವವರಿವರುವರು, ಅದುವಿದುವುದು ಯಾವುದು,
ನಶಿಸುವ ಅವು ಇವು ಉವು, ಒಳ್ಳೆಯ ಅವು ಹೊಲ್ಲದ ಇವು
ಹೋದ ವಸ್ತು ಆಗುವ ವಸ್ತು ಎಲ್ಲವೂ ಆಗಿ
ನಿಂತವನವನೇ.

ದೃಢವಾದ ಆಕಾಶ ಉರಿ ಗಾಳಿ ನೀರು ನೆಲ, ಮೇಲೆ
ಪಡರಿದ ಸಮಸ್ತವಸ್ತು ಆಗಿ ಆಯಾ ವಸ್ತುವಿನಲ್ಲಿ
ಒಡಲಮೇಲೆ ಉಸಿರಾಗಿ ಬೆರೆತು ಎಲ್ಲಾ ವ್ಯಾಪಿಸಿರುವವನು
ಬಹು ಭಾಸ್ವರವಾದ ಶ್ರುತಿ ಹೇಳುವಂತೆ ಇವನ್ನುಂಡದೈವ.

ದೇವತೆಗಳರಿವನ್ನು ಸೋಲಿಸಿದ ನೆಲೆಯವನು
ಅಕಾರಾದಿ ಎಲ್ಲಕ್ಕೂ ಆದಿಯಾಗಿದ್ದು ಎಲ್ಲವನ್ನೂ ಉಂಡ ಪರಾತ್ಪರನು
ಸಾಟಿಯಿಲ್ಲದ ತ್ರಿಪುರವನ್ನು ದಹಿಸಿ ದೇವತೆಗಳಿಗೆ ತಿಳಿವನ್ನು ದಯೆಗೈದು
ರುದ್ರನೆಂದು ಅಜನೆಂದು ಎಲ್ಲ ಲೋಕವನ್ನು ಅಳಿಸಿದನು ಸಮೆದನವನು.

ಇರುವನೆನಲು ಇರುವನವನು ; ಒಡಲಿಗೆಲ್ಲ ಅವನು ಒಡಲು
ಇಲ್ಲವೆನಲು ಇರುವನು ; ಈ ಆತ್ಮವೆಲ್ಲ ಅವನ ಆತ್ಮ.
ಇಹನೆಂದರು ಇಲ್ಲೆಂದರು ಗುಣವ ತಳೆದ ಈ ಒಡಲಲಿ
ಎರಡು ರೀತಿಯ ಮೈಯಿಂದ ಒಂದನ್ನೂ ಬಿಡದೆ
ವ್ಯಾಪಿಸಿರುವವನು ಅವನು.

ಹರಹಿದ ತಣ್ಗಡಲ ನೀರಕಣದಲೆಲ್ಲ ಹರಹಿರುವನು.
ಹರಹಿದಣ್ಡವೆಂಬವೊಲಿಹ ನೆಲದಲಿ ಆಕಾಶದಲ್ಲಿ
ಸ್ವಲ್ಪವನೂ ಬಿಡದೆ ಎಲ್ಲೊ ಕೆಲ ಎಡೆ ಎಂಬೆಲ್ಲ ಅಲ್ಲಿ
ಹೊಳೆವ ವಸ್ತುವಿನಲಿ ಬೆರೆತು ಎಲ್ಲೆಲ್ಲೂ ಹರಹಿರುವನು
ಇವನ್ನು ಉಂಡ ಪರದೈವ.

ಭಗವಂತನ ಸ್ವರೂಪವನ್ನು ಕುರಿತ ಬಹು ತೆಳುವಾದ ಭಾವನೆಗೆಲ್ಲ ಇಲ್ಲಿ ಆಕಾರ ಬಂದಿದೆ. ಇಲ್ಲಿ ಹೇಳಿರುವಷ್ಟು ಮಾತಿನಿಂದ ದೇವರು ಎಂಬ ವಿಷಯವನ್ನು ಕುರಿತು ಒಂದು ವಿಸ್ತಾರವಾದ ಉಪನ್ಯಾಸವನ್ನು ಮಾಡಬಹುದು.

ದೇವರನ್ನು ಕುರಿತ ಬಹುಮುಖವೂ ಬಹು ಸೂಕ್ಷ್ಮವೂ ಆದ ತತ್ವವನ್ನು ಈ ಮಾತುಗಳಲ್ಲಿ ಹೇಳಿರುವಂತೆ ಇದರಿಂದ ಬರುವ ನೀತಿ ಯಾವುದೆಂದು ಹೇಳಿ ಇನ್ನೊಂದು ಹತ್ತರಲ್ಲಿ ಉಪದೇಶವಿದೆ:

ಉಳಿದೆಲ್ಲವನ್ನು ಬಿಡಿ ; ಬಿಟ್ಟು ನಿಮ್ಮ ಉಸಿರನ್ನು
ಮುಕ್ತಿಯೊಡೆಯುನ ಮುಂದೆ ಮೀಸಲುಮಾಡಿ.

ಮಿಂಚಿಗಿಂತ ನೆಲೆಯಿಲ್ಲ ಮೆಚ್ಚಿನ ಉಸಿರು ಒಡಲು:
ಸತ್ಯವಿದ ಗ್ರಹಿಸಿ ನೀವೇ ಎರೆಯುನ ಮನೆಮಾಡಿ.

ನೀವು ನಿಮ್ಮದು ಎಂಬವನ್ನು ಬೇರು ಮುಟ್ಟ ಮಾಯಿಸಿ
ಎರೆಯುನ ಸೇರಿ ; ಉಸಿರಿಗೆ ಇದರ ಜೊತೆಯ ಹಿತವಿಲ್ಲ.

ಇಲ್ಲದ್ದು ಉಳ್ಳದ್ದು ಅಲ್ಲದ್ದು ಅವನ ರೂಪು ; ಆ ಆನಂದಕ್ಕೆ
ಎಲ್ಲೆ ಇಲ್ಲ: ಚಪಲವನ್ನು ಬಿಟ್ಟು ಅದನ್ನು ಆಶ್ರಯಿಸಿ.

ಚಪಲ ತೊಲಗಿತೆಂದರೆ ಉಸಿರು ಮುಕ್ತಿಹೊಂದಿತು.
ಎರೆಯುನನ್ನು ಆಶ್ರಯಿಸಿ: ಚಪಲ ತೊಲಗಿತು.

ನೀತಿಯನ್ನು ಹೇಳುತ್ತ ಪುಣ್ಯಕ್ಷೇತ್ರವೊಂದರ ಸ್ತೋತ್ರಮಾಡುತ್ತ ಪ್ರಕೃತಿ ಸೌಂದರ್ಯವನ್ನು ಇವರು ಎಷ್ಟು ಅನುಭವಿಸುತ್ತಿದ್ದರೆಂಬುದನ್ನು ತೋರಿಸುವುದಕ್ಕೆ ಒಂದು ಕೃತಿಯನ್ನು ಉದಾಹರಣೆಯಾಗಿ ಕೊಡಬಹುದು :

ಬೆಳೆವ ಕಾಂತಿಯ ಎಳಮೆ ಕೆಡುವುದಕೆ ಮುನ್ನ
ಬೆಳೆಹೊಗರ ಮಾಯನು ವಾಸಿಸುವ ಮಂದಿರ
ಬೆಳೆದೆಳೆಯ ತೋಟ ಸುತ್ತಿದ ಮಾಲಿರುಂಜೋಲೆಯನ್ನು
ಶ್ರಮವಿಲ್ಲದವರಾಗಿ ಸೇರುವುದು ಚದುರು.

ಚದುರೆಳೆಯ ಮಡದಿಯರ ತಕ್ಕೆ ಹೆಚ್ಚೆನ್ನದೆ
ಅದಿರುಕೊರಲ ಶಂಖದ ಚೆಲುವನ ಮಂದಿರ
ಚಂದ್ರನು ಸೋಂಕುವ ಮುಡಿಯ ಮಾಲಿರುಂಜೋಲೆಯ
ದಿವ್ಯದೇಶವನ್ನು ಸೇರಿ ಉಳಿಯುವುದು ಯುಕ್ತ.

ಫಲವುಳಿದ ಕ್ರಿಯೆಗೆಯ್ದು ಫಲವಿಲ್ಲ ಮನವೇ
ಸುರಿಮುಗಿಲ ಬಣ್ಣದ ದೇವ ಮೋಹಿಸಿ ನಿಂತ ಮಂದಿರ
ಆಶೆ ಬೆಳೆಯುವ ತೋಟದ ಸುತ್ತ ಮಾಲಿರುಂಜೋಲೆಯ
ಬಳಿಯ ಮಲೆಯನು ಹೊಂದು: ಅದು ನಿಜದ ಕರ್ಮ.

ಕರ್ಮದ ಬಲವತ್ಪಾಶವನ್ನು ಕಳೆದು ಊಳಿಗದಿಂದ ಬಾಳುವೊಡೆ
ಹಿರಿಯಮಲೆಯನ್ನೆತ್ತಿದವನ ರಕ್ಷೆ ನೆಲಸಿದ ಮಂದಿರ
ಹರಿವ ಮೋಡ ತಡೆವ ಮಾಲಿರುಂಜೋಲೆಯ
ತಿರುಮಲೆಯಿದೆಯೇ ಅದ ಹೊಂದುವುದೇ ತರವು.

ತೆರವುಳ್ಳಬಲದಿಂದ ಕ್ರೂರ ಪಾಪವನ್ನು ಬೆಳೆಸಲಾಗದು
ಧರ್ಮವನ್ನುಳಿಸುವ ಚಕ್ರ ಆಯುಧವಾದವನ ಮಂದಿರ
ಕೊಳೆಯಿಲ್ಲದ ತಿಳಿದೊಣೆಗಳು ಸುತ್ತಿರುವ ಮಾಲಿರುಂಜೋಲೆಯ
ಹೊರಮಲೆಯನ್ನು ಸಾರಿ ಹೋಗುವುದು ಉಪಾಯ.

ಇದು ಉಪಾಯವೆಂದು ತಿಳಿಯಿರಿ; ಕೀಳನೆಸಗಬೇಡಿ.
ಉರಿಯೇರಿ ಬೆಣ್ಣೆ ಉಂಡವನ ಮಂದಿರ
ಜಿಂಕೆಮರಿ ಜೊತೆಯಾಗಿ ಸೇರುವ ಮಾಲಿರುಂಜೋಲೆಯ
ದಾರಿ ಸೋಕುವಂತೆ ಅದನ್ನೇ ನೆನೆಯುವುದು ಒಳಿತು.

ಒಳಿತೆಂದು ತಿಳಿಯಿರಿ; ನರಕಕ್ಕೆ ಇಳಿಯದಿರಿ.
ಮೊದಲು ನೆಲವನ್ನೆತ್ತಿದವನು ನಿತ್ಯವಾಸಮಾಡುವ ಮಂದಿರ
ಮಲವನ್ನು ಕಳೆಯುವ ಚಂದ್ರನು ಸೇರುವ ಮಾಲಿರುಂಜೋಲೆಯನ್ನು
ಬಲಸುತ್ತು ಸುತ್ತಿ ಅಲ್ಲಿ ನಿಲ್ಲುವುದು ಭದ್ರ.

ಬಲವನ್ನು ಗಳಿಸಿ ಸತತ ಬಲವನ್ನು ಕಳೆಯದಿರು.
ಶಕ್ತಿಯನ್ನು ಕೊಡುವ ಗೊಲ್ಲಮಾಯನ ಮಂದಿರ
ದೇವತೆಗಳು ಪ್ರದಕ್ಷಿಣೆ ಮಾಡುವ ಮಾಲಿರುಂಜೋಲೆಯನ್ನು
ಬಲವೆಂದು ಸ್ವೀಕರಿಸಿ ದಿನವೂ ಅಲ್ಲಿರುವುದು ವ್ಯವಹಾರ.

ಇದು ವ್ಯವಹಾರವೆಂದು ತಿಳಿಯಿರಿ; ಘೋರಪಾತಕಗಳಲ್ಲಿ ಮುಳುಗದಿರಿ.
ರಕ್ಕಸಿ ಹೆಣ್ಣನ್ನು ಕೊಂದವನು ಅಪ್ಪಿದ ಹಿರಿಯ ಮಂದಿರ
ಎಳೆಯ ಆನೆ ಹಿಂಡು ಸೇರುವ ಮಾಲಿರುಂಜೋಲೆಯನ್ನು
ಸೇವಿಸಲೆಳಸಿದ ನಿಶ್ಚಯವೇ ನಿಜವಾದ ಸೂತ್ರ.

ಸೂತ್ರವೆಂದು ಕಳವು ಕೃತ್ರಿಮಗಳನ್ನು ಮಾಡದೆ
ಅಂದು ವೇದವನ್ನು ಬಿಚ್ಚಿದವನು ಮೆಚ್ಚಿದ ಮಂದಿರ
ತನ್ನ ಹೆಣ್ಣಿನೊಡನೆ ನವಿಲು ಓಡಾಡುವ ಮಾಲಿರುಂಜೋಲೆಯ
ಹೂವರಳುವ ಮಲೆಯನ್ನು ಹೊಗುವುದು ಹುರುಳು.

ಈ ಪದ್ಯದಲ್ಲಿ ತಿರುಮಾಲಿರುಂಜೋಲೆ ಎಷ್ಟು ಅಂದವಾದ ಸ್ಥಳವೆನ್ನುವುದು ಕಾಣುತ್ತದೆ. ಅದರ ಶಿಖರ ಬಹು ಎತ್ತರವಾದದ್ದು. ಆಕಾಶದಲ್ಲಿ ಹೋಗುತ್ತ ಚಂದ್ರನು ಅದಕ್ಕೆ ತೊಡಕುತ್ತಾನೆ. ಅದನ್ನು ಮೋಡಗಳು ಮುಚ್ಚುತ್ತವೆ. ಮಲೆಯು ದಟ್ಟವಾದ ವಿಸ್ತಾರವಾದ ಕಾಡನ್ನು ಉಳ್ಳದ್ದಾಗಿದೆ. ಅಲ್ಲಿ ಆನೆಗಳು ಜಿಂಕೆಗಳು ಹಿಂಡಾಗಿ ಮರಿಗಳೊಡನೆ ಓಡಾಡುತ್ತವೆ. ಆ ಗಿರಿಯಮೇಲೆ ಸ್ವಚ್ಛವಾದ ನೀರಿನಿಂದ ತುಂಬಿದ ಅನೇಕ ದೊಣೆಗಳುಂಟು. ಇಷ್ಟು ಸುಂದರವಾದ ಕ್ಷೇತ್ರವು ಪವಿತ್ರವಾದದ್ದೂ ಹೌದು. ದೇವತೆಗಳು ಇಲ್ಲಿಗೆ ಬಂದು ಪ್ರದಕ್ಷಿಣೆ ಮಾಡಿ ಹೋಗುತ್ತಾರೆ. ಇಷ್ಟಲ್ಲದೆ ಪ್ರಕೃತಿಯ ಸೌಂದರ್ಯವನ್ನು ಹೇಳುವುದರಲ್ಲಿ ಈ ಕವಿಯು ಜೀವಕ್ಕೆ ತಂಪಾಗುವ ವಿಷಯವನ್ನು ಉದ್ಧರಿಸಿ ಹೇಳುತ್ತಾನೆ. ಆನೆಗಳು ಜೊತೆಯಾಗಿ ಹೋಗುವುದು; ತಾಯಿಜಿಂಕೆ ಮರಿಯೊಂದಿಗೆ ನಡೆಯುವುದು; ನವಿಲು ಗಂಡು ಹೆಣ್ಣು ಜೊತೆಯಾಗಿ ನಲಿಯುವುದು; ಈ ಚಿತ್ರಗಳನ್ನು ನಾವು ಇಲ್ಲಿ ಕಾಣುತ್ತೇವೆ. ಒಳ್ಳೆಯದರ

ಉಪದೇಶ, ಕ್ಷೇತ್ರವನ್ನು ಕುರಿತ ಹೊಗಳಿಕೆ, ಪ್ರಕೃತಿ ಸೌಂದರ್ಯದ ವರ್ಣನೆ, ಇಷ್ಟದೈವದ ಆರಾಧನೆ; ಇವು ಸರಿಸಮನಾಗಿ ಬೆರೆತು ಕೃತಿಕಾರನ ಮುಕ್ತಚೇತನದ ಸ್ವರೂಪವನ್ನು ತೋರಿಸುವ ಈ ಕೃತಿಗೆ ಸಮನಾದ ಕೃತಿ ಧಾರ್ಮಿಕ ಸಾಹಿತ್ಯದಲ್ಲಾಗಲಿ ಧಾರ್ಮಿಕವಲ್ಲದ ಸಾಹಿತ್ಯದಲ್ಲಾಗಲಿ ದೊರೆಯುವುದು ದುರ್ಲಭ. ಕುಂಭಕೋಣದ ಮೂರ್ತಿಯನ್ನು ಕುರಿತ ಪದ್ಯಗಳಲ್ಲಿಯೂ ಇದೇ ಮನೋಧರ್ಮ ಕಾಣುತ್ತದೆ.

ಆರದ ಅಮುದೇ ಈ ನಿನ್ನ ದಾಸನ ಒಡಲು ನಿನ್ನನ್ನು ಕುರಿತ ಪ್ರೇಮದಿಂದ
ನೀರಾಗಿ ಅಲೆದು ಇಳಿಯುವಂತೆ ಕರಗಿಸುವ ನಿಡು ದೈವವೇ
ಕಾಂತಿಯುಕ್ಕುವ ಕೆನ್ನೆಲ್ಲು ಚೌರಿಯಂತೆ ಬೀಸುವ ಸಮೃದ್ಧ ಜಲದ
ತಿರುಕೊಡಂದೆಯಲ್ಲಿ
ಮಿಗಿಲ ಚೆಲುವಿಂದ ತೊಳಗುತ್ತ ಮಲಗಿರುವ ನಿನ್ನನು ನಾನು ಕಂಡೆನೇ.

ಎನ್ನುವುದು ಆ ಪದ್ಯಗಳಲ್ಲಿ ಮೊದಲನೆಯದು. ಆಳ್ವಾರು ದೇವರನ್ನು "ನನ್ನ ದೊರೆಯೇ ನನ್ನ ಬೆಳ್ಳನೆಯ ಮೂರ್ತಿಯೇ ನನ್ನನ್ನು ಆಳುವವನೇ" ಎಂದು ಕರೆಯುವ ರೀತಿ ಇವರ ಅನುಭವವು ಎಷ್ಟು ತೀವ್ರವಾದದ್ದೆಂದು ತೋರಿಸುತ್ತದೆ. ನಮ್ಮಾಳ್ವಾರು ಬರೆದ ಸಾವಿರ ಪದ್ಯದಲ್ಲಿ ಬಹು ಮುಖ್ಯವಾದ ಒಂದು ದಶಕ ತಿರುವೇಂಗಡದ ದೈವವನ್ನು ಕುರಿತದ್ದು. ಅದರ ಕೊನೆಯ ಪದ್ಯದ ಅರ್ಥವನ್ನು ಇಲ್ಲಿ ಕೊಟ್ಟಿದೆ:

ಕ್ಷಣಕಾಲವಾದರೂ ಅಗಲಿರಲಾರೆನೆಂದು ಅಲರಮೇಲಣದೇವಿ ಮನೆ
ಮಾಡಿದ ಎದೆಯುವನೇ
ಇನ್ನು ಹೆಚ್ಚಿಲ್ಲವೆಂಬ ಹೊಗಳನ್ನು ಪಡೆದು ಮೂರು ಲೋಕದೊಡನೆ
ನನ್ನನ್ನು ಆಳುವವನೇ
ಅನೇಕಾನೇಕ ಅಮರರೂ ಮುನಿಗಣಗಳೂ ಅಪೇಕ್ಷಿಸುವ ತಿರುವೇಂಗಡದ
ದೇವರೇ
ಇನ್ನು ಬೇರೆ ಒಂದು ಹೊಗಲಿಲ್ಲದೆ ದಾಸನು ನಿನ್ನಡಿಗಳ ಕೆಳಗು ಅಮರಿ
ಹೊಕ್ಕೆನು.

ಇದರ ಕೊನೆಯ ಪಂಕ್ತಿಯನ್ನು ಈ ಮಹನೀಯರ ಕೃತಿಯೆಲ್ಲಕ್ಕೂ ಸಾರಭೂತವಾದ ವಾಕ್ಯವೆಂದು ಸಂಪ್ರದಾಯದಲ್ಲಿ ಹೇಳಿದೆ. ಆಳ್ವಾರ್ತನದ ಮುಖ್ಯ ತತ್ತ್ವವು ಆ ಪಂಕ್ತಿಯ ಮಾತುಗಳಲ್ಲಿ ಸುಲಭವಾಗಿ

ಮತ್ತು ಸಂಗ್ರಹವಾಗಿ ಅಡಕವಾಗಿರುವುದು ನಿಜ. ನಮ್ಮಾಳ್ವಾರಿಗೆ ಹರಿಹರ ಭೇದವಿರಲಿಲ್ಲವೆಂದು ಈ ಮಾತುಗಳಿಂದ ಕಾಣುತ್ತದೆ:

“ಮುನಿಯೇ ನಾಲ್ಮೊಗನೇ ಮುಕ್ಕಣ್ಣಪ್ಪಾ,
ಹೊಲ್ಲೆಹವಿಲ್ಲದ ಕೆಚ್ಚನೆಯ ಬಾಯ ತಾವರೆಯ ಕಣ್ಣ ನನ್ನ ಕರು ಮಾಣಿಕ್ಯವೇ,
ನನ್ನನ್ನು ಕದ್ದವನೇ, ಒಬ್ಬೊಂಟಿಯಾದ ನನ್ನ ಎಲ್ಲ ಉಸಿರೇ,
ನನ್ನ ತಲೆಯ ಮೇಲ್ಗಡೆ ಬಂದು ಸೇರಿದೆಯಾಗಿ ಇನ್ನು ನಾನು ನಿನ್ನನ್ನು ಹೋಗಬಿಡೆನು;
ನನ್ನಲ್ಲಿ ಏನೂ ಮಾಯಮಾಡಬೇಡ.”

“ಆಸೆ ತೀರುವಂತೆ ಸೇರುವ ಹರಿಯನ್ನು ಅಜನನ್ನು ಹರನನ್ನು ಕರೆದು.”

೬

ನಮ್ಮಾಳ್ವಾರನ್ನು ಆಶ್ರಯಿಸಿ ಮುಕ್ತರಾದ ಮಧುರಕವಿಯಾಳ್ವಾರ್ ತಮ್ಮ ಗುರುವನ್ನು ಕುರಿತು ಹತ್ತು ಪದ್ಯವನ್ನು ಬರೆದರು. ಅವರು ಮತ್ತೇನನ್ನೂ ಬರೆಯಲಿಲ್ಲ; ಬರೆಯುವ ಅವಶ್ಯಕತೆಯನ್ನೂ ಕಾಣಲಿಲ್ಲ. ತನ್ನ ಆಚಾರ್ಯನ ಮಹಿಮೆ ಒಂದನ್ನು ಹೊರತು ಬೇರೆ ಒಂದನ್ನು ಆತನು ಅರಿಯಲಿಲ್ಲ. ಗುರುಶರಣಾಗತಿಯ ಈ ಪದ್ಯಗಳೂ ಬಹು ಅಂದ ವಾಗಿವೆ:

ಹುರಿಮಾಡಿದ ನುಣ್ಣನೆಯ ಸಣ್ಣ ಹಗ್ಗದಿಂದ
ನನ್ನನ್ನು ಕಟ್ಟಿಕೊಂಡಿರುವ ಹಿರಿಯ ಮಾಯದ ನನ್ನಪ್ಪನಿಗಿಂತ
ಪ್ರೀತಿಯಿಂದ ತೆಂಕಣ ಕುರುಗೂರ ಭಕ್ತನನ್ನನುಸರಿಸಿದವೇಳೆ
ನನ್ನ ನಾಲಿಗೆಗೆ ರುಚಿ ಕಾಣುತ್ತದೆ, ರಸ ಊರುತ್ತದೆ.

ಅನರ್ಹರಾಗಿರಲಿ ಅನುಕೂಲಿಸದವರಾಗಿರಲಿ
ಅವರ ಗೆಯ್ಮೆ ಚೆನ್ನಾಗುವಂತೆ ಈ ಗುರು ತಿದ್ದಿ ಸರಿಮಾಡಿಕೊಳ್ಳುವನು.
ಕೋಗಿಲೆಗಳು ನಿಂತು ಹಾಡುವ ಸುತ್ತು ತೋಟದ ಕುರುಗೂರ ಭಕ್ತನೇ
ನಿನ್ನ ದಿವ್ಯ ಪಾದದ ಭಕ್ತಿಯನ್ನು ಬೇಡುತ್ತೇನೆ.

ನಾಲಿಗೆಯಿಂದ ನುಡಿದ ಇಂಪನ್ನು ಸಾರಿದೆನು;
ಅವನ ಹೊನ್ನಡಿಯ ಮೈಮೆಯನ್ನು ಆಶ್ರಯಿಸಿದೆನು;
ದೇವರು ಬೇರೆಯನ್ನರಿಯೆನು: ಕುರುಗೂರ ಭಕ್ತನ
ಹಾಡನ್ನು ಇನಿದಾಗಿ ರಾಗದಿಂದ ಹಾಡಿ ಅಲೆಯುತ್ತಿದೇನೆ.

ನನ್ನನ್ನು ಕಂಡುಕೊಂಡು ಕಾರಿಮಾರ ಹಿರಿಯನು
ಅನಾದಿಯಾದ ಬಲಿಷ್ಠ ಪಾತಕವನ್ನು ರೂಪುಗೆಡಿಸಿ ನನ್ನನ್ನು ಸಲಹಿದನು.
ಒಳ್ಳೆಯ ತಮಿಳಿನ ಶಠಕೋಪನ ಕರುಣೆಯನ್ನು
ಎಂಟು ದಿಕ್ಕು ಅರಿಯುವಂತೆ ಸಾರುತ್ತೇನೆ.

೭

ಆಳ್ವಾರುಗಳ ಪಂಕ್ತಿಯಲ್ಲಿ ತಮಿಳಿನಲ್ಲಿ ಅಲ್ಲದೆ ಇತರ ಭಾಷೆಗಳಲ್ಲಿ ಕೃತಿ ಮಾಡಿದವರು ಒಬ್ಬರೇ. ಆ ಕಾರಣದಿಂದ ಆ ಒಬ್ಬರು ಉಳಿದ ಆಳ್ವಾರುಗಳಿಗಿಂತ ಹೆಚ್ಚು ಜನಕ್ಕೆ ಪರಿಚಿತರಾಗಿದ್ದಾರೆ. ಅವರು ಮುಕುಂದಮಾಲೆಯ ಕುಲಶೇಖರಾಳ್ವಾರ್. ಇವರು ಅನಂತಶಯನದ ರಾಜರಾಗಿದ್ದರು. ಈಗಲೂ ತಿರುವಾಂಕೂರಿನ ಅರಸರು ತಮ್ಮ ಬಿರುದುಗಳಲ್ಲಿ ಕುಲಶೇಖರ ಎಂಬ ಒಂದು ಶಬ್ದವನ್ನು ಸೇರಿಸುತ್ತಾರೆ. ಕುಲಶೇಖರ ರಾಜನು ರಾಮಾಯಣವನ್ನು ಶ್ರವಣ ಮಾಡುತ್ತ ರಾವಣನು ಸೀತಾದೇವಿಯನ್ನು ಲಂಕೆಗೆ ಕೊಂಡೊಯ್ದ ಭಾಗವನ್ನು ಕೇಳಿ ಕಾತರನಾಗಿ ದೇವಿಯನ್ನು ಬಿಡಿಸಿಕೊಂಡು ಬರುವುದಕ್ಕೆ ಹೋಗೋಣ ಬನ್ನಿ ಎಂದು ಅಮಾತ್ಯನಿಗೆ ಸೇನಾಧಿಪತಿಗೆ ಹೇಳಿ ಕಡಲಿನೊಳಕ್ಕೆ ನಡೆದನಂತೆ. ನೀರಿನಲ್ಲಿ ಹತ್ತು ಹೆಜ್ಜೆ ಹೋಗುವ ವೇಳೆಗೆ ರಾಮಚಂದ್ರನು ತಮ್ಮನೊಡನೆ ಪತ್ನಿಯೊಡನೆ ಅವನ ಎದುರಿಗೆ ನಿಂತು "ದೇವಿಯನ್ನು ನಾನು ಕರೆದುಕೊಂಡು ಬಂದದ್ದಾಯಿತು. ಇಕೋ ನೋಡು" ಎಂದು ಹೇಳುತ್ತಾ ನಿಲ್ಲಿಸಿದನಂತೆ. ಹೀಗೆ ದೇವರ ದರ್ಶನವನ್ನು ಪಡೆದು ಅರಸನು ಅರಮನೆಗೆ ಹಿಂತಿರುಗಿದನು. ಇವನ ನಗರಿಯಿಂದ ಪ್ರತಿ ದಿನವೂ ಶ್ರೀರಂಗಕ್ಕೆ ಯಾತ್ರಿಕರು ತಂಡ ತಂಡವಾಗಿ ಹೋಗುತ್ತಿದ್ದರಂತೆ. ಈತನು ರಚಿಸಿದ ಅಥವಾ ರಚನೆ ಮಾಡಿಸಿದ ಮುಕುಂದಮಾಲೆಯು ಸರಳವೂ ಸುಂದರವೂ ಆಗಿರುತ್ತ ಸಂಸ್ಕೃತದ ಸ್ತೋತ್ರಮಾಲಿಕೆಗಳಲ್ಲಿ ಬಹು ಜನಕ್ಕೆ ಪ್ರಿಯವಾದ ಮತ್ತು ಆಪ್ಯಾಯಮಾನವಾದ ಸ್ತೋತ್ರವಾಗಿದೆ. ಕುಲಶೇಖರ ರಾಜನು ಸಂಸ್ಕೃತದ ಈ ಗ್ರಂಥದಂತೆ ತಮಿಳಿನಲ್ಲಿಯೂ ಸುಂದರವಾದ ಪದ್ಯಗಳನ್ನು ರಚಿಸಿದನು. ಅವುಗಳಲ್ಲಿ ಕಾಣುವ ಭಕ್ತಿಯೂ ಅಗಾಧವಾದದ್ದು. ಕಣ್ಣಪುರದ ರಾಮಚಂದ್ರನಿಗೆ ಈತನು ಹೇಳಿದ ಜೋಗುಳ ಇದು:

ಯಶವನು ತಳೆದಾ ಸಿರಿಕೌಸಲ್ಯೆಯ ರತ್ನಗರ್ಭದಲಿ ಮೂಡಿದನೇ
ತೆಂಕಣ ಲಂಕೆಯ ದೊರೆಯ ತಲೆಗಳನು ಕಡಿದು ನೆಲಕೆ ಚೆಲ್ಲಿಸಿದವನೇ
ಚೆಂಬೊನ್ನಪ್ಪಿದ ಕೊತ್ತಳ ಸುತ್ತಿನ ಕಣಪುರದ ನನ್ನ ಕರುಮಣಿಯೇ
ನನ್ನ ಕಾದ ಓ ಇನಿಯಮುದೇ ರಾಘವನೇ ಜೋ ಜೋ ಜೋ

ಕಂಪು ಬೀರುವಾ ಕರಿಯ ಕುರುಳ ಕೌಸಲ್ಯೆಯ ಕುಲದುದ್ಧಾರಕನೇ
ನಿತ್ಯವಾದ ವಿಖ್ಯಾತಿಯ ಜನಕನ ಮಣವಾಳಾ ಓ ದಾಶರಥೀ
ಗಂಗೆಗೆ ಮಿಕ್ಕಿಹ ಪಾವನತೀರ್ಥದ ಕಣಪುರದ ನನ್ನ ಕರುಮಣಿಯೇ
ನಮ್ಮ ಕುಲದಸವಿಯಮುದೇ ಓ ರಾಘವನೇ ಜೋ ಜೋ ಜೋ

ನೆಲದಾಳ್ವಿಕೆಯಾ ಹಿರಿದಹ ಸಿರಿಯನು ಭಕ್ತಭರಿತ ಭರತಗೆ ಬಿಟ್ಟು
ಆರದ ಒಲವಿನ ಲಕ್ಷ್ಮಣನೊಡನೆ ದಟ್ಟವಾದ ಕಾಡಲಿ ಹೊಕ್ಕೆ
ಶ್ರೀಯಾಳುವ ಉರುಹರಹಿನ ಎದೆಯ ಸಿರಿ ಕಣಪುರದ ಅಳ್ದರಸೇ
ಹಾರದಿಂದ ಮೆರೆಯುವ ನೀಳ್ಮುಡಿಯಾ ದಾಶರಥೀ ಜೋ ಜೋ ಜೋ

ಆಲದ ಎಲೆಯಲಿ ಬಾಲಕನಾಗಿ ಅಂದು ಲೋಕಗಳ ಉಂಡವನೇ
ವಾಲಿಯ ಕೊಂದು ಅವನ ತಮ್ಮನಿಗೆ ಅರಸಾಳ್ವಿಕೆಯನು ಕೊಟ್ಟವನೇ
ಗಾಳಿ ಕಡಲ ಮಣಿಘಟ್ಟದಲಲೆಸುವ ಕಣಪುರದ ನನ್ನ ಕರುಮಣಿಯೇ
ಆಲಿನಗರದಾ ಅಧಿಪತಿಯೇ ಅಯೋಧ್ಯೆಯ ದೊರೆಯೇ ಜೋ ಜೋ ಜೋ

ದೇವರೇನು ಅಸುರರು ಏನುಳಿದಾದೆಸೆಯೇನೆಲ್ಲವ ಪಡೆದವನೇ
ಎಲ್ಲ ಬಂದು ಅಡಿಗೆರಗುವಂದದಲಿ ರಂಗಧಾಮದಲಿ ಪಟ್ಟವನೇ
ಕಾವೇರಿಯ ಒಳು ಹೊಳೆ ಹರಿಯುತಲಿಹ ಕಣಪುರದ ನನ್ನ ಕರುಮಣಿಯೇ
ಎಚ್ಚಮಾತ್ರದಲಿ ಕೊಲುವ ಕೂರ್ಗಣೆಯ ವೀರ ರಾಘವಾ
ಜೋ ಜೋ ಜೋ

೮

ಶ್ರೀರಂಗದ ದೇವಾಲಯವನ್ನು ಕಟ್ಟಿಸಿದ ತಿರುಮಂಗೈ ಎಂಬ ಮಹನೀಯನು ಇನ್ನೊಬ್ಬ ಆಳ್ವಾರು. ಇವನು ಕಳ್ಳರು ಎಂಬ ಕುಲದವನು. ದಾರಿ ನಡೆಯುವ ಜನರನ್ನು ತಡೆದು ನಿಲ್ಲಿಸಿ ಹಣಕಾಸು ಒಡವೆ ವಸ್ತುಗಳನ್ನು ಸುಲಿದು ಜೀವನವನ್ನು ನಡೆಸುತ್ತಿದ್ದನಂತೆ. ಇವನ ಪ್ರಿಯೆ ವಿಷ್ಣುಭಕ್ತಳಾದ ಕಾರಣದಿಂದ ಇವನು ವೈಷ್ಣವರಿಗೆ ಅನ್ನದಾನ ಮಾಡತೊಡಗಿದನು. ಅವರ ಸಂಪರ್ಕದಿಂದ ತಾನೂ ವಿಷ್ಣುಭಕ್ತನಾದನು. ಆದರೂ ದರೋಡೆ ಸುಲಿಗೆಯನ್ನು ಬಿಡಲಿಲ್ಲ. ತಪ್ಪುದಾರಿಯಲ್ಲಿ ಹೋಗುತ್ತಿರುವ ತನ್ನ ಭಕ್ತನನ್ನು ಉದ್ಧರಿಸಬೇಕೆಂದು ದೇವರು

ಲಕ್ಷ್ಮೀ ಸಮೇತನಾಗಿ ದಾರಿ ನಡೆದು ಬಂದನಂತೆ. ಭಕ್ತನು ಆ ದಂಪತಿಗಳನ್ನು ತಡೆದು ನಿಲ್ಲಿಸಿ ಒಡವೆ ವಸ್ತುಗಳನ್ನೆಲ್ಲ ಕಸುಕೊಂಡು ಆ ಒಡವೆಗಳನ್ನು ದೇವರಿಗೆ ಸಮರ್ಪಿಸುವುದಕ್ಕೆ ಗುಡಿಗೆ ತೆಗೆದುಕೊಂಡು ಹೋದನು. ಆ ವೇಳೆಗೆ ದೇವಾಲಯದಲ್ಲಿ ಕೆಲವು ಒಡವೆಗಳು ಕಾಣದೆ ಅವನ್ನು ಯಾರೋ ಕದ್ದುಕೊಂಡು ಹೋಗಿದ್ದಾರೆಂದು ಗಲಭೆಯಾಗಿತ್ತು. ಈ ಭಕ್ತನು ತಂದ ಒಡವೆಗಳನ್ನು ಮಂದಿರದ ಚಾಕರರು ಅಲ್ಲಿಂದ ಕಳೆದು ಹೋಗಿದ್ದ ಒಡವೆ ಎಂದು ಗುರುತಿಸಿದರು. ಒಡವೆ ನಿನಗೆ ಹೇಗೆ ಬಂದಿತೆಂದು ಅವರು ವಿಚಾರಿಸಿದಾಗ ಭಕ್ತನಿಗೆ ತನ್ನ ಸುಲಿಗೆಗೆ ಒಳಗಾದ ದಾರಿಹೋಕರು ತನ್ನ ದೇವರೆಂದು ತಿಳಿಯಿತು. ಆಮೇಲೆ ಅವನು ಜನರಿಂದ ಸುಲಿಗೆ ಮಾಡುವುದನ್ನು ಬಿಟ್ಟನು. ಭಕ್ತಿ ನಿರಂತರವಾಗಿ ಬೆಳೆದು ಇವನು ಕೊನೆಗೆ ಆಳ್ವಾರಾಗಿ ಮುಕ್ತನಾದನು. ಶ್ರೀರಂಗದ ದೇವಾಲಯವನ್ನು ಕಟ್ಟಿಸುವುದಕ್ಕೆ ಸಾವಿರಾರು ಜನರನ್ನು ಒಟ್ಟುಗೂಡಿಸಿ ಇವನು ಕೆಲಸವನ್ನು ನಡೆಯಿಸಿದನಂತೆ. ಕೆಲಸಮಾಡಿದವರು ತಮಗೆ ಬರಬೇಕಾದ ಕೂಲಿಗಾಗಿ ಗಲಭೆ ಮಾಡಲು ಕೊಡುವುದಕ್ಕಿಲ್ಲದೆ ಇವನು ಅವರನ್ನು ಬೇರೆ ಒಂದು ಊರಿಗೆ ಕರೆದುಕೊಂಡು ಹೋಗಿ ಅಲ್ಲಿ ಕೊಡುವುದಾಗಿ ದೋಣಿಯಮೇಲೆ ಕೂರಿಸಿ ಕಾವೇರಿಯ ಮಧ್ಯಕ್ಕೆ ಕರೆದೊಯ್ದು ಅಲ್ಲಿ ದೋಣಿಯನ್ನು ತಲಕೆಳಗು ಮಾಡಿ ಎಲ್ಲರನ್ನೂ ಸಾಯಿಸಿದನೆಂದೂ, ಇಂಥ ಕೆಲಸ ಮಾಡಿದನೆ ಎಂದು ಯಾರೋ ಜನರು ದೂಷಿಸಿದಾಗ "ಅವರ ಕೂಲಿ ಸಂದಾಯವಾಗಿದೆ; ಅವರೇ ಒಪ್ಪಿಕೊಳ್ಳುತ್ತಾರೆ ಕೇಳಿ" ಎಂದು ಇವನು ಹೇಳಿದನೆಂದೂ, ನದಿಯಲ್ಲಿ ತೀರಿಹೋದವರ ಆತ್ಮಗಳು ಅಂತರಿಕ್ಷದಿಂದ "ಹೌದು ನಮಗೆ ಬರತಕ್ಕದ್ದೇನೂ ಇಲ್ಲ. ನಮ್ಮ ಕೆಲಸಕ್ಕೆ ಪ್ರತಿಯಾಗಿ ನಮಗೆ ವೈಕುಂಠ ದೊರಕಿತು" ಎಂದು ಕೂಗಿ ಹೇಳಿದವೆಂದೂ ಸಂಪ್ರದಾಯದಲ್ಲಿ ಆಖ್ಯಾನವಿದೆ. ಇದು ಆಮೇಲಣ ವೈಷ್ಣವರ ಚಮತ್ಕೃತಿಯಿಂದ ಕಲ್ಪಿತವಾದ ಕಥೆಯೆಂದು ಕಾಣುತ್ತದೆ. ನಮ್ಮ ಮತಗಳ ಇತಿಹಾಸಗಳು ಈ ರೀತಿಯ ವಿಪರೀತ ಕಥಾನಕಗಳಿಂದ ಭಕ್ತರ ಮಹಿಮೆಯನ್ನು ಹೆಚ್ಚಿಸುವುವೆನ್ನುವುದು ಸರ್ವರಿಗೂ ತಿಳಿದ ವಿಷಯ. ತಿರುಮಂಗೈ ಆಳ್ವಾರು ನಮ್ಮಾಳ್ವಾರಂತೆ ಒಂದು ಸಾವಿರದಷ್ಟು

ಪದ್ಯಗಳನ್ನು ರಚಿಸಿದರು. ನಾರಾಯಣಾ ಎಂಬ ಹೆಸರಿನಿಂದ ತಾನು ಉದ್ಧಾರವಾದೆನೆಂದು ಇವರು ಹೇಳುವ ಪದ್ಯವೊಂದು ತಿರುವೇಂಗಡದ ದೈವವನ್ನು ಕುರಿತ ಬಿನ್ನಪವೊಂದು ನಿತ್ಯಾನುಸಂಧಾನದಲ್ಲಿ ಸೇರಿವೆ. ಇವುಗಳಲ್ಲಿ ಕೆಲವು ನುಡಿಗಳ ಅರ್ಥವನ್ನು ಇಲ್ಲಿ ಕೊಟ್ಟಿದೆ:

> ಬಾಡಿದೆನು; ಬಾಡಿ ಮನಮುರುಗಿದೆನು. ಹಿರಿಯ ದೂಸರ ಈ ಬಾಳಿನಲ್ಲಿ ಹುಟ್ಟಿ
> ಕೂಡಿದೆನು; ಹರೆಯದ ಹೆಣ್ಗಳನ್ನು ಕೂಡಿ ಅವರು ಕೊಡುವ ಸಂಬಂಧವನ್ನೇ ಆಶಿಸಿ.
> ಓಡಿದೆನು; ಓಡಿ ಉಳಿಸುವ ಒಂದು ವಸ್ತುವಿನಿಂದ ಜ್ಞಾನವೆಂಬ ಹಿರಿಯ ಪದವಿಯನ್ನು ತಿಳಿದು.
> ನಾಡಿದೆನು; ನಾಡಿ ನಾನು ಕಂಡುಕೊಂಡೆನು ನಾರಾಯಣಾ ಎಂಬ ಹೆಸರನ್ನು.
>
> ಇದು ಜೀವವೋ ಅಮೃತವೋ ಎಂದು ಎಣಿಸಿ ಕರಗಿ ಆಯಾ ಹೆಣ್ಗಳ ಎದೆಯನ್ನೇ ಗತಿಯೆನ್ನುತ್ತ
> ಪಾಪಿಯಾದ ನಾನು ತಿಳಿಯದೆ ಇರಲು ಎಷ್ಟು ದಿನ ಹಳದಾಗಿ ಎಷ್ಟು ದಿನ ನಷ್ಟವಾಯಿತು !
> ರಕ್ಕೆಗೂಡಿದ ಅಂಚೆ ಜೊತೆಯ ಹಕ್ಕಿಯೊಂದಿಗೆ ಹೊಣರುವ ಸುತ್ತು ಹೊನಲಿನ ಕೊಡಂದೆಯನ್ನು ಸೇವಿಸಿ.
> ನನ್ನ ನಾಲಿಗೆಯಿಂದ ಬದುಕಿಕೊಳ್ಳುವುದಕ್ಕೆ ಕಂಡುಕೊಂಡೆನು ನಾನು ನಾರಾಯಣಾ ಎಂಬ ಹೆಸರನ್ನು.
>
> ಕಳ್ಳನು ನಾನು, ಕೆಡಕುಮಾಡಿದೇನೆ, ಕಂಡವಿಷಯಕ್ಕೆ ಅಲೆದಿದೇನೆ: ನಿಜ.
> ಆದರೂ ತಿಳಿದವನಾದೆನು. ಉದ್ಧಾರವಾಗುವ ಮಾರ್ಗವನ್ನು ಸೇರಿದೆನು.
> ಬೇಗನೆ ದೇವರ ಅನುಗ್ರಹವನ್ನು ಪಡೆದೆನು.
> ಒಳಗೆಲ್ಲ ಕರಗಿ ಕೊರಲು ಸಡಿಲವಾಗಿ ದನಿಗೆಟ್ಟು ಮೈಯೆಲ್ಲ ಕಣ್ಣೀರು ಸೇರಿರಲು.
> ಕಗ್ಗತ್ತಲ ರಾತ್ರಿಯಲ್ಲಿ ಹಗಲಲ್ಲಿ ನಾನು ಕರೆಯುತ್ತಿರುವೆನು ನಾರಾಯಣಾ ಎಂಬ ಹೆಸರನ್ನು.
>
> ನನ್ನ ಹಿರಿಯ, ತಂದೆ, ನನ್ನ ಬಂಧು, ಅರಸು, ನನ್ನ ಉಸಿರು
> ತನ್ನ ಬಾಣದಿಂದ ರಾಕ್ಷಸರು ಅಂಜುವಂತೆ ಅವುಕಿ ಅವರುಸಿರನ್ನು ತೆಗೆದ ನಮ್ಮ ಅಣ್ಣನು:
> ನರುಗಂಪಿನ ತೋಟದ ಆಳವಾದ ಅಗಳ ತಂಜೆಯೂರಿನ ಮಹಾಮಣಿಯು ದೇಗುಲಕ್ಕೆ ತಲೆಬಾಗಿ.
> ನಾನು, ಓ ಭಕ್ತರೇ, ಉಳಿದುಕೊಂಡೆನು: ಕಂಡುಕೊಂಡೆನು ನಾರಾಯಣಾ ಎಂಬ ಹೆಸರನ್ನು.

ಇರುವ ಬಾಳನ್ನು ಅರಿಯಿರಿ; ಇವರವರೆನ್ನದಿರಿ; ಇನ್ನದೊಂದು ಹಿರಿಮೆ
ಯೆಂದು ತಿಳಿಯದಿರಿ;
ಕಲ್ಪಕವೆಂದು ಬಲ್ಲವನೆಂದು ರಕ್ಷಕನೆಂದು ಲೋಕದಲ್ಲಿ ಕಂಡವರನ್ನು
ಕಂಡಂತೆ ಹೊಗಳುವ ಮಾತೆಲ್ಲ ಸತ್ಯವೆನ್ನದಿರಿ;
ಹೇಳುವೆನು, ಬನ್ನಿ: ಸುತ್ತು ಹೊನಲಿನ ತಿರುಕೊಡಂದೆಯನ್ನು ಸೇವಿಸಿ
ಒಳ್ಳೆಯದನ್ನು ಕಾಣಿ;
ಉಳಿಯುವುದಕ್ಕೆ ಹಾಡಿ ನಾರಾಯಣಾ ಎಂಬ ಹೆಸರನ್ನು.

ಕಲೆಗಳನ್ನು ಕಲಿತವನಲ್ಲ ನಾನು: ಐದು ಪೊಲನು ಎಳಸುವ ಆಸೆಗಳಿಗೆ
ಮನವನ್ನು ತಿರುಗಿಸಿದೆನು.
ದೀನನಾದ ನಾನು ಈ ಕಾರಣದಿಂದ ನಲ್ಮೆಯನ್ನು ಪಡೆಯದಾದೆನು.
ವಿಸ್ತಾರವಾದ ಈ ಭೂಮಿಯ ಅನೇಕ ಜೀವಿಗಳಿಗೆ ಕೆಟ್ಟದ್ದನ್ನೇ
ಪ್ರಾರ್ಥಿಸಿ ತಿರುಗುತ್ತಿದ್ದೆನು.
ಹೀಗಿದ್ದು ನಾನು ಮೂರ್ಪಟ್ಟೆನು. ಒಳ್ಳೆಯ ಗತಿಗೆ ಬಾಳಿಸುವ ದಾರಿಯನ್ನು
ಚಿಂತಿಸಿ ಒಳ್ಳೆಯ ನೆಲೆಯೆಂದು
ಹಿಡಿದೆನು ದಾಸನಾದ ನಾನು ನಾರಾಯಣಾ ಎಂಬ ಹೆಸರನ್ನು.

ಕುಲವನ್ನು ಕೊಡುವ, ಸಿರಿಯನ್ನು ತಂದಿಡುವ, ನಂಬಿದವರು ಪಡುವ
ದೂಸರನೆಲ್ಲ ನೆಲಮಟ್ಟಮಾಡುವ,
ಉನ್ನತಸ್ಥಿತಿಯನ್ನು ಅನುಗ್ರಹಿಸುವ, ಅನುಗ್ರಹದೊಡನೆ ಹಿರಿಯ
ಪದವಿಯನ್ನು ಕೊಡುವ, ಬಲವನ್ನು ನೀಡುವ,
ಇನ್ನೆಲ್ಲವನ್ನೂ ತಂದಿಡುವ, ಹೆತ್ತ ತಾಯಿಗಿಂತ ಹೆಚ್ಚಿನ ಹಿತವನ್ನು
ಗೆಯ್ಯುವ, ಆನಂದವನ್ನು ತರುವ,
ಸೊಲ್ಲ ಕಂಡುಕೊಂಡೆನು ನಾನು, ನಾರಾಯಣಾ ಎಂಬ ಹೆಸರನ್ನು.

ಎರಳೆಗಣ್ಣ ಹರೆಯದ ಹೆಣ್ಗಳ ಮಯಕದಲ್ಲಿ ಬಿದ್ದು
ಠಾಜನಾದ ನಾನು ನಾನಾ ವಿಧ ನರಕವನ್ನು ಹೊಗುವ ಪಾಪವನ್ನು
ಗೆಯ್ದೆನು.
ಜೇನು ಸರಿಯ ಹೂದೋಟ ಸುತ್ತಿರುವ ತಿರುವೇಂಗಡದ ಮಹಾಗಿರಿಯ
ನನ್ನಾನೆಯೇ
ಸಾರಿದೆನು, ಸೇರಿದೆನು; ಅಡಿಯ ಈ ನನ್ನನ್ನು ಆಳಾಗಿ ಮಾಡಿಕೊಳು;
ಅನುಗ್ರಹಿಸು.

ತಿಳುವಳಿಕೆಯಿಲ್ಲದ ಕಾರಣ ನಾನು ಹಲ ಜೀವವನ್ನು ಕೊಂದೆನು.
ಎಂದಾದರೂ ಬೇಡಿದವರಿಗೆ ಒಳ್ಳೆಯದನಾಡಿ ಅರಿಯೆನು.

ಗಿರಿಯನ್ನು ಮುತ್ತಿದ ಮೇಘ ಗರ್ಜಿಸುವ ತಣ್ಮಲೆಯ ವೇಂಕಟಾ ಸಾರಿದೆನು
ಸೇರಿದೆನು. ಅಡಿಯವನು ನನ್ನನ್ನು ಆಳುಮಾಡಿಕೊಳು;
ಅನುಗ್ರಹಿಸು.

ಹಲ ವಿಧದ ಯಾವ ಯಾವ ಪಾಪಗಳನೋ ಮಾಡಿ ನಮೆದೆನು.
ಶಕ್ತನಾದ ನಿನ್ನಡಿಯನ್ನುತೊಡರಿ ಹೊಗಳುವ ಮನೋಧರ್ಮವಿಲ್ಲದಾದೆನು.
ಬಲುಹರಹ ಬೋರ್ಗಲ್ಲು ಸುತ್ತಿರುವ ವೇಂಗಡದ ಮಾಮಲೆಯ ನನ್ನ ಅಪ್ಪಾ
ಬಂದು ಸೇರಿದೆನು; ಅಡಿಯವನು ನನ್ನನ್ನು ಆಳುಮಾಡಿಕೊಂಡು
ಅನುಗ್ರಹಿಸು.

ಇಲ್ಲಿಯೂ ಭಕ್ತಿಗೆ ಸರಿಸಮನಾಗಿ ಪ್ರಕೃತಿ ಸೌಂದರ್ಯದ ಪರಿಜ್ಞಾನ ವಿದೆ. ತಿರುಮಂಗೈಯಾಳ್ವಾರ ತಿರುವೇಂಗಡ ಆಕಾಶವನ್ನು ಮುಟ್ಟು ವಂತೆ ನೀಳವಾದ ಶಿಖರವುಳ್ಳ ಪರಿಮಳಿಸುವ ತಿರುವೇಂಗಡ; ಆನೆಗಳು ಸೇರುವ ಹೂದೋಟಗಳು ಸುತ್ತಿರುವ ಘನ ಮಹಾಗಿರಿಯ ತಿರುವೇಂಗಡ; ಕೊಂಬೆಗಳಲ್ಲಿ ಜೇನು ಹರಿದು ಸುರಿಯುವ ತಣ್ತೋಟಗಳ ಸುತ್ತಿನ ತಿರುವೇಂಗಡ; ಬಂಡೆಯಲ್ಲಿ ಹರಿದು ಸುರಿಯುವ ಜೇನಿನ ತಾವರೆಯ ದೊಣೆಗಳ ತಿರುವೇಂಗಡ. ಹಾಗೆಯೇ ತಿರುವಳ್ಳಿಕ್ಕೇಣಿಯ ವರ್ಣನೆ ಪಾರ್ಥಸಾರಥಿಯ ಸ್ತೋತ್ರದೊಂದಿಗೆ ಬೆರೆತಿದೆ:

ವೇದನನ್ನು, ವೇದದ ಇನಿಯ ಚೆಲುವ ಫಲನನ್ನು,
ಮುನಿವರರು ಅನುಭವಿಸುವ ನಿರ್ದುಷ್ಟವಾದ ಸೀಯ ಸವಿಯನ್ನು,
ನಂದಗೋಪನ ಮರಿಯಾನೆಯನ್ನು, ಭೂಮಿಯೆಲ್ಲ ಸೇವಿಸಿ ಹೊಗಳುವ
ಆದಿಯನ್ನು,
ಅಮೃತವನ್ನು, ನನ್ನನ್ನಾಳುಮಾಡಿಕೊಂಡ ಅಪ್ಪನನ್ನು,
ಸಾಟಿಯಿಲ್ಲದ ಚೆಲುವೆಯರು ಬಾಳುವ ಮಾಡಗಳ ಮಯಿಲಾಪುರ
ತಿರುವಳ್ಳಿಕ್ಕೇಣಿಯಲ್ಲಿ ನಾನು ಕಂಡೆನೇ.

ಆ ತಿರುವಳ್ಳಿಕ್ಕೇಣಿ ಚೆಲುವೆಯರನ್ನು ಉಳ್ಳಂತೆ ಚೆಲುವನ್ನೂ ಉಳ್ಳದ್ದು: ಅದು ಕುರವದ ಹೂ ಕಮರುವ ತಣ್ಣನೆಯ ತೋಟಗಳ ಊರು; ಕೋಗಿಲೆಯೊಡನೆ ನವಿಲುಗಳು ನಿಂತು ಕೂಗುವ ತಾಣ; ನೇಸರ ಕಿರಣ ನುಸುಳಿ ಅರಿಯದ ನೆರಳಿನ ನೆಲೆ.

೯

ತಿರುಪಾಣಿ ಎಂಬವನು ಇನ್ನೊಬ್ಬ ಭಕ್ತನು. ಈತನು ಅಂತ್ಯಜನಾಗಿ ಹುಟ್ಟಿದನೆಂದೂ ವಿಷ್ಣುಭಕ್ತಿಯಿಂದ ಮಹಿಮಾವಂತನಾಗಿ ಬೆಳೆದನೆಂದೂ ದೇವಾಲಯದ ಹೊರಗಡೆ ನಿಂತಿದ್ದ ಇವನನ್ನು ಒಂದು ದಿನ ದಾರಿ ಬಿಡಲಿಲ್ಲವೆಂಬ ಕಾರಣದಿಂದ ಆಲಯದ ಅರ್ಚಕನೊಬ್ಬನು ಕಲ್ಲಿನಿಂದ ಹೊಡೆದನೆಂದೂ ತನ್ನ ಭಕ್ತನನ್ನು ಒಳಗೆ ತಂದಲ್ಲದೆ ತನಗೆ ಪೂಜೆ ಬೇಡವೆಂದು ದೇವರು ಅಪ್ಪಣೆಮಾಡಲಾಗಿ ಆಲಯದ ಸರ್ವಾಧಿಕಾರಿಯಾದವನು ಇವನನ್ನು ತನ್ನ ಭುಜದಮೇಲೆ ಕೂರಿಸಿಕೊಂಡು ಆಲಯದೊಳಕ್ಕೆ ಕರೆದುಕೊಂಡುಹೋದನೆಂದೂ, ಪಾಣಿ ರಂಗನಾಥನನ್ನು ಆಪಾದಮಸ್ತಕವಾಗಿ ನೋಡಿ ಅನುಭವಿಸಿ ನನ್ನ ರಂಗನನ್ನು ಕಂಡ ಈ ಕಣ್ಣುಗಳು ಬೇರೆ ಏನನ್ನೂ ಕಾಣಲಾರವು ಎಂದು ಮುಂದೆ ಹೋಗಿ ದೇವರಲ್ಲಿ ಲೀನವಾದನೆಂದೂ ಸಂಪ್ರದಾಯ ಹೇಳುತ್ತದೆ. ಈತನ ಮುಕ್ತಿಯ ದಿನದ ಸಂಗತಿಯನ್ನು ವಸ್ತುವಾಗಿ ಮಾಡಿಕೊಂಡು ನಾನು ಸಣ್ಣ ಒಂದು ದೃಶ್ಯವನ್ನು ರಚಿಸಿದೇನೆ. ರಂಗನನ್ನು ಕಂಡ ಆನಂದದಲ್ಲಿ ಆಳ್ವಾರು ಅವನನ್ನು ವರ್ಣಿಸಿ ಹತ್ತು ಪದ್ಯಗಳನ್ನು ಹೇಳಿದರಂತೆ. ಅವು ಅಮಲನಾದಿ ಪಿರಾನ್ ಎಂಬ ಮಾತುಗಳಿಂದ ಆರಂಭವಾಗುತ್ತವೆಯಾದದ್ದರಿಂದ ಆ ಪದ್ಯಮಾಲೆಯನ್ನು ಅದೇ ಹೆಸರಿನಿಂದ ಕರೆಯುತ್ತಾರೆ. ಈ ಹತ್ತು ಪದ್ಯಗಳೂ ನಿತ್ಯಾನುಸಂಧಾನದಲ್ಲಿ ಸೇರಿವೆ; ಈಗಲೂ ದೇವಾಲಯಗಳಲ್ಲಿ ಪೂಜೆಯ ವೇಳೆಗೆ ಇವನ್ನು ಹಾಡುತ್ತಾರೆ. ಇವುಗಳ ಅನುವಾದವನ್ನು ಇಲ್ಲಿ ಕೊಟ್ಟಿದೆ:

ಅಮಲನು ಆದಿ ಹಿರಿಯನು ಅಡಿಯವರಿಗೆ ನನ್ನನ್ನು ಆಳುಪಡಿಸಿದ
ವಿಮಲನು, ನಿತ್ಯಸೂರಿಗಳ ನಾಥನು, ತುಂಬು ಸುಗಂಧದ ತೋಟಗಳ
ವೇಂಗಡದಾತನು,
ನಿಮಲನು ನಿರ್ಮಲನು ನೀತಿಬಾನವನು, ನೀಳವಾದ ಪ್ರಾಕಾರದ ರಂಗದ
ಅಮ್ಮ,
ಇವನ ಸಿರಿಯಡಿತಾವರೆ ಬಂದು ನನ್ನ ಕಣ್ಣಿನ ಒಳಗೆ ಹೊಕ್ಕಿರುವುದೇ.

ಅನಾಯಾಸವಾಗಿ ಲೋಕವನ್ನು ಅಳೆದು ಬ್ರಹ್ಮಾಂಡ ಒರೆಯುವಂತೆ
ನಿಮಿರಿದ ನೀಳ್ಮುಡಿಯವನು, ಅಂದು ಎದುರಿಸಿದ ನಿಶಾಚರರನ್ನು
ಕವರಿದ ಸುಡುಕಣೆಯ ಕಾಕುತ್ಸ್ಥನು ಕಡುಗಂಪಿನ ತೋಟಗಳ ರಂಗದ
ಅಮ್ಮನು,
ಇವನ ನಡುವಿನ ಕೆನ್ನರಿವೆಯ ಮೇಲೆ ಸೇರಿದ್ದಾಯಿತು ನನ್ನ ಚೇತನ.

ಮಂದಿ ಹಾಯುವ ವಡ ವೇಂಗಡ ಮಾಮಲೆಯಲ್ಲಿ ಬಾನವರು
ಆರಾಧಿಸಲು ನಿಂತವನ, ರಂಗದಲ್ಲಿ ಹಾವ ಹಾಸುಮಾಡಿದವನ,
ಸಂಜೆಗೆ ಎಣೆಯಾಗಿ ಹೊಳೆವ ಪೀತಾಂಬರ, ಅದರಮೇಲೆ ಅಜನನ್ನು
ಪಡೆದ ಒಂದು ಚೆಲುವಿನ
ಹೊಕ್ಕುಳು, ಇವುಗಳ ಮೇಲೆ ಇದೆ ಅಲ್ಲವೆ ಈ ದಾಸನ ಚೇತನ.

ಚತುರ ಮಹಾಪ್ರಾಕಾರದ ಸುತ್ತಿನ ಲಂಕೆಯ ರಾಜನ ತಲೆ ಹತ್ತನ್ನು
ಉದಿರ ಓಡಿಸಿದ ಒಂದು ಕೂರ್ಗಣೆಯನ್ನೆಚ್ಚವನು, ಕಡಲ ಬಣ್ಣದವನು,
ತುಂಬಿ ಮಧುರವಾಗಿ ಹಾಡುವ ಮಾನವಿಲು ಆಡುವ ಅರಂಗದ
ಅಮ್ಮನು,
ಇವನ ಸಿರಿಬಸಿರ ಉದರಬಂಧ ನನ್ನ ಮನದೊಳಗೆ ನಿಂತು ನಲಿಯುತಿದೆ.

ಭಾರವಾದ ಹಳೆಯ ಪಾಪದ ಅಂಟನ್ನು ಬಿಡಿಸಿ ನನ್ನನ್ನು ತನ್ನ
ಕುಳಮಾಡಿ ನಿಲ್ಲಿಸಿದನು; ನಿಲ್ಲಿಸಿದ್ದಲ್ಲದೆ ನನ್ನ ಒಳಗನ್ನು ಹೊಕ್ಕನು.
ಘೋರ ಮಹಾತಪವನ್ನು ಮಾಡಿದ ಪುಣ್ಯವೇನನ್ನೂ ಅರಿಯೆನು. ರಂಗದ
ಅಮ್ಮನು
ಸಿರಿ ಮಿಗುವ ಎದೆ ತಾನಾಗಿ ಅಲ್ಲವೇ ದಾಸನನ್ನು ಆಳ್ ಕೊಂಡಿತು.

ತುಂಡಿನ ಬೆಳು ಹೆರೆಯ ಹರನ ದೂಸರ ತೀರಿಸಿದವನು, ಚೆಲು ಗರಿಯ
ತುಂಬಿ ಬಾಳುವ ತೋಟ ಸುತ್ತಿದ ರಂಗನಗರದಲ್ಲಿ ಮಲಗಿದ ಅಪ್ಪನು,
ಅಂಡಾಂಡಗಳ ಬಹಿರಂಡದ ಒಂದು ಮಹಾನೆಲ ಏಳು
ಕುಲಪರ್ವತದಲ್ಲಿಲವವನ್ನು ಬಿಡದೆ
ಉಂಡ ಕಂಠವು, ಕಂಡಿರಾ, ದಾಸನನ್ನು ಉಳಿಸಲು ಕೊಂಡಿತು.

ಕೈಯ ಹಿರಿಯ ಬಲಮುರಿಶಂಖ ಕನಲ ಚಕ್ರದವರು, ನಿಡು ಅರೆಯಂತ
ಮೆಯ್ಯಪರು, ತುಂಬು ಸುಗಂಧದ ತುಳಸಿಯ ಕಂಪಿನ ನೀಳು
ಮುಡಿಯ ನಮ್ಮ
ಅಯ್ಯನವರು, ಅಣಿಯ ರಂಗದವರು, ಹಾವಿನ ಅಣಿ ಹಾಸಿನಲ್ಲಿ ಮಲಗಿದ
ಮಾಯನವರು,
ಇವರ ಕೆನ್ನ ಬಾಯಿ ಆಹಾ ನನ್ನ ಚೇತನವನ್ನು ಕವರಿತೇ.

ಬಲಿತು ಬಂದ ಹಿರಣ್ಯಕಶಿಪುವಿನ ಒಡಲನ್ನು ಸೀಳಿದ, ಅಮರರಿಗೆ
ಅರಿಯದ ಆದಿಹಿರಿಯನ, ರಂಗದ ಅಮಲನ, ಮುಖದ
ಕರಿಯವಾದ ವಿಶಾಲವಾದ ಮಿಳಿರುವ ಕೆಂಪಾದ ನೀಳ
ಈ ಹಿರಿಯ ಕಣ್ಣುಗಳು ನನ್ನನ್ನು ಊಳಿಗವಾಗಿ ಮಾಡಿಕೊಂಡವೇ.

ಆಲದ ಮಾಮರದ ಎಲೆಯ ಮೇಲೆ ಓರ್ವ ಬಾಲಕನಾಗಿ
ಜಾಲವೇಳನ್ನು ಉಂಡವನ, ರಂಗದಲ್ಲಿ ಹಾವ ಹಾಸಿದವನ,
ಕೋಲವಾದ ಮಾಮಣಿಹಾರವೂ ಮುತ್ತಿನದಾಮವೂ ಮುಡಿನಿಲ್ಲದ
ಒಂದಂದದ
ನೀಲದ ಒಡಲು, ಆಹಾ, ತುಂಬಿಕೊಂಡವೇ ನನ್ನ ಹೃದಯವನ್ನು.

ನೀರುಂಡ ಮೇಘದ ಬಣ್ಣದವನು, ಗೋವಲನಾಗಿ ಬೆಣ್ಣೆಯುಂಡ
ಬಾಯವನು, ನನ್ನೊಳಗನ್ನು ಕವರಿದವನು, ಬ್ರಹ್ಮಾಂಡದ ಅಧಿಪತಿ
ಅಣಿಯ ರಂಗನು, ನನ್ನ ಅಮಲನು,
ಇವನನ್ನು ಕಂಡ ಕಣ್ಣಗಳು ಮತ್ತೊಂದನ್ನೂ ಕಾಣವು.

೧೦

ಇನ್ನೊಬ್ಬ ಆಳ್ವಾರು ತೊಂಡರಡಿಪ್ಪೊಡಿ ಎಂಬ ಬಿರುದಿನವರು. ತೊಂಡರಡಿಪ್ಪೊಡಿ ಎಂದರೆ ಭಕ್ತರ ಅಂಘ್ರಿಯ ರೇಣು ಎಂದು. ಇವನನ್ನು ಸಂಸ್ಕೃತದಲ್ಲಿ ಭಕ್ತಾಂಘ್ರಿರೇಣು ಎಂದು ಕರೆದಿದಾರೆ. ಈತನು ಚಿಕ್ಕಂದು ಶೀಲವಂತನಾದ ತಾತನ ರಕ್ಷಣೆಯಲ್ಲಿ ಬೆಳೆದನು; ಬಹು ನಿಷ್ಠಾವಂತ ನಾಗಿದ್ದನು. ಇವನು ತರುಣನಾಗುವ ವೇಳೆಗೆ ಇವನೂ ಇವನ ತಾತನೂ ತಮ್ಮ ಗ್ರಾಮದಿಂದ ಶ್ರೀರಂಗಕ್ಕೆ ಬಂದು ಅಲ್ಲಿ ಒಂದು ಹೂ ತುಳಸಿಯ ತೋಟವನ್ನು ಮಾಡಿಕೊಂಡು ದೇವಾಲಯಕ್ಕೆ ದಿನವೂ ಮಾಲ್ಯವನ್ನು ಒಪ್ಪಿಸುತ್ತಿದ್ದರು. ಆ ಊರಿನ ವೇಶ್ಯೆಯೊಬ್ಬಳು ಒಂದುಸಲ ತರುಣನನ್ನು ನೋಡಿ ಮೋಹಗೊಂಡು ಇವನನ್ನು ಒಲಿಸಿಕೊಳ್ಳಬೇಕೆಂದು ಇವರ ತೋಟಕ್ಕೆ ಒಮ್ಮೆ ಬಂದಳಂತೆ. ತರುಣನಿಗೆ ಅವಳ ಕಡೆ ದೃಷ್ಟಿ ಹೋಗಲಿಲ್ಲ. ಹೀಗೆ ಸ್ವಲ್ಪ ಕಾಲವಿರಲಾಗಿ ತಾತನು ತೀರಿಕೊಂಡನು. ವೇಶ್ಯಾ ತರುಣಿ ಬರುತ್ತಲೇ ಇದ್ದಳು. ಒಂದುಸಲ ಇವನು ತೋಟದಲ್ಲಿ ಕೆಲಸಮಾಡು ತ್ತಿರುವಾಗ ಅವಳು ನೋಡುತ್ತ ಪಕ್ಕದಲ್ಲಿ ನಿಂತಿರುವಲ್ಲಿ ಮಳೆ ಬಂದಿತು. ತರುಣನು ಗುಡಿಸಿಲೊಳಕ್ಕೆ ಹೋದನು. ವೇಶ್ಯೆ ಹೊರಗಡೆಯೇ ನಿಂತಳು; ಮಳೆಯಿಂದ ನೆನೆದಳು. ಇನ್ನೊಂದು ಜೀವ ಮಳೆಯಿಂದ ತೊಂದರೆ ಪಡುವುದೇ ಎಂದು ಕನಿಕರಿಸಿ ತರುಣನು ಅವಳನ್ನು ಒಳಗೆ ಬಂದು ಕುಳಿತುಕೊ ತೊಂದರೆಯಿಲ್ಲ ಎಂದನು. ಸುಂದರಿ ಗುಡಿಸಿಲನ್ನು ಹೊಕ್ಕಳು; ಸ್ವಲ್ಪ ಹೊತ್ತಿನಲ್ಲಿ ಅವಳ ಚೆಲುವು ತರುಣನ ಮನಸ್ಸನ್ನು ಹೊಕ್ಕಿತು. ಹೀಗೆ ಮೊದಲಾಗಿ ಇವರ ಸ್ನೇಹ ಬೆಳೆಯಿತು. ಇವನು

ಅವಳ ಮನೆಗೆ ಹೋಗಿ ಬರಲು ತೊಡಗಿದನು. ಕೆಲವು ಕಾಲದಮೇಲೆ ಅವಳಿಗೆ ಇವನಲ್ಲಿ ಬೇಸರ ಹುಟ್ಟಿತು. ಇವನಿಗೆ ಅವಳಲ್ಲಿ ಎಂದಿನಂತೆ ಅನುರಾಗವಿದ್ದದರಿಂದ ಹರಿಸೇವಕನ ಸ್ಥಿತಿ ಕಷ್ಟಕ್ಕಿಟ್ಟುಕೊಂಡಿತು. ಒಡವೆ ವಸ್ತು ತಂದಲ್ಲದೆ ತನ್ನಲ್ಲಿ ಬರಕೂಡದೆಂದು ಅವಳು ಹೇಳಿದಳು. ಒಂದೂ ಇಲ್ಲದ ಈ ಬಡವನು ಒಂದು ರಾತ್ರಿ ಅವಳ ಮನೆಯ ಬಾಗಿಲಲ್ಲಿ ಆಸೆಯಿಂದ ಪರಿತಪಿಸುತ್ತ ಮಲಗಿದನು. ಭಕ್ತನನ್ನು ರಕ್ಷಿಸಬೇಕೆಂದು ಹರಿ ಒಬ್ಬ ಸೇವಕನಂತೆ ದೇವಾಲಯದ ಒಂದು ಆಭರಣವನ್ನು ವೇಶ್ಯೆಗೆ ಮುಟ್ಟಿಸಿದನಂತೆ. ಅವಳು ಬಾಗಿಲನ್ನು ತೆಗೆದು ಭಕ್ತನನ್ನು ಒಳಕ್ಕೆ ಕರೆದುಕೊಂಡಳು. ಅನಿರೀಕ್ಷಿತವಾಗಿ ತನಗೆ ಒದಗಿದ ಸುಖದಲ್ಲಿ ತರುಣನು ಇವಳ ಕನಿಕರದ ಕಾರಣವೇನೆಂದು ವಿಚಾರಿಸಲಿಲ್ಲ. ಮಾರನೆಯ ದಿನ ಅವನು ದೇವಾಲಯಕ್ಕೆ ಹೋದಾಗ ರಾತ್ರಿ ದೇವಾಲಯದಿಂದ ಒಡವೆ ಒಂದು ಕಳವಾಗಿತ್ತೆಂದೂ ಅದು ತನ್ನ ವೇಶ್ಯೆಯ ಮನೆಯಲ್ಲಿ ಸಿಕ್ಕಿತೆಂದೂ, ಅದನ್ನು ತಾನು ಕಳುಹಿದೆನೆಂದು ಅವಳು ಹೇಳಿದಳೆಂದೂ ಇವನಿಗೆ ತಿಳಿಯಿತು. ತನಗಾಗಿ ರಂಗನಾಥನು ತನ್ನ ಒಡವೆಯನ್ನು ವೇಶ್ಯೆಗೆ ಕೊಟ್ಟಿರಬೇಕೆಂದು ತೋರಿ ಭಕ್ತನ ಮನಸ್ಸು ಕರಗಿಹೋಯಿತು. ಅವನು ಮತ್ತೆ ವಿರಕ್ತನಾಗಿ ಭಕ್ತಿಯಲ್ಲಿ ಬೆಳೆದು ಕೊನೆಗೆ ಪೂರ್ವದ ಮಹನೀಯರಂತೆ ಆಳ್ವಾರೆನಿಸಿಕೊಂಡನು. ಈತನ ಗ್ರಂಥಗಳಲ್ಲಿ ಬಹು ಮುಖ್ಯವೆನ್ನುವುದು ರಂಗನಾಥನಿಗೆ ಹೇಳಿರುವ ಸುಪ್ರಭಾತ ಮತ್ತು ತಿರುಮಾಲೆ ಎಂಬ ಒಂದು ಭಕ್ತಿವಿಷಯದ ಗ್ರಂಥ. ಸುಪ್ರಭಾತದ ಕೃತಿಯನ್ನು ತಮಿಳಿನಲ್ಲಿ ತಿರುಪ್ಪಳ್ಳಿಯೆಳುಚ್ಚಿ ಎನ್ನುತ್ತಾರೆ. ಇದರ ಒಂದು ಪರಿವರ್ತನವನ್ನು ಇಲ್ಲಿ ಕೊಟ್ಟಿದೆ:

ನೇಸರ್ಬೈತಂದಣೆದನುದಯುಗಿರಿ ಶಿಖರವನು ;
ಹೊತ್ತು ಬೆಳಗಾಗಿರಲು ಕಾರಿರುಳು ತೊಲಗಿತು ;
ಬಿರಿದು ಮಧುವೊಸರುತಿದೆ ಎಲ್ಲ ಹಿರಿಮಲರು ;
ದಿವಿಜರರಸರು ಒತ್ತಿ ಒತ್ತಿ ಬಂದವರು
ಎದುರಿನಲಿ ನೆರೆದಿಹರು ; ಇವರೊಡನೆ ಹೊಕ್ಕ
ಹಿರಿಯ ಗಂಡಾನೆಯೊಬ್ಬುಳಿ ಪಿಡಿಯ ಜಂಗುಳಿ
ಭೇರಿಯ ನಿನಾದ ಕಡಲಲೆವೊಲಿಹುದೆಲ್ಲೆಡೆ ;
ಓ ರಂಗನಾಥ ಪಟ್ಟಿದ್ದು ಬಿಜಗೆಯ್ಯ.

ಕೊಬ್ಬು ಕೊಡಿ ಮೊಲ್ಲೆಯಲಿ ತುಂಬು ಮಲರನು ಅಪ್ಪಿ
ಬೀಸುತಿದೆ ಇದೊ ನೋಡು ಮೂಡಣದ ಮಾರುತ;
ಹೂವಿನಾಶ್ರಯದ ನಿದ್ರೆಯಿನಂಚೆ ಎಚ್ಚೆತ್ತು
ಇಬ್ಬನಿಗೆ ನೆನೆದ ಚೆಲುಗರಿಯ ಕೆದರುತಿದೆ;
ಬಿಲದ ಬಾಗಿಲ ತೆರದ ಹಿರಿಯ ಮೊಸಳೆಯ ಬಾಯ
ಬೆಳ್ಳನೆಯ ಕೋರೆಹಲ್ಲಿನ ವಿಷಕೆ ಸುಗಿದು
ನೊಂದ ಆನೆಯ ಮೀಗಿಲ ದೂಸರನು ಕಳೆದವನೆ,
ಓ ರಂಗನಾಥ ಪಟ್ಟೆದ್ದು ಬಿಜಗೆಯ್ಯ.

ಸೂರಿಯನ ಕರ ಸುತ್ತು ದೆಸೆಗಳಲಿ ಹರಹಿತು;
ಒತ್ತಾದ ತಾರೆಗಳ ಮಿನುಮಿನುಗು ಸೊರಗಿತು;
ಪಸರಿಸಿದ ಕಳೆಯ ಹಿಮಕರನು ಮಂಕಾದನಿಕೊ;
ಹರಡಿದ್ದ ಕತ್ತಲೋಡಿತು; ಹಸುರು ತೋಟಗಳ
ಕೌಂಗ ಹೊಂಬಾಳೆಯನು ಅರಳಿಸುತ ಅದರೊಳಗು
ನರುಗಂಪ ಕಾರೆ ಬೆಳಗಿನ ಗಾಳಿ ಬೀಸುತಿದೆ;
ಬಲು ಹೊಗರನುಗುವ ಚಕ್ರವ ಹಿಡಿದ ಕೈಯವನೆ,
ಓ ರಂಗನಾಥ ಪಟ್ಟೆದ್ದು ಬಿಜಗೆಯ್ಯ.

ಮೇಟಿ ಪಡ್ಡೆಯ ದನವ ಹೊರಗಟ್ಟೆ ಗೋವಳರು
ನುಡಿಸುತಿಹ ಕೊಳಲು ಗೂಳಿಯ ಗಂಟೆಯಾರವ
ಬೆರೆದು ಬರುವೀ ಶಬ್ದ ದೆಸೆಗಳನು ವ್ಯಾಪಿಸಿತು;
ಜೇನ್ದುಂಬಿ ಬಯಲ ಸಾರಿತು. ಲಂಕೆಯವರೊಂದು
ಕುಲವನಳಿಸಿದ ಶಾರ್ಙ್ಗಧರ, ದಿವಿಜಕುಲದೊಡೆಯ,
ಮಾಮುನಿಯ ಬೇಳ್ವಿಯನು ಕಾಯ್ದು ಅವಭೃತವನ್ನೆ
ಮೀಯಿಸಿದ ಬಲ್ಲಿದ ಅಯೋಧ್ಯೆಯೆಮ್ಮರಸೇ
ಓ ರಂಗನಾಥ ಪಟ್ಟೆದ್ದು ಬಿಜಗೆಯ್ಯ.

ಹೂತೋಟಗಳಿಂದ ಹಕ್ಕಿಗಳು ಹಾಡುತಿವೆ;
ಹೋಯಿತ್ತು ಇರುಳು, ಬೆಳಕಿದೊ ಬಂದಿದೆ;
ಘೋಷಿಸುವ ಕಡಲರವ ಮೂಡಲನು ತುಂಬಿದೆ;
ಮದಿಸಿರುವ ತುಂಬಿ ಮೊರೆಯುವ ತಾವರೆಯ ಕೋದ
ಚೆಲುವ ಹೂಮಾಲೆ ಕೈಯಲಿ ಆಡುತಿರೆ ಸುರರು
ನಿನ್ನಡಿಯೊಳಿಡಲು ತಂದಿಹರದನು. ಇಂತಿರಲು
ಲಂಕಾಧಿಪತಿಯ ಕುಲ ಸೇವಿಸುವ ಮಂದಿರದ
ಓ ರಂಗನಾಥ ಪಟ್ಟೆದ್ದು ಬಿಜಗೆಯ್ಯ.

ಚೆನ್ನ ನಿಡುದೇರ ಆದಿತ್ಯರಿಕೊ ಇಲ್ಲಿ;
ಒಡೆಯರಹ ಹನ್ನೊರುವ ರುದ್ರರಿಕೊ ಇಲ್ಲಿ;
ಎನಸೂ ನವಿಲ ಬೆನ್ನ ಬಿಡದ ಅರುಮುಗನಿಕೊ;
ಮರುತರೂ ವಸುಗಳೂ ಒತ್ತೊತ್ತಿ ಬಂದು,
ವಾಹನಗಳೋಡಾಡ, ತೇರುಗಳು ಕೂಗ,
ಎಳೆಯ ಕುವರರ ತಂಡ ಹೊಳೆಯಂತೆ ನುಗ್ಗ,
ಗಿರಿಗೆ ದೊರೆಯಹ ಗುಡಿಯ ಮುಂದೆ ಸೇರಿದರು,
ಓ ರಂಗನಾಥ ಪಟ್ಟಿದ್ದು ಬಿಜಗೆಯ್ಯ.

ಅನ್ತರದ ಅಮರರುಗಳೋಳಿಗಳು ಇಲ್ಲಿ;
ಕಡು ತಪದ ಮುನಿವರರು ಮರುತರುಗಳಿಲ್ಲಿ,
ಇಂದ್ರನಿದೊ ತಾನು ತನ್ನಾನೆಯೊಡನಿಲ್ಲಿ;
ನನ್ನೊಡೆಯ ನಿನ್ನ ಈ ಮಂದಿರದ ಮುಂದೆ
ಗಂಧರ್ವಗಣ ನುಗ್ಗಿ ವಿದ್ಯಾಧರರು ನೂಕಿ,
ಯಕ್ಷಗಣ ಸೋತಿದೆ, ಅಡಿಯ ಸೇವಿಸಲೆಳಸಿ;
ಭೂಮ್ಯಂತರಿಕ್ಷದಲಿ ಎಡೆಯಿಲ್ಲ ಇನ್ನು,
ಓ ರಂಗನಾಥ ಪಟ್ಟಿದ್ದು ಬಿಜಗೆಯ್ಯ.

ಜಾನವರು ನರುಗಂಪ ಗರಿಕೆ, ಧನ, ರತ್ನ
ಕವಿಲೆ, ತಿಳಿಗನ್ನಡಿ, ಮೊದಲಹುದನರ್ಪಿಸಿರೆ,
ನನ್ನ ದೈವವೆ ನಿನ್ನ ದರುಶನಕೆ ತಕ್ಕ
ವಸ್ತುಚಯವನು ಹಿಡಿದ ಮುನಿವರ್ಯರು
ತುಂಬುರರು ನಾರದರು ಬರುತಿರುವರದಕೋ;
ತನ್ನ ತೇಜವ ಹರಹಿ ತೋರಿದನು ರವಿಯೂ;
ಅಂಬರದ ತಲವನೂ ಉಳಿದು ತೊಲಗಿತು ತಿಮಿರ;
ಓ ರಂಗನಾಥ ಪಟ್ಟಿದ್ದು ಬಿಜಗೆಯ್ಯ.

ಕುಂದಿಲ್ಲದೇಕನಾದ ಮೃದಂಗ ಮದ್ದಳೆ
ವೀಣೆ ಕೊಳಲಿನ ಮೊಳಗು ದಿಕ್ಕುಗಳ ಮೊಳಗಿಸೆ
ಗೀತಗಳ ಹಾಡಿದರು ಕಿನ್ನರರು ಗರುಡರು
ಗಂಧರ್ವರಾದಿಗಳು; ರಾತ್ರಿಯೆಲ್ಲ
ಮಾತವಸಿಗಳು ದಿವಿಜ ಚಾರಣರು ಯಕ್ಕರು,
ಸಿದ್ಧರೂ ಸಿರಿವಡಿಯ ಹೊಗಳಿ ಮೈಮರೆದರು.
ಇಂತಿದರಿನಿವರಿಗೀ ಹಗಲೋಲಗವ ಕೊಡಲು
ಓ ರಂಗನಾಥ ಪಟ್ಟಿದ್ದು ಬಿಜಗೆಯ್ಯ.

ಕಮ್ಮಲರ ತಾವರೆಯ ಹೂ ಅರಳಿತಿದಕೋ ;
ಘೋಷಿಸುವ ಕಡಲಿಂದ ಮೊಳೆದನಿದೊ ನೇಸರು ;
ಹಿಡಿನಡುವ ತರುಣಿಯರು ಕುರುಳ ಹಿಂಡಿ ಒದರಿ
ಉಡೆಯುಟ್ಟು ಏರಿದರು ಸುತ್ತು ಹೊನಲಿನ ರಂಗ ;
ಒತ್ತು ತುಳಸಿಯ ದಂಡೆ ಮಾಲೆಯಿಹ ಪುಟ್ಟಿಯನು
ತೋಳಲಿಟ್ಟೈತಂದ ತೊಂಡರಡಿಪೊಡಿ ಎಂಬ
ದಾಸನನು ಪ್ರಿಯನೆಂದು ಕೃಪೆದೋರಿ ಸೇವಕರ
ಸೇವಕನ ಮಾಡು, ಪಟ್ಟಿದ್ದು ಬಿಜಗೆಯ್ಯ.

ಕೇವಲ ಸಾಹಿತ್ಯವೆಂದೇ ಬಗೆದರೂ ಈ ಕೃತಿ ಅತ್ಯುತ್ತಮವಾದ ಕವಿತೆಯೆಂದು ಒಪ್ಪಬೇಕು. ಇದರ ನೋಟ ಕವಿಯದು, ಇದರ ಮಾತು ಕವಿಯದು, ಇದರ ಕಲೆ ಸಂಪೂರ್ಣವಾಗಿ ಕಾವ್ಯದ್ದು.

೧೧

ಪೆರಿಯಾಳ್ವಾರ್ ಎಂಬ ಹೆಸರಿನಿಂದ ಪ್ರಸಿದ್ಧರಾದ ವಿಷ್ಣುಚಿತ್ತ ಎಂಬಾತ ಈ ಭಕ್ತರ ಪಂಕ್ತಿಯಲ್ಲಿ ಮತ್ತೊಬ್ಬರು. ಮಧುರೆಯ ಪಾಂಡ್ಯ ರಾಜನು ದೈವಗಳ ಪಾರಮ್ಯವನ್ನು ಕುರಿತು ಒಂದು ವಾದವನ್ನು ಹೂಡಿ ಅದರಲ್ಲಿ ಗೆದ್ದವರಿಗೆ ಒಂದು ಶುಲ್ಕವನ್ನು ಕೊಡುವುದಾಗಿ ಆ ಕಾಲದಲ್ಲಿ ಪ್ರಚಾರಮಾಡಿದನು. ವಿಷ್ಣುಚಿತ್ತನು ಈ ವಾದಕ್ಕೆ ಹೋಗಿ ಉಳಿದವರೆಲ್ಲ ರನ್ನೂ ಸೋಲಿಸಿ ಶುಲ್ಕವನ್ನು ಗೆದ್ದನಂತೆ. ಪಾಂಡ್ಯರಾಜನು ಇವನನ್ನು ಭಟ್ಟರ್ ಪಿರಾನ್ ಎಂದರೆ ಪಂಡಿತರಲ್ಲಿ ಹಿರಿಯನು ಎಂದು ಹೊಗಳಿದನು. ವಿಷ್ಣುಚಿತ್ತನು ಕೋಟ್ಟಿಯೂರ್ ಎಂದರೆ ಗೋಷ್ಠೀಪುರ ಎಂಬದರ ನಾಯಕನಾದ ಶೆಲ್ವ ಎಂಬವನ ಸಹಾಯದಿಂದ ಜೀವನವನ್ನು ನಡೆಯಿಸಿದ ನೆಂದು ಕಾಣುತ್ತದೆ. 'ತಿರುಪ್ಪಲ್ಲಾಂಡು' ಎಂಬ ಗ್ರಂಥದಲ್ಲಿ ದೇವರನ್ನು ಕುರಿತು, ಗೋಷ್ಠೀಪುರದ ನಾಯಕನಾದ ಅಭಿಮಾನತುಂಗನಾದ ಶೆಲ್ವನಂತೆ ನಾನೂ ನಿನಗೆ ಪೂರ್ವದಿಂದ ದಾಸನು, ಎಂದು ಹೇಳಿಕೊಂಡಿ ದಾನೆ. ಇದರಿಂದ ಇವನ ಶಿಷ್ಯಾಭಿಮಾನವೂ ನೈಚ್ಯಾನುಸಂಧಾನವೂ ಸ್ಪಷ್ಟವಾಗುತ್ತವೆ. ವಿಷ್ಣುಚಿತ್ತನು ದೇವರನ್ನು ಮುಖ್ಯವಾಗಿ ಬಾಲಕನಂತೆ ಪೂಜಿಸಿದನು ; ಅವನಿಗೆ ಶುಭವನ್ನು ಬಯಸಿದನು. ಈ ಕೃತಿಗಳಲ್ಲಿ ಮಂಗಳಾಶಾಸನದ ಒಂದು ಪದ್ಯವೂ ಯಶೋದೆ ಮಗನನ್ನು ಸ್ನಾನಕ್ಕೆ

ಕರೆದಂತೆ ಅವನಿಗೆ ಹೂ ಮುಡಿಸಿದಂತೆ ಬರೆದಿರುವ ಪದ್ಯಗಳೂ ತಿರುವೇಂಗಡದ ಒಂದು ಪದ್ಯವೂ ವೈಷ್ಣವ ದೇವಾಲಯಗಳಲ್ಲಿ ನಿತ್ಯದ ಪೂಜೆಯ ಕ್ರಮದಲ್ಲಿ ಸೇರಿವೆ. ಮಂಗಳಾಶಾಸನದ ಕೃತಿಯ ನಾಲ್ಕು ಪದ್ಯಗಳನ್ನು ಇಲ್ಲಿ ಕೊಟ್ಟಿದೆ:

ಪಲಕಾಲ ಪಲಕಾಲ ಪಲವು ಸಾವಿರ ಕಾಲ ಪಲಕೋಟಿ ನೂರು ಕಾಲ
ಮಲ್ಲನನು ಗೆಲಿದ ನಿಡುದೋಳ ಮಣಿವರ್ಣಾ ನಿನ್ನ ಕೆನ್ನಡಿಯು ಕೆಂಪಿಗೆ
ರಕ್ಷೆ ಇರಲಿ.

ಈ ದಾಸನಿಗೆ ನಿನಗೆ ಹಲಕಾಲ ಸಾಸಿರಕು ಸಂಬಂಧ ಹಿಂಜದಿರಲಿ,
ನಿನ್ನ ಬಲ ಎದೆಯನ್ನು ಬಿಡದಿರುವ ಸಿರಿದೇವಿ ಸೊಗವಿರಲಿ ಹಲವು ಕಾಲ,
ಮಿಗು ಹೊಗರ ಚೆಲುವ ಸೊಡರಂತೆ ಬಲಕಿಹ ಚಕ್ರ ಸೊಗವಿರಲಿ
ಬಹಳ ಕಾಲ,
ಹಗೆಯು ಸೈನ್ಯವ ಹೊಕ್ಕು ಮೊಳಗುವಾ ಪಾಂಚಜನ್ಯಕೆ ಸ್ವಸ್ತಿ ಹಲವು ಕಾಲ.

ಬ್ರಹ್ಮಾಂಡ ಸಂಕುಲಕೆ ಅಧಿಪತಿಯುಂ ತಾನಾಗಿ ಅಸುರರನು ರಾಕ್ಷಸರನು
ಇನ್ನುಳಿದ ನೀಚರನು ಎತ್ತಿ ಅಳಿವಿಗೆ ಒಗೆದ ಆ ಹೃಷೀಕೇಶನೆಡೆಗೆ
ಭಕ್ತಕುಲದಲಿ ಇಹರು ಬಂದು ಅಡಿಯಾಶ್ರಯಿಸಿ ಸಾವಿರದ ಹೆಸರ ಹೇಳಿ
ದುರಭಿಮಾನವನೆಲ್ಲ ತೊರೆದು ಪಲಕಾಲ ಸಾಸಿರ ಕಾಲ ಬಾಳು ಎನ್ನಿ.

ನನ್ನ ತಂದೆಯೊ ಅವನ ತಂದೆಯೋ ತಾತ ಮುತ್ತಾತ ಇಂತೇಳು ತಲೆಗೆ
ಬಂದು ಬಳಿ ಬಳಿಯೆ ನಾವಾಳುಗೆಯ್ದುವು. ಅಂದು ಶ್ರವಣ ತಾರೆಯ
ಕೊನೆಯಲಿ
ಸಂಜೆಯಾಗಿಹ ವೇಳೆ ಸಿಂಗದೊಡಲನು ಧರಿಸಿ ಹಗೆಯುನಳಿಸಿದವನನ್ನು
ಆಯುಸವನುಳಿದು ಹರಸುವೆವು: ಹಲಕಾಲ ಇರು ಇರು ಹಲವು ಲಕ್ಷ ಕಾಲ.

ಎಂದು ನನ್ನೊಡೆಯಾ ನಿನಗೆ ಅಡಿಯಾಳುಗಳು ನಾವೆಂದು ಬರೆ
ಕೊಂಡೆವೋ
ಅಂದೆ ಮುಕ್ತಿಯನಾಂತು ಈ ಸೇವಕರ ಕುಲವೆ ಉಜ್ಜೀವಿಸಿತು, ನಿಶ್ಚಯ.
ಶುಭ ದಿನದಲುದಿಸಿ ಸಿರಿಮಧುರೆಯಲಿ ಬಲುಮೆಯಾಯುಧವನ್ನು
ಖಂಡಿಸಿದನೇ
ಐತಲೆಯ ಹೆಡೆಹರಹ ಹಾವನ್ನು ತುಳಿದವನೆ ಒಳಿತಕ್ಕೆ ನಿನಗೆಂಬೆವು.

ಹೂಮುಡಿಸುವ ಪದ್ಯಗಳ ಕೊನೆಯಲ್ಲಿ ಇರುವ ಅಂಕಿತದ ಈ ನಾಲ್ಕು ಪಂಕ್ತಿಯಿಂದ ಅದರ ಲಕ್ಷಣವು ತಿಳಿಯುವುದು:

ಸಂಪಿಗೆ ಮಲ್ಲಿಗೆಯೊಡನೆ ಚೆಂಗಳುನೀರು ಇರವಂತಿಯು
ಎಣಿಸದಷ್ಟು ಹೂವನ್ನು ತಿರಿದು ತಂದೆನು, ಇವನು ಸೂಡಿಕೊ ಬಾ,
ಎಂದು
ನೆಲನ ಬೇಡಿ ಕೊಂಡಾತನನ್ನು ಗೋಪಿ ಕರೆದ ನಲ್ನುಡಿಯು ಈ ಮಾಲೆ
ಹಾಡುವಂತೆ ವಿಲ್ಲಿಪುತ್ತೂರನಾಥ ಭಟ್ಟಪಿರಾನ್ ನುಡಿದ ಹತ್ತು.

ತಿರುವೇಂಗಡದ ನಾಥನಿಗೆ ಹೇಳಿರುವ ಪದ್ಯಗಳಲ್ಲಿ ಬರುವ ಎಂಟು ಪಂಕ್ತಿ ಇವು:

ಬಾನ್ ಕೊರೆವ ತಲೆಯು ತಣ್ ತಿರುವೇಂಗಡದ ಒಡೆಯು
ಲೋಕವನು ಹೊರೆವ ದಾಮೋದರಾ ಚದುರ
ನನಗೆ ನನ್ನದಕೆ ನಿನತೆಂಬ ಮುಂದ್ರೆಯುನೊತ್ತಿ
ಕೃಪೆಯು ಬೇಡುತಲಿಹೆನು ನಿನ್ನ ಮನಸೆಂತು?

ಪಕ್ಷಿವಾಹನ ಪರಮಪುರುಷ ನೀ ಕೈಹಿಡಿದು
ಹುಟ್ಟ ಕಡಲಾರಿ ಹಿರಿಪದವಿ ಬಂದಿತು ನನಗೆ;
ಇರವಿರಿವ ಪಾಪಕಾಂತಾರ ಸುಟ್ಟಿರಲಾಗಿ
ಅರಿವಮೃತನದಿ ತಲೆಯು ಮುಟ್ಟ ಬಾಯ್ ಮುಚ್ಚಿಹುದು.

ಗೋಷ್ಠೀಪುರ ಇವನಿಗೆ ಬಹಳ ಪ್ರಿಯವಾದ ಊರು ಆಗಿತ್ತೆಂದು ಇವನ ಕೃತಿಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಅದನ್ನು ಈತನು "ಕುತ್ತ ಒಂದಿಲ್ಲದೆ ಗುಣವನ್ನು ಬೆಳೆಸಿಕೊಂಡು ಗುರುಗಳಿಗೆ ಅನುಕೂಲರಾಗಿರುತ್ತ ಕೆಟ್ಟುದೆಂಬುದನ್ನು ತೊರೆದ ಒಳ್ಳೆಯ ಮಂದಿ ಬಾಳುವ ಊರು; ಬಣ್ಣ ಬಣ್ಣದ ಚೆಲುವ ಮಣಿಗಳನ್ನು ಮರಕತಗಳನ್ನು ಕೆತ್ತಿರಲು ಆ ಕಾಂತಿ ಯಿಂದ ತೊಳಗುತ್ತಿರುವ ಜಗಲಿ ಸುತ್ತ ಕಾಣುವ ಊರು; ಉರಗದ ಮೆಲ್ಪಾಸಿನ ದೇವರ ಕರದ ಶಂಖದಂತಿರುವ ಎಳೆಯುಂಚೆ ಗುಂಪು ಗುಂಪಾಗಿ ಆಗಸಕ್ಕೇರಿ ಹಾರುವ ಕೆಂದಾವರೆಯ ಬಯಲ ಊರು; ಆಮೆಯ ಬೆನ್ನೇರಿ ಕುಪ್ಪಳಿಸಿ ಕಮ್ಮಲರ ನಾಳಕ್ಕೆ ತಗುಲುವಂತೆ ಹರಿದು ದುಷ್ಟತನ ಮಾಡುವ ಎಳೆಯ ಬಾಳೆಯಮೀನು ಆಡುವ ನೀರ ಊರು; ಸ್ವಚ್ಛಶೀಲನೂ ಧರ್ಮದಲ್ಲಿ ಅಚಲನೂ ಅಭಿಮಾನತುಂಗನೂ ಆದ ತಿಳಿಯಾದ ಸಂಪತ್ತಿನ ನಾಯಕನನ್ನು ನಿರಂತರ ಸ್ವೀಕರಿಸಿದ ಚೆಲುರೂಪ ದೇವರ ತಿರುಕೋಟ್ಟಿಯೂರು; ತಣ್ಣನೆಯ ನೀರು ಎಲ್ಲೆಡೆಯೂ ಸುತ್ತಿರುವ

ಹುಲುಸು ಬೆಳೆದಿಹ ಮಡಿಯ ತಿರುಕೋಟ್ಟಿಯೂರು" ಎಂದು ವರ್ಣಿಸಿದಾನೆ. ವಿಷ್ಣುಚಿತ್ತನು ಈ ಎಲ್ಲ ಭಕ್ತರ ಪಂಕ್ತಿಯಂತೆ ಕವಿಯೂ ಆಗಿದ್ದನೆಂದು ಈ ಮಾತುಗಳಿಂದ ಕಾಣುತ್ತದೆ. ದೇವರನ್ನು ಹೊಗಳುವ ಒಂದು ಉಪಮೆಯಲ್ಲಿ ಇವನು ತನಗೆ ಮರ್ಯಾದೆ ಮಾಡಿದ ಪಾಂಡ್ಯರಾಜನ ಪರಾಕ್ರಮವನ್ನು ನಿರ್ದೇಶಿಸುತ್ತ "ಮೇರುವಿನ ಮೇಲೆ ತನ್ನ ಧ್ವಜವನ್ನು ನೆಟ್ಟ ಪಾಂಡ್ಯರ ಕುಲಪತಿಯಂತೆ ಸೊಗಸು ಮಿಂಚಿದ ನಿನ್ನ ಚೆನ್ನಡಿಗಳನ್ನು ನನ್ನ ತಲೆಯಮೇಲಿಟ್ಟವನೇ" ಎಂದು ವರ್ಣಿಸಿದಾನೆ.

೧೨

ಆಳ್ವಾರುಗಳ ಪಂಕ್ತಿಯಲ್ಲಿ ಎಲ್ಲ ಕುಲದ ಜನರಿರುವಂತೆ ಹೆಣ್ಣೊಬ್ಬಳುಂಟು. ಇವಳನ್ನು ಆಂಡಾಳ್ ಎಂದರೆ ಆಳ್ದವಳು ಎಂದು ಹೇಳುತ್ತಾರೆ. ಆಂಡಾಳ್ ವಿಷ್ಣುಚಿತ್ತನ ಮಗಳು. ಚಿಕ್ಕಂದಿನಿಂದ ಹರಿಯ ಭಕ್ತಿಯಲ್ಲಿ ಬೆಳೆದು ಹುಡುಗಿ ತಾನು ಹರಿಯನ್ನು ಹೊರತು ಬೇರೆಯವರನ್ನು ಮದುವೆಯಾಗುವುದಿಲ್ಲವೆಂದು ನಿಶ್ಚಯಿಸಿದಳಂತೆ, ಹರಿ ತನ್ನ ಪ್ರಿಯನೆಂದು ಅವನನ್ನು ವರಿಸಿ ತಾನು ಮುಡಿದ ಹೂವನ್ನು ದೇವರಿಗೆ ಮುಡಿಸುತ್ತಿದ್ದಳಂತೆ. ಮದುವೆಯಿಲ್ಲದೆಯೇ ಬಾಳನ್ನು ಕಳೆದು ಒಂದುಸಲ ಪತಿಗೃಹಕ್ಕೆ ಹೋಗುವಂತೆ ದೇವಾಲಯಕ್ಕೆ ಹೋದಳು. ಅಲ್ಲಿ ಭಕ್ತಿಮೂರ್ತಿಯಲ್ಲಿ ಲೀನವಾದಳೆಂದು ಒಂದು ರೂಪವಾಗಿಯೂ, ರಂಗನಾಥನು ಬಂದು ಇವಳೊಡನೆ ಹಸೆ ನಿಂತು ಇವಳನ್ನು ಮದುವೆಯಾದನೆಂದು ಒಂದು ರೂಪವಾಗಿಯೂ ಸಂಪ್ರದಾಯವು ಕಥೆಯನ್ನು ಮುಗಿಸುತ್ತದೆ. ಈಕೆಯ ಕೃತಿಗಳಲ್ಲಿ ಒಂದು ಮಾರ್ಗಶಿರ ಮಾಸದಲ್ಲಿ ಗೋಕುಲದ ಕನ್ನೆಯರು ಕೃಷ್ಣನ ಪ್ರೇಮವನ್ನು ಬೇಡಿ ವ್ರತಮಾಡಲು ಹೊರಟದ್ದನ್ನು ವರ್ಣಿಸುತ್ತದೆ; ಇನ್ನೊಂದು ತರುಣಿ ನಾರಾಯಣನ ಕೈ ಹಿಡಿದಂತೆ ಕಂಡ ಕನಸನ್ನು ವರ್ಣಿಸುತ್ತದೆ. ಇವುಗಳಲ್ಲಿ ಮೊದಲನೆಯ ಕೃತಿಯ ಒಂದು ಪರಿವರ್ತನವನ್ನು ಶ್ರೀಮಾನ್ ವ. ಶ್ರೀರಂಗಾಚಾರ್ಯರು ದೇಶೀಯ ವಿದ್ಯಾಶಾಲಾ ಪತ್ರಿಕೆಯಲ್ಲಿ ಈಚೆಗೆ ಪ್ರಕಟಿಸಿದ್ದಾರೆ. ಈ ಕೃತಿಯ ಕೆಲವು ನುಡಿಗಳ ಗದ್ಯಾನುವಾದವನ್ನು ಇಲ್ಲಿ ಕೊಟ್ಟಿದೆ:

ಮಾರ್ಗಶಿರಮಾಸದ ಹುಣ್ಣಿಮೆಯ ಹಬ್ಬ ಬಂದಿತು ;
ನೀರಾಡ ಹೋಗುವವರು ಬನ್ನಿರಿ; ಸಿರಿ ತುಂಬಿದ
ಗೊಲ್ಲವಾಡಿಯ ಕಿರಿಯ ಹೆಣ್ಗಳು ಚೆನ್ದೊಡವಿನವರು.
ಕೂರಾದ ವೇಲಾಯುಧವನ್ನು ಹಿಡಿದು ದುಷ್ಟನನ್ನು ಶಿಕ್ಷಿಸುವ
ನಂದಕುಮಾರನು,

ಚೆಲುವು ತುಂಬಿದ ಕಣ್ಣ ಯಶೋದೆಯ ಮರಿಸಿಹ್ಮ,
ಮುಗಿಲಮೆಯ್ಯ ಸೂರ್ಯನಂತ ಕಣ್ಣ ಚಂದ್ರನಂತ ಮೊಗದವನು,
ನಾರಾಯಣನು ನಮಗೆ ಆಸೆಗಳನ್ನು ಸಲ್ಲಿಸುವನು.
ಆಗದವರೂ ನೋಡಿ ಹೊಗಳುವಂತೆ ವ್ರತವನ್ನು ಮಾಡಿ ಬನ್ನಿ.

ಬಾನ್ ಮುಟ್ಟಿ ಜಗವನ್ನಳೆದ ಉತ್ತಮನ ಹೆಸರನ್ನು ಹಾಡಿ
ನಾವು ನಮ್ಮ ವ್ರತವನ್ನು ಹಿಡಿದು ನೀರಾಡಿದರೆ
ಕೇಡಳಿದು ತಿಂಗಳಲ್ಲಿ ಮುಮ್ಮೈಮಳೆ ಸುರಿದು ನಾಡೆಲ್ಲ,
ಎತ್ತರದ ಕೆನ್ನೆಲ್ಲು, ಮಧ್ಯೆ ಮೀನು ಚಿಮ್ಮುವುದು ;
ಅರಳು ನೈದಿಲೆಯೊಳಗೆ ನಿದ್ರಿಸುತ್ತ ತುಂಬಿ ಮಿನುಗುವ ವೇಳೆ
ಕೊಟಗೆಯನು ಹೊಕ್ಕು ಕುಳಿತು ತುಂಬಿದ ಕೆಚ್ಚಲನ್ನು ಹಿಡಿದು
ಕರೆಯಲಾಗಿ ಹಿರಿಯಾಕಳು ಹೊಳೆಯಿಂದ ಕೊಡವನ್ನು ತುಂಬುವುವು ;
ನೀಗದ ಸಂಪತ್ತು ದೊರೆಯುವುದು : ಬನ್ನಿ ವ್ರತಮಾಡಿ.

ಹಕ್ಕಿ ಚಿಲಿಪಿಲಿಗುಟ್ಟಿದುವು. ಪಕ್ಷಿರಾಜನ
ಒಡೆಯನ ಗುಡಿಯ ಬಿಳಿಯ ಶಙ್ಖದ ಕರೆಯ ಪೇರರವ
ಕೇಳದೇ ಓ ಮಗುವೆ ಏಳೇ.

ಉಕ್ಕುಮದದ ಆನೆಯಂತ, ಹಗೆಯನ್ನೋಡದ ತೋಳಬಲದ
ನನ್ದಗೋಪಾಲನ ಸೊಸೆಯೇ ಓನಪ್ಪಿನ್ನೆಯೇ
ಕಮ್ಮನೆ ಪರಿಮಳಿಸುವ ಕುರುಳ ಹೆಣ್ಣೇ ಬಾಗಿಲು ತೆರೆ.
ಎಲ್ಲೆಲ್ಲೂ ಕೋಳಿ ಕರೆಯುತ್ತಿದೆ.
ಮಾಧವೀಲತೆಯ ಹಂದರದಮೇಲೆ ಕುಳಿತು ಕೋಗಿಲೆ ಹಲಬಾರಿ
ಕೂಗುತಿದೆ.

ಆಟದ ಚಂಡನ್ನು ಹಿಡಿದ ಬೆರಲ ಓ ಸುಂದರಿ
ನಿನ್ನ ಪ್ರಿಯನ ಹೆಸರನ್ನು ಹೊಗಳಲು ಬಂದಿದೇವೆ.
ಕೆಂದಾವರೆಯ ಕೈಯಿಂದ
ತುಂಬು ಸಂಪತ್ತಿನ ಕಂಕಣ ಉಲಿಯುವಂತೆ
ಸಂತೋಷದಿಂದ ಬಂದು ಈ ಬಾಗಿಲ ತೆರೆಯೇ.

ಮಳೆಯ ದಿನದಲ್ಲಿ ಮಲೆಯ ಮೊಳಚಿಲನ್ನು
ಸೇರಿ ಕೆಡೆದು ಒರಗುವ ವೀರಸಿಹ್ಮವು
ನಿದ್ದೆಯರಿತು ಧೀರವಾದ ನೋಟವನ್ನು ಬೀರಿ
ಕಂಪಿನ ಕೇಸರ ಹೊಮ್ಮಲು ಒಡಲುಬ್ಬಿ ಒದರಿ
ಮೂರಿ ನಿಮಿರ್ದು ಮೊಳಗಿ ಪೊರಮಟ್ಟು ನಡೆಯುವಂತೆ
ಹೊಂಗೆಯ ಹೂವಿನ ಬಣ್ಣದ (ದೇವಾ ನೀನು ಎದ್ದು
ಗಾದಿಯಲ್ಲಿ ಕುಳಿತು ನಿನ್ನ ಸೇವೆಗೆ ಬಂದಿರುವ ನಮಗೆ ದರ್ಶನ
ಕೊಟ್ಟು ನಮ್ಮ ಕೆಲಸವನ್ನು ಮಾಡಿಕೊಡು).

ಹೊತ್ತು ಹುಟ್ಟುವ ಮುನ್ನ ಬಂದು ನಿನ್ನನ್ನು ಸೇವಿಸಿ
ನಿನ್ನ ಹೊಂದಾವರೆಯಡಿಯನ್ನು ಹೊಗಳುವವರ ಭಾವವೇನೆಂದು ಕೇಳು.
ದನಕಾಯ್ದು ಜೀವಿಸುವವರ ಕುಲದಲ್ಲಿ ಹುಟ್ಟಿದ ನೀನು
ಸೇವಕರಾದ ನಮ್ಮನ್ನು ಅಂಗೀಕರಿಸದೆ ಹೋಗಲಾಗದು.
ಸುಮ್ಮನೆ ಕೂಗಾಡಿ ಹೋಗುವವರಲ್ಲ ನಾವು ಗೋವಿಂದಾ,
ಇನ್ನೆಲ್ಲ ಕಾಲಕ್ಕೂ ಏಳೇಳು ಜನ್ಮಕ್ಕೂ
ನಿನ್ನ ಒಳಪಟ್ಟವರಾಗಿರತಕ್ಕವರು ನಾವು. ನಿನಗೇ ನಾವು ಆಳಾಗಿರತಕ್ಕವರು.
ಮತ್ತೇನಾದರೂ ಕಾಮನೆಗಳಿದ್ದರೆ ಅವು ನಶಿಸಲಿ.

ತಾನು ಹರಿಯನ್ನು ಮದುವೆಯಾದೆನೆಂದು ಇವಳು ವರ್ಣಿಸಿದ ಕೃತಿಯ ಕೆಲವು ನುಡಿ ಇವು:

ವಾರಣ ಸಾಸಿರ ಬಲಗೆಯಿಂದ ಸುತ್ತಿರೆ,
ನಾರಣ ನಂಬಿ ನಡೆಯುತಿಹನೆನ್ನಿದಿರು;
ಪೂರಣಪೊಂಗಡವಿಟ್ಟು ಪುರವೆತ್ತಲು
ತೋರಣ ನೆಟ್ಟಂತೆ ಕನಸು ಕಂಡೆನೆ ಕೆಳದೀ.

ನಾಳೆ ವಧುವಿನ ಮದುವೆಯೆಂದು ನಿಶ್ಚಯಿಸಿ
ಹಾಳೆಯ ಅಡಕೆಯ ಪರಿಜಿನ ಹಂದರದಡಿ
ತೋಳಸಿಂಹ ಮಾಧವ ಗೋವಿಂದನೆಂಬೊರ್ವ
ಬಾಳಹೊಕ್ಕಂತೆ ಕನಸ ಕಂಡೆನೆ ಕೆಳದೀ.

ಇಂದಿರನೊಳಗೊಂಡ ದೇವರ ಕುಲವೆಲ್ಲ
ಬಂದೆನ್ನ ಮದುವಳಿಯೆಂದು ಮಂತಣದಲ್ಲಿ
ಮಂತ್ರದುಡೆಯುಡಿಸಿ ಅತ್ತಿಗೆ ಮದುವೆಮಾಡಿ
ಮಾಲೆಯನ್ನು ಹಾಕಿದಂತೆ ಕನಸ ಕಂಡೆನೆ ಕೆಳದೀ.

ಮದ್ದಳೆ ಹೊಡೆಯಲು ರೇಖೆಯ ಶಂಖ ನಿಂತು ಊದಲು
ಮುತ್ತಿನಹಾರದ ದಂಡೆ ತುಂಬಿ ಬಾಗಿದ ಹಂದರದಡಿ
ತರುಣ ಸುಂದರ ಮಧುಸೂದನನು ಬಂದು ನನ್ನ
ಕೈತಳವ ಹಿಡಿದಂತೆ ಕನಸು ಕಂಡೆನೆ ಕೆಳದೀ.

ಕುಂಕುಮ ಪೂಸಿಕೊಂಡು ತಣ್ಣಗಂಧವ ತೀಡಿ
ಮಂಗಳವಾಗಿ ಬೀದಿ ತಿರುಗಿ ಅಲ್ಲಲ್ಲಿ
ಅವನೊಡನೆ ಆನೆಯನು ಏರಿ ಓಕುಳಿಯಾಡಿ
ಜಳಕವಾಡಿದೆನೆಂಬ ಕನಸು ಕಂಡೆನೆ ಕೆಳದೀ.

೧೩

ಈ ಕೃತಿಗಳನ್ನು ರಚಿಸಿದ ಮಹನೀಯರನ್ನು ಸಂಪ್ರದಾಯವು ಅತಿಶಯವಾಗಿ ಗೌರವಿಸಿ ಹೊಗಳಿದೆ. ಒಬ್ಬೊಬ್ಬ ಹಿರಿಯರನ್ನು ಕುರಿತ ಹೊಗಳಿಕೆಯನ್ನು ತನಿಯನ್ ಎಂದು ಕರೆಯುತ್ತಾರೆ. ವಿಷ್ಣುಚಿತ್ತ ಪೆರಿಯಾಳ್ವಾರನ್ನು ಕುರಿತು ಭಟ್ಟರು “ ಮಿಂಚುವ ಹೊಗರ ಹಿರಿಯ ಕೋಟೆ ಕೊತ್ತಳದ ವಿಲ್ಲಿಪುತ್ತೂರ ಹೆಸರನ್ನು ಒಂದುಸಲ ಉಚ್ಚಾರ ಮಾಡಿದವರ ಪಾದಕಮಲಗಳನ್ನು ನಾವು ತಲೆಗಿಟ್ಟುಕೊಳ್ಳುವೆವು. ಆ ಕಾಲದಲ್ಲಿ ಈತನು ಶುಲ್ಕವನ್ನು ಕೊಯ್ದನೆಂದು ಹೊಗಳುವೆವು. ಈತನನ್ನು ಸಮಾಪಿಸಿ ಕೀಳ್ಮೆಗೆ ಕರೆದೊಯ್ಯುವ ಪ್ರವೃತ್ತಿಗಳನ್ನು ನಾವು ವಿಚ್ಛೇದಿಸುವೆವು. ಭಟ್ಟರ ಹಿರಿಯನು ಬಂದನೆಂದು ಪಾಂಡ್ಯನು ಕೊಂಡಾಡಲಾಗಿ ವಿಜಯ ಶಂಖವನ್ನು ಮೇಲೆತ್ತಿ ಊದುತ್ತಿರಲಾಗಿ ಎಲ್ಲ ವೇದಗಳನ್ನು ಓದಿ ನಿಶ್ಚಯಮಾಡಿ ಶುಲ್ಕವನ್ನು ಕೊಯ್ದವನ ಪಾದಗಳು ನಮಗೆ ರಕ್ಷಾಕವಚ” ಎಂದು ಹೊಗಳಿದರು. ತೊಂಡರಡಿಪ್ಪೊಡಿಯಾಳ್ವಾರನ್ನು ಕುರಿತ ತನಿಯನ್ ಇದು: “ಮಂಡನ್ ಗುಡಿ ಎನ್ನುವರು ಮಹನೀಯರಾದ ವೇದವಿಜ್ಞರ ತುಂಬು ಸಂಪತ್ತಿನ ತೊಂಡರಡಿಪ್ಪೊಡಿಯ ಜನ್ಮನಗರವನ್ನು; ದುಂಬಿದಟ್ಟವಾಗಿರುವ ಬಯಲಿನ, ತೆಂಕಣ ರಂಗದ ಅಧಿನಾಥನನ್ನು ನಿದ್ರೆಯಿಂದ ಎಚ್ಚರಿಸಿದ ಹಿರಿಯನು ಉದಿಸಿದ, ಊರನ್ನು.” ಆಂಡಾಳ್ ದೇವಿಯನ್ನು ಕುರಿತ ತನಿಯನ್ ಇದು: “ಹಂಸದ ಬಯಲ ವಿಲ್ಲಿಪುತ್ತೂರ ಆಂಡಾಳನ್ನು, ರಂಗನಾಥನಿಗೆ ಪವಿತ್ರವಾದ ತಿರುಪ್ಪಾವೈ ಪದ್ಯಗಳನ್ನು ಇಂಪಾದ ಇಂಚರದಿಂದ ಒಳಿತಾದ ಹಾಡುಮಾಲೆಯನ್ನು ಹಾಡಿಕೊಟ್ಟ, ಹೂಮಾಲೆಯನ್ನು

ಸೂಡಿಕೊಟ್ಟ, ಅವಳನ್ನು ಹೊಗಳು. ಸೂಡಿಕೊಟ್ಟ ಸೊಡರ ಕೊಡಿಯೇ, ಉತ್ತಮವಾದ ಪಾವೆಯನ್ನು ಹಾಡಿ ಅರುಳ ಬಲ್ಲ ಬಲ್ ಬಳೆಯದೇವಿ, ನೀನು ವಿಚಾರಮಾಡಿ 'ನನ್ನನ್ನು ವೇಂಗಡದ ದೇವರಿಗೆ ವಿಧಿಸಿದೆ'ಎಂದು ಹೇಳಿದ ಈ ಮಾತನ್ನು ನಾವು ಮೀರಿ ನಡೆಯದಂತೆ ಅನುಗ್ರಹಿಸು." ಭಾಷ್ಯಕಾರರು ಕುಲಶೇಖರ ಆಳ್ವಾರರನ್ನು ಕುರಿತು ಹೀಗೆಂದು ಹೇಳಿದರು: "ಇನಿದಾದ ಅಮೃತವನ್ನು ಊಡುವೆನು ಬಾ ನನ್ನ ಚೆಲುವ ಗಿಳಿಯೇ. ತೆಂಕಣ ರಂಗವನ್ನು ಹಾಡಬಲ್ಲ ಶ್ರೀಮಂತ ಚಕ್ರವರ್ತಿ, ಹೊನ್ನ ಸರಿಗೆಯಂಥ ಹೆಣ್ಗಳ ಮನೋಹರ ಮನ್ಮಥನು, ಚೇರರ ಒಡೆಯ ನಮ್ಮ ಕುಲಶೇಖರನು ಎಂದು ಹೇಳು." ಎಂಬಾರ್ ಎಂಬ ಶಿಷ್ಯರು ಗುರುವಾದ ರಾಮಾನುಜರನ್ನು ಕುರಿತು "ನಮ್ಮಗಳ ಗತಿಯೇ, ರಾಮಾನುಜ ಮಾಮುನಿಯೇ, ಶಂಕೆಗಳನ್ನು ಹರಿಸಿ ಆಳಿದ ತಪಶ್ಚಕ್ರವರ್ತಿ, ಹೊಂಗಿದ ಹೊಗಳಿಕೆಯ ತಿರುಮಂಗೈ ಅಧಿನಾಥರು ದಯಪಾಲಿಸಿದ ಸಾವಿರ ಮರೆಯನ್ನೆಲ್ಲ ಅರಿಯಬಲ್ಲ ಮನಸ್ಸನ್ನು ನನಗೆ ಕೊಡು ನೀನು" ಎಂದು ಹೇಳಿ ಒಂದು ಮಾತಿನಲ್ಲಿ ಇಬ್ಬರು ಹಿರಿಯರ ಪೂಜೆಯನ್ನು ಮಾಡಿದರು. ಈಶ್ವರಮುನಿ ಎಂಬವರು ನಮ್ಮಾಳ್ವಾರನ್ನು ಕುರಿತ "ತಿರುವೊಳು ನಾಡೆನ್ನು; ತೆನ್ ಕುರುಗೂರೆನ್ನು; ಬೇಡುವಂತೆ ಸವಿಯಾದ ಚೆಲುವ ತಾಮ್ರಪರ್ಣಿಯೆನ್ನು; ದುರ್ಲಭವಾದ ರಹಸ್ಯಗಳನ್ನು ಅಂತಾದಿ ಗ್ರಂಥವಾಗಿ ಮಾಡಿದ ಗುರುವಿನ ಅಡಿಯೆಣೆಯನ್ನು ಓ ನನ್ನ ಹೃದಯವೇ ತಿಳಿಯಾಗಿ ಎಲ್ಲ ವೇಳೆಯೂ ಚಿಂತನಮಾಡು. ಆಕಾಶವನ್ನು ಮುಟ್ಟಿ ಸೊಗಯಿಸುವ ತೋಟಗಳ ಪ್ರಾಕಾರದ ರಂಗನಾಥನ ಕಲ್ಯಾಣಗುಣಗಳ ವಿಷಯವಾಗಿ ವಿಸ್ತಾರವಾದ ತಮಿಳು ವೇದ ಸಹಸ್ರವನ್ನು ಹೆತ್ತ ಮೊದಲ ತಾಯಿ ಶಠಕೋಪಮುನಿ. ತಮ್ಮ ಶಕ್ತಿಯಿಂದ ಬೆಳೆಸಿದ ಹಿತಮಾತೆ ರಾಮಾನುಜನು" ಎಂದು ಹೊಗಳಿದರು. ಉಳಿದ ಹೊಗಳಿಕೆಯ ಪದ್ಯಗಳನ್ನು ಇಲ್ಲಿ ಹೇಳುವುದು ಅವಶ್ಯಕವಿರಲಾರದು. ಈಗಲೂ ಸಂಪ್ರದಾಯದವರು ಸೇರಿದ ಸಭೆಗಳಲ್ಲಿ ಕಾರ್ಯ ಮುಗಿಯುವ ಮೊದಲು ಈ ಮಹನೀಯರ ಹೆಸರುಗಳನ್ನು ಹೇಳಿ ಸಂಭಾವನೆ ಎತ್ತುತ್ತಾರೆ. ಸಂಭಾವನೆಯನ್ನು ಎತ್ತುವ ವೇಳೆ ಸಭೆಯೆಲ್ಲಾ ಎದ್ದುನಿಂತಿರುತ್ತದೆ.

೧೪

ಇಂಥ ಮರ್ಯಾದೆಗೆ ಈ ಮಹನೀಯರು ಅರ್ಹರೆಂದು ಅವರ ಕೃತಿಗಳನ್ನು ನೋಡಿರುವವರೆಲ್ಲ ಒಪ್ಪಬೇಕು. ಈ ಕೃತಿಗಳಲ್ಲಿ ತತ್ತ್ವ ವಿಚಾರವೂ ಮತಪ್ರಕ್ರಿಯೆಯೂ ಅತ್ಯುತ್ತಮವಾದ ಕಾವ್ಯವಾಗಿ ಕಾಣುತ್ತವೆ. ಈ ಮಹನೀಯರೆಲ್ಲಾ ಭಗವದ್ಭಕ್ತಿಯನ್ನು ಬಾಳಿನ ಸರ್ವಸ್ವವಾಗಿ ಮಾಡಿಕೊಂಡರು. ಇವರಿಗೆ ಮತವೆನ್ನುವುದನ್ನು ಬಿಟ್ಟು ಬದುಕು ಸಫಲವಾಗಬಹುದೆಂದು ತೋರಲಿಲ್ಲ. ಹಾಗೆಯೇ ಇವರು ತಮ್ಮ ಆತ್ಮಕ್ಕೆ ಸರಿಯೆಂದು ತೋರಿದ ತತ್ತ್ವವನ್ನು ತಮ್ಮ ಕೃತಿಗಳಲ್ಲಿ ವ್ಯಕ್ತ ಪಡಿಸಿದರು. ಎಲ್ಲರ ಮನಸ್ಸೂ ಒಂದೇ ರೀತಿಯ ನಂಬಿಕೆಯಿಂದ ಹರಿಯಲಿಲ್ಲ. ಒಬ್ಬನು ನಾರಾಯಣನು ಮೊದಲು, ಅವನ ಮಗ ಬ್ರಹ್ಮ, ಅವನ ಮಗ ಈಶ್ವರ ಎಂದು ಹೇಳಿದ್ದರೂ, ಮತ್ತೊಬ್ಬನು ಮೂರು ಹೆಸರಿನಿಂದಲೂ ಒಂದೇ ದೇವರನ್ನು ಕರೆದನು. ಆದರೆ ಇಬ್ಬರೂ ವಿಷ್ಣುಭಕ್ತರೇ. ತಮ್ಮ ಮತವನ್ನೂ ತತ್ತ್ವವನ್ನೂ ಹೇಳುವಲ್ಲಿ ಉಕ್ತಿಸೌಂದರ್ಯವನ್ನು ಅಪೇಕ್ಷಿಸಿ ಇವರು ತಮ್ಮ ಕೃತಿಯನ್ನು ಅತ್ಯುತ್ತಮ ಸಾಹಿತ್ಯ ಪಂಕ್ತಿಯಲ್ಲಿ ನಿಲ್ಲಿಸಿದರು. ಒಬ್ಬಾತನಿಗೆ ಆಕಾಶವೇ ಹಣತಿ ನಕ್ಷತ್ರವೇ ಜ್ಯೋತಿ. ಮತ್ತೊಬ್ಬನಿಗೆ ಆತ್ಮ ಹಣತಿ ಅರಿವು ಜ್ಯೋತಿ. ಒಬ್ಬಾತನು ದೇವರನ್ನು ಆಶ್ರಯಿಸು ಎಂದು ಬುದ್ಧಿಹೇಳುವುದಕ್ಕೆ ಅವನು ನೆಲೆಸಿರುವ ಸ್ಥಾನವನ್ನು ಬಿಡಿಬಿಡಿಯಾಗಿ ವರ್ಣಿಸಿ ಹೊಗಳುತ್ತಾನೆ. ಒಬ್ಬನು ತನ್ನ ಹೃದಯದಲ್ಲಿ ದೇವರು ನೆಟ್ಟ ಜಯಧ್ವಜವನ್ನು ಮೇರುವಿನಮೇಲೆ ತನ್ನ ಪತಾಕೆಯನ್ನು ನಿಲ್ಲಿಸಿದ ಪಾಂಡ್ಯನ ರೀತಿಗೆ ಹೋಲಿಸಿ ಹೇಳುತ್ತಾನೆ. ಅನೇಕರು ತಾವು ಪೂಜಿಸುವ ದೇವರು ಸಾನ್ನಿಧ್ಯವನ್ನು ಕೊಟ್ಟಿರುವ ದಿವ್ಯ ದೇಶಗಳ ಅಂದವನ್ನು ವಿವರವಿವರವಾಗಿ ಹೊಗಳಿದ್ದಾರೆ. ಆಕಾಶವನ್ನು ಮುಟ್ಟಿರುವ ತೋಟಗಳು; ಅವುಗಳಲ್ಲಿ ಎತ್ತರವಾಗಿ ನಿಂತಿರುವ ತೆಂಗು, ಅಡಕೆ; ಆ ಮರಗಳಲ್ಲಿ ಜೋತುಬಿದ್ದಿರುವ ಹೊಂಬಾಳೆ; ಆ ಹೊಂಬಾಳೆ ಬಿರಿದು ಕಾರುವ ನರುಗಂಪು; ಆ ಕಂಪನ್ನು ಹರಡಿ ಹಾಯುವ ಮಂದಾನಿಲ; ಅದಕ್ಕೆ ಮೋಹಗೊಂಡು ದಟ್ಟವಾಗಿ ಬರುವ ತುಂಬಿ; ರಂಗನಾಥನ ದೇವಾಲಯದಲ್ಲಿ ಅವನ ವೈಭವಕ್ಕೆಂದು ಗೂಡುಗಳಲ್ಲಿ ಕುಳಿತಿರುವ ಗಿಳಿ;

ಪ್ರಾಕಾರದಮೇಲೆ ಆಡುವ ನವಿಲು; ಮರದಮೇಲಿಂದ ಹಾಡುವ ಕೋಗಿಲೆ; ತಿರುವೇಂಗಡದ ಕೋಡುಗಲ್ಲು; ಆ ಕಲ್ಲಿನಿಂದ ಜಾರುವ ಜೇನು; ಹರಹಿದ ಕೆನ್ನೆಲ್ಲ ಮಡಿಮಡಿಯ ಗದ್ದೆ; ತುಂಬಿ ಹರಿಯುವ ಕಾವೇರಿಯ ನೀರು; ಸಮೃದ್ಧವಾದ ಜಲಾಶಯದಲ್ಲಿ ಶಂಕೆಯಿಲ್ಲದೆ ಬೆಳೆದು ಆಟವಾಡುತ್ತಿರುವ ಬಾಳೆಯಮೀನು: ಇಷ್ಟೆಲ್ಲದರ ಚಿತ್ರವೂ ಈ ಕೃತಿಗಳಲ್ಲಿ ಬರುತ್ತದೆ. ಲೋಕವನ್ನು ಭಗವಂತನ ಲೀಲಾಸ್ಥಾನವೆಂದು ಎಣಿಸಿದ ಕಾರಣ ಈ ಭಕ್ತರಿಗೆ ಅದರ ಚೆಲುವನ್ನು ನೋಡಿ ಸುಖಿಸಬಹುದೇ ಎಂತ ಶಂಕೆ ಇರಲಿಲ್ಲ. ಅದನ್ನು ನೋಡಬೇಕು, ಆ ನೋಟದಿಂದ ಸುಖಿಸಬೇಕು, ಎಂಬುದು ಇವರ ಮನೋಧರ್ಮ. ಭಗವಂತನನ್ನು ಅನುಭವಿಸುವುದರಲ್ಲಿಯೂ, ಭಕ್ತನು ತಾನು ತಂದೆತಾಯಂತೆ ಸೇವಕನಂತೆ ಪ್ರಿಯೆಯಂತೆ ನಡೆದುಕೊಳ್ಳುವುದು ಈ ಪಂಥದಲ್ಲಿ ವಾಡಿಕೆ. ಈ ಕಾರಣದಿಂದ ಈ ಮಹನೀಯರ ಕೃತಿಗಳಲ್ಲಿ ಶೃಂಗಾರ, ವಾತ್ಸಲ್ಯ, ಭಕ್ತಿ ಮುಂತಾದ ಭಾವಗಳನ್ನು ಒಳಗೊಂಡ ಬಹು ರೀತಿಯ ರಸದ ಕಾವ್ಯ ದೊರೆಯುತ್ತದೆ.

೧೫

ಭರತವರ್ಷದ ಸಂಸ್ಕೃತಿ ಪ್ರಪಂಚದ ಚರಿತ್ರೆಯಲ್ಲಿ ತನ್ನ ಪಾಲಿಗೆ ಬಂದಿರುವ ಕೆಲಸವನ್ನು ಮಾಡಿ ಕೃತಾರ್ಥವಾಗಬೇಕಾದರೆ ನಮ್ಮ ದೇಶದ ಎಲ್ಲ ನಾಡುಗಳ ಮಹನೀಯ ಜೀವಗಳ ತಪಸ್ಸಿದ್ಧಿ ಒಟ್ಟುಗೂಡುವುದು ಆವಶ್ಯಕ. ಒಂದೊಂದು ನಾಡ ಜನವೂ ಉಳಿದೆಲ್ಲ ನಾಡುಗಳ ಹಿರಿಯರ ವಾಣಿಯ ಪರಿಚಯವನ್ನು ಮಾಡಿಕೊಳ್ಳಬೇಕು. ಈ ಕೆಲಸ ಇನ್ನೂ ಮೊದಲಾಗಿಲ್ಲ. ಮುಂದೆ ಬರುವ ತಲೆಮಾರುಗಳು ಇದನ್ನು ಕೈಕೊಳ್ಳಬೇಕಾಗಿದೆ. ಅದರಲ್ಲಿ ಪ್ರಯೋಜನ ಉಂಟೆಂದೂ ಸುಖ ಉಂಟೆಂದೂ ಈ ಉಪನ್ಯಾಸದಿಂದ ತೋರಿದೆಯೆಂದು ನಾನು ನಂಬಿದೇನೆ.

385-39— ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರಾದ
ಜಿ. ಶ್ರೀನಿವಾಸರಾಯರು ಮುದ್ರಿಸಿರುವರು

ಶ್ರೀನಿವಾಸ ರಚಿತ

ಆವರಣದಲ್ಲಿ ತೋರಿಸಿರುವುದು ಬಟ್ಟೆಯ ರಟ್ಟಿನ ಪ್ರತಿಯ ಬೆಲೆ

ಕೆಲವು ಸಣ್ಣ ಕತೆಗಳು

"ಈ ಪುಸ್ತಕದಲ್ಲಿ ಮುಖ್ಯವಾಗಿ ವಿನೋದಕರವಾದ ಮತ್ತು ವ್ಯವಹಾರಜ್ಞಾನವನ್ನೊಳಗೊಂಡ ಹತ್ತು ಕತೆಗಳುಂಟು.... ಕತೆಗಳನ್ನು ಹೇಳುವಲ್ಲಿ ಈ ಗ್ರಂಥಕಾರರು ನೈಪುಣ್ಯವನ್ನು ಚೆನ್ನಾಗಿ ವ್ಯಕ್ತಪಡಿಸಿರುವರು.... ಕನ್ನಡ ಭಾಷೆಯಲ್ಲಿ ಈ ಮಾದರಿಯ ಒಳ್ಳೆಯ ಕಥಾ ಪುಸ್ತಕಗಳನ್ನು ನಾವು ಪ್ರಾಯಕವಾಗಿ ನೋಡಿಲ್ಲ ...."

— ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ

"ಶ್ರೀನಿವಾಸರ ಸಣ್ಣ ಕಥೆಗಳನ್ನು ಓದುತ್ತಿದ್ದರೆ ಬೆಣ್ಣೆಯ ಸಿಂಹಗಳನ್ನು ನೋಡಿದಂತೆ ಭಾವನೆಯಾಗುತ್ತದೆ... ಎಂಥ ಮೃದುವಾದ ವಸ್ತುವಿನಲ್ಲಿ ಎಷ್ಟು ಸುಲಭವಾಗಿ, ಎಷ್ಟು ಕುಶಲತೆಯಿಂದ, ಎಂಥ ಪದಾರ್ಥವನ್ನು ಮಾಡಿಟ್ಟದ್ದಾರೆಂದು ಮೆಚ್ಚುತ್ತ ಅದರಲ್ಲಿ ಮುಗ್ಧರಾಗುತ್ತೇವೆ.... ಈ ವಿಧವಾದ ಕೋಮಲವಾದ ಸರಸವಾದ ಹಾಸ್ಯ ಮತ್ತು ವಿಡಂಬನಮಾಡುವ ಪದ್ಧತಿಯು ಕನ್ನಡ ಸಾಹಿತ್ಯಕ್ಕೆ ನೂತನವಾದದ್ದು. ಇದರಿಂದ ಯಾರಿಗೂ ಮನಸ್ಸಿಗೆ ಅಸಮಾಧಾನವಾಗುವುದಿಲ್ಲ, ಅದರಿಂದ ಉಪಯೋಗವಾಗದವರಿಲ್ಲ; ಅದನ್ನು ಓದಿ ಆನಂದಪಡಲಾರದವರಿಲ್ಲ."

— ಪ್ರಬುದ್ಧ ಕರ್ಣಾಟಕ

೧ ರೂಪಾಯಿ (ರೂ. ೧–೮–೦)

ಬಿನ್ನಹ

"ಇದೊಂದು ಅತ್ಯುತ್ತಮವಾದ ಗೀತಾವಳಿ. 'ನಿರೀಕ್ಷೆ', 'ವೈಶಾಖದಲ್ಲಿ', 'ದನಕಾಯುವ ಹುಡುಗರು' ಮೊದಲಾದ ಗೀತಿಕೆಗಳಲ್ಲಿ ತೋರಿಬರುವ ಕವಿಯ ಕಲ್ಪನಾಸಾಮರ್ಥ್ಯ ವರ್ಣನಾಚಾತುರ್ಯಾದಿಗಳು ಅಸಾಮಾನ್ಯವಾದವು. ಮೃದು ಮಧುರವಾದ ಮಾತುಗಳಿಂದ ಇಷ್ಟು ಲಲಿತವಾದ ಶೈಲಿಯಲ್ಲಿ ಪ್ರಕೃತಿಯ ಸೊಬಗನ್ನು ಕಣ್ಣಿಗೆ ಕಟ್ಟಿದಂತೆ ಇಷ್ಟು ಮನೋಹರವಾಗಿ ವರ್ಣಿಸುವ ಗೀತಿಕೆಗಳು ಕನ್ನಡ ಸಾಹಿತ್ಯದಲ್ಲಿ ಅಪೂರ್ವವೆಂದು ಹೇಳಿದರೆ ಅತ್ಯುಕ್ತಿಯಾಗಲಾರದು."

— ಟಿ. ಎಸ್. ವಿ. (ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಾಪಕರು ಮ॥ ರಾ॥ ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಅವರು)

ಶ್ರೀನಿವಾಸ ರಚಿತ

ಬಿನ್ನಹ (ಮುಂದಕ್ಕೆ)

“ಜಗತ್ತಿನಲ್ಲಿ ಕಾಣಬರುವ ಬೆಡಗು ಬೆರಗುಗಳ ಚಿತ್ರಗಳನ್ನು ಓದುವವರ ಅಥವಾ ಕೇಳುವವರ ಕಣ್ಣಿನ ಮುಂದೆ ತರುವುದರಲ್ಲಿ ಶ್ರೀನಿವಾಸರು ನಿಪುಣರು. ಅವರ ಪದಸರಣಿಯು ಮೃದುವಾಗಿಯೂ, ಗಾನರೀತಿಯು ಇಂಪಾಗಿಯೂ ಇವೆ. ಲೌಕಿಕ ಭಾವಗಳ ಮೂಲಕ ಲೋಕಾತೀತ ವಸ್ತುವನ್ನು ಅನುಸಂಧಾನ ಮಾಡುವ ಪ್ರಯತ್ನವನ್ನು ಅವರ ಹಾಡುಗಳು ತೋರಿಸುತ್ತವೆ.” —ಅರ್ಥಸಾಧಕ ಪತ್ರಿಕೆ

“ಕತೆಗಳು ಕನ್ನಡಕ್ಕೆ ಹೊಸತಲ್ಲದಿದ್ದರೂ ಕೆಲವು ಸಣ್ಣಕತೆಗಳು ಹೇಗೆ ಎಲ್ಲಾ ವಿಧದಲ್ಲಿಯೂ ನೂತನವಾಗಿವೆಯೋ, ಹಾಗೆಯೇ ಪದ್ಯಗಳೂ ಕೀರ್ತನೆಗಳೂ ದೇವರನಾಮಗಳೂ ಕನ್ನಡಕ್ಕೆ ಹೊಸತಲ್ಲದಿದ್ದರೂ ‘ಬಿನ್ನಹ’ದ ಪದ್ಯಗಳು— ಅಥವಾ ಅವುಗಳಲ್ಲಿ ಸರ್ವಸಮ್ಮತವಾಗಿ ಕೆಲವು — ಎಲ್ಲಾ ವಿಧದಲ್ಲಿಯೂ ನೂತನವಾಗಿ ಆನಂದದಾಯಕವಾಗಿವೆ.” —ಪ್ರಬುದ್ಧ ಕರ್ಣಾಟಕ

ಐದು ಆಣೆ

ಶಾಂತಾ

(ಸಣ್ಣ ದೃಶ್ಯ)

(ಋಷ್ಯಶೃಂಗೋಪಾಖ್ಯಾನ)

“ಈ ಗ್ರಂಥಕರ್ತರ ಕಲ್ಪನಾಚಾತುರ್ಯವನ್ನೂ ಲೋಕವ್ಯವಹಾರವನ್ನು ಪ್ರತಿಬಿಂಬಿಸುವ ಕೌಶಲ್ಯವನ್ನೂ ವರ್ಣನೆಗಳ ಸ್ವಾರಸ್ಯವನ್ನೂ ಉದಾರಸೂಕ್ತಿಗಳನ್ನೂ ಸರಸಹಾಸ್ಯಗಳನ್ನೂ ಲಲಿತವಾಗಿಯೂ ಭಾವಗರ್ಭಿತವಾಗಿಯೂ ಇರುವ ಕನ್ನಡ ಶೈಲಿಯನ್ನೂ ಅನುಭವಿಸಿರತಕ್ಕವರಿಗೆ ಈ ಹೊಸ ಗ್ರಂಥದ ಪರಿಚಯವನ್ನು ಉಪಚಾರ ಸ್ತೋತ್ರಗಳಿಂದ ಮಾಡಿಕೊಡಬೇಕಾಗಿಲ್ಲ......ಕನ್ನಡದಲ್ಲಿ ಬಹುಕಾಲದಿಂದ ಬಂದ ಸಂಪ್ರದಾಯವನ್ನು ಅನುಸರಿಸಿ ರಚಿತವಾಗುವ ಗ್ರಂಥರಾಶಿಯನ್ನು ಓದಿ ಬೇಸರಪಟ್ಟು ಹೊಸ ಮಾರ್ಗದಲ್ಲಿ ಹೊಸ ಭಾವಗಳನ್ನು ತೋರಿಸಿ ಕಲ್ಪನಾಶಕ್ತಿಯನ್ನು ಕುದುರಿಸಬಲ್ಲ ಕಾವ್ಯಗಳನ್ನು ನಿರೀಕ್ಷಿಸಿಕೊಂಡಿರತಕ್ಕವರಿಗೆ ಶ್ರೀನಿವಾಸರ ಲೇಖನಗಳು ಬಹಳ ಸಂತೋಷವನ್ನು ಕೊಡುತ್ತವೆ.”

—ಅರ್ಥಸಾಧಕ ಪತ್ರಿಕೆ

“ಈ ಸಣ್ಣ ದೃಶ್ಯಕ್ಕೆ ಋಷ್ಯಶೃಂಗೋಪಾಖ್ಯಾನವೇ ಕಥಾವಸ್ತು. ಆದರೆ ರಾಮಾಯಣದಲ್ಲಿ ಬರುವ ಉಪಾಖ್ಯಾನಕ್ಕೂ ಇಲ್ಲಿ ಕಂಡುಬರುವ ಕಥಾನಕಕ್ಕೂ ಕೆಲವು ವ್ಯತ್ಯಾಸಗಳಿವೆ......ಈ ದೃಶ್ಯವು ಪ್ರಣಯನಿರೂಪಣದಲ್ಲಿ ಅಪೂರ್ವ ಚಮತ್ಕಾರವನ್ನೂ ಹೊಸ ಪರಿಯ ಕಾಂತಿಯನ್ನೂ ವ್ಯಕ್ತಪಡಿಸಿದೆಯೆಂದು ದೃಢವಾಗಿ ಹೇಳಬಹುದು....” —ಪ್ರಬುದ್ಧ ಕರ್ಣಾಟಕ

ಆರು ಆಣೆ

ಶ್ರೀನಿವಾಸ ರಚಿತ

ಸಾವಿತ್ರಿ

"ಕೆಲವು ಸಣ್ಣ ಕತೆಗಳು, ಬಿನ್ನಹ—ಮೊದಲಾದ ಸಣ್ಣ ಸಣ್ಣ ಒಡವೆಗಳನ್ನು ಹೊಸ ಮೆರುಗಿನಿಂದ ಕನ್ನಡನುಡಿವೆಣ್ಣಿಗೆ ತೊಡಿಸಿರುವ ಈ ಲೇಖಕರು ವಾಚಕರಿಗೆ ಹೊಸಬರಲ್ಲ. ಪುರಾಣಪ್ರಸಿದ್ಧಳಾದ ಸಾವಿತ್ರಿಯು ಕಥೆಯು ಎಲ್ಲರಿಗೂ ಗೊತ್ತೇ ಇದ್ದರೂ ಅದು ಇದರಲ್ಲಿ ಚಮತ್ಕಾರವಾದ ದೃಶ್ಯರೂಪದಲ್ಲಿರುವುದು. ಒಟ್ಟಿನಮೇಲೆ ಗ್ರಂಥವು ಮನೋಹರವಾಗಿದೆ." —ಜಯಕರ್ನಾಟಕ

"ಗ್ರಂಥದ ಆಕಾರವು ಸಣ್ಣದಾದರೂ ಕಾವ್ಯದ ಯೋಗ್ಯತೆಯು ಸಣ್ಣದಲ್ಲವೆಂಬದಾಗಿ ಶ್ರೀನಿವಾಸರ ಕಾವ್ಯರಚನಾ ಸಾಮರ್ಥ್ಯವನ್ನರಿತಿರುವವರಿಗೆ ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. . . . ಇಂತಹ ಉತ್ತಮ ಕಾವ್ಯಗಳು ಕನ್ನಡದಲ್ಲಿ ಹುಟ್ಟುತ್ತಿರುವುದು ಕನ್ನಡಿಗರ ಸೌಭಾಗ್ಯವೆಂಬುದರಲ್ಲಿ ಸಂಶಯವಿಲ್ಲ."

—ಪ್ರಬುದ್ಧ ಕರ್ಣಾಟಕ

ಆರು ಆಣೆ

ಸಣ್ಣ ಕತೆಗಳು

"ಕಥೆಹೇಳುವ ಸೊಗಸು ಶ್ರೀನಿವಾಸನ ಪ್ರತಿಯೊಂದು ಕಥೆಯ ಪ್ರತಿಯೊಂದು ವಾಕ್ಯದಲ್ಲೆಂಬಂತೆ ತುಂಬಿ ತುಳುಕುತ್ತಿದೆ. ಕಥೆಗಳನ್ನು ಓದುತ್ತಿರುವಾಗ ಅವುಗಳಲ್ಲಿ ಚಿತ್ರಿತವಾದ ಚಿತ್ರಗಳು ರೂಪು ತಾಳಿ ಮನಸ್ಸಿನ ಮುಂದೆ ಬಂದು ನಲಿದಾಡುವುವು. ಇದೇ ಸಾಹಿತ್ಯ ಸೌರಭ್ಯದ ಪರಮಾವಧಿ. ಸಾಮಾನ್ಯ ಜೀವನ ಪಥದಲ್ಲಿ ಕೂಡಾ ಸಾಹಿತ್ಯ ಯೋಗ್ಯವಾದ ಕಥಾವಸ್ತುವಿದೆ, ಅಂತಹ ಸಾಮಾನ್ಯ ಕಥಾವಸ್ತುವನ್ನು ನಿತ್ಯೋಪಯೋಗದ ಸರಳವಾದ ಭಾಷೆಯಲ್ಲಿ ನಿರೂಪಿಸುವುದರಲ್ಲಿ ಕೂಡಾ ಉತ್ಕೃಷ್ಟವಾದ ಸಾಹಿತ್ಯಮಾರ್ಗವಿದೆಯೆಂದು ನಿದರ್ಶಿಸುವುದಕ್ಕೆ ಶ್ರೀನಿವಾಸನ ಕಥೆಗಳೇ ಮೂಲ ಸಾಕ್ಷಿಗಳಾಗಿವೆ. . . ." —ಕನ್ನಡ ಸಹಕಾರಿ

"ಪ್ರಕೃತ ಗ್ರಂಥದಲ್ಲಿಯ ನಾಲ್ಕು ಕತೆಗಳು ನೀತಿಬೋಧಕವಾಗಿಯೂ ಯುಕ್ತಿ ಯುಕ್ತವಾಗಿಯೂ, ರಸವತ್ತಾಗಿಯೂ, ಚಿತ್ತಾಕರ್ಷಕವಾಗಿಯೂ, ಲಲಿತವಾದ ಭಾಷೆಯಿಂದ ಕೂಡಿದುದಾಗಿಯೂ ಇವೆ. ಇವುಗಳಲ್ಲಿ ಲೇಖಕರು ಪ್ರಕೃತಿ ಸೌಂದರ್ಯವನ್ನು ಕೇವಲ ಅಂದವಾಗಿಯೂ, ಸಾಮಾಜಿಕ ವಿಷಯಗಳನ್ನು ಬಹಳ ಚಮತ್ಕಾರವಾಗಿಯೂ ಚಿತ್ರಿಸಿರುತ್ತಾರೆ. ಮುಸುಮುತ್ತಿಯೆಂಬ ಕಥೆಯಲ್ಲಿ ಲೇಖಕರ ಚತುರತೆಯು ಸ್ಪಷ್ಟವಾಗಿ ಕಾಣುವುದು."

—ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ

"ತ್ರಿವೇಣೀ ಪತ್ರಿಕೆಯ ಹಳೆಯ ಸಂಚಿಕೆಗಳನ್ನು ಒಂದು ದಿನ ತಿರುವಿ ಹಾಕುತ್ತಿರುವಲ್ಲಿ ಕಣ್ಣಿಗೆ ಬಿದ್ದ ಒಂದು ಕತೆಯನ್ನು ಮಧ್ಯದಿಂದ ಓದತೊಡಗಿದೆನು. ಮನಸ್ಸನ್ನು ಕವರಿದ ಆ ಕತೆಯನ್ನು ಆರಂಭಿಸಿದ ಎಡೆಯಿಂದ ನನ್ನನ್ನೂ

ಶ್ರೀನಿವಾಸ ರಚಿತ

ಸಣ್ಣ ಕತೆಗಳು (ಮುಂದಕ್ಕೆ)

ಅರಿಯದೆ ಕೊನೆಯವರೆಗೆ ಓದಿ ತುಂಬ ಅನುಭವಿಸಿ ಇದನ್ನು ಬರೆದವರು ಯಾರು, ಇಷ್ಟು ಸುಂದರವಾದ ಭಾವಚಿತ್ರ, ದೇಶಾಭಿಮಾನ, ದೈವಭಕ್ತಿ, ಕಲೆಯನ್ನು ಕುರಿತ ಅರಿವು, ಹುಡುಕಿ ತೆಗೆಯೋಣವೆಂದರೆ ಒಂದು ತಪ್ಪು ಇಲ್ಲದ ಸ್ಫಟಿಕದಂತೆ ಸ್ವಚ್ಛವಾದ ಆಂಗ್ಲಭಾಷಾ ಶೈಲಿ, ಇಷ್ಟನ್ನೂ ಉಳ್ಳವರು ಯಾರು ಎಂದು ಕತೆಯ ಮೊದಲನ್ನು ತಿರುಗಿಸಿ ನೋಡಿದೆನು....ನನಗೆ ಪ್ರಿಯರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಬರೆದದ್ದೆಂದು ಇದ್ದದನ್ನು ನೋಡಿ ಬಹಳ ಸಂತೋಷ ಪಟ್ಟೆನು. ಇವರ ಹೆಸರ ಕೆಳಗೆ ಕನ್ನಡದಿಂದ ಆಂಗ್ಲಭಾಷೆಗೆ ಪರಿವರ್ತಿಸಿದವರು ನನ್ನ ಸಹಪಾಠಿ ಸಖರಾದ ಶ್ರೀ ನವರತ್ನ ರಾಮರಾಯರವರು ಎಂದು ನೋಡಿದೆನೋ ನನ್ನ ಆನಂದ ಅಳತೆ ಮೀರಿಹೋಯಿತು. ಸೊಗಸೂ ವಿಷಯವೂ ಕಲೆತ ಈ ಕತೆಯನ್ನು ತಮಿಳ ಜನರೂ ಅನುಭವಿಸಬೇಕೆಂದು ಆಸೆಪಟ್ಟು ತಮಿಳಿನಲ್ಲಿ ಬರೆದೆನು. ಕತೆಯ ಹೆಸರು ಮುಸುಮುತ್ತಿ........"

— ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರ (ರಾಜಾಜಿ) ಇವರು ತಮ್ಮ ತಮಿಳ ಭಾಷಾಂತರಕ್ಕೆ ಬರೆದಿರುವ ಮುನ್ನುಡಿಯಿಂದ

೮ ಆಣೆ (೧೨ ಆಣೆ)

ಸಾಹಿತ್ಯ (ಒಂದು ಉಪನ್ಯಾಸ)

"ಈ ಗ್ರಂಥದಲ್ಲಿ, ಪೀಠಿಕೆ ಉಪಸಂಹಾರಗಳನ್ನು ಬಿಟ್ಟರೆ ೧. ಜೀವನ ಸಾಹಿತ್ಯಗಳ ಪರಸ್ಪರ ಸಂಬಂಧ; ೨. ಸಾಹಿತ್ಯದ ಕಾರ್ಯ; ೩. ಸಾಹಿತ್ಯದಲ್ಲಿರಬೇಕಾದ ಉದ್ದೇಶವೂ ನೀತಿಯೂ; ೪. ಸಾಹಿತ್ಯದ ಸಾಮಗ್ರಿ ರೂಪಾದಿಗಳು— ಎಂದು ನಾಲ್ಕು ಭಾಗಗಳಿವೆ........ಇದು ಶಾಸ್ತ್ರಜಾತಿಗೆ ಸೇರಿ ಸಾಮಾನ್ಯವಾಗಿ ನೀರಸವಾಗಿರಬೇಕಾದ ಗ್ರಂಥ ಭೇದವಾದರೂ ಇದರಲ್ಲಿ 'ಬಿನ್ನಹ', 'ಸಣ್ಣ ಕತೆಗಳು' ಮುಂತಾದವುಗಳ ಸುಗಂಧ ಸೌಕುಮಾರ್ಯ, ಸೌಂದರ್ಯಾದಿಗಳು ಅಲ್ಲಲ್ಲಿಯೇ ಕಂಡುಬರುತ್ತವೆ........ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇಂಥ ಗ್ರಂಥವು ಮೊದಲನೆಯದು....ಸಾಹಿತ್ಯದಲ್ಲಿ ಅಭಿರುಚಿ ಇರತಕ್ಕ ಎಲ್ಲರೂ ಈ ಗ್ರಂಥವನ್ನು ಓದತಕ್ಕದ್ದಾಗಿದೆ." — ಪ್ರಬುದ್ಧ ಕರ್ಣಾಟಕ

೧೨ ಆಣೆ

ಅರುಣ

"ಇದೊಂದು ಬಹು ಸುಲಲಿತ ಶೈಲಿಯ ಸರಸ ಖಂಡ ಕಾವ್ಯಗಳ ಸಮುಚ್ಚಯ......೧೫ ವಿಷಯಗಳನ್ನು ಕುರಿತ ಕವಿತೆಗಳಿರುವುವು...... ಭಾವಗಾಂಭೀರ್ಯವು ಪ್ರಕೃತ ಕೃತಿಯ ಸರ್ವಸ್ವ........ಇದರೊಳಗಿನ 'ಅಭಿಮನ್ಯು', 'ಮದಲಿಂಗನ ಕಣಿವೆ', 'ತ್ಯಾಗಭೋಗ' ಮುಂತಾದ ಕೃತಿಗಳು

ಶ್ರೀನಿವಾಸ ರಚಿತ

ಅರುಣ (ಮುಂದಕ್ಕೆ)

ಹಲವು ಬಾರಿ ಓದಿದರೂ ಹೊಸ ಹೊಸವಾಗಿ ತೋರುವುವು. ಆಕಲನ ಮಾಡಿದಂತೆ ಭಾವದ ಆಳವು ಗೋಚರಿಸುತ್ತ ಹೋಗುವುದು.''

— ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ

೮ ಆಣೆ

ವಿಮರ್ಶೆ (೧)

''....ಇಂಥ ಪುಸ್ತಕಗಳನ್ನು ಮನೆಗೆ ವರಲಕ್ಷ್ಮಿಯನ್ನು ಬರಮಾಡಿ ಕೊಳ್ಳುವಂತೆ ಆದರದಿಂದಲೂ ಭಕ್ತಿಯಿಂದಲೂ ಬರಮಾಡಿಕೊಳ್ಳಬೇಕು.

ವಿಮರ್ಶೆಯ ಕರ್ತರು ಕನ್ನಡ ನಾಡಿನಲ್ಲಿ ಸುಪ್ರಸಿದ್ಧರು. ಅವರು ಯಾವ ಜಾತಿಯ ಸಾಹಿತ್ಯ ನಿರ್ಮಾಣದಲ್ಲಿ ಕೈಹಾಕಿರುವರೊ ಅವಕ್ಕೆಲ್ಲ ಕಳೆಯನ್ನೂ ಅಲಂಕಾರವನ್ನೂ ತಂದಿದ್ದಾರೆ. ವಿಮರ್ಶೆಯ ವಿಷಯವಾಗಿ ಮೊದಲು ಇವರೇ ಉಪನ್ಯಾಸ ಬರೆದಿರುವವರು; ವಿಮರ್ಶಾತ್ಮಕವಾದ ಉಪನ್ಯಾಸಗಳನ್ನು ಪುಸ್ತಕ ವಾಗಿ ಪ್ರಚಾರಮಾಡಿರುವವರಲ್ಲಿ ಮೊದಲನೆಯವರೂ ಇವರೇ. ಹೀಗೆ ಈ ಕೆಲಸ ದಲ್ಲೆ ಒಂದು ಅಪೂರ್ವತೆಯಿದೆ. ಅದರ ಜೊತೆಗೆ ಅಸಾಧಾರಣವಾದ ಗುಣ ಪ್ರಭಾವವೂ ಇದೆ.

ಕೊನೆಯ ಉಪನ್ಯಾಸ ಕನ್ನಡ ದೇಶದ ಲಾವಣಿ ಸಾಂಗತ್ಯಗಳ ವಿಚಾರ; ಈ ಉಪನ್ಯಾಸವನ್ನು ನಾವು ಎಷ್ಟು ಪ್ರಶಂಸಿಸಿದರೂ ಕಮ್ಮಿಯೆ. ಈ ತೆರನಾದು ದನ್ನು ಅವರೇ ಹಿಂದೆ ಬರೆದಿಲ್ಲ. ಇಲ್ಲಿನ ಶೈಲಿ, ಭಾವಾನುವಾದ, ವ್ಯಾಖ್ಯಾನ, ವಿಷಯ ನಿರೂಪಣೆಗಳು ಅಸದೃಶವಾದುವು. ಇದುವರೆಗೆ ಪ್ರಕಟವಾಗಿರುವ ಯಾವ ಉಪನ್ಯಾಸದಲ್ಲಿಯಾದರೂ ವಿಮರ್ಶೆ, ಸಾಹಿತ್ಯ, ಕಲೆಗಳು ಏಕಕಾಲದಲ್ಲಿ ಸೇರಿರುವುದೇ ಆದರೆ ಅದು ಹಾಗಿರುವುದು ಇಲ್ಲಿಯೇ. ವಿಮರ್ಶೆಯೆ ಕಲೆಯಾಗಿ ಸಾಹಿತ್ಯವಾಗಿ ರೂಪುಗೊಂಡಿರುವುದಕ್ಕೆ ಇದು ಉತ್ತಮವಾದ ಉದಾಹರಣೆ. ಇಲ್ಲಿನ ಚಿತ್ರಗಳು ನಮ್ಮ ಮನಸ್ಸಿನಲ್ಲಿ ಅಳಿಸಿಹೋಗದಂತೆ ನಿಂತುಬಿಡುವುವು; ಅವನ್ನು ಬೇರೊಬ್ಬರು ಹೀಗೆ ಬರೆಯಲಾರರು. ಈವರೆಗೂ ಕನ್ನಡದಲ್ಲಿ ಯಾರೂ ಬರೆದಿಲ್ಲ. ಗಂಜಾಂ ಪೈಲವಾನರು, ಕೋಲಾಟದವರು, ಭಿಕ್ಷುಕರು, ಮಲೆನಾಡಿನ ನರ್ತಕರು—ಇವರುಗಳನ್ನು ಹೀಗೆ ಚಿತ್ರಿಸಬಲ್ಲವರು 'ಸಣ್ಣ ಕತೆಗಳ' ಶ್ರೀನಿವಾಸ ರೊಬ್ಬರೆ....ಕನ್ನಡಿಗರೆಲ್ಲರೂ ಇದನ್ನು ಒಂದು ಬಾರಿಯಾದರೂ ಓದಿದರೆ ಇದು ಎಷ್ಟು ಸುಂದರವಾಗಿ, ಸ್ವಾರಸ್ಯವಾಗಿರುವುದೆಂಬುದನ್ನೂ, ನಮ್ಮ ಪ್ರಶಂಸೆ ಉತ್ಪ್ರೇಕ್ಷೆಯಲ್ಲವೆಂಬುದನ್ನೂ ತಿಳಿಯುವರು.''

—ಪ್ರಬುದ್ಧ ಕರ್ಣಾಟಕ

೧೦ ಆಣೆ (೧ ರೂ.)

ಶ್ರೀನಿವಾಸ ರಚಿತ

ಉಷಾ

ಸಣ್ಣ ದೃಶ್ಯ ೪ ಆಣೆ

ಸುಬ್ಬಣ್ಣ

"ಈ ಚಿಕ್ಕ ಕಥೆಯನ್ನು ಬರೆದ ಲೇಖಕನು ಸಾಹಸವಂತನೂ ಸಾಹಿತ್ಯ ಕಲಾಭಿಜ್ಞನೂ ಆಗಿರಲೇಬೇಕು....ಜೀವನವು ಯಾವ ಯಾವ ಪದಾರ್ಥಗಳಿಂದ ಆಗಿದೆ ಎನ್ನುವುದನ್ನು ಲೇಖಕನು ಚೆನ್ನಾಗಿ ಅರಿತಿರುವನು....ಸುಬ್ಬಣ್ಣನ ಹೆಂಡತಿ ಲಲಿತಾ ಆರ್ಯ ನಾರಿಯ ಉತ್ತಮ ಆದರ್ಶವೆಂದು ಹೇಳುವೆನು. ಆಕೆ ಬೇರೆ ಸೀತಾ ಆಗಿರುವಳು......ಕತೆಗಾರನು ಲಲಿತೆಯ ಪಾತ್ರಲೇಖನದಲ್ಲಿ ಅಸಾಧಾರಣತೆಯನ್ನು ತೋರಿಸಿ ಎಲ್ಲಿಯೂ ಲಲಿತೆಯನ್ನು ಅಲೌಕಿಕಳನ್ನಾಗಿ ಮಾಡಿಲ್ಲ. ಹಾಗೆ ಮಾಡುವುದರಿಂದ ಲಲಿತೆಯು ಅರಳುತ್ತಿದ್ದಳು. ಆದರೆ ಲಕ್ಷಾವಧಿ ಭಾರತ ಮಹಿಳೆಯರ ಪ್ರತಿನಿಧಿಯಾಗುತ್ತಿರಲಿಲ್ಲ. ಹಿಂದೂ ಸಮಾಜದ ಪರಮ ಭಾಗ್ಯವೆಂದರೆ ಮನೆ ಮನೆಯಲ್ಲಿಯೂ ಲಲಿತೆಯಂತಹ ದೇವಿಯರು ಸಿಕ್ಕುವುದು. ಇಂಥ ಚಿತ್ರದಿಂದಲೇ ಮನುಷ್ಯನಿಗೆ ನಾರೀ ಪ್ರತಿಷ್ಠಾ ದೀಕ್ಷೆ ದೊರೆಯುವುದು.. ಲಘು ಕಥೆಯ ವ್ಯಾಕರಣವನ್ನು ಈ ಕಥೆಯಲ್ಲಿ ಲೇಖಕನು ಚೆನ್ನಾಗಿ ಪಾಲಿಸಿದ್ದಾನೆ. ......ಪಾಶ್ಚಾತ್ಯ ಲೇಖಕರು ಸಂಗೀತದ ಒಂದು ರೀತಿಯ ಪ್ರಭಾವವನ್ನು ತೋರಿಸುವುದಾದರೆ ಸುಬ್ಬಣ್ಣನ ಮಾನಸ ತಂದೆ ಅದರ ಬೇರೊಂದು ಪ್ರಭಾವ ವನ್ನು ತೋರಿಸಿರುವನು.... ಈ ಕಥೆ ಸಂಪೂರ್ಣವಾಗಿ ಸರಳವಾಗಿ ಇದೆ. ಈ ಕಾರಣದಿಂದ ತನ್ನ ಹದಿನಾರು ಕಳೆಗಳಿಂದ ಪ್ರಕಾಶಿಸುತ್ತಿದೆ."

—ಶ್ರೀ ಕಾಕಾ ಕಾಲೇಲ್‌ಕರ್ ಅವರ ಹಿಂದೀ ಅವಲೋಕನದಿಂದ

"ಸುಬ್ಬಣ್ಣ ಶ್ರೀನಿವಾಸರ ಕಥೆಗಳಲ್ಲೆಲ್ಲಾ ಸರ್ವೋತ್ತಮವಾದದ್ದು. ವಸ್ತುಕಥನ ಪಾತ್ರಪ್ರದರ್ಶನ ಭಾವವಿಭಜನ ರಸಪ್ರತಿಪಾದನ— ಈ ವಿಚಾರಗಳಲ್ಲಿ ಶ್ರೀನಿವಾಸರು ಈ ಕತೆಯೊಳಗೆ ತಮ್ಮನ್ನು ತಾವೇ ಮೀರಿಸಿಬಿಟ್ಟಿದಾರೆ."

—ಪ್ರಬುದ್ಧ ಕರ್ಣಾಟಕ

"ಸುಬ್ಬಣ್ಣ ಎಂಬ ಚರಿತ್ರಕಥೆಯು ಶ್ರೀನಿವಾಸರ ಕಲೆಯ ನಿಚ್ಚ ಕುರುಹು. ಕನ್ನಡದಲ್ಲಿ ಈವರೆಗೆ ಅಂಥ ಸುಂದರ ಕೃತಿಯು ಜನಿಸಿರಲಿಲ್ಲವೆಂದು ಕೈವಾರಿಸಿ ಹೇಳಬಹುದು. ಇಂಗ್ಲಿಶ್‌ದಲ್ಲಿಯೂ ಅದರ ತೆರನಾದ ಕಥಾಜಾತಿಯು ವಿರಳವೇ. ಇಂದಿನ ನಮ್ಮ ಕಥಾ ಸಾಹಿತ್ಯದಿಂದ ಎತ್ತಿ ತೋರಿಸಿ ಹೆಮ್ಮೆಪಡ ಬಹುದಾದ ಸೂಕ್ಷ್ಮ ಸ್ವಭಾವ ಚಿತ್ರದ ಸಣ್ಣ ಕತೆಯದು."

— ಶ್ರೀ ರಂ. ಶ್ರೀ. ಮುಗಳಿಯವರು, 'ನವಿಲುಗರಿ' ಎಂಬ ಕಥಾಸಂಗ್ರಹಕ್ಕೆ ಬರೆದ ಮುನ್ನುಡಿಯಿಂದ

೮ ಆಣೆ (೧೨ ಆಣೆ)

ಶ್ರೀನಿವಾಸ ರಚಿತ

ತಾಳೀಕೋಟೆ

ಒಂದು ನಾಟಕ ೧೨ ಆಣೆ

ವಿಮರ್ಶೆ (೨)

ನಾಲ್ಕು ಲೇಖನಗಳು ೧೨ ಆಣೆ

ನಾಲ್ಕು ಸಣ್ಣ ಕತೆಗಳು

"'ಸಾರಿಪುತ್ರನ ಕಡೆಯ ದಿನಗಳು', 'ಕಾಮನ ಹಬ್ಬದ ಒಂದು ಕತೆ' ಇವು ಒಂದೊಂದೂ ಒಂದು ಅನುಭವವನ್ನು ಚಿತ್ರಿಸತಕ್ಕವು. ಅವನ್ನು ಓದಿದ ಮೇಲೆ ಮನಸ್ಸು ಬೇರೆಯಾದಂತೆ ಪರಿಪಕ್ವವಾದಂತೆ ತೋರುವುದು. ಒಂದು ಅನಿರ್ವಚನೀಯವಾದ ಸುಖವುಂಟಾಗುವುದು.. ಪ್ರಪಂಚದ ಸಾಹಿತ್ಯಕ್ಕೆ ಸೇರಲು ಯೋಗ್ಯವಾದ ಕೆಲವು ಕತೆಗಳನ್ನು ಬರೆದಿರುವ ಶ್ರೀನಿವಾಸರು....."

—ಪ್ರಬುದ್ಧ ಕರ್ಣಾಟಕ

೬ ಆಣೆ (೧೦ ಆಣೆ)

ಕನ್ನಡದ ಸೇವೆ

ಒಂದು ಭಾಷಣ ೪ ಆಣೆ

ತಾವರೆ

"ಶ್ರೀನಿವಾಸರ ಕಾವ್ಯಲೋಕದಲ್ಲಿ 'ಅರುಣ'ನು ಮೊದಲು ಬಂದನು. ....'ಅರುಣ'ನಿಗಿಂತ ಮಿಗಿಲಾಗಿ ಈ 'ತಾವರೆ'ಯು ಶ್ರೀನಿವಾಸರ ಜೀವನದ ಹಾಗೂ ಕಾವ್ಯದ ಸುಂದರ ಸಂಕೇತವಾಗಿದೆ. ಶ್ರೀನಿವಾಸರ ಜೀವನವೆಂದರೇ ಕಾವ್ಯ. ಕಾವ್ಯವೆಂದರೇ ಜೀವನ. ಇವೆರಡಕ್ಕೂ ಭೇದವಿಲ್ಲೆಂದು ತೋರಿಸಲು ಒಂದೇ ಒಂದು ಕುರುಹು ಬೇಕಾಗಿತ್ತು. ಅದು 'ತಾವರೆ'ಯಲ್ಲಿದೆ. 'ತಾವರೆ'ಯು ೧೪ ಬೇರೆ ಬೇರೆ ಕವನಗಳುಳ್ಳ ಈ ಸಂಗ್ರಹದ ಮೊದಲನೆಯ ಕವನ..'ಗಾಂಧಿಯವರ ದರ್ಶನ, ಕೋಗಿಲೆ, ಮೂಂಬಿ, ನಟರಾಜ, ಹನುಮನಗಿರಿ, ಕನಕದಾಸರ ಕವಿತೆಗಳು, ಗೋಮಟೇಶ್ವರ, ಮಾವಳೆಗಳ ಗೀತ'— ಇವುಗಳಲ್ಲಿ ಶ್ರೀನಿವಾಸರು **ಜಾನಪದ ಕವಿಗಳಾಗಿರುವರು.** ಇವುಗಳಲ್ಲಿ ತಟ್ಟನೆ ಜನಸಾಮಾನ್ಯಕ್ಕೆ ತಿಳಿಯುವ, ಅವರೆದೆಗೆ ತಟ್ಟುವ, ಅವರ ಬಾಳುವೆಯನ್ನು ತಿದ್ದುವ ಕಾವ್ಯ ಪದ್ಧತಿಯು ಇದೆ. ಇವುಗಳಲ್ಲಿ ಕೆಲವನ್ನು ಸಾಹಿತ್ಯ ಪ್ರವೇಶವಿಲ್ಲದ ಜೀವನ ರಸಿಕರಿಗೆ ಓದಿತೋರಿಸಿ ಅವರ ಮೆಚ್ಚುಗೆಯ ಸಮ್ಮತಿಯನ್ನು ನಾವು ಪಡೆದಿದ್ದೇವೆ. ಅದರಲ್ಲಿ ವಿಶೇಷವಾಗಿ 'ಕನಕದಾಸರ ಕತೆಗಳು' ಎಲ್ಲರ ಹೃದಯದಲ್ಲಿ ಒಂದೇ ಸವನಾಗಿ ಮೂಡುತ್ತವೆ. ಅವುಗಳ ಸರಳ ಶೈಲಿ, ಅದರೊಡನೆ ಹರಿದಾಡುವ ಕಾವ್ಯಜೀವ, ದೇಶಭಕ್ತಿ—ಇವನ್ನೆಷ್ಟು ಹೊಗಳಿದರೂ ಸಾಲದು...ಸೌಂದರ್ಯ ದರ್ಶನದಿಂದ ಕವಿಗೆ ಉಂಟಾಗುವ ಸಮಗ್ರ ಸಮಾಧಿಯು (Entire concentration)

ಶ್ರೀನಿವಾಸ ರಚಿತ

ತಾವರೆ (ಮುಂದಕ್ಕೆ)

ಅಪೂರ್ವವಾದ ಆನಂದದೊಡನೆ ಅಪೂರ್ವವಾದ ರೂಪಕವೊಂದನ್ನೂ ಆ ರೂಪಕ ತಲ್ಲೀನತೆಯನ್ನೂ ಸಲ್ಲಿಸುತ್ತದೆ. ಇದರ ದೃಷ್ಟಾಂತವು 'ಕಣ್ಣು' ಎಂಬ ಕವನ. ಕಣ್ಣು ನಕ್ಷತ್ರದವೊಲಿರುವುದು ನಿಜವೆಂಬ ಸೌಂದರ್ಯ ಸಾಕ್ಷಾತ್ಕಾರವು ಏಕತಾನವಾಗಿ ಅಲ್ಲಿ ಬಣ್ಣಿಸಲಾಗಿದೆ. ಈ ಎಲ್ಲ ಕವನಗಳಲ್ಲಿ ಶ್ರೀನಿವಾಸರ ಮಹತ್ತ್ವದ ವಿಶೇಷವೊಂದು ಇದೆ. ಅದು ದೊರೆತಲ್ಲೆಲ್ಲ ಒಳ್ಳಿತನ್ನು ಹುಡುಕಿ ದೋಷದಿಂದ ಬೇರ್ಪಡಿಸಿ, ತಮ್ಮ ಬಾಳಿನಲ್ಲಿ ಅದನ್ನು ಬೆರಸಬೇಕೆಂಬ ಕುತೂಹಲ.

ಶ್ರೀನಿವಾಸರು ನಮ್ಮ ನಾಡಿಗೆ ಆದ್ಯರಾದ, ವಂದ್ಯರಾದ ವರಕವಿಗಳೆಂಬುದರಲ್ಲಿ ಸಂಶಯವೇ ಇಲ್ಲ.''

—ಜಯಕರ್ನಾಟಕ

೮ ಆಣೆ

ಮಂಜುಳಾ

ಸಾಮಾಜಿಕ ದೃಶ್ಯ ೮ ಆಣೆ (೧೨ ಆಣೆ)

ಕರ್ಣಾಟಕದ ಜನತೆಯ ಸಂಸ್ಕೃತಿ

"ಆಂಗ್ಲಭಾಷೆ, ಸಾಹಿತ್ಯಗಳ ಸಂಪರ್ಕವನ್ನು ಸಾಕಷ್ಟು ಪಡೆದಿದ್ದರೂ ಕೂಡ ಶ್ರೀ ಮಾಸ್ತಿಯವರ ಗದ್ಯವು ತನ್ನದೇ ಆದ ಸರಳ, ಸುಂದರ ರೀತಿಯನ್ನು ಒಳಗೊಂಡಿದೆ. ಬಳಕೆ ಮಾತುಗಳನ್ನೇ ಉಪಯೋಗಿಸಿ, ಕಿರಿದಾದ ವಾಕ್ಯ ಸಮೂಹಗಳಿಂದ ಕೂಡಿ, 'ಆರುಹನಮೂರ್ತಿಯಂತೆ ನಿರಾಭರಣ'ವಾಗಿ ನಡೆಯುವ ಅವರ ಗದ್ಯದ ಸೊಗಸನ್ನು ಇಲ್ಲಿ ಆರಿಸಿದ 'ಕರ್ನಾಟಕ ಜನತೆಯ ಸಂಸ್ಕೃತಿ' ಎಂಬ ಭಾಗದಲ್ಲಿ ನೋಡಬಹುದು. ಲೇಖಕರ ನಯ-ಸೌಜನ್ಯಗಳನ್ನು ಅವರ ಲೇಖನದಲ್ಲಿಯೂ ಗುರುತಿಸುವ ನಾವು ಶೈಲಿಯು ವ್ಯಕ್ತಿತ್ವದ ಪ್ರತೀಕವೆಂಬ ಮಾತನ್ನು ಒಪ್ಪಬೇಕಾಗುತ್ತದೆ. ಕನ್ನಡ ಜನತೆಯ ಸಂಸ್ಕೃತಿಯನ್ನು ವಿವರಿಸುವ ಈ [illegible]ರು ಆ ಸಂಸ್ಕೃತಿಯನ್ನೇ ಸೂಚಿಸುವಂತೆ ಇರುವ ಶೈಲಿಯಲ್ಲಿ ಈ ಲೇಖನವನ್ನು ಬರೆದಿದ್ದಾರೆ.''

—ಶ್ರೀ ಎಸ್. ಎಸ್. ಮಾಳವಾಡರ 'ಗದ್ಯಮಾಲೆ'ಯ ಮುನ್ನುಡಿ

೬ ಆಣೆ (೧೦ ಆಣೆ)

ಚೆಲುವು

ಪದ್ಯಗಳು ೮ ಆಣೆ (೧೨ ಆಣೆ)

ಶಿವಛತ್ರಪತಿ

ನಾಟಕ ೧೦ ಆಣೆ (೧೪ ಆಣೆ)

ಶ್ರೀನಿವಾಸ ರಚಿತ

ವಿಮರ್ಶೆ (೩)

ನಾಲ್ಕು ಲೇಖನಗಳು ೧೨ ಆಣೆ (೧ ರೂಪಾಯಿ)

ಯಶೋಧರಾ

"ಯಶೋಧರಾ ನಾಟಕದ ಶೈಲಿ ಮಾಸ್ತಿಯವರ ಹೃದಯದ ಪ್ರತೀಕದಂತಿದೆ. . . . ನಾಟಕದಲ್ಲಿಯ ಪಾತ್ರನಿರೂಪಣೆ ಕರುಣಾರಸದ ಹೊನಲು ಉದಾತ್ತ ಜೀವನಪರಿಚಯ ಇವು ಹೃದಯಂಗಮವಾಗಿವೆ."

—'ಕನ್ನಡ ನುಡಿ' ಶ್ರೀ ಎಸ್. ಎಸ್. ಮಾಳವಾಡರ ಪರಿಚಯ ಲೇಖನ

"ಇದೊಂದು ಉತ್ತಮ ಕಾವ್ಯನಾಟಕ. ಎಲ್ಲ ಪಾತ್ರಗಳೂ ಮೇಲು ವರ್ಗಕ್ಕೆ ಸೇರಿ ಕಾವ್ಯದ ಗೌರವವನ್ನ ಅಧಿಕಮಾಡಿವೆ. ಈ ಕಾವ್ಯವನ್ನು ಶಾಂತವಾಗಿ ಓದುವುದಾದರೆ ಆಗುವ ಆನಂದವನ್ನು ಹೇಳತೀರದು. ಪದಗಳ ಹೊಂದಾಣಿಕೆಯೂ ಸರಳತೆಯೂ ಉತ್ತಮವಾಗಿವೆ." — ಕಲಾ

೮ ಆಣೆ (೧೨ ಆಣೆ)

ಮಲಾರ

ಅಷ್ಟಷಟ್ಪದಿಗಳು ೧೦ ಆಣೆ (೧ ರೂಪಾಯಿ)

ಸಣ್ಣ ಕತೆಗಳು (೪)

"ಶ್ರೀನಿವಾಸರ ಕತೆಗಳಲ್ಲಿ ಪ್ರಾಪಂಚಿಕ ಅನುಭವ, ತಿಳಿಯಾದ ಹಾಸ್ಯ, ಸ್ವಾಭಾವಿಕವಾದ ನೇರವಾದ ಕತೆಯ ಬೆಳವಣಿಗೆ ಇವು ಕಂಡುಬರುತ್ತವೆ. ಅವರು ಚಿತ್ರಿಸಿರುವ ಪಾತ್ರಗಳ ಕಷ್ಟಸುಖಗಳಲ್ಲಿ ಓದುಗರು ಆತ್ಮೀಯತೆಯನ್ನು ಪಡೆಯುವಂತೆ ಅವರು ಕತೆ ಹೇಳುತ್ತಾರೆ. ಅವರ ಪಾತ್ರಗಳು ಸ್ಫುಟವಾಗಿಯೂ ಸ್ವಾಭಾವಿಕವಾಗಿಯೂ ಇರುತ್ತವೆ. ಕತೆಯಲ್ಲಿ ಚಮತ್ಕಾರ ವಿಸ್ಮಯಗಳಾಗಲಿ, ತೊಡಕುಗಳಾಗಲಿ ಸಾಮಾನ್ಯವಾಗಿ ಬರುವುದಿಲ್ಲ. ಕತೆಯನ್ನು ಪ್ರಾರಂಭಿಸುವುದರಲ್ಲಿ ಅವರು ವೈವಿಧ್ಯ ತೋರಿಸಿದಾರೆ. ಆದರೆ ಕತೆಯ ಮುಕ್ತಾಯಗಳಲ್ಲಿ ಚಮತ್ಕಾರವಿರುವುದಿಲ್ಲ. ಹಾಗಿದ್ದರೂ ಮುಕ್ತಾಯಗಳು ಪರಿಣಾಮಕಾರಕವಾಗಿಯೇ ಇರುತ್ತವೆ. ಯಾರ ಮನವನ್ನೂ ನೋಯಿಸ 'ಳ ಶೈಲಿ, ಸಣ್ಣ ಸಣ್ಣ ವಾಕ್ಯಗಳಿಂದ ಕೂಡಿದ ಮಾತನಾಡುವ ಭಾಷೆ, ಹಿತವಾದ ಮಿತವಾದ ವರ್ಣನೆಗಳು, ವಾಚಕರ ಹೃದಯವನ್ನು ಕರಗಿಸುವ ಆಲೋಚನಾಪರರನ್ನಾಗಿ ಮಾಡುವ ಕಥನ ರೀತಿ, ಅವರ ವಿಪುಲವಾದ ಅನುಭವದ ಫಲವಾದ ಜೀವನದ ಸುಂದರ ಚಿತ್ರ, ಪಾತ್ರಗಳ ನಿರ್ವಹಣದಲ್ಲಿ ಅವರು ತೋರುವ ಸಮತೋಲ ಬುದ್ಧಿ—ಇವುಗಳ ಮೂಲಕ ಅವರ ಕತೆಗಳು ಕತೆಗಾರರಿಗೆ ಆದರ್ಶಗಳಾಗಿವೆ."

—ಶ್ರೀ ಆರ್. ವಿ. ಜಹಗೀರ್‌ದಾರ್ ಮತ್ತು ಶ್ರೀ ಎಸ್. ಎಸ್. ಮಾಳವಾಡ ಇವರ 'ಸಾಹಿತ್ಯ ದರ್ಪಣ'

೧೦ ಆಣೆ (೧ ರೂಪಾಯಿ)

385–39.—ಬೆಂಗಳೂರು ಪ್ರೆಸ್

ಪುರಾಣ ಕತೆಗಳು

THE BANGALORE PRESS
LAKE VIEW
MYSORE ROAD
BANGALORE CITY